
ಪ್ರಚೋದನೆ

ಲಂಕೇಶ್

ಸೆಪ್ಟೆಂಬರ್ 12, 2012 ಪುಟ 20 ರೂ. 14/-


ಕೆನೆತ್ ಆಂಡರ್ಸನ್
ಜೇಡರ ಕಣಿವೆಯಲ್ಲಿ ಒಂದು ರಾತ್ರಿ






ಶಿಡ್ಲಘಟ್ಟ ಮೋಹನ
ಸೇಡಿನ ಕೊಲೆ

KMF
ಬಕಾಸುರರು




ಕರಾವಳಿ
ಸೈಲ್‌ಗೆ ಕಾದಿದೆ ಜೈಲ್!



ಸದಾಶಿವ ವರದಿ
ಒಳಿತೋ? ಕೆಡುಕೋ?

ಕೃಷ್ಣದೇವರಾಯ ವಿವಿ



ಮಂಜಪ್ಪನೇ ಗುಂಜಪ್ಪ

ವಿ ಪೂಜಾರಿ ಶಿಷ್ಯ
ಮೋಸ್ಟ್ ವಾಂಟೆಡ್
ಕಲಿ ಯೋಗೇಶ್




ಗಾಂಧೀಜಿ ಮತ್ತು ಸೌಹಾರ್ದತೆ

1

ಗಾಂಧಿ ಆಗಮನ - ಸೌಹಾರ್ದತೆಯ ಹೊಸಶಕೆ

ಮಹಾತ್ಮ ಗಾಂಧಿಯವರು ಹದಿನಾಲ್ಕು ವರುಷಗಳ ಕಾಲ ದಕ್ಷಿಣ ಆಫ್ರಿಕದಲ್ಲಿ ವರ್ಣಭೇದ ನೀತಿಯ ವಿರುದ್ಧ ಒಂದು ಜಾತ್ಯತೀತವಾದ ಹೋರಾಟವನ್ನು ರೂಪಿಸಿದ್ದರು. ಆ ಅನುಭವ ಭಾರತದ ರಾಷ್ಟ್ರೀಯ ಹೋರಾಟಕ್ಕೆ ಹೊಸ ಸ್ಪರ್ಶವನ್ನು ನೀಡಿತು. ಭಾರತದ ರಾಜಕೀಯ ಹಾಗೂ ಸಾಮಾಜಿಕ ರಂಗದಲ್ಲಿ ಗಾಂಧೀಜಿಯವರ ಆಗಮನದವರೆಗೆ ಅತ್ಯಂತ ಕ್ರಿಯಾಶೀಲವಾಗಿದ್ದ ಕಾಂಗ್ರೆಸ್ ಹಾಗೂ ಮುಸ್ಲಿಂಲೀಗ್ ಮತ್ತು ಸಮಾಜ ಸುಧಾರಣಾ ಚಳವಳಿಗಳು ಎರಡೂ ಧರ್ಮಗಳ ಪುರೋಹಿತ ಶಾಹಿ, ಬಂಡವಾಳಶಾಹಿ ಹಾಗೂ ಜಮೀನ್ದಾರೀ ವರ್ಗಗಳ ಹಿತಾಸಕ್ತಿಯನ್ನು ಮಾತ್ರ ಹೆಚ್ಚು ಕೇಂದ್ರೀಕರಿಸಿದ್ದವು. ದೇಶದ ಸಾಮಾನ್ಯ ಮನುಷ್ಯ ಅನಾಥನಾಗಿದ್ದ. ಧರ್ಮದಾಚೆ ಮನುಷ್ಯನ ಸಂಕಟಗಳಿಗೆ ಸ್ಪಂದಿಸುವ ಹೋರಾಟದ ಕಲ್ಪನೆಯೇ ಮೂಡಿರಲಿಲ್ಲ. ಗಾಂಧೀಜಿಯವರು ಭಾರತಕ್ಕೆ ಬಂದ ತಕ್ಷಣವೇ ಚಂಪಾರಣ್ಯದ ನೀಲಿ ಬೆಳೆಗಾರರ ಹೋರಾಟ, ಗುಜರಾತಿನ ಖೇಡಾದ ರೈತರ ಕರನಿರಾಕರಣೆ ಚಳವಳಿ ಹಾಗೂ ಅಹ್ಮದಾಬಾದ್ ಹತ್ತಿಗಿರಣಿ ಕಾರ್ಮಿಕರ ಚಳವಳಿಗಳ ನಾಯಕತ್ವವನ್ನು ವಹಿಸಿಕೊಳ್ಳುವ ಮೂಲಕ ಧರ್ಮಾತೀತ ಹೋರಾಟದ ಮೊದಲ ಸ್ಪರ್ಶವನ್ನು ನೀಡಿದರು. ಅಲ್ಪಕಾಲದಲ್ಲಿ ಗಾಂಧಿ ಮನೆಮಾತಾಗಲು ಕಾರಣವಾದದ್ದು ಮನುಷ್ಯರ ನೋವು ಸಂಕಟಗಳಿಗೆ ಮಿಡಿದ ಜಾತ್ಯತೀತವಾದ ಅಂತಃಕರಣ. ಹೀಗಾಗಿ ಗಾಂಧಿ ಆಗಮನದಿಂದ ಭಾರತದ ಹಿಂದೂ-ಮುಸ್ಲಿಂ ಸಾಮಾನ್ಯ ಜನರ ಸಂಬಂಧದಲ್ಲಿ ಸೌಹಾರ್ದತೆಯ ಹೊಸ ಶಕೆಯೊಂದು ಆರಂಭವಾಯಿತು. ರೌಲಟ್ ಕಾಯಿದೆಯನ್ನು ವಿರೋಧಿಸಿ ಗಾಂಧಿ ನಡೆಸಿದ ಹೋರಾಟಕ್ಕೆ ಹಿಂದೂ ಮುಸ್ಲಿಂ ಸಿಖ್ ಧರ್ಮಗಳ ಜನಸಮುದಾಯದ ಒಗ್ಗಟ್ಟಿನ ಪ್ರತಿಸ್ಪಂದನ ಸಾಧ್ಯವಾಯಿತು. ಬ್ರಿಟಿಷ್ ಪ್ರಭುತ್ವದ ವಿರುದ್ಧದ ಪ್ರಾಮಾಣಿಕವಾದ ಮೊದಲ ಸೌಹಾರ್ದ ಹೋರಾಟ ಇದೇ ಇರಬೇಕು. ಹಿಂದೂ-ಮುಸ್ಲಿಂ ಐಕ್ಯತೆ, ಅಸ್ಪೃಶ್ಯತಾ ನಿವಾರಣೆ ಹಾಗೂ ಮಹಿಳಾ ಸಮಾನತೆಗಳನ್ನು ಕುರಿತಾದ ಅವರ ಕಾಳಜಿಗಳು ಅವರನ್ನು ಸಾಮಾನ್ಯ ಜನರ ನಾಯಕನನ್ನಾಗಿಸಿದವು. ರೌಲಟ್ ವಿರೋಧಿ ಚಳವಳಿಯಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ನಡೆಸಿದ ಅತ್ಯಂತ ಘೋರ ಪಾತಕವೆಂದರೆ ಜಲಿಯನ್ ವಾಲಾಬಾಗ್ ಹತ್ಯಾಕಾಂಡ. ಅಮಾಯಕ ನಿರಾಯುಧ ಜನಸಮುದಾಯದ ಮೇಲೆ ಗುಂಡಿನ ಮಳೆಗರೆಯಲಾಯಿತು. ಹಿಂದೂ ಮುಸ್ಲಿಮರನ್ನು ಒಂದುಗೂಡಿಸಿ ಸಾಮ್ರಾಜ್ಯಶಾಹಿಯ ವಿರುದ್ಧ ದನಿ ಎತ್ತುತ್ತಿದ್ದ ಗಾಂಧೀಜಿಯವರ ಆತ್ಮಶಕ್ತಿಯನ್ನು ಉಡುಗಿಸಲು ಮಾಡಿದ ಮಹಾ ದಮನಕಾರಿ ಪ್ರಯೋಗ ಇದಾಗಿತ್ತು. ಎಲ್ಲ ಧರ್ಮದವರೂ ಜಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನು ವಿರೋಧಿಸಿ ಸಾಮ್ರಾಜ್ಯಶಾಹಿಯ ವಿರುದ್ಧ ದೊಡ್ಡ ಪ್ರಮಾಣದ ಪ್ರತಿರೋಧವನ್ನೊಡ್ಡಿದರು. ಹೀಗೆ ಭಾರತದ ರಾಜಕೀಯ ರಂಗದಲ್ಲಿ ಗಾಂಧೀಜಿಯವರ ಆಗಮನ ಹಿಂದೂ-ಮುಸ್ಲಿಂ ಸಂಬಂಧದಲ್ಲಿ ಸೌಹಾರ್ದತೆಯ ಹೊಸ ಶಕೆಯನ್ನು ಆರಂಭಿಸಿತು.



2

ಮಹಾತ್ಮ ಗಾಂಧೀಜಿಯವರ ಸೌಹಾರ್ದತೆಯ ಕಲ್ಪನೆ ಮತ್ತು ವೈರುಧ್ಯಗಳು

ಗಾಂಧೀಜಿಯವರು ಭಾರತದ ರಾಜಕಾರಣವನ್ನು ಪ್ರವೇಶಿಸುವಷ್ಟೊತ್ತಿಗೆ ಹಿಂದೂ ಮುಸ್ಲಿಂ ಕೋಮುವಾದೀ ಸಂಘಟನೆಗಳು ಒಂದು ಸ್ಪಷ್ಟ ರೂಪವನ್ನು ತಾಳಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿಯ ಅಧಿಕಾರ ಹಂಚಿಕೆಗಾಗಿ ಸಂಘರ್ಷವನ್ನು ನಡೆಸಿದ್ದವು. ಆರಂಭದಲ್ಲಿ ಜಾತ್ಯತೀತವಾಗಿ ಶೋಷಿತ ಜನಾಂಗಗಳ ಹಕ್ಕುಗಳಿಗಾಗಿ ಹೋರಾಟವನ್ನು ಕೈಗೊಂಡ ಗಾಂಧೀಜಿಯವರು ಕಾಂಗ್ರೆಸ್ ರಾಜಕೀಯದ ನಾಯಕತ್ವವನ್ನು ವಹಿಸಿಕೊಳ್ಳುವುದರೊಂದಿಗೆ ಮತೀಯ ಶಕ್ತಿಗಳ ನಡುವೆ ಹೊಂದಾಣಿಕೆಗೆ ಯತ್ನಿಸುವ ಅನಿವಾರ್ಯತೆಗೊಳಗಾದರು. ವಾಸ್ತವಗಳಿಗೆ ಮುಖಾಮುಖಿಯಾಗುವದಕ್ಕಿಂತ ಸಮತೋಲನಕ್ಕೆ ಮಹತ್ವ ನೀಡಬೇಕಾಯಿತು.

'ಹಿಂದ್ ಸ್ವರಾಜ್'ದಲ್ಲಿ ಹಿಂದೂ ಮುಸ್ಲಿಂ ಸೌಹಾರ್ದತೆಯನ್ನು ಕುರಿತಾದ ಅವರ ಕಲ್ಪನೆ ಸ್ಪಷ್ಟವಾಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೂಲಕ ಪ್ರಚಾರಕ್ಕೆ ಬಂದ ಧರ್ಮಾಧಾರಿತವಾದ ರಾಷ್ಟ್ರೀಯತೆಯ ಕಲ್ಪನೆಯನ್ನು ಅವರು ನಿರಾಕರಿಸಿದರು. ಶೈವ, ಜೈನ, ಬೌದ್ಧರಿಗೂ ಒಂದೊಂದು ರಾಷ್ಟ್ರ ನಿರ್ಮಿಸಬೇಕಾದೀತು ಎಂದು ಎಚ್ಚರಿಸಿದರು. "ಒಂದೇ ಧರ್ಮವಿದ್ದರೇನೇ ಒಂದು ರಾಷ್ಟ್ರವೆಂಬುದು ಲೋಕದಲ್ಲಿ ಎಲ್ಲೂ ಇಲ್ಲ", "ಧರ್ಮವನ್ನು ಬದಲಿಸಿದ ಮಾತ್ರಕ್ಕೆ ಜನ ವೈರಿಗಳಾಗುವುದಿಲ್ಲ" ಎಂಬುದು ಅವರ ನಿಲುವಾಗಿತ್ತು. "ಮುಸಲ್ಮಾನರು ತಮಗೆ ಕೆಲವು ವಿಶೇಷ ರಿಯಾಯತಿಗಳು ಬೇಕೆಂದು ಲಾರ್ಡ ಮಾರ್ಲೆಯವರನ್ನು ಕೇಳುತ್ತಿದ್ದಾರೆ, ಇದನ್ನು ಹಿಂದೂಗಳೇಕೆ ವಿರೋಧಿಸಬೇಕು?" ಎಂದು ಪ್ರಶ್ನಿಸಿದರು. ಮುಸಲ್ಮಾನರ ಹೋರಾಟವನ್ನು ಮತೀಯವಾದವೆಂದು ಗ್ರಹಿಸದೇ ಹಕ್ಕಿನ ಚಳವಳಿ ಎಂದು ಭಾವಿಸಿದರು. ಹಿಂದೂ ಮುಸಲ್ಮಾನರಲ್ಲಿ ವೈರವನ್ನು ಹುಟ್ಟಿಸಿರುವುದು ಬ್ರಿಟಿಷರು ಮತ್ತು ಅವರು ಸೃಷ್ಟಿಸಿದ ಚರಿತ್ರೆಯೆಂಬುದನ್ನು ಮನಗಂಡು ಹಿಂದೂ-ಮುಸಲ್ಮಾನರು ಅಣ್ಣ-ತಮ್ಮಂದಿರಂತೆ ಬಾಳಬೇಕೆಂದು ಸಲಹೆ ನೀಡಿದರು.

ವ್ಯಕ್ತಿಗತವಾಗಿ ಗಾಂಧೀಜಿಯವರ ವ್ಯಕ್ತಿತ್ವಕ್ಕೆ ಹಿಂದೂ-ಮುಸ್ಲಿಮರು ಮಾರುಹೋಗಿದ್ದರೂ ಗಾಂಧೀಜಿಯವರ ಸೌಹಾರ್ದತಾ ಚಿಂತನೆಗಳು ಯಾಕೆ ಕಾರ್ಯ ರೂಪಕ್ಕೆ ಬರಲಿಲ್ಲವೆಂಬುದು ಮುಖ್ಯವಾದ ಪ್ರಶ್ನೆ. ಅದನ್ನು ಅವರ ಆರ್ಥಿಕ ಚಿಂತನೆಗಳಲ್ಲಿ ಗುರುತಿಸಬಹುದಾಗಿದೆ. ಗಾಂಧೀಜಿಯವರು ಬಂಡವಾಳಶಾಹಿ ಆರ್ಥಿಕತೆಯ ಕಡುವಿರೋಧಿಗಳಾಗಿದ್ದರು. ಅವರ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಆರ್ಥಿಕ ನೆಲೆಗಟ್ಟು ಆಧುನಿಕ ಶಿಕ್ಷಣ, ನ್ಯಾಯಾಂಗ ವ್ಯವಸ್ಥೆ, ಯಂತ್ರನಾಗರಿಕತೆ, ಆಧುನಿಕ ವೈದ್ಯಕೀಯ ಪದ್ಧತಿಗಳನ್ನು ವಿರೋಧಿಸುತ್ತಿತ್ತು, ಅದಕ್ಕೆ ಪರ್ಯಾಯವನ್ನು ಹಳೆಯ ಊಳಿಗಮಾನ್ಯ ವ್ಯವಸ್ಥೆಯ ಪುನರುತ್ಥಾನ ಹಾಗೂ ಅದರಲ್ಲಿಯ ಲೋಪದೋಷಗಳನ್ನು ಶುದ್ಧೀಕರಿಸಿ ಉದಾರವಾದಿಯಾಗಿಸುವದರಲ್ಲಿ ಕಂಡುಕೊಂಡರು. ಸ್ವಯಂಪೂರ್ಣ ಗ್ರಾಮವ್ಯವಸ್ಥೆಯ ನಾಶದಿಂದ ಭಾರತದ ಕೆಳವರ್ಗಗಳು ಕನಿಷ್ಠ ಪ್ರಮಾಣದ ಉದ್ಯೋಗಾವಕಾಶದ ಹಂಚಿಕೆ ಹಾಗೂ ಬದುಕುವ ಹಕ್ಕನ್ನು ಕಳೆದುಕೊಂಡು ಸಂಕಟಕ್ಕೀಡಾಗಿದ್ದು ಅವರನ್ನು ಬಹುವಾಗಿ ಕಾಡಿದಂತಿದೆ. ಅವರ 'ರಾಮರಾಜ್ಯ'ದ ಕಲ್ಪನೆಗೆ ಇದು ಮುಖ್ಯ ಕಾರಣವಾಗಿತ್ತು. ಊಳಿಗಮಾನ್ಯ ವ್ಯವಸ್ಥೆಯ ಆರ್ಥಿಕ ಸ್ವರೂಪದ ಮುಂದುವರಿಕೆ ಹಾಗೂ ಅಲ್ಲಿಯ ಸಾಮಾಜಿಕ ಸಮಸ್ಯೆಗಳಿಗೆ ಉದಾರವಾದೀ ಸುಧಾರಣೆಯ ಪ್ರತಿಪಾದನೆ ಅವರ ಚಿಂತನೆಯಾಗಿತ್ತು. ಹೀಗಾಗಿ ಹಿಂದೂ ಮತ್ತು ಮುಸ್ಲಿಂ ಕುಲೀನವರ್ಗದ ಐಕ್ಯತೆಯ ಮೂಲಕ ಸ್ವಾತಂತ್ರ್ಯ ಪಡೆಯುವ ವಿಷಯದಲ್ಲಿ ಅವರಿಗೆ ಭಿನ್ನಾಭಿಪ್ರಾಯವಿರಲಿಲ್ಲ. ಈ ಕಾರಣಕ್ಕಾಗಿಯೇ ಅವರು ಹಿಂದೂ-ಮುಸ್ಲಿಂ ಮತೀಯ ಶಕ್ತಿಗಳನ್ನೂ ಉದಾರವಾಗಿ ರಾಷ್ಟ್ರೀಯ ಹೋರಾಟಗಾರರನ್ನೂ ಒಂದುಗೂಡಿಸಲು ಕೊನೆಯವರೆಗೂ ಯತ್ನಿಸಿದರು. ಕೆಳಜಾತಿ ಹಾಗೂ ಕೆಳವರ್ಗಗಳಲ್ಲಿ ಉದಾರವಾದೀ ನೆಲೆಯಿಂದಲೇ ಪರಿವರ್ತನೆಗಳಾಗಬೇಕೆಂಬುದು ಅವರ ಆಶಯವಾಗಿತ್ತು. ಎಡ ಮತ್ತು ಸಮಾಜವಾದಿ ಹೋರಾಟ ಹಾಗೂ ಹಿಂಸಾತ್ಮಕ ಕ್ರಾಂತಿಕಾರಕ ಹೋರಾಟಗಳ ಬಗ್ಗೆ ಅವರಿಗೆ ಆಸಕ್ತಿ ಇರಲಿಲ್ಲ. 'ಅಹಿಂಸೆ' ಎಂಬ ಮಹಾ ಅಸ್ತ್ರವನ್ನು ಅವರು ರಾಷ್ಟ್ರೀಯ ಹೋರಾಟದುದ್ದಕ್ಕೂ ಬಳಸಿದರು. "ಗಾಂಧಿ ಕೂಡ ಸಾಂಪ್ರದಾಯಿಕ-ಧಾರ್ಮಿಕ-ಕುರಾನ್ ನೆರಳಿನ ಮುಸ್ಲಿಮರನ್ನು ಪ್ರೀತಿಸುತ್ತಿದ್ದರು. ಜಿನ್ನಾ ಅವರಿಗೆ ಪ್ರಿಯವಾಗಿರಲಿಲ್ಲ. ಒಂದು ಅಮೂರ್ತ ಧಾರ್ಮಿಕತೆಯ ಮೂಲಕ ಗಾಂಧೀಜಿಯವರು ಹೋರಾಟವನ್ನು ಮುನ್ನಡೆಸಿದರು." (ಏಜಾಜ್ ಅಹ್ಮದ್) ಹೀಗಾಗಿ ಅವರ ಹೋರಾಟದಲ್ಲಿ ಹಿಂದೂ ಧಾರ್ಮಿಕ ಸಂಕೇತಗಳು ಕಂಡು ಬಂದವು. ರಾಮರಾಜ್ಯದ ಪ್ರತಿಪಾದನೆ ಮಾಡುವಾಗ, ಭಜನೆ ಪ್ರಾರ್ಥನೆಗಳ ಮೂಲಕ ಹೋರಾಟವನ್ನು ಮುನ್ನಡೆಸುವಾಗ ಇಲ್ಲವೇ ಹಿಂದೂ ಧಾರ್ಮಿಕ ಗ್ರಂಥಗಳಿಂದ ಪ್ರೇರಣೆ ಪಡೆಯುವಾಗ ತಮ್ಮೊಂದಿಗೆ ಅನ್ಯಧರ್ಮಿಯರೂ ಇರುವುದನ್ನು ಮರೆತರು. ಇದಕ್ಕೆ ಅವರ ಧಾರ್ಮಿಕತೆಯೇ ಕಾರಣವಾಗಿತ್ತು. ಆದರೆ ಪರಮಹಂಸ ಮಾದರಿಯಲ್ಲಿ ಗಾಂಧೀಜಿಯ[ವರು] ಎರಡೂ ಧರ್ಮಗಳ ಸಂಕೇತಗ[ಳನ್ನು] ಸಮ್ಮಿಶ್ರಗೊಳಿಸಲು ಯತ್ನಿಸಿದರು.

ಗಾಂಧೀಜಿಯವರ ನಿಜವಾದ ಶಕ್ತಿ ವ್ಯಕ್ತವಾ[...] ದೇಶವಿಭಜನೆಗಿಂತ ಮೊದಲು ಹಾಗೂ ನಂತರ [...] ಮಹಾಮಾರಣಹೋಮವನ್ನು ತಹಬಂದಿಗೆ ತರುವ[...] ಕಲ್ಕತ್ತಾ ಮತ್ತು ನವಖಾಲಿಗಳಲ್ಲಿ ದೇಶವಿಭಜ[...] ಪೂರ್ವದಲ್ಲಿ ನಡೆದ ಭಯಾನಕ ಕೋಮುಗಲಭೆ[...] ಸೈನ್ಯಕ್ಕೂ ನಿಯಂತ್ರಿಸಲು ಸಾಧ್ಯವಾಗಿರಲಿಲ್ಲ. "ಕಲ್ಕತ್ತೆಯ [...] ಕೆಸರಿನಲ್ಲಿ ಕೋಲೂರಿಕೊಂಡು ಜತೆಗೆ ಯಾವ ಅಂಗರ[ಕ್ಷಕರೂ] ಇಲ್ಲದೇ ಬೀದಿಬೀದಿಯಲ್ಲಿ ನಡೆದು ಜನರಿಗೆ ಹಿಂ[ದೂ-] ಮುಸ್ಲಿಂ ಮೈತ್ರಿಯ ಸಂದೇಶವನ್ನು ಸಾರಿದರು." ಸೌಹಾ[ರ್ದ...] ಉಂಟುಮಾಡಿದರು. ಅಂದಿನ ಗವರ್ನರ್ ಆರ್.ಜಿ. [...] "ಗಾಂಧಿ ಈಜ್ ಮೈ ಒನ್ ಮ್ಯಾನ್ ಆರ್ಮಿ [...] ಪೀಸ್" ಎಂದು ಉದ್ಗರಿಸಿದ್ದರಂತೆ.

ಕೈಗಾರಿಕಾ ಬಂಡವಾಳಶಾಹಿಯು ಭಾರತ[ವನ್ನು] ಪ್ರವೇಶಿಸುವ ಮೂಲಕ ಧಾರ್ಮಿಕ ಹಿಂಸೆ, ಕೋ[ಮು] ಹಿಂಸೆಯ ರೂಪವನ್ನು ತಾಳಿತು. ಮೊದಲ ಸ್ವಾ[ತಂತ್ರ್ಯ] ಸಂಗ್ರಾಮಕ್ಕಿಂತ ಮೊದಲೇ ಹಿಂದೂ ಮೇಲು[...] ಬಂಡವಾಳಶಾಹಿ ವ್ಯವಸ್ಥೆಯ ಶೈಕ್ಷಣಿಕ, ರಾಜಕೀ[ಯ] ನೌಕರಶಾಹಿ ಅವಕಾಶಗಳನ್ನು ಪಡೆದುಕೊಳ್ಳಲು ವಸಾ[ಹತು] ಶಾಹಿಯೊಂದಿಗೆ ಒಪ್ಪಂದ ಮಾಡಿಕೊಳ್ಳುವ ಮ[...] ಕೋಮುವಾದದ ಬೀಜ ಊರಲ್ಪಟ್ಟಿತು. ಮೊ[...] ಆಧುನಿಕತೆಗೆ ವಿಮುಖವಾಗಿದ್ದ ಮುಸ್ಲಿಂ ಮೇಲು[...] ಅರ್ಧಶತಮಾನದ ನಂತರದ ಜಾಗೃತಿಯಿಂದ ಪ್ರಾತಿ[...] ಒತ್ತಾಯಿಸಲು ಮತವನ್ನಾಧರಿಸುವ ಮೂಲಕ ವ[...] ಭೂತವಾದ ಒಂದು ಮೂರ್ತ ರೂಪ ತಾಳಿತು. ಕಾಂ[...] ಆರಂಭದ ಎರಡು ಮೂರು ದಶಕಗಳ ಚಟುವಟಿ[ಕೆ...] ಕೋಮುವಾದಿ ಚಿಂತನೆಗಳಿಂದ ಆವರಿಸಿದ ಕಾ[...] ಮೂಲಭೂತವಾದಿ ಸಂಘಟನೆ ಮತ್ತು ಹೋರಾ[ಟ...] ತೀವ್ರವಾದವು. ಕೋಮುವಾದಿ ಸಂಘಟನೆ[ಗಳು] ಹುಟ್ಟಿಕೊಂಡವು. ಗಾಂಧೀಜಿಯವರ ಆಗಮನದ ಮ[...] ಭಾರತದ ರಾಷ್ಟ್ರೀಯ ಹೋರಾಟ ಸೌಹಾರ್ದ[...] ಸ್ವರೂಪವನ್ನು ಪಡೆಯತೊಡಗಿತು. ಮುಸ್ಲಿಂ ವ[...] ಭೂತವಾದಿ ಹೋರಾಟಗಳ ಪ್ರಭಾವದಿಂದ ಶೂದ್ರ [...] ದಲಿತ ಹೋರಾಟಗಳು ತೀವ್ರವಾಗಿ ಕೋಮುವ[ಾದಕ್ಕೆ] ಪ್ರತಿರೋಧವನ್ನೊಡ್ಡಿದವು. ಎಡ ಮತ್ತು ಸಮಾಜ[...] ಹೋರಾಟಗಳ ಪ್ರಭಾವದಿಂದ ಶೂದ್ರ ಹಾಗೂ [...] ಹೋರಾಟಗಳು ತೀವ್ರವಾಗಿ ಕೋಮುವಾ[...] ಪ್ರತಿರೋಧವನ್ನೊಡ್ಡಿದವು. ಎಡ ಮತ್ತು ಸಮಾಜ[...] ಹೋರಾಟಗಳೂ ಕಾಂಗ್ರೆಸ್ಸಿನ ರಾಷ್ಟ್ರೀಯ ಹೋ[ರಾಟ...] ಸಮಾನತೆ ಮತ್ತು ಜಾತ್ಯತೀತತೆಯ ಮೌಲ್ಯಗಳನ್ನು [...] ಎರೆಯಲು ಯತ್ನಿಸಿದವು. ಉದ್ದಕ್ಕೂ ಬ್ರಿಟಿಷ್ ವಸಾ[ಹತು] ಶಾಹಿ ಹಿಂದೂ-ಮುಸ್ಲಿಂ ಸಂಬಂಧವನ್ನು ವಿರುದ್ಧ ನೆಲೆ[...] ರೂಪಿಸಲು ತಂತ್ರಗಳನ್ನು ಹೆಣೆಯುತ್ತ ಬಂದಿತು. ಭಾ[ರತದ] ರಾಷ್ಟ್ರೀಯ ಹೋರಾಟವು ವಸಾಹತುಶಾಹಿ[ಯನ್ನು] ವಿರೋಧಿಸುವಲ್ಲಿ ಹಲವಾರು ಆಂತರಿಕ ಸಂಘರ್ಷ[...] ದುರಿಸಿತು. ಕ್ರಾಂತಿಕಾರಿ ಹೋರಾಟಗಳು ಮಾತ್ರ ಉ[...] ಜಾತ್ಯತೀತವಾಗಿದ್ದವು.

– ಡಾ.ಎಂ.ಡಿ.ಒಕು[...]

ನೋ ಕಾಮೆಂಟ್ಸ್

ಈ ವಾರ ಹೊರಬಿದ್ದ ಎರಡು ಮುಖ್ಯ ತೀರ್ಪುಗಳು

"ಕಸಬ್ ಭಾರತದ ವಿರುದ್ಧ ಯುದ್ಧ ಸಾರಿದ್ದಾನೆ. ಭಾರತದ ವಿರುದ್ಧ ಯುದ್ಧ ಸಾರಿದ್ದು ಘೋರ ಅಪರಾಧ. ಇದಕ್ಕೆ ಮರಣ ದಂಡನೆಯಲ್ಲದೆ ಬೇರೆ ಆಯ್ಕೆಗಳಿಲ್ಲ."

-ಸುಪ್ರೀಂಕೋರ್ಟ್‌ನ ಅಫ್ತಾಬ್ ಆಲಂ ಹಾಗೂ ಸಿ.ಕೆ.ಪ್ರಸಾದ್ ಅವರಿದ್ದ ನ್ಯಾಯಪೀಠ

"ಗುಜರಾತ್‌ನ ನರೋಡಾ ಪಾಟಿಯಾದಲ್ಲಿ 2002ರಲ್ಲಿ ನಡೆದ ಹತ್ಯಾಕಾಂಡದಲ್ಲಿ 95 ಜನರನ್ನು ಹತ್ಯೆಗೈಯಲಾಗಿದ್ದು ಅದಕ್ಕೆ ಭಜರಂಗದಳದ ಮಾಜಿ ಮುಖ್ಯಸ್ಥ ಬಾಬು ಭಜರಂಗಿ, ಬಿಜೆಪಿಯ ಮಾಜಿ ಮಂತ್ರಿ ಮಾಯಾ ಕೊಡನಾನಿ ಸೇರಿದಂತೆ 32 ಮಂದಿ ತಪ್ಪಿತಸ್ಥರು."

- ಅಹಮದಾಬಾದ್ ನ್ಯಾಯಾಲಯ

ಕಲ್ಲಿದ್ದಲು ಹಗರಣ ಮತ್ತು ಕಲ್ಲಿನ ಮನಸ್ಸಿನವರು

"ಕಲ್ಲಿದ್ದಲು ಗಣಿ ಮಂಜೂರಾತಿಗೆ ಸಂಬಂಧಿಸಿದ ಮಹಾಲೇಖಪಾಲರ (ಸಿಎಜಿ) ವರದಿಯಲ್ಲಿ ಕಲ್ಲಿದ್ದಲು ಸರಾಸರಿ ಉತ್ಪಾದನೆ ಹಾಗೂ ಮಾರಾಟದ ಬೆಲೆಯನ್ನು ಆಧರಿಸಿ ನಷ್ಟದ ಅಂದಾಜು ಮಾಡಲಾಗಿದೆ. ಇದು ತಪ್ಪುದಾರಿಗೆ ಎಳೆಯುವಂತಹದ್ದು, ಆದ್ದರಿಂದ ಆ ವರದಿ ಪ್ರಶ್ನಾರ್ಹ. ಧೈರ್ಯವಿದ್ದರೆ ವಿರೋಧ ಪಕ್ಷಗಳು ಸದನದಲ್ಲಿ ಈ ಕುರಿತು ಚರ್ಚೆ ಮಾಡಲಿ."

- ಮನಮೋಹನ್ ಸಿಂಗ್

"ಸಂಸತ್ತಿನಲ್ಲಿ ಸರ್ಕಾರ ಬಹುಮತದ ವಿಶ್ವಾಸ ಹೊಂದಿದೆ. ಜನರ ಬೆಂಬಲವೂ ಸರ್ಕಾರಕ್ಕೆ ಇದೆ. ಆದ್ದರಿಂದ ವಿಶ್ವಾಸಮತಯಾಚಿಸಲು ಸರ್ಕಾರಕ್ಕೆ ಯಾವುದೇ ಕಾರಣಗಳಿಲ್ಲ."

- ಆರ್ಥಿಕ ಸಚಿವ ಪಿ. ಚಿದಂಬರಂ

"ಸಿಎಜಿ ಪರೀಕ್ಷಿಸಲ್ಪಟ್ಟ 57 ಕಲ್ಲಿದ್ದಲು ಗಣಿಗಳ ಪೈಕಿ 56 ಗಣಿಗಳಲ್ಲಿ ಈವರೆಗೆ ಗಣಿಗಾರಿಕೆಯನ್ನೇ ಮಾಡಿಲ್ಲ, ಕಲ್ಲಿದ್ದಲು ಗಣಿಗಾರಿಕೆ ನಡೆಯದೇ ಇರುವಾಗ ಲಾಭ-ನಷ್ಟದ ಪ್ರಶ್ನೆಯೇ ಉದ್ಭವವಾಗುವುದಿಲ್ಲ, ಸಿಎಜಿ ವರದಿಯಲ್ಲಿ ಹೇಳಿರುವಂತೆ 1.86 ಲಕ್ಷ ಕೋಟಿ ಸಂಭಾವ್ಯ ನಷ್ಟದ ಮೊತ್ತದ ಕಲ್ಪನೆಯೇ ದೋಷಪೂರಿತವಾಗಿದೆ.

- ಆರ್ಥಿಕ ಸಚಿವ ಪಿ.ಚಿದಂಬರಂ

ಜೈಲಿನಲ್ಲಿರುವ ಕೈದಿಗಳ ಸುತ್ತ

"ದೇಶದ 18 ರಾಜ್ಯಗಳಲ್ಲಿ ನಡೆಸಿದ 'ಮುಂದಿನ ಮುಖ್ಯಮಂತ್ರಿ-ಜನರ ಆಯ್ಕೆ' ಎಂಬ ಸಮೀಕ್ಷೆಯಲ್ಲಿ ಆಂಧ್ರ ಪ್ರದೇಶದಲ್ಲಿ ವೈಎಸ್‌ಆರ್ ಕಾಂಗ್ರೆಸ್ ಸಂಸ್ಥಾಪಕ ವೈ.ಎಸ್.ಜಗನ್‌ಮೋಹನ್ ರೆಡ್ಡಿ ಪರ ಶೇ. 48ರಷ್ಟು ಮತ ಬಿದ್ದರೆ, ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಪರ ಶೇ 18, ಟಿಆರ್‌ಎಸ್ ಅಧ್ಯಕ್ಷ ಕೆ. ಚಂದ್ರಶೇಖರ್ ರಾವ್ ಪರ ಶೇ 17, ಕಾಂಗ್ರೆಸ್‌ನ ಹಾಲಿ ಮುಖ್ಯಮಂತ್ರಿ ಕಿರಣ್ ಕುಮಾರ್ ರೆಡ್ಡಿ ಪರ ಶೇ 11, ನಟ ಕಂ ರಾಜಕಾರಣಿ ಚಿರಂಜೀವಿ ಪರ ಶೇ 6ರಷ್ಟು ಜನರು ವಿಶ್ವಾಸ ವ್ಯಕ್ತಪಡಿಸಿದರು."

-ಎನ್‌ಡಿಟಿವಿ ಚಾನೆಲ್

"ಗಣಿ ಹಗರಣದಲ್ಲಿ ಸಿಲುಕಿ ಜೈಲು ಸೇರಿರುವ ಕರ್ನಾಟಕದ ಮಾಜಿ ಸಚಿವ ಜನಾರ್ದನ ರೆಡ್ಡಿಗೆ ಚಂಚಲಗುಡ ಜೈಲಿನಲ್ಲಿ 'ರಾಜಾತಿಥ್ಯ' ನೀಡಿದ್ದಕ್ಕೆ ಆ ಜೈಲಿನ ಸೂಪರಿಂಟೆಂಡೆಂಟ್ ಕೇಶವ್ ನಾಯ್ಡು ಅವರನ್ನು 'ಕೈದಿಗಳ ಮನಃಪರಿವರ್ತನಾ ಸಂಸ್ಥೆ'ಗೆ ವರ್ಗಾಯಿಸಲಾಗಿದೆ.

697ನೇ ನಂಬರಿನ ಕೈದಿಗೆ (ಜನಾರ್ದನ ರೆಡ್ಡಿ) ವಿಶೇಷವಾಗಿ ಇಸ್ತ್ರಿ ಮಾಡಲಾಗಿದ್ದ ಬೆಡ್‌ಶೀಟ್‌ಗಳು, ಟವಲ್‌ಗಳನ್ನು ಕೊಡಲಾಗುತ್ತಿತ್ತು. ಇದರ ಜತೆಗೆ ರೆಡ್ಡಿಗೆ ವಾರಕ್ಕೆ ಎರಡು ಬಾರಿ ಮಸಾಜು ಮಾಡಲು ವ್ಯವಸ್ಥೆ ಕಲ್ಪಿಸಲಾಗಿತ್ತು. ರೆಡ್ಡಿಗೆ ತಾಜಾ ಬ್ರೆಡ್, ಬಿಸ್ಕತ್ತು, ಚಾಕೊಲೇಟ್‌ಗಳ ಜತೆಗೆ ಹಣ್ಣುಹಂಪಲು ಮತ್ತು ಮಾಂಸಾಹಾರವೂ ಸಿಗುವಂತೆ ನೋಡಿಕೊಳ್ಳಲಾಗಿತ್ತು. ರೆಡ್ಡಿಯ ಹುಟ್ಟುಹಬ್ಬವಾದ ಜನವರಿ 11ರಂದು ಜೈಲಿನ ಆವರಣದಲ್ಲಿರುವ ದೇವಸ್ಥಾನದಲ್ಲಿ ವಿಶೇಷ ಧಾರ್ಮಿಕ ವಿಧಿಗಳು ಹಾಗೂ ಪೂಜೆಯನ್ನು ಏರ್ಪಡಿಸಲಾಗಿತ್ತು. ಅವತ್ತು ಜೈಲಿನ ಎಲ್ಲಾ ಕೈದಿಗಳಿಗೆ ವಿಶೇಷ ಆಹಾರ ವಿತರಿಸಲಾಗಿತ್ತು. ಈ ಎಲ್ಲಾ ಖರ್ಚನ್ನು ರೆಡ್ಡಿ ಅವರೇ ಭರಿಸಿದ್ದರು.

ಇದಲ್ಲದೆ ರೆಡ್ಡಿಗೆ ಪ್ರತ್ಯೇಕ ಅಡುಗೆ ಪರಿಚಾರಕ, ಸಹಾಯಕ ಹಾಗೂ ವಕೀಲರು ಮತ್ತಿತರರೊಂದಿಗೆ ವ್ಯವಹರಿಸಲು ಅನುಕೂಲವಾಗಲೆಂದು ಕಂಪ್ಯೂಟರ್ ಸಹಾಯಕನ ಸವಲತ್ತು ಒದಗಿಸಲಾಗಿತ್ತು."

- ಪತ್ರಿಕಾ ವರದಿ

ಕಾಮಾಲೆ ಕಣ್ಣಿನವರೆಂದರೆ ಇವರೇ

"ದಕ್ಷಿಣ ಭಾರತದಿಂದ ಈಶಾನ್ಯ ರಾಜ್ಯದವರ ವಲಸೆ ಹಿಂದೆ [...] ಶಕ್ತಿಗಳ ಕೈವಾಡ ಇದೆ."

-ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ [...]

"ಸಾಮಾಜಿಕ ಕಾರ್ಯಕರ್ತರ ಅಣ್ಣಾ ಹಜಾರೆ ತಮ್ಮ ತಂಡದ[...] ನಕ್ಸಲೀಯರಿಂದ ದೂರವಾದರೆ ಅವರಿಗೆ ಬೆಂಬಲ ಕೊಡಲು ಸಿದ್ಧ."

-ಜನತಾ ಪಕ್ಷದ ಅಧ್ಯಕ್ಷ ಸುಬ್ರಮಣಿಯನ್ [...]

ಕೆಟ್ಟಮೇಲೆ ಬುದ್ಧಿ ಬಂತಾ?

"ನಾನಿದ್ದರೆ ಪಕ್ಷ, ನಾನಿಲ್ಲದಿದ್ದರೆ ಪಕ್ಷವಿಲ್ಲ ಎನ್ನುವ ಕಾಂಗ್ರೆಸ್ ನಾ[ಯಕರ] ಧೋರಣೆಯಿಂದಾಗಿ ಕಳೆದ ಬಾರಿ ಅಧಿಕಾರ ಕಳೆದುಕೊಳ್ಳುವಂತಾ[...] ಕಾಂಗ್ರೆಸ್ ಸೋಲಿಗೆ ಪಕ್ಷದ ಮುಖಂಡರು ಕಾರಣವೇ ಹೊರತು ಬೇ[ರೆ...] ಅಲ್ಲ. ನಾವು ಒಗ್ಗಟ್ಟಾಗಿ ಕಾರ್ಯ ನಿರ್ವಹಿಸಿದ್ದರೆ 2008ರ ಚುನಾವಣ[...] ಗೆಲುವು ಪಡೆದು ಬಿಜೆಪಿಯನ್ನು ನಾಮಾವಶೇಷ ಮಾಡಬಹುದಿತ್ತು. [...] ನಮ್ಮ ತಪ್ಪಿನಿಂದಾಗಿ ಬಿಜೆಪಿಗೆ ಕೈಗೆ ಅಧಿಕಾರ ನೀಡಿ ಈಗ ಪರಿತಪಿಸು[...] ಆದುದರಿಂದ ಪಕ್ಷದ ನಾಯಕರು ಭಿನ್ನಾಭಿಪ್ರಾಯಗಳನ್ನು ಮರೆತು ಹೋರ[ಾಟದ] ಮೂಲಕ ಭ್ರಷ್ಟ ಬಿಜೆಪಿ ಸರಕಾರವನ್ನು ರಾಜ್ಯದಿಂದ ಕಿತ್ತೊಗೆಯಬೇಕ[...]

-ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ [...]

ಆರ್. ಅಶೋಕ್‌ಗೆ ಕಿವಿ ಕೆಪ್ಪು

"ರಾಜ್ಯ ಸರಕಾರಕ್ಕೆ ಮಾನಮರ್ಯಾದೆ ಇದ್ದರೆ ಈಶಾನ್ಯ ರಾಜ್ಯದ [...] ರಕ್ಷಣೆ ನೀಡುವುದಾಗಿ ಹೇಳುತ್ತಾ ರೈಲ್ವೆ ನಿಲ್ದಾಣದಲ್ಲಿ ಗಸ್ತು ತಿರುಗುತ್ತಿ[...] ತೊಟ್ಟು ಲಾಠಿ ಹಿಡಿದವರನ್ನು ಒದ್ದು ಒಳಗೆ ಹಾಕಲಿ. ಲಾಠಿ ಹಿಡಿದ[...] ತೊಟ್ಟಿದ್ದವರಿಗೆ ರಕ್ಷಣೆ ನೀಡುವ ಅಧಿಕಾರ ಕೊಟ್ಟವರು ಯಾರು? ಆ [...] ರಕ್ಷಣೆ ನೀಡಲು ಪೊಲೀಸ್ ಇಲಾಖೆ ಇಲ್ಲವೇ? ಹೀಗೆ ರೈಲ್ವೆ ನಿಲ್ದಾ[ಣದಲ್ಲಿ] ಓಡಾಡುತ್ತಿದ್ದವರನ್ನು ಪೊಲೀಸರು ಏಕೆ ಬಂಧಿಸಲಿಲ್ಲ? ಲಾಠಿ ಹಿಡಿಯು[...] ವುದು ಅಂದರೆ ಶಸ್ತ್ರ ಹಿಡಿದಂತೆಯೇ ಸರಿ. ಇದು ರಕ್ಷಣೆ ನೀಡುವ [...] ಭಯ ಹುಟ್ಟಿಸುವಂತೆ ಕಾಣುತ್ತಿತ್ತು. ಇಷ್ಟೆಲ್ಲಾ ನಡೆಯುತ್ತಿದ್ದರೂ ಏನೂ [...] ಕೈಗೊಳ್ಳಲಿಲ್ಲ ಎಂದರೆ ಗೃಹ ಇಲಾಖೆ ಸತ್ತು ಹೋಗಿದೆ ಎಂದೇ ಅ[...]

-ಎಚ್.ಡಿ.ಕುಮಾ[ರಸ್ವಾಮಿ]

ಕಂಡಹಾಗೆ




editorlankesh@gmail.com • ಗೌರಿ ಲಂಕೇಶ್

ಭಯೋತ್ಪಾದಕ ಕಸಬ್‌ಗೂ, ಕೋಮುವಾದಿ ಮಾಯಾ ಕೊಡ್ನಾನಿಗೂ ಏನು ವ್ಯತ್ಯಾಸ?

2008ರ ನವೆಂಬರ್ ತಿಂಗಳಲ್ಲಿ ನಾಲ್ಕು ದಿನಗಳ ಭಾರತ ದೇಶವನ್ನು ಮಾತ್ರವಲ್ಲ, ಜಗತ್ತಿನ ಹಲವಾರು ಳ ಜನರನ್ನು ಬೆಚ್ಚಿಬೀಳಿಸಿತ್ತು ಮುಂಬೈ ನಗರದ ಪಾಕಿಸ್ತಾನದ ಭಯೋತ್ಪಾದಕರು ನಡೆಸಿದ ದಾಳಿ. ಾಗಿ 90 ಗಂಟೆಗಳ ಕಾಲ ನಡೆದ ಈ ಭೀಕರ ಲ್ಲಿ ಆ ಭಯೋತ್ಪಾದಕರು ಒಟ್ಟು 164 ಅಮಾಯಕ ನ್ನು ಕೊಂದು ಹಾಕಿದ್ದರು.

ದಾಳಿಯಲ್ಲಿ ಭಾಗವಹಿಸಿದ್ದ 10 ಪಾಕಿಸ್ತಾನದ ೀತ್ಪಾದಕರಲ್ಲಿ ಜೀವಂತವಾಗಿ ಮುಂಬೈ ಪೊಲೀಸರಿಗೆ ದ್ದವನು ಅಜ್ಮಲ್ ಕಸಬ್ ಮಾತ್ರ. ಉಳಿದವರೆಲ್ಲ



ಬೈ ಪೊಲೀಸರಿಗೆ ಮತ್ತು ಭಾರತದ ಸೈನಿಕರಿಗೆ ಮಾದರು. ನಿನ್ನೆ ಭಾರತದ ಸುಪ್ರೀಂ ಕೋರ್ಟ್ ಅಜ್ಮಲ್ ನಿಗೆ ಮುಂಬೈ ಹೈಕೋರ್ಟ್ ನೀಡಿದ್ದ ಮರಣ ನೆಯನ್ನು ದೃಢಪಡಿಸಿದೆ.

ಮುಂಬೈ ಮೇಲಾದ ದಾಳಿಯ ನಂತರ ಬಹಳಷ್ಟು ಕಸಬ್ ಓರ್ವ ಭಯೋತ್ಪಾದಕ ಎಂಬುದು ಎಲ್ಲರಿಗೂ ತ್ತು. ಆತನನ್ನು ಯಾಕೆ ಇನ್ನೂ ಜೀವಂತವಾಗಿ ಕೊಂಡು, ನಮ್ಮ ತೆರಿಗೆ ಹಣದಿಂದ ಅವನಿಗೆ ೋಪಚಾರ ಮಾಡಲಾಗುತ್ತಿದೆ. ಅವನನ್ನು ಕೂಡಲೇ ಟ್ಟು ಕೊಂದು ಹಾಕಬೇಕು" ಎಂದು ಟೀಕೆ ದ್ದರು. ಆದರೆ ಭಾರತ ದೇಶ 'Banana Re-lic' ಅಲ್ಲ, ಹಾಗೆಯೇ ಇಲ್ಲಿರುವ ಕೋರ್ಟುಗಳೂ ngaroo court'ಗಳಲ್ಲ. ಯಾರೇ ಆದರೂ ಆತನ ದ್ಧ ನ್ಯಾಯಾಲಯದಲ್ಲಿ ಸಂಪೂರ್ಣ ವಿಚಾರಣೆ ನಡೆದು ಮಾಡಿದ ಅಪರಾಧಕ್ಕೆ ಸೂಕ್ತ ಶಿಕ್ಷೆ ಕೊಡುವ ಕಾನೂನು ನಮ್ಮ ದೇಶದಲ್ಲಿದೆ. ಅಂತಹ ವ್ಯವಸ್ಥೆಯೇ ಈಗ ಕುರಿತು ತೀರ್ಪು ನೀಡಿರುವುದರಿಂದ ಆತನಿಗೆ ಮಾತ್ರವಲ್ಲ, ಆತ ಮತ್ತು ಆತನ ಸಂಗಡಿಗರು ನಡೆಸಿದ ಣಹೋಮದಲ್ಲಿ ಸತ್ತ ಅಮಾಯಕರ ಸಂಬಂಧಿಕರಿಗೂ ಿ ಸಿಕ್ಕಂತಾಗಿದೆ.

ಹಿಂದೊಮ್ಮೆ ಪೋಲಿ ಪುಂಡನಾಗಿದ್ದ, -ದರೋಡೆಗಳಲ್ಲಿ ಭಾಗಿ ಆಗಿದ್ದ ಪಾಕಿಸ್ತಾನದ ಅನಕ್ಷರಸ್ಥ ಯುವಕ ಕಸಬ್ ಧರ್ಮವೆಂಬ ಅಫೀಮನ್ನು ತಲೆಗೇರಿಸಿಕೊಂಡು ಭಾರತದ ಮೇಲೆ ಭಯೋತ್ಪಾದಕ ದಾಳಿ ಮಾಡಿದ್ದಕ್ಕೆ ಹತ್ತಾರು ಜನರನ್ನು ಕೊಂದಿದ್ದಕ್ಕೆ ಆತನಿಗೆ ತಕ್ಕ ಶಿಕ್ಷೆಯನ್ನೇ ನೀಡಲಾಗಿದೆ. ಆತ ಕೊನೆ ಉಸಿರೆಳೆಯುವವರೆಗೂ ಎಂದೂ ಜೈಲಿನಿಂದ ಒಂದು ಹೆಜ್ಜೆಯೂ ಹೊರಗಿಡದಿರಲಿ ಎಂಬ ಆಶೆ ನಮ್ಮೆಲ್ಲರದ್ದೂ ಆಗಿದೆ.

ಕಸಬ್ ಕುರಿತು ಸುಪ್ರೀಂ ಕೋರ್ಟು ತೀರ್ಪು ನೀಡಿದ ದಿನವೇ ಅಹಮದಾಬಾದಿನ ಹೈಕೋರ್ಟ್ ಕೂಡ ಒಂದು ಮುಖ್ಯ ತೀರ್ಪನ್ನು ನೀಡಿದೆ. ಹತ್ತು ವರ್ಷಗಳ ಹಿಂದೆ ಗುಜರಾತಿನ ನರೋಡಾ ಪಾಟಿಯಾದಲ್ಲಿ ಕೋಮುಗಲಭೆ ನಡೆಸಿ, ಒಂದು ಹಸುಗೂಸು ಸೇರಿದಂತೆ 34 ಮಕ್ಕಳನ್ನು, 32 ಮಹಿಳೆಯರನ್ನು ಮತ್ತು 30 ಪುರುಷರನ್ನು ಅಮಾನುಷವಾಗಿ ಕೊಂದು ಹಾಕಿದ್ದ ಪ್ರಕರಣದಲ್ಲಿ ಮಾಯಾ ಕೊಡ್ನಾನಿ ಎಂಬ ಮಾಜಿ ಮಂತ್ರಿಣಿ ಮತ್ತು ಬಾಬು ಭಜರಂಗಿ ಎಂಬ ಭಜರಂಗದಳದ ನಾಯಕ ದೋಷಿಗಳೆಂದು ಅಹಮದಾಬಾದಿನ ಹೈಕೋರ್ಟ್ ಹೇಳಿದೆ. ಅವರಿಗೆ ಎಂತಹ ಶಿಕ್ಷೆ ನೀಡಬೇಕೆಂದು ನ್ಯಾಯಾಲಯ ನಾಳೆ ಶುಕ್ರವಾರ ಪ್ರಕಟಿಸಲಿದೆ. ಹಲವು ನ್ಯಾಯವಾದಿಗಳ ಪ್ರಕಾರ ಇವರಿಬ್ಬರಲ್ಲದೆ ಆ ಕೃತ್ಯದಲ್ಲಿ ಭಾಗಿ ಆಗಿದ್ದ ಉಳಿದ 30 ಜನರಿಗೂ ಮರಣದಂಡನೆ ಸಿಗುವ ಸಾಧ್ಯತೆಗಳಿವೆ.

ನನ್ನ ಪ್ರಕಾರ ಕಸಬ್‌ನಂತೆ ಈ ಮಾಯಾ ಕೊಡ್ನಾನಿ ಮತ್ತು ಬಾಬು ಭಜರಂಗಿ ಕೂಡ ಭಯೋತ್ಪಾದಕರೇ. ಉದಾಹರಣೆಗೆ 2002ರ ಫೆಬ್ರವರಿ 28ರಂದು ಈ ಮಾಯಾ ಎಂಬ ರಾಕ್ಷಸಿ ಏನು ಮಾಡಿದಳು ಎಂದು ನೋಡಿ. ಆಗ ನರೋಡಾ ವಿಧಾನಸಭಾ ಕ್ಷೇತ್ರವನ್ನು ಈ ಮಾಯಾ ಪ್ರತಿನಿಧಿಸುತ್ತಿದ್ದಳು. ಹೇಳಿಕೇಳಿ ಆಗಲೂ ನರಹಂತಕ ನರೇಂದ್ರ ಮೋದಿಯೇ ಗುಜರಾತಿನ ಮುಖ್ಯಮಂತ್ರಿ ಆಗಿದ್ದನಲ್ಲದೆ ಗೃಹ ಇಲಾಖೆಯನ್ನು ತನ್ನಲ್ಲಿಯೇ ಇಟ್ಟುಕೊಂಡಿದ್ದ. ನರೇಂದ್ರ ಮೋದಿಯ ಕೋಮುವಾದಿ ಜಾಯಮಾನಕ್ಕೆ ಸಮನಾಗಿದ್ದವಳು ಈ ಮಾಯಾ ಕೊಡ್ನಾನಿ. ಕೋಮುವಾದಿ ಹಿಂದೂತ್ವ ಸಂಘಟನೆಗಳೊಂದಿಗೆ ಹಲವಾರು ದಶಕಗಳಿಂದ ಗುರುತಿಸಿಕೊಂಡಿದ್ದ, ಮೂಲಭೂತವಾದವನ್ನೇ ತನ್ನ ಧರ್ಮವನ್ನಾಗಿಸಿಕೊಂಡಿದ್ದ ಮಾಯಾ 2002ರ ಫೆಬ್ರವರಿಯಲ್ಲಿ ನಡೆದ ಗೋದ್ರಾ ದುರಂತವನ್ನೇ ನೆಪ ಮಾಡಿಕೊಂಡು ತನ್ನ ಮತ ಕ್ಷೇತ್ರದಲ್ಲಿ ವಾಸಿಸುತ್ತಿದ್ದ ಮುಸಲ್ಮಾನರ ಮೇಲೆ ದಾಳಿ ನಡೆಸಿದಳು. ಅಮಾಯಕ ಮುಸಲ್ಮಾನರನ್ನು ಕೊಂದು ಹಾಕಲು ಮಾಯಾ ತನ್ನೊಂದಿಗೆ ಕರೆದುಕೊಂಡು ಹೋಗಿದ್ದ ಹಿಂದೂತ್ವವಾದಿ ಉಗ್ರರನ್ನು ಪ್ರಚೋದಿಸಿದಳಲ್ಲದೆ, ಅವರಿಗೆಲ್ಲ ಲಾಂಗು ಮತ್ತು ಕತ್ತಿಗಳನ್ನು ನೀಡಿದ್ದಳಲ್ಲದೆ, ಜನರನ್ನು ಸುಟ್ಟು ಹಾಕಲು ದಾಳಿಕೋರರಿಗೆ ಸೀಮೆಣ್ಣೆಯನ್ನು ಸ್ವತಃ ಸರಬರಾಜು ಮಾಡಿದ್ದಳು. ಮಾಯಾಳ ನೇತೃತ್ವದಲ್ಲಿ ಅಂದು 95 ಜನರ ಅಮಾಯಕರು ಸಾವಿಗೀಡಾಗಿದ್ದರು.

ಆ ಮಾರಣಹೋಮದಲ್ಲಿ ಬದುಕುಳಿದವರು ಮಾಯಾ ವಿರುದ್ಧ ದೂರು ನೀಡಿದಾಗ ತಾನು ಅವತ್ತು ಆ ಪ್ರದೇಶದಲ್ಲೇ ಇರಲಿಲ್ಲ ಎಂದು ವಾದಿಸಿದ್ದಳು. ಆದರೆ ನಿಷ್ಠಾವಂತ ಪೊಲೀಸ್ ಅಧಿಕಾರಿ ರಾಹುಲ್ ಶರ್ಮ ಎಂಬುವವರು ಫೆಬ್ರವರಿ 29ರಂದು ಮಾಯಾಳ ಮೊಬೈಲ್ ಫೋನ್ ಎಲ್ಲಿತ್ತು ಎಂದು ತನಿಖೆ ಮಾಡಿದಾಗ ಅದು ನರೋಡಾ ಪಾಟಿಯಾ ಪ್ರದೇಶದಲ್ಲಿ ಇದ್ದದ್ದು ಸಾಬೀತಾಯಿತು. (ಅಂದಹಾಗೆ, ಶರ್ಮ ಅವರು ಮಾಯಾಳ ಫೋನ್ ದಾಖಲೆಗಳನ್ನು ಗುಜರಾತಿನ ಗಲಭೆಯನ್ನು ತನಿಖೆ ಮಾಡುತ್ತಿದ್ದ ನಾನಾವತಿ ಆಯೋಗಕ್ಕೆ ನೀಡಿದ್ದರಿಂದ ಅವರ ವಿರುದ್ಧವೇ ನರೇಂದ್ರ ಮೋದಿ ಸರ್ಕಾರ ಕ್ರಮ ತೆಗೆದುಕೊಂಡಿದೆ!) ಜೊತೆಗೆ ಅಂದು ಮಾಯಾಳ ರೌರವ ದರ್ಶನ ಪಡೆದ ಜನರು ಹೆದರದೆ ಆಕೆಯ ವಿರುದ್ಧ ನ್ಯಾಯಾಲಯದಲ್ಲಿ ಸಾಕ್ಷಿ ನೀಡಿದ್ದರಿಂದ ಆಕೆಗೆ ಇವತ್ತು ತಕ್ಕ ಶಾಸ್ತಿ ಆಗಿದೆ.

ಅಂದಹಾಗೆ, ಈ ಮಾಯಾ ಕೊಡ್ನಾನಿ ಸಾಮಾನ್ಯ ಹೆಂಗಸಲ್ಲ, ಮಾಮೂಲಿ ರಾಜಕಾರಣಿ ಅಲ್ಲ, ಬದಲಾಗಿ ಆಕೆ ವಿದ್ಯಾವಂತಳು, ವೈದ್ಯಕೀಯ ಪದವಿ ಪಡೆದಿರುವವಳು. ಖಾಸಗಿ ಪ್ರಾಕ್ಟೀಸ್ ಹೊಂದಿದ್ದವಳು. ಇಂತಹ ಓರ್ವ ಮಹಿಳೆ ತನ್ನ ಎಲ್ಲ ಮಾನವೀಯತೆಯನ್ನು ಮರೆತು ಧರ್ಮದ ಹೆಸರಲ್ಲಿ ಅಮಾಯಕರನ್ನು ಕೊಲ್ಲಿಸಿದಳು. ನಮ್ಮ ಪ್ರಜಾಪ್ರಭುತ್ವ ಎಷ್ಟು ವಿಚಿತ್ರ ಎಂದರೆ ಈಕೆ ನರೋಡಾ ಪಾಟಿಯಾದಲ್ಲಿ 95 ಜನರ ಸಾವಿಗೆ ಕಾರಣೀಭೂತಳಾಗಿದ್ದರೂ 2007ರಲ್ಲಿ ಈಕೆ ಇದೇ ನರೋಡಾ ವಿಧಾನಸಭಾ ಕ್ಷೇತ್ರದಿಂದ 1.8 ಲಕ್ಷ ಮತಗಳ ಅಂತರದಿಂದ ಗೆದ್ದಿದ್ದಳು. ಆ ಗೆಲುವಿನ ನಂತರ ಮೋದಿ ಆಕೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆಯೊಂದಿಗೆ ಮಂತ್ರಿ ಪದವಿಯನ್ನು ನೀಡಿ ಪ್ರೋತ್ಸಾಹಿಸಿದ್ದ.

ಇನ್ನು ಮೊದಲೇ ಹೇಳಿದಂತೆ, ಇದೇ ನರೋಡಾ ಪಾಟಿಯಾ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಬು ಭಜರಂಗಿ ಎಂಬ ಭಜರಂಗದಳದ ನಾಯಕನೂ ದೋಷಿ ಎಂದು ನ್ಯಾಯಾಲಯ ಹೇಳಿದೆ. ಈ ಬಾಬು ಭಜರಂಗಿ ಎಂತಹವನೆಂದರೆ, ತಾನು ಅಮಾಯಕರನ್ನು ಕೊಂದದ್ದರ ಬಗ್ಗೆ ಕಿಂಚಿತ್ತೂ ಪಾಪಪ್ರಜ್ಞೆ ಇಲ್ಲದವನು. ಬದಲಾಗಿ ತನ್ನ ಸಾಹಸದ ಬಗ್ಗೆ ಹೆಮ್ಮೆ ಹೊಂದಿರುವವನು. ತೆಹೆಲ್ಕಾ ಪತ್ರಿಕೆಯ ವರದಿಗಾರ ಆಶೀಶ್ ಖೇತಾನ್ ಅವರು 2007ರಲ್ಲಿ ನಡೆದ 'ಸ್ಟಿಂಗ್ ಆಪರೇಷನ್'ನಲ್ಲಿ ಇದೇ ಬಾಬು ಭಜರಂಗೆ ಏನೆಂದು ಹೇಳಿದ್ದ ಗೊತ್ತೆ?

"ನಾವು ಒಂದೇ ಒಂದು ಮುಸಲ್ಮಾನರ ಅಂಗಡಿಯನ್ನೂ ಬಿಡಲಿಲ್ಲ, ಎಲ್ಲವನ್ನೂ ಭಸ್ಮ ಮಾಡಿದೆವು... ಕೊಚ್ಚಿ, ಬೆಂಕಿ ಹಚ್ಚಿ, ಸುಟ್ಟು ಹಾಕಿದೆವು... ಆ ...... ಮಕ್ಕಳನ್ನು ನಾವು ಸುಟ್ಟು ಹಾಕಿದ್ದು ಯಾಕೆಂದರೆ ಅವರಿಗೆ ಬೆಂಕಿ ಬಗ್ಗೆ ಹೆದರಿಕೆ, ಅದಕ್ಕೆ ಅವರು ತಮ್ಮ ಮೃತರನ್ನು ಸುಡುವುದಿಲ್ಲ... ನನಗೊಂದು ಕೊನೆ ಆಸೆ ಇದೆ. ನನಗೆ ಮರಣದಂಡನೆಯನ್ನು ವಿಧಿಸಿದರೂ ಪರವಾಗಿಲ್ಲ... ನನ್ನನ್ನು ಗಲ್ಲಿಗೇರಿಸಿದರೂ ನಾನು ಯೋಚಿಸುವುದಿಲ್ಲ.... ಆದರೆ ನನ್ನನ್ನು ಗಲ್ಲಿಗೇರಿಸುವ ಮುನ್ನ ನನಗೆ ಎರಡು ದಿನಗಳ ಕಾಲಾವಕಾಶ ನೀಡಿದರೆ ಏಳೆಂಟು ಲಕ್ಷದಷ್ಟು ಸಂಖ್ಯೆಯಲ್ಲಿ ಅವರಿರುವ ಜುಹಾಪುರಕ್ಕೆ ಹೋಗಿ ನನ್ನ ಕೈಯಲ್ಲಿ ಸಾಧ್ಯವಾದಷ್ಟು ಜನರನ್ನು ಕೊಂದು ಹಾಕುತ್ತೇನೆ... ಅವರೆಲ್ಲರೂ ಸತ್ತು ಹೋಗಲಿ... ಕನಿಷ್ಠ 25,000-50,000 ಜನರನ್ನು ಕೊಂದು ಹಾಕುತ್ತೇನೆ..."

ಈಗ ಹೇಳಿ, ಕಸಬ್‌ಗೂ, ಮಾಯಾ ಕೊಡ್ನಾನಿಗೂ, ಬಾಬು ಭಜರಂಗಿಗೂ ಏನಾದರೂ ವ್ಯತ್ಯಾಸ ಇದೆಯೇ?

ನಿನ್ನೆ ಕಸಬ್‌ಗೆ ಮರಣದಂಡನೆ ನೀಡಿರುವಂತೆ ನಾಳೆ ಮಾಯಾ ಕೊಡ್ನಾನಿ, ಬಾಬು ಭಜರಂಗಿ ಮತ್ತು ಇತರರಿಗೂ ನ್ಯಾಯಾಲಯ ಅಂತಹದ್ದೇ ಕಠೋರ ಶಿಕ್ಷೆಯನ್ನು ವಿಧಿಸಬಹುದು. ಆದರೆ ವ್ಯಕ್ತಿಯೊಬ್ಬ ಎಂತಹದ್ದೇ ಅಪರಾಧವೆಸಗಿದ್ದರೂ ಆತನನ್ನು ಕೊಲ್ಲುವ ಹಕ್ಕು ಇತರರಿಗೆ ಇರುತ್ತದೆಯೇ ಎಂಬ ಪ್ರಶ್ನೆ ಇದ್ದೇ ಇದೆ. ಮರಣದಂಡನೆಯನ್ನು ವಿರೋಧಿಸುವವರು ಯಾರನ್ನೇ ಆಗಲಿ ಗಲ್ಲಿಗೇರಿಸುವುದನ್ನು ಒಪ್ಪುವುದಿಲ್ಲ, ಅಂಥವರಲ್ಲಿ ನಾನೂ ಒಬ್ಬಳು.

ಆದ್ದರಿಂದ ಕಸಬ್ ಎಂಬ ಪಾಕಿಸ್ತಾನದ ಭಯೋತ್ಪಾದಕನೇ ಆಗಲಿ, ಮಾಯಾ ಕೊಡ್ನಾನಿ ಎಂಬ ಭಾರತೀಯ ಭಯೋತ್ಪಾದಕಿಯೇ ಆಗಲಿ, ಅವರನ್ನು ಗಲ್ಲಿಗೇರಿಸುವ ಬದಲಾಗಿ ಅವರ ದೇಹದಲ್ಲಿ ಜೀವ ಇರುವವರೆಗೂ ಅವರು ಜೈಲಿನೊಳಗಿದ್ದು ತಮ್ಮ ಕೊನೆ ಉಸಿರಿರುವವರೆಗೂ ತಾವು ಮಾಡಿದ ಪಾಪ ಕೃತ್ಯಕ್ಕೆ ಪಶ್ಚಾತ್ತಾಪ ಪಡುತ್ತಾ ಜೈಲಿನಲ್ಲೇ ಕೊಳೆಯಲಿ....

****

ಮಾಯಾ ಕೊಡ್ನಾನಿ ಮತ್ತು ಬಾಬು ಭಜರಂಗಿ ಮಾಡಿಸಿದ ಮಾರಣ ಹೋಮಕ್ಕೆ ತಕ್ಕ ಶಿಕ್ಷೆ ಆಗುವಂತೆ ಸತತವಾಗಿ ಹೋರಾಡಿದ್ದು ಬೇರೆ ಯಾರೂ ಅಲ್ಲ, ಕೋಮು ಸೌಹಾರ್ದವನ್ನು ಬಯಸುವ ನಮ್ಮೆಲ್ಲರಿಗೆ ಹಿರಿ ಅಕ್ಕನಂತಿರುವ ತೀಸ್ತಾ ಸೆಟಲ್ವಾದ್. ಮೂಲತಃ ವಕೀಲೆ, ಪತ್ರಕರ್ತೆ ಮತ್ತು ಹೋರಾಟಗಾರ್ತಿ ಆದ ತೀಸ್ತಾ ಮತ್ತು



ಆಕೆಯ ಮಿತ್ರರು ಕಳೆದ ಹತ್ತು ವರ್ಷಗಳಿಂದ ಸಿಟಿಜನ್ಸ್ ಫಾರ್ ಜಸ್ಟೀಸ್ ಅಂಡ್ ಪೀಸ್ (ಸಿಜೆಪಿ) ಎಂಬ ಸಂಘಟನೆಯನ್ನು ಕಟ್ಟಿಕೊಂಡು ನರೇಂದ್ರ ಮೋದಿಯ ಸರ್ಕಾರದ ದುಷ್ಟತನದ ವಿರುದ್ಧ ನ್ಯಾಯಾಲಯಗಳಲ್ಲಿ ಕಾನೂನಿನ ಸಮರ ನಡೆಸುತ್ತಿದ್ದಾರೆ. ಆ ಕಾರಣಕ್ಕೇ ತೀಸ್ತಾಗೆ ಹಲವಾರು ಬಾರೀ ಪ್ರಾಣ ಬೆದರಿಕೆಗಳು ಬಂದಿವೆ. ತೀಸ್ತಾ ವಿರುದ್ಧ ಹತ್ತಾರು ಖೊಟ್ಟಿ ಕೇಸುಗಳನ್ನು ಮೋದಿ ಸರ್ಕಾರ ದಾಖಲಿಸಿದೆ. ಅಷ್ಟೇ ಅಲ್ಲ, ಅವಕಾಶ ಸಿಕ್ಕಾಗಲೆಲ್ಲ ತೀಸ್ತಾ ವಿರುದ್ಧ ಮೋದಿ ಕೆಂಡಕಾರಿದ್ದಾನೆ, ಮಾನನಷ್ಟವಾಗುವಂತಹ ಹೇಳಿಕೆಗಳನ್ನು ನೀಡಿದ್ದಾನೆ. ಆದರೆ ಇದ್ಯಾವುದರಿಂದಲೂ ಧೃತಿಗೆಡದ ತೀಸ್ತಾ ಅಮಾಯಕರಿಗೆ ನ್ಯಾಯ ಕೊಡಿಸಲು ಪ್ರಯತ್ನಿಸುತ್ತಲೇ ಇದ್ದಾರೆ. ಮೋದಿ ಸರ್ಕಾರದ ವಿರುದ್ಧ ತೀಸ್ತಾ ಅವರ ಸಿಜೆಪಿ ನ್ಯಾಯಾಲಯಗಳ ಮುಂದೆ ಒಟ್ಟು ಒಂಭತ್ತು ಕೇಸುಗಳನ್ನು ದಾಖಲಿಸಿದೆ. ಅವುಗಳಲ್ಲಿ ನಿನ್ನೆ ಮಾಯ ಕೊಡ್ನಾನಿ ದೋಷಿ ಎಂದು ಬಂದಿರುವ ತೀರ್ಪು ಒಂದು ಕೇಸಿಗೆ ಸಂಬಂಧಪಟ್ಟದ್ದಷ್ಟೇ.

ಈ ತೀರ್ಪಿನ ವಿರುದ್ಧ ಮಾಯಾ ಕೊಡ್ನಾನಿ ಮತ್ತು ಇತರರು ಸುಪ್ರೀಂ ಕೋರ್ಟ್ ಮೊರೆ ಹೋಗಬಹುದು. ಅಂದರೆ ಈ ಸಮರ ಇನ್ನಷ್ಟು ವರ್ಷಗಳ ಕಾಲ ಮುಂದುವರೆಯುತ್ತದೆ. ಅದನ್ನು ಎದುರಿಸಲು ತೀಸ್ತಾಗೆ ಅಪಾರ ತಾಳ್ಮೆ ಮತ್ತು ಧೈರ್ಯ ಬೇಕಾಗುತ್ತದೆ. ತಾನೆಂದೂ ಭೇಟಿ ಆಗಿರದಿದ್ದ, ಅನ್ಯಾಯವಾಗಿ ಕೊಲೆಯಾದ ಅಪರಿಚಿತರಿಗೆ ನ್ಯಾಯ ಸಿಗುವಂತೆ ನೋಡಿಕೊಳ್ಳುತ್ತಿರುವ ತೀಸ್ತಾರಿಗೆ ನಮ್ಮೆಲ್ಲರ ಬೆಂಬಲ ಮತ್ತು ಪ್ರೋತ್ಸಾಹ ಇದ್ದರೆ ಅವರ ಪಯಣ ಸುಗಮವಾಗುತ್ತದೆ.

ಅಕ್ಕ ತೀಸ್ತಾಳಿಗೆ ನಿಮ್ಮೆಲ್ಲರ ಪರವಾಗಿ ಪ್ರೀತಿಯ, ತುಂಬುಗೆಯ ಅಭಿನಂದನೆಗಳು!



ಕೆ.ಎಂ.ಎಫ್ ಕರ್ಮಕಾಂಡ


ಹಿಂಡಿ, ಬೂಸಾದಲ್ಲೂ ಹುಡುಕಿ ತಿಂದವರು!

ಇದು ಬಳ್ಳಾರಿ ರೆಡ್ಡಿಗಳ ಅವ್ಯವಹಾರದ ಮತ್ತೊಂದು ಕಂತು.


ಈಗಾಗಲೇ ಗಣಿ ಹಗರಣ, ಕೊಲೆ ಆಪಾದನೆ, ಭ್ರಷ್ಟಾಚಾರ ಆರೋಪ, ಬೇಲ್-ಡೀಲ್ ಅಂತ ಮೈತುಂಬ ಕೇಸುಗಳನ್ನೇ ಹೊದ್ದಿರುವ ಗಣಿ ಟೀಮಿನ ಕೊನೇ ಕುಡಿ ಸೋಮಶೇಖರ್ ರೆಡ್ಡಿ ಕೆ.ಎಂ.ಎಫ್‌ನ ಅಧ್ಯಕ್ಷನಾಗಿದ್ದುಕೊಂಡು ಪಶು ಆಹಾರಕ್ಕೂ ಬಾಯಿ ಹಾಕಿದ ಹೀನಕೃತ್ಯ ಇದು. ಆತನಿಗೆ ಸಾಥ್ ನೀಡಿದ ಕೆಲ ಭ್ರಷ್ಟ ಅಧಿಕಾರಿಗಳಿಂದಾಗಿ ಕೆ.ಎಂ.ಎಫ್ ಇವತ್ತು ಬರೋಬ್ಬರಿ 40 ಕೋಟಿಯ ನಷ್ಟ ಅನುಭವಿಸಬೇಕಾಗಿದೆ. ರೆಡ್ಡಿಯನ್ನು ಮುಂದಿಟ್ಟುಕೊಂಡು ಮ್ಯಾನೇಜಿಂಗ್ ಡೈರೆಕ್ಟರ್ ಎಂ.ಎಸ್.ವೆಂಕಟರಾಮ್ ಮತ್ತು ಹಣಕಾಸು ವಿಭಾಗದ ನಿರ್ದೇಶಕ ಸಿ.ನರಸಿಂಹ ರೆಡ್ಡಿ ಈ ಹಗಲುದರೋಡೆಯಿಂದ ಏನಿಲ್ಲವೆಂದರೂ 9 ರಿಂದ 10 ಕೋಟಿ ಕಿಕ್‌ಬ್ಯಾಕ್ ಪಡೆದಿರೋದು ಗ್ಯಾರಂಟಿ.

ಕೆ.ಎಂ.ಎಫ್ ಇತಿಹಾಸದಲ್ಲೇ ಇದು ಪ್ರಪ್ರಥಮ ಬಹುಕೋಟಿ ಹಗರಣ. ಕಳೆದೆರಡು ತಿಂಗಳಿನ ಪಶು ಆಹಾರ ಸಾಮಗ್ರಿ ಖರೀದಿಯ ಬ್ಯಾಲೆನ್ಸ್ ಶೀಟ್‌ಗಳೇ ನಡೆದಿರುವ ವ್ಯವಸ್ಥಿತ ವಂಚನೆಯನ್ನು ಬಯಲಿಗೆಳೆಯುತ್ತವೆ. ಅಣ್ಣ ಜನಾರ್ದನ ರೆಡ್ಡಿಯ ಬೇಲ್ ವಿಚಾರದಲ್ಲಿ ಜೈಲು ಸೇರುವ ಕೆಲವೇ ಕೆಲವು ದಿನ ಮೊದಲು ಈ ಅಕ್ರಮ ಖರೀದಿಯ ಫೈಲುಗಳಿಗೆ ಸಹಿ ಹಾಕಿರುವ ಸೋಮಶೇಖರ್ ರೆಡ್ಡಿ ಹೊಸದೊಂದು 'ಬೂಸಾ ಹಗರಣ' ಸೃಷ್ಟಿಸಿ ಹೋಗಿದ್ದಾನೆ. ಅಚ್ಚರಿಯ ವಿಷಯ ಎಂದರೆ ಕೆ.ಎಂ.ಎಫ್ ಬೋರ್ಡ್‌ನಲ್ಲಿ ಬಿ.ಜೆ.ಪಿಯನ್ನು ಪ್ರತಿನಿಧಿಸುತ್ತಿರುವ ರೇವಣಸಿದ್ದಪ್ಪ, ಪಿ.ನಾಗರಾಜು, ಎಸ್.ಸಿ.ಅಶೋಕ್ ತಂಡವೇ ರೆಡ್ಡಿ ಹಾಗೂ ಭ್ರಷ್ಟ ಅಧಿಕಾರಿಗಳು ನಡೆಸಿದ ಈ ಭಾರಿ ಅವ್ಯವಹಾರವನ್ನು ಬಯಲಿಗಿಟ್ಟಿದೆ.

ಕರ್ನಾಟಕ ರಾಜ್ಯ ಹಾಲು ಮಹಾಮಂಡಳ (ಕೆ.ಎಂ.ಎಫ್) ಮೂಲತಃ ರೈತ ಸಹಕಾರಿ ಅಪೆಕ್ಸ್ ಸಂಸ್ಥೆ. ಇಲ್ಲಿ ಹಾಲು ಉತ್ಪಾದಕ ರೈತರೆ ಅಸಲೀ ಪಾಲುದಾರರು. ದಿನಂಪ್ರತಿ ಐವತ್ತು ಲಕ್ಷ ಲೀಟರ್ ಹಾಲಿನ ವಹಿವಾಟು ನಡೆಸುವ ಮೂಲಕ ಭಾರೀ ಲಾಭದಲ್ಲಿದ್ದ ಸಂಸ್ಥೆಗೆ ಸೋಮಶೇಖರ್ ರೆಡ್ಡಿ ಎಂಟ್ರಿ ಕೊಟ್ಟಾಗಲೆ 'ನಂದಿನಿ'ಯ ಧನಭಂಗವಾಗುವುದು ಖಾತ್ರಿಯಾಗಿತ್ತು. ಆದರೆ ಗಣಿ ಕೆರೆತದಲ್ಲಿ ಸಾಕಷ್ಟು ಕಮಾಯಿ ಕೈಸೇರುತ್ತಿದ್ದರಿಂದ ಮೊದಮೊದಲು ರೆಡ್ಡಿಗಾರು ಹಸು ಕೆಚ್ಚಲಿಗೆ ಕೈಹಾಕುವ ಸಾಹಸ ಮಾಡಿರಲಿಲ್ಲ, ಅದೂಅಲ್ಲದೆ ಚುನಾಯಿತ ಸದಸ್ಯರ ಪಟ್ಟಿಯಲ್ಲಿ ಎಚ್.ಡಿ.ರೇವಣ್ಣನ ಹೆಸರೂ ಇದ್ದುದರಿಂದ ಪೊಲಿಟಿಕಲ್ ರಿಸ್ಕ್ ಬೇಡವೆಂದೇ ಸುಮ್ಮನಿದ್ದಿರಬಹುದು. ದುರದೃಷ್ಟವಶಾತ್(?) ಕ್ಷಮಿಸಿ, ಅದೃಷ್ಟವಶಾತ್ ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸುವಂತೆ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದ ಬೆನ್ನಿಗೆ ಸಿಬಿಐ ಜನಾರ್ದನ ರೆಡ್ಡಿಯನ್ನು ಚಂಚಲಗುಡ ಜೈಲಿಗೆ ಗದುಮಿದ್ದು ರೆಡ್ಡಿಯ ಕಿಂಗ್‌ಡಮ್‌ಗೆ ಬ್ರೇಕ್ ಹಾಕಿದಂತಾಗಿತ್ತು. ಮುಟ್ಟುಗೋಲಿನ ನೆಪದಲ್ಲಿ ಇದ್ದಬದ್ದ ಸಂಪತ್ತನ್ನೆಲ್ಲ ಸಿಬಿಐ ಸೀಜ್ ಮಾಡಿದಾಗಲಂತೂ ರೆಡ್ಡಿಗಳು ಸಂಕಷ್ಟಕ್ಕೆ ಸಿಲುಕಿದ್ದರು. ಅಷ್ಟರಲ್ಲಾಗಲೇ ಹಿರಿಯಣ್ಣ ಕರುಣಾಕರ ರೆಡ್ಡಿಯೂ ಸಚಿವ ಸ್ಥಾನ ಕಳೆದುಕೊಂಡು ಭೂಗತನಾಗಿದ್ದ. ಇಡೀ ರೆಡ್ಡಿ ಟೀಮಿಗೆ ಕಟ್ಟ ಕಡೆಯದಾಗಿ ಉಳಿದದ್ದು ಕೆ.ಎಂ.ಎಫ್ ಅಧ್ಯಕ್ಷ ಗಾದಿಯೊಂದೆ. ಆ ವೇಳೆಗಾಗಲೆ ಜನಾರ್ದನ ರೆಡ್ಡಿಯ ಬೇಲ್ ವ್ಯವಹಾರವೂ ಕುದುರಿ, ಜಡ್ಜ್ ಸಾಹೇಬರಿಗೆ ಒಂದಷ್ಟು ಅಡ್ವಾನ್ಸನ್ನೂ ನೀಡಬೇಕಿತ್ತಾದ್ದರಿಂದ ಕೆ.ಎಂ.ಎಫ್‌ನಲ್ಲಿ ಕೈಯಾಡಿಸುವುದು ಸೋಮಶೇಖರ್ ರೆಡ್ಡಿಗೆ ಅನಿವಾರ್ಯವಾಗಿ ಹೋಗಿತ್ತು.




ಸಿ.ನರಸಿಂಹ ರೆಡ್ಡಿ



ಎಂ.ಎಸ್.ವೆಂಕಟರಾಮ್

ಮೂಲತಃ ಈ ಸೋಮಶೇಖರ್ ರೆಡ್ಡಿ ಜನಾರ್ದನ ರೆಡ್ಡಿಯಷ್ಟು ಶಾರ್ಪೂ ಅಲ್ಲ, ಕರುಣಾಕರ ರೆಡ್ಡಿಯಷ್ಟು ಟಫ್ಫೂ ಅಲ್ಲ. ದುಡ್ಡು ಮಾಡಬೇಕೆನ್ನುವ ನಿರ್ಧಾರಕ್ಕೇನೊ ಬಂದಿದ್ದ ಆದರೆ ಹೇಗೆ ಎನ್ನುವುದೇ ಆತನಿಗೆ ಸರಿಯಾಗಿ ತಿಳಿದಿರಲಿಲ್ಲ. ಇದನ್ನು ಬಳಸಿಕೊಂಡದ್ದು ಕೆ.ಎಂ.ಎಫ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಎಂ.ಎಸ್.ವೆಂಕಟರಾಮು ಮತ್ತು ಹಣಕಾಸು ವಿಭಾಗದ ನಿರ್ದೇಶಕ ಸಿ.ನರಸಿಂಹ ರೆಡ್ಡಿ. ಇಬ್ಬರೂ ಮಹಾನ್ ಕಿಲಾಡಿಗಳು. ಹಗರಣ ದ ಕೇಂದ್ರಬಿಂದು ಎನ್ನಲಾಗು ತ್ತಿರುವ ನರಸಿಂಹ ರೆಡ್ಡಿಯಂತು 'ರೇವಣ್ಣ ಅಧ್ಯಕ್ಷರಾಗಿದ್ದಾಗ ಭರ್ಜರಿ ದುಡ್ಡು ಮಾಡಿಕೊಂಡರೆಂಬ' ಅಂತೆ-ಕಂತೆಯ ಕತೆಹೇಳಿ ಸೋಮಶೇಖರ್ ರೆಡ್ಡಿಯನ್ನು ಲೂಟಿಗೆ ಅಣಿ ಮಾಡಿದ್ದ. ರೈತರ ಹಣವನ್ನು ಲಪಟಾಯಿಸಲು ಸಜ್ಜಾದ ಈ ತ್ರಿಮೂರ್ತಿ ವಂಚಕರ ಕಣ್ಣು ಬಿದ್ದದ್ದೇ ಹಸುಗಳಿಗೆ ನೀಡುವ ಹಿಂಡಿ, ಬೂಸಾ ಖರೀದಿಯ ಮೇಲೆ. ಕೋಟಿ ಲೆಕ್ಕದಲ್ಲಿ ನಡೆಯುವ ಈ ಖರೀದಿಯಲ್ಲಿ ಏನಿಲ್ಲವೆಂದರೂ ಎಂಟತ್ತು ಕೋಟಿ ಸ್ವಾಹಾ ಮಾಡಬಹುದೆನ್ನುವ ಅಂದಾಜು ಸಿಗುತ್ತಿದ್ದಂತೆಯೇ ಕಾರ್ಯಾಚರಣೆಗಿಳಿದಿದ್ದರು.



ಪಶು ಆಹಾರ ಸಾಮಗ್ರಿ ಖರೀದಿ

ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದಿಂದ ಹಸುಗಳಿಗೆ ಸಮತೋಲಿತ ಆಹಾರವನ್ನು ಕೆ.ಎಂ.ಎಫ್ ನೀಡುತ್ತಾ ಬಂದಿದೆ. ಹಿಂಡಿ, ಬೂಸಾ ತಯಾರಿಕೆಗೆ ಬೇಕಾಗುವ ಒಣ ಹತ್ತಿ ಬೀಜ (de oiled cotton seed), ಕಾಕಂಬಿ, ಜೋಳ ಮುಂತಾದ ಸಾಮಗ್ರಿಗಳನ್ನು ಖರಿ[illegible] ವೈಜ್ಞಾನಿಕವಾಗಿ ಸಮಪ್ರಮಾಣದ ಆಹಾರವನ್ನು ಸಿದ್ಧ[illegible] ರಿಯಾಯಿತಿ ದರದಲ್ಲಿ ಹಾಲು ಉತ್ಪಾದಕ ಸಹಕಾರ ಸಂ[illegible] ಮೂಲಕ ಹೈನುಗಾರಿಕೆ ನಡೆಸುತ್ತಿರುವ ರೈ[illegible] ತಲುಪಿಸಲಾಗುತ್ತದೆ. ರೈತರಿಗೆ ಹೊರೆಯಾಗಬಾರದ[illegible] ಕಾರಣಕ್ಕೆ ಉತ್ಪಾದನೆಗೆ ತಗುಲುವ 13 ರಿಂದ 14 [illegible] ವೆಚ್ಚಕ್ಕಿಂತ ಕಡಿಮೆ ದರಕ್ಕೆ, ಅಂದರೆ ಪ್ರತಿ ಟನ್‌ಗೆ ಹನ[illegible] ಸಾವಿರದಂತೆ ಮಾರಾಟ ಮಾಡಲಾಗುತ್ತಿದೆ. ಇದರಲ್ಲಿ [illegible] ಮುಖ್ಯವಾಗಿ ಬೇಕಾಗುವುದು ಮತ್ತು ಹೆಚ್ಚು [illegible] ಖರೀದಿಯಾಗುವಂಥದ್ದೆಂದರೆ ಒಣ ಹತ್ತಿ ಬೀಜ.

ಸಾಮಾನ್ಯವಾಗಿ ಇದರ ದರ ಕಡಿಮೆ ಇ[illegible] ಅವಧಿಯಲ್ಲಿ ಜಾಸ್ತಿ ಖರೀದಿಸಿ ಗೋದಾಮುಗಳಲ್ಲಿ ಶೇ[illegible] ಮಾಡಿ ಅಗತ್ಯಕ್ಕೆ ತಕ್ಕಂತೆ ಪಶು ಆಹಾರ ತಯಾ[illegible] ಬಳಸಿಕೊಳ್ಳಲಾಗುತ್ತಿತ್ತು, ಹಾಗಾಗಿ ಕೆ.ಎಂ.ಎಫ್‌ಗೆ [illegible] ಹೊರೆ ಬೀಳುತ್ತಿರಲಿಲ್ಲ, ಮೊದಲಿನಿಂದಲೂ ಗುಂಟ[illegible] ಮೂಲದ ಐದಾರು ಕಂಪನಿಗಳೇ ಹತ್ತಿ ಬೀಜಗ[illegible] ಒದಗಿಸುತ್ತಿವೆ. ಖರೀದಿಯಲ್ಲಿ ಅಕ್ರಮ ನಡೆಯಬಾರದ[illegible] ಕಾರಣಕ್ಕೆ ಈ ಮುನ್ನ ಚುನಾಯಿತ ಸದಸ್ಯರ 3-4 [illegible] ಉಪಸಮಿತಿಯೊಂದನ್ನು ರಚಿಸಿ ಅವರ ಮು[illegible] ಖರೀದಿಸಲಾಗುತ್ತಿತ್ತು. ಈ ಸಮಿತಿ ಮಾರುಕಟ್ಟೆಯಲ್ಲಿ [illegible] ಇರುವ ದರವನ್ನು ಪರಿಗಣಿಸಿ ಟನ್‌ಗೆ ಇಂತಿಷ್ಟು [illegible] ಅಂತ ಫಿಕ್ಸ್ ಮಾಡಿದ್ದಕ್ಕೆ ಒಪ್ಪಿಕೊಂಡು ಕಂಪನಿಗಳು ಪ[illegible] ಮಾಡುತ್ತಿದ್ದವು. ಆದರೆ ಈ ಉಪಸಮಿತಿ ಸ[illegible] ಮುಂದುವರೆದದ್ದೇ ಆದರೆ ಗೋಲ್‌ಮಾಲ್ ಮಾ[illegible] ಸಾಧ್ಯವಿಲ್ಲವೆಂಬ ಇರಾದೆಗೆ ಬಂದ ವಂಚಕ ತ್ರಿಮೂರ್ತಿ[illegible] ಇದ್ದಕ್ಕಿದ್ದಂತೆಯೇ ಖರೀದಿಗಿದ್ದ ಸಮಿತಿಯನ್ನು ನಿ[illegible] ಇನ್ನು ಮುಂದೆ ಇ-ಟೆಂಡರ್ ಮೂಲಕ ಎಂ.ಡಿ [illegible] ನಿರ್ದೇಶಕ(ಹಣಕಾಸು)ರನ್ನು ಒಳಗೊಂಡ ಅಧಿಕಾರಿ[illegible] ಖರೀದಿ ನಡೆಸಬೇಕೆನ್ನುವ ನಿಯಮ ರೂಪಿಸಿ[illegible] ಸೋಮಶೇಖರ್ ರೆಡ್ಡಿಯೇ ಅಧ್ಯಕ್ಷನಾದ್ದರಿಂದ [illegible] ಸುಲಭವಾಗಿ ಅನುಮೋದನೆಯೂ ದೊರೆತಿತ್ತು.

ಹೀಗೆ ಆಂತರಿಕ ಅಡೆಯನ್ನು ಸುಲಭ[illegible] ನಿವಾರಿಸಿಕೊಂಡ ನಂತರ ಟಾರ್ಗೆಟ್ ಮಾಡಿದ್ದು ಹತ್ತಿ[illegible] ಸರಬರಾಜು ಮಾಡುತ್ತಿದ್ದ ಕಂಪನಿಗಳನ್ನು. ತಾವು ಖರೀದಿ[illegible] ಪ್ರತಿ ಟನ್‌ಗೆ ಇಂತಿಷ್ಟು ಪರ್ಸೆಂಟೇಜ್ ಲೆಕ್ಕದಲ್ಲಿ [illegible] ಕೊಡಬೇಕು, ಅದಕ್ಕೆ ಬೇಕಾದಂತೆ ನೀವು ದರವನ್ನು [illegible] ಟೆಂಡರ್ ಹಾಕಿಕೊಳ್ಳಿ ಎನ್ನುವ ಡೀಲನ್ನು ಕಂಪ[illegible] ಮುಂದಿರಿಸಿದ್ದರು. ಆದರೆ ಕಂಪನಿಗಳು ಸುತರಾಂ ಒಪ್ಪಿ[illegible] ಆಗಲೇ ಶುರುವಾದದ್ದು ಇವರ ಅಸಲೀ ಆಟ.

ಈ ಡೀಲ್‌ಗೂ ಮುನ್ನ ಅಂದರೆ ಜನವರಿ ಮೂ[illegible] ತಾರೀಖು ಮೊದಲಿದ್ದ ನಿಯಮದಂತೆಯೇ ಸುಮಾ[illegible] 15,300 ಟನ್ ಹತ್ತಿಬೀಜಗಳನ್ನು 13,700 (ಪ್ರತಿ ಟ[illegible] ದರದಂತೆ ಖರೀದಿ ಮಾಡಲಾಗಿತ್ತು. ಅಲ್ಲಿಗೆ 21 ಕೆ[illegible] ಮೊತ್ತವನ್ನು ಕೆ.ಎಂ.ಎಫ್ ಆ ಕಂಪನಿಗಳಿಗೆ ಸಂದ[illegible] ಮಾಡಬೇಕಿತ್ತು, ಆದರೆ ಕಂಪನಿಗಳು ಇವರ ಭ್ರಷ್ಟ ಡಿ[illegible] ತಿರಸ್ಕರಿಸಿದ್ದರಿಂದ ಸುಖಾಸುಮ್ಮನೆ ಹಳೆಯ 21 ಕೆ[illegible] ಬ್ಯಾಲೆನ್ಸ್ ಪಾವತಿಗೆ ನೆಪ ಹೇಳಲು ಶುರು ಮಾಡಿ[illegible] ಅಷ್ಟಲ್ಲದೆ ಮುಂದಿನ ಖರೀದಿಗೆಂದು ಫೆಬ್ರವರಿ 2[illegible] ಕರೆದಿದ್ದ ಟೆಂಡರ್‌ಗೆ ಅದೇ ಕಂಪನಿಗಳು ಟೆಂಡರ್ ಹಾ[illegible] ತಮ್ಮ ಡೀಲ್‌ಗೆ ಒಪ್ಪಲಿಲ್ಲ ಎಂಬ ಒಂದೇ ಕಾ[illegible] ಇಡಿಯಾಗಿ ಆ ಟೆಂಡರನ್ನು ತಿರಸ್ಕರಿಸಿದ ರೆಡ್ಡಿ [illegible] ಟೀಮು ಸದ್ಯಕ್ಕೆ ಶೇಖರಣೆ ಮಾಡಲು ಜಾಗ ಇಲ್ಲವಾದ[illegible] ಖರೀದಿ ಮಾಡುವುದಿಲ್ಲವೆಂದು ಸಬೂಬು ಹೇಳಿ[illegible]

ಅನರ್ಹರ ರೀ ಎಂಟ್ರಿ ಹಿಂದಿನ ಮಸಲತ್ತು


ವೆಂಕಟರಾಮು ಮತ್ತು ನರಸಿಂಹ ರೆಡ್ಡಿ ಇಬ್ಬರೂ ತಮ್ಮ ಹುದ್ದೆಗಳಿಗೆ ನಾಲಾಯಕ್ ಪಾರ್ಟಿಗಳು. ವೆಂಕಟರಾಮನದ್ದು ಎಂ.ಡಿಯಾಗಿ ಇದು ಎರಡನೇ ಸರದಿ. ಈ ಮೊದಲು ಎಂ.ಡಿ ಆಗಿದ್ದಾಗ ಹೊರ ರಾಜ್ಯದಿಂದ ಹಾಲು ಖರೀದಿಸುವಂತಹ ದುಸ್ಥಿತಿಗೆ ಕೆ.ಎಂ.ಎಫ್ ಅನ್ನು ತಂದಿಟ್ಟು ತಾನೆಂತಹ ಅಸಮರ್ಥ ಎಂಬುದನ್ನು ಸಾಬೀತುಪಡಿಸಿಕೊಂಡಿದ್ದ. ಹಾಗಾಗಿ ಸೋಮಶೇಖರ್ ರೆಡ್ಡಿಯೇ ಆತನನ್ನು ತರಬೇತಿ ಕೇಂದ್ರಕ್ಕೆ ಎತ್ತಂಗಡಿ ಮಾಡಿದ್ದ. ಇನ್ನು ನರಸಿಂಹ ರೆಡ್ಡಿಯಂತು ಹಳೆಯ ಎಂ.ಡಿ ರಾಮಲಿಂಗೇಗೌಡನ ಜೊತೆ ಸೇರಿ ಹಾಲು ಉತ್ಪನ್ನಗಳ ಮಾರಾಟದಲ್ಲಿ 79 ಲಕ್ಷ ಅವ್ಯವಹಾರ ನಡೆಸಿದ್ದ. ತನಿಖೆಯಾದ ನಂತರ ರಾಮಲಿಂಗೇ ಗೌಡನನ್ನು ಸಸ್ಪೆಂಡ್ ಮಾಡಿ, ದಾಖಲೆಗಳನ್ನು ನಾಶ ಮಾಡುತ್ತಾನೆನ್ನುವ ಕಾರಣಕ್ಕೆ ನರಸಿಂಹ ರೆಡ್ಡಿಯನ್ನು ಧಾರವಾಡಕ್ಕೆ ವರ್ಗ ಮಾಡಲಾಗಿತ್ತು.

ಯಾವಾಗ ಸೋಮಶೇಖರ್ ರೆಡ್ಡಿ ಕೆ.ಎಂ.ಎಫ್ ಗಂಟಿಗೆ ಕೈ ಹಾಕಬೇಕೆಂದು ತೀರ್ಮಾನಿಸಿದನೋ ಆಗ ಈ ಭ್ರಷ್ಟ ಜೋಡಿಯ ಅನಿವಾರ್ಯತೆಯ ಅರಿವಾಗಿತ್ತು, ಹಾಗಾಗಿ ಇದ್ದುದರಲ್ಲಿ ಸಂಸ್ಥೆಯನ್ನು ತಕ್ಕಮಟ್ಟಿಗೆ ನಡೆಸಿಕೊಂಡು ಹೋಗುತ್ತಿದ್ದ ಎಂ.ಡಿ ಪ್ರೇಮನಾಥ್‌ರನ್ನು ಸುಖಾಸುಮ್ಮನೆ ಎತ್ತಂಗಡಿ ಮಾಡಿ ವೆಂಕಟರಾಮನನ್ನು ವಾಪಸ್ಸು ಇನ್‌ಚಾರ್ಜ್ ಎಂ.ಡಿಯನ್ನಾಗಿ ಮಾಡಿದ್ದ. ದಾಖಲೆ ನಾಶ ಪಡಿಸುತ್ತಾನೆನ್ನುವ ಆರೋಪವಿದ್ದರೂ ನರಸಿಂಹ ರೆಡ್ಡಿಯನ್ನು ಮತ್ತದೇ ಸ್ಥಾನಕ್ಕೆ ತಂದು ಕೂರಿಸಿದ್ದೂ ಇದೇ ಕಾರಣಕ್ಕೆ. ಈ ವಿಷಯದಲ್ಲಿ ಖುದ್ದು ಸಹಕಾರ ಸಂಘಗಳ ಕಾರ್ಯದರ್ಶಿಯೇ ಪತ್ರ ಬರೆದು ಆರೋಪ ಇರುವ ನರಸಿಂಹ ರೆಡ್ಡಿಯನ್ನು ಕೂಡಲೇ ನಿರ್ದೇಶಕ ಸ್ಥಾನದಿಂದ ಹೊರಗಟ್ಟಬೇಕೆಂಬ ನಿರ್ದೇಶನ ನೀಡಿದ್ದರೂ ಸೋಮಶೇಖರ್ ರೆಡ್ಡಿ ಅದಕ್ಕೆ ಕಿಮ್ಮತ್ತಿನ ಬೆಲೆ ನೀಡಿರಲಿಲ್ಲ.

ತಮ್ಮ ಗೋಲ್‌ಮಾಲ್ ದಂಧೆ ಹೊರಬೀಳಬಾರದೆನ್ನುವ ಮುತುವರ್ಜಿ ವಹಿಸಿದ್ದ ಈ ಇಬ್ಬರು ಸೋಮಶೇಖರ್ ರೆಡ್ಡಿ ಮೂಲಕ ತಮಗೆ ಅಡ್ಡಿಯಾಗಬಹುದಾದ ಇದ್ದುದರಲ್ಲಿ ಪ್ರಾಮಾಣಿಕರೆನಿಸಿಕೊಂಡ ರವಿಕುಮಾರ್ ಕಾಕಡೆ, ಮೋಹನ್ ಕೃಷ್ಣ ಲಕ್ಷ್ಮಿ ನಾರಾಯಣ್ ಪ್ರಸಾದ್, ಪ್ರೇಮನಾಥ್, ರಾಮಚಂದ್ರ ಭಟ್, ಚನ್ನಕೃಷ್ಣಯ್ಯ, ರಂಗನಾಥ್ ಮೊದಲಾದ ಹಿರಿಯ ಅಧಿಕಾರಿಗಳನ್ನು ಸಿಲ್ಲಿ ಕಾರಣಕ್ಕೆ ಬೆಂಗಳೂರಿನಿಂದ ದೂರಕ್ಕೆ ವರ್ಗಾ ಮಾಡಿಸಿದ್ದರು. ತಮ್ಮ ದಾರಿಯನ್ನು ಕ್ಲಿಯರ್ ಮಾಡಿಕೊಂಡ ನಂತರವಷ್ಟೆ ಇವರೆಲ್ಲ ಹಿಂಡಿ, ಬೂಸಾಕ್ಕೆ ಬಾಯಿ ಹಾಕಿದ್ದು.

ಬಿ.ಜೆ.ಪಿ.ಗೆ ಇಲ್ಲೂ ಇಕ್ಕಟ್ಟು

ಮೇಲ್ನೋಟಕ್ಕೆ ಕೆ.ಎಂ.ಎಫ್‌ನಲ್ಲಿ ಬಿ.ಜೆ.ಪಿ ಪತಾಕೆ ಹಾರಾಡುತ್ತಿರಬಹುದು. ಆದರೆ ಯಾವ ಸಮಯದಲ್ಲಾದ[illegible] ಅದು ರೇವಣ್ಣನ ಕೈವಶವಾಗುವ ಸಾಧ್ಯತೆಯೇ ದಟ್ಟವಾಗಿದೆ. ಕೆ.ಎಂ.ಎಫ್ ಬೋರ್ಡ್‌ನಲ್ಲಿ ಒಟ್ಟು 13 ಚುನಾಯಿತ ಪ್ರತಿನಿಧಿಗಳಿದ್ದಾರೆ. ಅವರಲ್ಲಿ ಮೂವರು ಜೆ.ಡಿ.ಎಸ್.ನವರಾದರೆ ಒಬ್ಬ ಮಾತ್ರ ಕಾಂಗ್ರೆಸ್ ಕ್ಯಾಂಡಿಡೇ[illegible] ಸೋಮಶೇಖರ್ ರೆಡ್ಡಿಯೂ ಸೇರಿದಂತೆ ಇನ್ನುಳಿದ 9 ಮಂದಿ ಬಿ.ಜೆ.ಪಿಯವರು. ಅದರಲ್ಲಿ ಸೋಮಶೇಖರ್ ಶ್ರೀರಾಮುಲುವಿನ ಬಿ.ಎಸ್.ಆರ್ ಪಾರ್ಟಿಯಲ್ಲಿ ಓಡಾಡುತ್ತಿರುವುದು ಖಾತ್ರಿಯಾಗಿದ್ದು ನೆಪಕ್ಕಷ್ಟೆ ಬಿ.ಜೆ.ಪಿ.ಯಲ್ಲಿದ[illegible] ಆತನ ಕಟ್ಟಾ ಅನುಯಾಯಿಗಳಾದ ಧಾರವಾಡದ ಸತೀಶ್ ಕೇಶವ [illegible] ಮತ್ತು ತುಮಕೂರಿನ ರೇಣುಕಾ ಪ್ರಸಾದ್ ಕೂಡಾ ಬಿ.ಜೆ.ಪಿ ಪಾ[illegible] ಆಟಕ್ಕುಂಟು ಲೆಕ್ಕಕ್ಕಿಲ್ಲ, ಬಿ.ಜೆ.ಪಿ ಕೌಂಟಿಗೆ ಅಂತ ಉಳಿದದ್ದು [illegible] ವಿಕೆಟ್ ಮಾತ್ರ. ಅದರಲ್ಲೂ ಶಿವಮೊಗ್ಗದ ರೇವಣಸಿದ್ದಪ್ಪ, ಬೆಂಗಳೂ[illegible] ಪಿ.ನಾಗರಾಜು ಮತ್ತು ಮೈಸೂರಿನ ಎಸ್.ಸಿ.ಅಶೋಕ್‌ರನ್ನು ಬಿಟ್ಟರೆ ಉ[illegible] ಮೂರು ಜನ 'ನ್ಯೂಟ್ರಲ್ ಬಿ.ಜೆ.ಪಿ'ಗಳು, ಅರ್ಥಾತ್ ಪಕ್ಷಾಂತರಕ್ಕೆ ಸಿದ್ಧ[illegible] ನಿಂತಿರುವವರು.



ಈ ನಡುವೆ ಮುಂದಿನ ವಿಧಾನಸಭಾ ಚುನಾವಣಾ ವೇಳೆಗೆ ಜೆ.ಡಿ.[illegible] ಮತ್ತು ಬಿ.ಎಸ್.ಆರ್ ಹೊಂದಾಣಿಕೆ ಮಾಡಿಕೊಳ್ಳುವ ಸೂಚನೆಗಳು ಈಗಾ[illegible] ಸಿಗುತ್ತಿವೆ. ಹಾಗಾಗಿ ಸಂದಿಗ್ಧತೆ ಎದುರಾಯಿತೆಂದರೆ ತನ್ನಿಬ್ಬರು [illegible] ಅನುಯಾಯಿಗಳೊಂದಿಗೆ ಸೋಮಶೇಖರ್ ರೆಡ್ಡಿ ರೇವಣ್ಣನಿಗೆ ಜೈ ಅಂದರೂ ಅಚ್ಚರಿ ಪಡಬೇಕಿಲ್ಲ. ಹೇಗಾ[illegible] ಮಾಡಿ 'ಬಿ.ಜೆ.ಪಿಯ ನ್ಯೂಟ್ರಲ್ ಗೇರ್'ಗಳನ್ನು ರೇವಣ್ಣ ನಿಭಾಯಿಸಿ ಬಿಟ್ಟರೆ ಕೇಸರಿ ಪತಾಕೆ ಕೆ.ಎಂ.[illegible] ಅಂಗಳದಿಂದ ಕಿತ್ತೋಡುವುದು ಗ್ಯಾರಂಟಿ. ರೆಡ್ಡಿ ಜೈಲಿನಲ್ಲಿದ್ದು ಸದ್ಯಕ್ಕಂತೂ ಹೊರಬರುವ ಲಕ್ಷಣ ಇಲ್ಲದಿರುವುದರ[illegible] ಬಿ.ಜೆ.ಪಿ ಕೊಂಚ ಸೇಫಾಗಿದೆಯಷ್ಟೆ.

ಅದಿರು ಕಳ್ಳ ಸಾಗಾಣಿಕೆದಾರ ಸೈಲ್‌ಗೆ ಕಾದಿದೆ ಜೈಲ್!!

ಉತ್ತರ ಕನ್ನಡದ ರಾಜಕಾರಣದ ಜಗುಲಿಯಲ್ಲೀಗ ಅದಿರು ಕಳ್ಳ ಸಾಗಾಣಿಕೆದಾರ ಸತೀಶ್ ಸೈಲ್ ಜೈಲು ಪಾಲಾಗಲಿದ್ದಾನೆಂಬುದೇ ಸೆನ್‌ಸೇಷನಲ್ ಚಾರ! ಅತ್ತ ಸುಪ್ರೀಂ ಕೋರ್ಟಿನ ಹಸಿರು ಪೀಠ ಕೇರಿ ಬಂದರಿನಿಂದ ಅಕ್ರಮವಾಗಿ ರಫ್ತಾದ ಅದಿರು ದ ಚಿಕ್ಕಚೊಕ್ಕ ವರದಿಯೊಂದನ್ನು ಕೊಡುವಂತೆ (ಉನ್ನತಾಧಿಕಾರ ಸಮಿತಿ)ಗೆ ಆದೇಶಿಸುತ್ತಿದ್ದಂತೆಯೇ ಉತ್ತರ ಕನ್ನಡದ ದಶದಿಕ್ಕಲ್ಲಿ ಕಪ್ಪು ಕಾಸಿನ ಕುಬೇರ ಸೈಲ್‌ನನ್ನು ಸಿಬಿಐ ಎಂದು ಹೆಡೆಮುರಿ ಕಟ್ಟಿ ಕೊಂಡು ಹೋದೀತೆಂಬ ಕುತೂಹಲಕರ ಚರ್ಚೆ ವಾಗಿಹೋಗಿದೆ....

ಸೈಲ್" ಎಂದರೆ ಸುಮ್ಮನೇ ಮಾತಲ್ಲ! ಕಳೆದ ದು ವರ್ಷದಿಂದ ಕಾರವಾರ-ಅಂಕೋಲಾದಲ್ಲಿ ಡುತ್ತಿರುವ ದೊಡ್ಡ ಮನುಷ್ಯ! ಬಳ್ಳಾರಿಯ ಕಬ್ಬಿಣದ ನ್ನು ಹಡಗು-ಹಡಗುಗಟ್ಟಲೆ ತುಂಬಿ ಚೀನಾಕ್ಕೆ ವಾಗಿ ಅಹೋರಾತ್ರಿ ಸಾಗಿಸಿ ಸಾವಿರಾರು ಕೋಟಿ ವ "ಸಾಹುಕಾರ" ಆದವನು. ದೋ ನಂಬರ್ ಬಲದಿಂದಲೇ ಕಾರವಾರದ ರಾಜಕೀಯ-ಸಾಮಾಜಿಕ ಲ್ಲಿ ಕೊಡುಗೈ ದಾನಿ ಎಂದು ತನಗೆ ತಾನೇ ಪಿಸಿಕೊಂಡವನು: ಭಾವಿ ಎಮ್ಮೆಲ್ಲೆ ಎಂಬಂತೆ ಫೋಸು ತ್ತಿರುವ ಕಾಂಗ್ರೆಸ್ ಮುಖಂಡ. ಇಂಜಿನಿಯರಿಂಗ್ ಜು ಕಟ್ಟಿಸಿರುವ ಮಹಾನ್ ಶಿಕ್ಷಣ ಪ್ರೇಮಿ. ತನ್ನ ದ ಫೋಟೋ ಸಮೇತ ಆ್ಯಡ್-ಫ್ಲೆಕ್ಸ್-ಬ್ಯಾನರ್ ಮಿಯಾಗಿ ಹಾಕಿಸಿಕೊಂಡು ಮರ್ಯಾದಾ ಪುರುಷೋ ದಂತೆ ಓಡಾಡುತ್ತಿರುವಾತ. "ಸಿಜರೀನ್ ಸಚಿವ" ಸ್ ಅಸ್ನೋಟಿಕರ್‌ಗೆ ಸೆಡ್ಡು ಹೊಡೆದು ನಿಂತಿರುವ ಆರ್.ವಿ. ದೇಶಪಾಂಡೆಯ ಶಿಷ್ಯೋತ್ತಮ!!

ಂಥ ಸೈಲ್ ಸಾಹುಕಾರ್ ಜೈಲು ಸೇರುತ್ತಾನೆಂದರೆ, ಗದಿದ್ದರೂ ಕಾಂಗ್ರೆಸ್‌ನಲ್ಲಿ ಕಂಪನಗಳಾಗೇ ಆಗುತ್ತದೆ; ರ-ಅಂಕೋಲಾದಲ್ಲಿ ರಾಜಕೀಯ ಸ್ಥಿತ್ಯಂತರ ಆಗೇ ದೆ; ಎದುರಾಳಿ ಆನಂದ್ ಅಸ್ನೋಟಿಕರ್ ಸಾಮ್ರಾಜ್ಯ ನಂದದ ಹೊನಲೇ ಹರಿಯುತ್ತದೆ. ಸೈಲ್ "ಗುರು" ನ ರೆಡ್ಡಿಯಂತೆ ವರ್ಷಗಟ್ಟಲೆ ಜೈಲಲ್ಲಿ ಕೊಳೆತರಂತೂ ರಾಜಕೀಯ-ಸಾಮಾಜಿಕ-ವ್ಯಾಪಾರಿ ವಂತೂ ಪಾಳುಬಿದ್ದು ಹೋಗುತ್ತದೆ! ಸತೀಶ್ ಸೈಲ್ ಎಲ್ಲಿಂದ ಬಂದಿದ್ದನೋ ಗೇ ಹೋಗಬೇಕಾಗಿ ಬಂದರೂ ಹುದು! ಸೈಲ್‌ನ ಮೈನ್ಸ್ ಸ್ಮಗ್ಲಿಂಗ್ ಕು ಆರಂಭವಾಗಿದ್ದೇ ಗೋವಾದ ಗ್ ಯಾರ್ಡ್ ಒಂದರಲ್ಲಿ; ಅಲ್ಲಾತ ಗ್ ಧಣಿಯೊಬ್ಬರ ಚಾಕರಿ ಮಾಡಿ ದಿದ್ದ!

ಪಿಡಬ್ಲ್ಯೂಡಿಯ ಬಡ ಓವರ್ ರ್‌ನ ಮಗನಾದ ಸತೀಶ್ ಸೈಲ್ ಡಿಗ್ರಿ ಸಿಕೊಂಡು ಹೊಟ್ಟೆಪಾಡಿಗೆ ನೌಕರಿ ತ್ತ ಗೋವಾದ ಮಡಗಾಂವ್ ಸೇರಿದ್ದ. ಂದರು ನಗರಿಯಲ್ಲಿ ಆತನಿಗೆ ಶಿಪ್ಪಿಂಗ್ ದಯೊಬ್ಬ ಮ್ಯಾನೇಜರ್ ಕೆಲಸ ಕೊಡು ನಿಧಾನಕ್ಕೀತ ಸ್ಟೀವರ್ಡ್‌ಶಿಪ್ ದಂಧೆ ಹಚ್ಚಿಕೊಳ್ಳುತ್ತಾನೆ. ಅದೇ ಹೊತ್ತಿಗೆ ಆ ರಿನಿಂದ ಕಬ್ಬಿಣದ ಅದಿರು ರಫ್ತಾಗಲು ಂಭವಾಗುತ್ತದೆ. ಬಂದರು ದಂಧೆ ರ್-ಬಾಹರ್ ಅರಿತಿದ್ದ ಸೈಲ್ ಅದಿರು ಸ್‌ನ "ಹ್ಯಾಂಡಲಿಂಗ್" ಏಜೆಂಟ್‌ಗಿರಿಗೆ ಗುತ್ತಾನೆ. ಇದೊಂದು ಪಕ್ಕಾ ದಲ್ಲಾಲಿಗಿರಿ. ೕಷನ್ ವ್ಯವಹಾರ. ಅದಿರನ್ನು ಗೇರಿಸಿ ಪರ್ಸೆಂಟೇಜ್ ಪಡೆಯುತ್ತಿದ್ದ ಅದೇ ಬಂದರಿನಲ್ಲಿ ಶಿಪ್ಪಿಂಗ್ ಉದ್ಯಮ ಮಾಡುತ್ತಾನೆ. ಂದು ಕೋಟಿ-ಕೋಟಿಗಳ ಪಕ್ಕಾ ಅಕ್ರಮ ವಹಿವಾಟು.

ಅನಂತರ ಸತೀಶ್ ಸೈಲ್ ಎಂಬ ಅಬ್ಬೇಪಾರಿ ರುಗಿ ನೋಡಿದ್ದೇ ಇಲ್ಲ. ಗೋವಾದ ಬಂದರಿನಲ್ಲಿ ಂಗ್ ಮೈನ್ಸ್ ಎಕ್ಸ್‌ಪೋರ್ಟರ್ ಆದ ಸೈಲನ ಕಣ್ಣು ಕೇರಿ ಬಂದರಿನ ಮೇಲೆ ಬೀಳುತ್ತದೆ. ಗೋಲ್‌ಮಾಲ್ ದ ಮಂಗಲದಾಸ್ ಕಾಮತ್, ಕೃಷ್ಣ ಕೇಳಸ್ಕರ್‌ನಂಥವರ ತೆಗೂಡಿಸಿಕೊಂಡು ಬೇಲೇಕೇರಿ ಬಂದರಿನಲ್ಲಿ ಲ್ಲಿಕಾರ್ಜುನ ಶಿಪ್ಪಿಂಗ್" ದಂಧೆ ಆರಂಭಿಸುತ್ತಾನೆ. ಂಗ್ "ಡಾನ್" ಜನಾರ್ದನ ರೆಡ್ಡಿಯ ದುಷ್ಟಕೂಟದ ಖ ಸದಸ್ಯತ್ವವೂ ಆ ಹೊತ್ತಿಗೆ ಸೈಲ್ ಸಾಹುಕಾರ್‌ಗೆ ತ್ತದೆ. ಹಾಗಾಗಿ ಸೈಲ್‌ನ ಮಲ್ಲಿಕಾರ್ಜುನ ಶಿಪ್ಪಿಂಗ್ ಬೇಲೇಕೇರಿಯಲ್ಲಿ ಹಗಲಿರುಳೂ ಅಕ್ರಮ-ಅವ್ಯವಹಾರ ನಿರಂತರ-ನಿರ್ಭಯದಿಂದ ಮಾಡುತ್ತ ಬಂದರು, ಗಣಿ-ಭೂವಿಜ್ಞಾನ, ಕಸ್ಟಮ್ಸ್, ಪೊಲೀಸ್, ಸಾರಿಗೆ, ಅರಣ್ಯ ಇಲಾಖೆಯ ಅಧಿಕಾರಿಗಳ ಬಾಯಿಗೆಲ್ಲಿ ದುಡ್ಡಿನ ಕಂತೆ-ಕಂತೆಗಳನ್ನೇ ತುರುಕಿ ಕಾನೂನುಬಾಹಿರ ಕಾರ್ಯಾಚರಣೆ ನಡೆಸಿತು. ಕೋಟಿ-ಕೋಟಿಯ ಸರ್ಕಾರಿ ಸಂಪತ್ತು ಕೊಳ್ಳೆ ಹೊಡೆದು ಕೊಬ್ಬಿಹೋಯ್ತು!

ಬಿಜೆಪಿ ಸರ್ಕಾರದ ಕಿಂಗ್ ಪಿನ್‌ನಂತಿದ್ದ ಗಣಿ ದಂಧೆಯ ಗೂಂಡಾ ಜನಾರ್ದನ ರೆಡ್ಡಿಯ ಕೃಪಾಶೀರ್ವಾದದಿಂದ ಸೈಲ್ ಬೇಲೇಕೇರಿ ಬಂದರಿನಲ್ಲಿ ಅದ್ಯಾವ ಪರಿ ಸೊಕ್ಕಿನಿಂದ ಹಾರಾಡಲಾರಂಭಿಸಿದ್ದನೆಂದರೆ, ಲೋಕಾಯುಕ್ತಕ್ಕೂ ಕೇರ್ ಮಾಡದೆ ಅಕ್ರಮ ರಫ್ತುಗಾರಿ ನಡೆಸಿಕೊಂಡಿದ್ದ! ಲೋಕಾಯುಕ್ತರ ನಿರ್ದೇಶನದಂತೆ ಅರಣ್ಯ ಅಧಿಕಾರಿಗಳು ಸೀಜ್ ಮಾಡಿದ್ದ ಅಕ್ರಮ ಅದಿರನ್ನೇ ಈ ಸೈಲ್ ಕದ್ದು ಹಡಗು ತುಂಬಿ ಚೀನಾಕ್ಕೆ ಕಳಿಸಿಬಿಟ್ಟ! ಈ ಪಾಪವೇ ಇವತ್ತು ಆತನ ಕೊರಳಿಗೆ ಉರುಳಾಗಿ ಪರಿಣಮಿಸಿದೆ. ಮಂತ್ರಿ ಜನಾರ್ದನ ರೆಡ್ಡಿಜೀ ಬೆಂಬಲ ಇರುವುದರಿಂದ ತನ್ನನ್ನು ಯಾರೂ ಏನೂ ಮಾಡಲು ಸಾಧ್ಯವಿಲ್ಲ ಎಂಬ ಅಹಂಕಾರ ತಲೆಗೇರಿಸಿಕೊಂಡಿದ್ದ ಸೈಲ್ ಅದೇ ವೇಳೆಗೆ ಕಾರವಾರ ಮಟ್ಟದ ಕಾಂಗ್ರೆಸ್ ಲೀಡರ್ ಆಗಿಹೋಗಿದ್ದ. ಆಪರೇಷನ್ ಕ-ಮಲದ ಬಳಿಕ ಬಿಜೆಪಿಯಿಂದ ಸ್ಪರ್ಧಿಸಿದ್ದ ಆನಂದ್ ಅಸ್ನೋಟಿಕರ್ ವಿರುದ್ಧ ಕಾಂಗ್ರೆಸ್ ಕ್ಯಾಂಡಿಡೇಟಾಗಿ ಸೋತಿದ್ದ ಸೈಲ್‌ಗೆ ದೇಶಪಾಂಡೆ-ದಿಲ್ಲಿ ಮಟ್ಟದ ಕೆಲವು ಕಾಂಗ್ರೆಸ್ ನೇತಾಗಳ ಸಖ್ಯವೂ ಕುದುರಿತ್ತು. ಈ "ಬಲ" ಆತನಿಗೆ ಲೋಕಾಯುಕ್ತದವರು ಜಪ್ತು ಮಾಡಿದ ಅಕ್ರಮ ಕಬ್ಬಿಣದ ಅದಿರನ್ನು ಕಳ್ಳ ಸಾಗಣೆ ಮಾಡಲು ಪ್ರೇರೇಪಿಸಿತ್ತು. ಅಷ್ಟೇ ಅಲ್ಲ, ಆಳುವವರ ಕೃಪೆಯ ಗುಜರಾತಿನ ಅದಾನಿ ಕಂಪನಿ, ಬೆಂಗಳೂರಿನ ರಾಜಮಹಲ್ ಸಿಲ್ಕ್ ಕಂಪನಿ, ಗೋವಾದ ಸಾಲ್ಗಾಂವಕರ್ ಕಂಪನಿ ಮತ್ತು ಸೈಲನ ಮಲ್ಲಿಕಾರ್ಜುನ ಶಿಪ್ಪಿಂಗ್ ಕಂಪನಿಗಳೆಲ್ಲ ಸೇರಿ ಅಕ್ರಮ ಎಕ್ಸ್‌ಪೋರ್ಟ್‌ಗಾಗಿ ಗ್ಯಾಂಗ್ ಅಪ್ ಆಗಿದ್ದವು! ಈ ನಾಲ್ಕೂ ಲೂಟಿಕೋರ ಕಂಪನಿಗಳು ಲೋಕಾಯುಕ್ತ ಸೀಜ್ ಮಾಡಿದ್ದ ಅದಿರಿನಲ್ಲಿ ಸಿಕ್ಕಷ್ಟು ಬಾಚಿಕೊಂಡು ಹಡಗೇರಿಸಿ ವಿದೇಶಕ್ಕೆ ರವಾನಿಸಿಬಿಟ್ಟವು.

ಯಾವಾಗ ಕರ್ತವ್ಯನಿಷ್ಠ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆ ಅವರ ಗಣಿ ಕರ್ಮಕಾಂಡದ ವಿಸ್ತೃತ ವರದಿ ಬಹಿರಂಗವಾಯ್ತೋ, ಆಗ ಬೇಲೇಕೇರಿ ಬಂದರಿನಲ್ಲಾದ ಕೋಟ್ಯಂತರ ರೂಪಾಯಿ ಮೌಲ್ಯದ ಅದಿರು ಕಳ್ಳತನದ ಹಿಂದಿನ ಹಲವು ಆಯಾಮಗಳೂ ಅನಾವರಣಗೊಂಡಿತು! ಆನಂತರ ಸುಪ್ರೀಂ ಕೋರ್ಟಿನ ಸಿಇಸಿಯೂ ಬೇಲೇಕೇರಿ ಬಂದರಿನಿಂದ ಸಾವಿರಾರು ಕೋಟಿ ಬೆಲೆಯ ಅದಿರು ಅಕ್ರಮವಾಗಿ ಸಮುದ್ರ ಮೂಲಕ ಹೊರದೇಶಕ್ಕೆ ಹೋಗಿದೆ ಎಂಬ ಸತ್ಯವನ್ನೂ ಕಂಡುಕೊಂಡಿತು. ಈಗ ಈ ಹಗರಣ ಸುಪ್ರೀಂ ಕೋರ್ಟಿನ ಹಸಿರು ಪೀಠದ ಮುಂದೆ ಬಂದು ನಿಂತಿದೆ. ನ್ಯಾ. ಆಫ್ತಾಬ್ ಆಲಂ ನೇತೃತ್ವದ ಹಸಿರು ಪೀಠ ಬೇಲೇಕೇರಿ ಬಂದರು ಭಾನಗಡಿಯನ್ನು ಸಿಬಿಐ ತನಿಖೆಗೆ ಒಪ್ಪಿಸುವ ಸಂಕೇತಗಳನ್ನು ಬಿತ್ತರಿಸಿದೆ.

ಹಾಗೊಮ್ಮೆ ಬೇಲೇಕೇರಿ ಬಂದರು ಪ್ರಕರಣ ಸಿಬಿಐ ತನಿಖೆಗೆ ಒಳಪಟ್ಟರೆ ಸತೀಶ್ ಸೈಲ್ ಜತೆಯೇ ಅದಾನಿ, ರಾಜಮಹಲ್ ಸಿಲ್ಕ್, ಸಾಲ್ಗಾಂವ್ಕರ್ ಕಂಪನಿಯ ಅತಿರಥ ಮಹಾರಥರೂ ಕಂಬಿ ಎಣಿಸುವ ಪರಿಸ್ಥಿತಿ ಬಂದೇ ಬರುತ್ತದೆ. ಲೋಕಾಯುಕ್ತ ವರದಿಯಂತೆ ಈ ಅಕ್ರಮ ಅದಿರು ಕಳ್ಳಸಾಗಾಣಿಕೆಯಲ್ಲಿ ಬರೋಬ್ಬರಿ 78 ಸಾಗಾಟಗಾರರು, 20 ಕಂಪನಿಗಳು ಮತ್ತು ಜನಾರ್ದನ ರೆಡ್ಡಿಯ ರೌಡಿ ಪಟಾಲಂನ ಫಂಟರ್‌ಗಳಾದ ಖಾರಾಪುಡಿ ಮಹೇಶ್, ಸ್ವಸ್ತಿಕ್ ನಾಗರಾಜ್‌ರಂಥ ಹಲವು ಮಧ್ಯವರ್ತಿಗಳು, ಅಧಿಕಾರಿಗಳು ಶಾಮೀಲಾಗಿದ್ದಾರೆ. ಮಾರ್ಚ್ 20, 2010 ರಂದು ಅರಣ್ಯ ಅಧಿಕಾರಿ ಯು.ವಿ. ಸಿಂಗ್ ನೇತೃತ್ವದ ಲೋಕಾಯುಕ್ತ ಟೀಮ್ ಬೇಲೇಕೇರಿ ಬಂದರಿನ ರಫ್ತುದಾರ ಕುಳಗಳ ಕಚೇರಿಗಳ ಮೇಲೆ ರೇಡು ಬಿದ್ದಾಗ ಮಹತ್ವದ ದಾಖಲೆಗಳು ಸಿಕ್ಕಿವೆ.

ಅದಾನಿ, ಸಾಲ್ಗಾಂವ್ಕರ್, ಮಲ್ಲಿಕಾರ್ಜುನ ಶಿಪ್ಪಿಂಗ್‌ನ ಕಂಪ್ಯೂಟರ್ ಫೈಲ್‌ಗಳು ಬೇಲೇಕೇರಿ ಬಂದರಿನಲ್ಲಾದ ಅವ್ಯವಹಾರಕ್ಕೆ ಸಾಕ್ಷಿಯಂತಿವೆ! ಲೋಕಾಯುಕ್ತರ ವರದಿ ಬರುವ ಮೊದಲೇ ಕಾರವಾರದ ಡಿಸಿಎಫ್ ಗೋಕುಲ್ ಹೈಕೋರ್ಟಿಗೆ ಕೊಟ್ಟಿರುವ ಪ್ರಮಾಣಪತ್ರದಲ್ಲಿ ದೊಡ್ಡಮಟ್ಟದ ಅವ್ಯವಹಾರ ಬೇಲೇಕೇರಿ ಬಂದರಿನಲ್ಲಿ ಆಗಿರುವುದನ್ನು ಉಲ್ಲೇಖಿಸಿದ್ದರು (ಜೂನ್ 23, 2010). ಇದರ ಪ್ರಕಾರ ನವೆಂಬರ್ 2009 ರಿಂದ ಫೆಬ್ರವರಿ 2010 ರವರೆಗಿನ 4 ತಿಂಗಳಲ್ಲಿ ಕಾರವಾರ-ಬೇಲೇಕೇರಿ ಬಂದರಿಗೆ 35,319 ಲಕ್ಷ ಮೆಟ್ರಿಕ್ ಟನ್ ಅಕ್ರಮ ಅದಿರು ಬಂದಿದೆ. ಇದರ ಒಟ್ಟು ಬೆಲೆ 1060 ಕೋಟಿ ರೂ.ಗಳು ಎಂದು ಅಂದಾಜಿಸಲಾಗಿದೆ!!

2009 ರ ನವೆಂಬರ್‌ನಿಂದ 2010 ರ ಫೆಬ್ರವರಿ ತನಕದ ನಾಲ್ಕು ತಿಂಗಳಲ್ಲಿ ಕಾರವಾರ-ಬೇಲೇಕೇರಿಗೆ ಬಂದಿಳಿದ 35,319 ಲಕ್ಷ ಮೆಟ್ರಿಕ್ ಟನ್ ಅದಿರು ಅರಣ್ಯ ಜಮೀನಿನಿಂದ ಗೆಬರಲಾಗಿದೆ. ಇದಕ್ಕೆ ರಾಜಧನ (ರಾಯಲ್ಟಿ)ಯಾಗಲಿ, ಇನ್ನಿತರ ತೆರಿಗೆಯಾಗಲಿ ಪಾವತಿಸಿಲ್ಲ. ದಿನಕ್ಕೆ ಸರಾಸರಿ 2,968 ಲಾರಿ ಲೋಡ್‌ನಂತೆ ನಾಲ್ಕು ತಿಂಗಳಲ್ಲಿ ಒಟ್ಟು 3.90 ಲಕ್ಷ ಟ್ರಕ್ ಟ್ರಿಪ್ ಕಬ್ಬಿಣದ ಅದಿರು ಬಳ್ಳಾರಿಯಿಂದ ಬೇಲೇಕೇರಿಗೆ ಬಂದಿಳಿದಿದೆ!! ಇದರಲ್ಲಿ ಲೋಕಾಯುಕ್ತದವರು 8.05 ಲಕ್ಷ ಮೆಟ್ರಿಕ್ ಟನ್ ಅದಿರನ್ನು ವಶಪಡಿಸಿಕೊಂಡಿದ್ದರು. ಬೇಲೇಕೇರಿಯಲ್ಲಿ 2010 ಮಾರ್ಚ್ 20 ರಂದು ಅರಣ್ಯಾಧಿಕಾರಿಗಳು ಸೀಜ್ ಮಾಡಿದ್ದ ಈ ಅದಿರಲ್ಲಿ ಅದಾನಿ ಕಂಪನಿಯ 4,14,357.163 ಮೆಟ್ರಿಕ್ ಟನ್ (30 ರಫ್ತುಗಾರಿಕೆ), ಸೈಲ್ ಸಾಹುಕಾರನ ಮಲ್ಲಿಕಾರ್ಜುನ ಶಿಪ್ಪಿಂಗ್ ಕಂಪನಿಯ 2,29,279.02 ಮೆಟ್ರಿಕ್ ಟನ್ (21 ರಫ್ತುಗಾರಿಕೆ), ಸಾಲ್ಗಾಂವ್ಕರ್ ಕಂಪನಿಗೆ ಸೇರಿದ 1,08,334.10 ಮೆಟ್ರಿಕ್ ಟನ್ (4 ರಫ್ತುಗಾರಿಕೆ), ಬೆಂಗಳೂರಿನ ರಾಜಮಹಲ್ ಸಿಲ್ಕ್‌ನ 24,020.800 ಮೆಟ್ರಿಕ್ ಟನ್ ಅದಿರು ಸೇರಿತ್ತು.

ಈ ಜಪ್ತಾದ ಅದಿರಲ್ಲಿ ಅದಾನಿ ಎಂಟರ್‌ಪ್ರೈಸಸ್ 3.25 ಲಕ್ಷ ಮೆಟ್ರಿಕ್ ಟನ್, ಮೆ. ಮಲ್ಲಿಕಾರ್ಜುನ ಶಿಪ್ಪಿಂಗ್ ಕಂಪನಿ 3.21 ಲಕ್ಷ ಮೆಟ್ರಿಕ್ ಟನ್, ಸಾಲ್ಗಾಂವ್ಕರ್ ಕಂಪನಿ 91,27 ಸಾವಿರ ಮೆಟ್ರಿಕ್ ಟನ್, ರಾಜಮಹಲ್ ಸಿಲ್ಕ್ ಕಂಪನಿ 17.39 ಸಾವಿರ ಮೆಟ್ರಿಕ್ ಟನ್ ಅದಿರನ್ನು ಕದ್ದು ಸಮುದ್ರ ಮಾರ್ಗವಾಗಿ ವಿದೇಶಕ್ಕೆ ಕಳಿಸಿವೆ. ಹಾಗಂತ ಸಿಇಸಿ ವರದಿಯೇ ಸಾರಿಸಾರಿ ಹೇಳುತ್ತಿದೆ. 2009-10 ಮತ್ತು 2010-11 ರಲ್ಲಿ ಒಟ್ಟು 80.863 ಲಕ್ಷ ಮೆಟ್ರಿಕ್ ಟನ್ ಕಬ್ಬಿಣದ ಅದಿರು ಬೇಲೇಕೇರಿ ಬಂದರಿಂದ ರಫ್ತಾಗಿದೆ. ಲೋಕಾಯುಕ್ತ ವರದಿಯ ಪ್ರಕಾರ 2009-10 ರಲ್ಲಿ 28.510 ಲಕ್ಷ ಮೆಟ್ರಿಕ್ ಟನ್ ಮತ್ತು 2010-11 ರಲ್ಲಿ 4.250 ಲಕ್ಷ ಮೆಟ್ರಿಕ್ ಟನ್ ಅದಿರನ್ನಷ್ಟೇ ಬೇಲೇಕೇರಿ ಬಂದರಿಂದ ರಫ್ತು ಮಾಡಲು ಅನುಮತಿ ನೀಡಲಾಗಿತ್ತು. ಆದರೆ ಹೆಚ್ಚುವರಿಯಾಗಿ 36,508 ಲಕ್ಷ ಮೆಟ್ರಿಕ್ ಟನ್ ಮತ್ತು 11.594 ಮೆಟ್ರಿಕ್ ಟನ್ ಅನುಕ್ರಮವಾಗಿ ಬೇಲೇಕೇರಿ ಬಂದರಿಂದ ಕಾನೂನುಬಾಹಿರವಾಗಿ ಸಾಗಾಣಿಕೆ ಮಾಡಲಾಗಿದೆ. ಈ ಎರಡೂ ವರ್ಷದ ಒಟ್ಟು ಅಕ್ರಮ ರಫ್ತು ಸುಮಾರು 48.102 ಲಕ್ಷ ಮೆಟ್ರಿಕ್ ಟನ್ ಅದಿರು. ಪ್ರತಿ ಮೆಟ್ರಿಕ್ ಟನ್ ಅದಿರಿನ ಮೊತ್ತ 3,000 ರೂ. ಎಂದು ಅಂದಾಜಿಸಿದರೂ ಇದು ಬರೋಬ್ಬರಿ 1,443 ಕೋಟಿ ರೂ.ಗಳ ಗೋಲ್‌ಮಾಲ್ ವ್ಯವಹಾರ!!


ಇದೊಂದು ಭರ್ಜರಿ ಅಕ್ರಮ ವಹಿವಾಟು; ಇದಕ್ಕೆ ಒಂದಲ್ಲ, ಎರಡಲ್ಲ ಹತ್ತಾರು ಮುಖಗಳಿವೆ. ಇಷ್ಟು ದೊಡ್ಡ ಪ್ರಮಾಣದ ಅದಿರು ಸಾಗಿಸಲು ಸಾವಿರಾರು ಲಾರಿಗಳು ಬೇಕು. ಈ ಲಾರಿಗಳಿಗೆಲ್ಲ ಪರ್ಮಿಟ್ ಇರಲಿಲ್ಲ. ಈ ಅಕ್ರಮ ಸಾಗಾಣಿಕೆಯಲ್ಲಿ ತೊಡಗಿಸಿಕೊಂಡಿರುವ ಚೋರರ ಮೇಲೆ ಯಾವ ಕ್ರಮವೂ ಸರ್ಕಾರದ ಯಾವ ಇಲಾಖೆಯೂ ಕೈಗೊಂಡಿಲ್ಲ. ಸರ್ಕಾರಿ ಅಧಿಕಾರಿಗಳು ಅದಾನಿ ಮುಂತಾದ ರಫ್ತುದಾರ ಕಂಪನಿಗಳಿಂದ ಲಂಚ ಪಡೆದೇ ಅವ್ಯವಹಾರಕ್ಕೆ ಅವಕಾಶ ಕಲ್ಪಿಸಿದ್ದಾರೆ. ಪ್ರತಿ ಲಾರಿಯಲ್ಲಿ 16 ಮೆಟ್ರಿಕ್ ಟನ್ ಅದಿರು ಮಾತ್ರ ತುಂಬಲು ಪರವಾನಗಿ ನೀಡಲಾಗಿತ್ತು. ಆದರೆ ಇದಕ್ಕಿಂತ ಹೆಚ್ಚು ತುಂಬಿ ಬೇಲೇಕೇರಿಗೆ ತರಲಾಗುತ್ತಿತ್ತು. ಇದನ್ನು ತಡೆಯದ ಸಾರಿಗೆ ಅಧಿಕಾರಿಗಳು ಖೋಟಾ ಪರ್ಮಿಟ್ ಸಹ ಕೊಟ್ಟಿದ್ದರು. ಈ ಅವ್ಯವಹಾರದಲ್ಲಿ ಬಂದರು ಅಧಿಕಾರಿಗಳ ದೊಡ್ಡ ಪಾತ್ರ ಅಡಗಿದೆ! ಒಟ್ಟಿನಲ್ಲಿ ಹೆಚ್ಚು-ಕಮ್ಮಿ 1000 ಕೋಟಿ ರೂಪಾಯಿಗಳ ಕಬ್ಬಿಣದ ಅದಿರನ್ನು ಬಳ್ಳಾರಿಯಿಂದ ಬೇಲೇಕೇರಿ ಬಂದರಿಗೆ ತಂದು ವಿದೇಶಕ್ಕೆ ಕಳ್ಳ ಸಾಗಾಣಿಕೆ ಮಾಡಲಾಗಿದೆ. ಇದು ಲೋಕಾಯುಕ್ತ ವರದಿಯೇ ಹೇಳಿರುವ ಸತ್ಯ!! ಸಿಇಸಿ ಅಭಿಪ್ರಾಯವೂ ಇದೇ ತರ ಇದೆ.


ಸಿಇಸಿ ವರದಿಯಲ್ಲಂತೂ ಸೀಜ್ ಮಾಡಲಾಗಿದ್ದ ಅಕ್ರಮ ಅದಿರನ್ನು ಕಾನೂನು ಧಿಕ್ಕರಿಸಿ ಕದ್ದು ಮಾರಿರುವ ಅದಾನಿ, ಮಲ್ಲಿಕಾರ್ಜುನ, ಸಾಲ್ಗಾಂವ್ಕರ್ ಮತ್ತು ರಾಜಮಹಲ್ ಸಿಲ್ಕ್ ಕಂಪನಿಗಳನ್ನು ತನಿಖೆಗೆ ಒಳಪಡಿಸಬೇಕೆಂದು ಸ್ಪಷ್ಟವಾಗೇ ಹೇಳಲಾಗಿದೆ. ಈಗ ಸುಪ್ರೀಂ ಕೋರ್ಟ್‌ನ ಹಸಿರು ಪೀಠ ಸಂಕ್ಷಿಪ್ತ-ಸ್ಪಷ್ಟ ಇನ್ನೊಂದು ವರದಿ ಕೊಡುವಂತೆ ಸಿಇಸಿಗೆ ಹೇಳಿದೆ. ಆಗ ಸಿಬಿಐ ತನಿಖೆ ನಡೆಯುವ ಸಾಧ್ಯತೆಯೇ ಹೆಚ್ಚು. ಸಿಬಿಐ ಕೈಗೆ ಪ್ರಕರಣ ಸಿಕ್ಕ ತಕ್ಷಣ, ಬೇಲೇಕೇರಿ ಬಂದರಿನಲ್ಲಿ ಅಕ್ರಮ ಅದಿರು ದಂಧೆ ನಡೆಸಿ ಕೊಳ್ಳೆ ಹೊಡೆದಿರುವ ರಫ್ತುದಾರರು, ಸಾಗಾಟದಾರರು, ಲೀಸ್‌ದಾರರು, ಹ್ಯಾಂಡಲಿಂಗ್ ಏಜೆಂಟರು ಮತ್ತು ಬೇರೆ-ಬೇರೆ ಇಲಾಖೆಯ ಅಧಿಕಾರಿಗಳು ಗಂಡಾಂತರಕ್ಕೆ ಸಿಲುಕುವುದು ಗ್ಯಾರಂಟಿ.


ಹೀಗಿರುವಾಗ ಬೇಲೇಕೇರಿ ಬಂದರಿನ ಅದಿರು ಅವ್ಯವಹಾರದ ದೊರೆಯಂತಿದ್ದ ಸತೀಶ್ ಸೈಲ್ ತಪ್ಪಿಸಿಕೊಳ್ಳಲಾಗುತ್ತದಾ? ಅಲ್ಲಿಗೆ ಕಾಂಗ್ರೆಸ್ ಕಾರವಾರ-ಅಂಕೋಲೆ ಕ್ಷೇತ್ರಕ್ಕೆ ಹೊಸ ಅಭ್ಯರ್ಥಿ ಹುಡುಕಬೇಕಾಗುತ್ತದೆ. ಸೈಲ್ ಜೈಲಲ್ಲಿ ಗಂಜಿ-ಒಣ ಮೀನು ಉಣ್ಣಲು ಸಿದ್ಧವಾಗಬೇಕಾಗುತ್ತದೆ. ಮಾಡಿದ್ದುಣ್ಣೋ ಮಹರಾಯ!!

● ನಹುಷ













ನಂದೀಶ್ ರೆಡ್ಡಿಯ ಭೂಡಕಾಯಿತಿ

ಕಳ್ಳರ ಕೈಗೆ ಕಂದಾಯ ಇಲಾಖೆ



ಸದಾನಂದ ಗೌಡರ ಕೈಜಾರಿ .ಉಪಮುಖ್ಯಮಂತ್ರಿ ಈಶ್ವರಪ್ಪನವರ ಕೈವಶವಾಗುತ್ತಿದ್ದಂತೆ ಕಂದಾಯ ಇಲಾಖೆಯ ಸೌಭಾಗ್ಯವೂ ಬೆಂಗಳೂರು ಸುತ್ತಮುತ್ತಲ ಸರ್ಕಾರಿ ಭೂಮಿ, ಗೋಮಾಳ, ಕೆರೆಕಟ್ಟೆಗಳ, ಜಮೀನು, ರಾಜಾಕಾಲುವೆಗಳ ದೌರ್ಭಾಗ್ಯವೂ ಒಟ್ಟೊಟ್ಟಿಗೆ ಮೇಳೈಸುತ್ತಿದೆ!

ಯಾವ ಸರ್ಕಾರಿ ಭೂಮಿಯನ್ನು ನೆಲಗಳ್ಳರು, ಭೂಕಂಟಕರಿಂದ ಕಂದಾಯ ಇಲಾಖೆಯ ಅಧಿಕಾರಿಗಳು ರಕ್ಷಿಸಬೇಕಿತ್ತೋ ಅದೇ ಅಧಿಕಾರಿಗಳ ದುಷ್ಟಕೂಟ ಯಾವ ಪರಿ ಸಹಸ್ರಾರು ಕೋಟಿಯ ಬೆಲೆಬಾಳುವ ಜಮೀನನ್ನು ರಾಜಾರೋಷವಾಗಿ ಮಾರ್ವಾಡಿಗಳು ಕೇರಳ, ತಮಿಳುನಾಡಿನ ರೊಕ್ಕಸ್ಥರ ಬಾಯಿಗೆ ಹಾಕುತ್ತಿರುವುದರ ವಿರುದ್ಧ ಬೆಂಗಳೂರಿನ ಜನತೆ ಪ್ರಶ್ನಿಸಬೇಕಿದೆ.

ಸದ್ಯ ಬೆಂಗಳೂರು ನಗರ ಜಿಲ್ಲೆಗೆ ಜಿಲ್ಲಾಧಿಕಾರಿಯಾಗಿರುವ ಎಂ.ಕೆ. ಅಯ್ಯಪ್ಪನೇ ಈ ಹಗಲುದರೋಡೆಯ ಖಳನಾಯಕ. ಅದೇನು ಋಣಾನುಬಂಧವೋ ಡೀಸಿ ಅಯ್ಯಪ್ಪರ ಕಚೇರಿಗೆ ಹೊಂದಿಕೊಂಡಂತೆಯೇ ಸರ್ಕಾರಿ ಜಮೀನುಗಳ ಸಂರಕ್ಷಣಾ ನಿಗಮವಿದೆ. ಇದಕ್ಕೆ ವ್ಯವಸ್ಥಾಪಕ ನಿರ್ದೇಶಕನಾಗಿರುವ ಎ.ಕೆ. ಮೋನಪ್ಪ ಜಿಲ್ಲಾಧಿಕಾರಿ ಅಯ್ಯಪ್ಪಗೆ ಸಂಬಂಧಿ ಮತ್ತು ಈ ಹಿಂದೆ ಲೋಕಸೇವಾ ಆಯೋಗದ ಹಗಲು ದರೋಡೆಯಲ್ಲಿ ರೆಡ್‌ಹ್ಯಾಂಡ್ ಸಿಕ್ಕಿಬಿದ್ದಾತ. ಹಾಗೇ ಜಿಲ್ಲಾಧಿಕಾರಿ ಅಯ್ಯಪ್ಪರ ತಂಗಿ ಗಂಡ ಪಿ.ಕೆ. ಸುಬ್ಬಯ್ಯ ಈಗ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಮಂತ್ರಿ ಅಪ್ಪಚ್ಚು ರಂಜನ್‌ಗೆ ಆಪ್ತ ಕಾರ್ಯದರ್ಶಿ.

ಕೂರ್ಗಿ ಐಎಎಸ್ ತ್ರಿಕೂಟ

ಕರ್ನಾಟಕ ಕಂಡ ಪರಮಭ್ರಷ್ಟ ಐಎಎಸ್ ಅಧಿಕಾರಿಗಳಾದ ಅಯ್ಯಪ್ಪ, ಮೊನಪ್ಪ ಮತ್ತು ಸುಬ್ಬಯ್ಯ ಎಂಬ ಕೂರ್ಗಿ ತ್ರಿವಳಿಗಳೇ ಬೆಂಗಳೂರು ಸುತ್ತಮುತ್ತಲ ಸಾವಿರಾರು ಕೋಟಿ ರೂಪಾಯಿಗಳ ಸರ್ಕಾರಿ ಸೊತ್ತಿಗೆ ಮುಳುಗು ನೀರು ತರುತ್ತಿದ್ದರೆ ಇದರಲ್ಲಿ ದೊಡ್ಡಪಾಲು ದೋಚುತ್ತಿರುವವನು ಕೆ.ಆರ್. ಪುರದ ನೆಲಗಳ್ಳ ಬಿಜೆಪಿ ಶಾಸಕ ನಂದೀಶ್ ರೆಡ್ಡಿ!

ಬೆಂಗಳೂರು ಪೂರ್ವ ತಾಲ್ಲೂಕು ಬಿದರಹಳ್ಳಿ ಹೋಬಳಿಯ ದೊಡ್ಡಗುಬ್ಬಿಯ ಕೆರೆಯನ್ನು ಬಿಜೆಪಿಯ ಮಂತ್ರಿಗಳಾದ ಶೋಭಾ ಕರಂದ್ಲಾಜೆ, ಅರವಿಂದ ಲಿಂಬಾವಳಿ, ಶಾಸಕ ನಂದೀಶ್ ರೆಡ್ಡಿ ಸೇರಿಕೊಂಡು ಯಾವ ಪರಿ ದೋಚುತ್ತಿದ್ದಾರೆಂಬ ಬಗ್ಗೆ ಪತ್ರಿಕೆ 2012 ರ ಜನವರಿ 11 ರ ಸಂಚಿಕೆಯಲ್ಲಿ ಸುವಿಸ್ತಾರವಾಗಿ ಬರೆದಿತ್ತು. ಕೆರೆಯ ರಕ್ಷಣೆಗೆಂದು ಪಣತೊಟ್ಟ ದೊಡ್ಡಗುಬ್ಬಿಯ ರೈತನಾಯಕರ ಜೊತೆ ಜೆಡಿಯು ನಾಯಕ ಮತ್ತು ಮಾಜಿ ಮಂತ್ರಿ ಸೋಮಶೇಖರ್ ಖುದ್ದಾಗಿ ಮುಖ್ಯಮಂತ್ರಿ ಸದಾನಂದ ಗೌಡರನ್ನು ಕಂಡು ಕೆರೆಯನ್ನು ಉಳಿಸುವಂತೆ ಪತ್ರಿಕೆ ಮಾಡಿದ್ದ ವರದಿಯ ಪ್ರತಿ ಕೊಟ್ಟು ಒತ್ತಾಯಿಸಿದ್ದರು. ವಿಷಯದ ಗಂಭೀರತೆಯನ್ನು ಮನಗಂಡ ಸದಾನಂದ ಗೌಡರು ಮುಖ್ಯ ಕಾರ್ಯದರ್ಶಿ ರಂಗನಾಥ್‌ರನ್ನು ಆ ಕ್ಷಣಕ್ಕೇ ಕರೆಸಿಕೊಂಡು ಇಡೀ ದೊಡ್ಡಗುಬ್ಬಿ ಕೆರೆಯ 300 ಎಕರೆ ಭೂಹಗರಣದ ತನಿಖೆಯನ್ನು ಲೋಕಾಯುಕ್ತಕ್ಕೆ ವಹಿಸುವಂತೆ ಆದೇಶಿಸಿದ್ದರು.


ಲೋಕಾಯುಕ್ತ ಎಸ್.ಪಿ. ಶಿವಶಂಕರ್ ನೇತೃತ್ವದಲ್ಲಿ ಡಿವೈಎಸ್‌ಪಿ ಗಿರೀಶ್ ತಂಡ ಕೆ.ಆರ್. ಪುರದ ಬೆಂಗಳೂರು ಪೂರ್ವ ತಹಶೀಲ್ದಾರ್ ಟಿ.ಎಲ್. ಶಿವಕುಮಾರ್ ಕಚೇರಿಗೆ ದಾಳಿಯಿಟ್ಟದ್ದೇ ಸಂಬಂಧಪಟ್ಟ ದಾಖಲೆಗಳನ್ನೆಲ್ಲ ವಶಪಡಿಸಿಕೊಂಡಿತ್ತು. ಅಲ್ಲಿಗೆ ದೊಡ್ಡಗುಬ್ಬಿ ಕೆರೆಯ 300 ಎಕರೆ ಸರ್ಕಾರಿ ಭೂಮಿಗೆ ಸಿಗಬೇಕಾದ ರಕ್ಷಣೆ, ಬಂದೋಬಸ್ತು ದಕ್ಕಬೇಕಿತ್ತಲ್ಲವೆ?

ಹಾಗಾಗಲಿಲ್ಲ, ಬದಲಿಗೆ ಬೆಂಗಳೂರು ಪೂರ್ವ ತಹಶೀಲ್ದಾರ್ ಶಿವಕುಮಾರ್ ದೊಡ್ಡಗುಬ್ಬಿ ಕೆರೆಯಂಗಳದ ಸ.ನಂ. 24 ರ 1.19 ಗುಂಟೆಗೆ ಕೃಷಿ ಉದ್ದೇಶದಿಂದ ವಸತಿ ಉದ್ದೇಶಕ್ಕೆ ಕೇರಳದ ಜೋಸೆಫ್ ಚಾಕೋ ಬಿನ್ ಪಿ.ಜೆ. ಚಾಕೊ ಎಂಬ ಖದೀಮನಿಗೆ ಭೂಪರಿವರ್ತನೆ ಮಾಡಿಕೊಡುವಂತೆ 2012 ರ ಜುಲೈ ತಿಂಗಳಲ್ಲಿ ಪ್ರಸ್ತಾವನೆಯೊಂದನ್ನು ಕಳಿಸುತ್ತಾನೆ. ಜೊತೆಗೆ ಸ.ನಂ. 118/1 ರಲ್ಲಿ 23 ಗುಂಟೆ ವ್ಯವಸಾಯದ ಭೂಮಿಯನ್ನು ವಾಸದ ಉದ್ದೇಶಕ್ಕೆಂದು ಕೇರಳದ ಮದಪುರಕೇಲ್ ಜೋಸೆಫ್ ಬಿನ್ ಥಾಮಸ್ ಜೋಸೆಫ್ ಹೆಸರಿಗೆ ಭೂಪರಿವರ್ತಿಸಿ ಕೊಡುವಂತೆ ಮತ್ತೊಂದು ಪ್ರಸ್ತಾವನೆ ಕಳಿಸುತ್ತಾನೆ.

ನಂದೀಶ್ ರೆಡ್ಡಿಯೇ ಸೂತ್ರಧಾರ

ಇದಲ್ಲದೆ ಬೆಂಗಳೂರು ಪೂರ್ವ ತಹಶೀಲ್ದಾರ್ ಶಿವಕುಮಾರ್ ಬಿದರಹಳ್ಳಿ ನಾಡ ಕಚೇರಿಯ ಉಪ ತಹಶೀಲ್ದಾರ್ ಶೇಖರಪ್ಪ ಮತ್ತು ಬಿದರಹಳ್ಳಿ ಸರ್ಕಲ್ಲಿನ ರೆವಿನ್ಯೂ ಇನ್ಸ್‌ಪೆಕ್ಟರ್ ಎಫ್. ಥಾಮಸ್ ಸೇರಿಕೊಂಡು ಮತ್ತೊಂದು ಅನಾಹುತಕಾರಿ ದರೋಡೆಗೆ ಕೈಹಾಕುತ್ತಾರೆ. ಅದು ಬೆಂಗಳೂರು ಪೂರ್ವ ತಾಲ್ಲೂಕು ಕೃಷ್ಣರಾಜಪುರ ಹೋಬಳಿಯ ಚೆನ್ನಿಗಾನಹಳ್ಳಿಯ ಸ.ನಂ. 115 ರಲ್ಲಿರುವ 16 ಎಕರೆ ಸರ್ಕಾರಿ ಜಮೀನು. ಅದನ್ನು ಶಾಸಕ ನಂದೀಶ್ ರೆಡ್ಡಿಯ ಬಲಗೈ ಬಂಟ ರಮೇಶ್ ರೆಡ್ಡಿ ಎಂಬಾತ ತನ್ನ ಪ್ರೇಯಸಿ ಪ್ರಭಾವತಿಯ ಹೆಸರಿಗೆ ನಕಲಿ ದಾಖಲೆಗಳನ್ನು ಬಳಸಿ ಅಕ್ರಮ ಖಾತೆ ಸೃಷ್ಟಿಸಿಕೊಂಡಿದ್ದ.

ಹೀಗೆ ನಕಲಿ ದಾಖಲೆಗಳ ಆಧಾರದ ಮೇಲೆ ಪ್ರಭಾವತಿಯ ಹೆಸರಿಗೆ ಖಾತೆಯಾದ ಚೆನ್ನಿಗಾನಹಳ್ಳಿಯ 16 ಎಕರೆ ಸರ್ಕಾರಿ ಭೂಮಿಯ ಸದ್ಯದ ಮಾರುಕಟ್ಟೆ ರೇಟು ಎಕರೆಗೆ ಕನಿಷ್ಠ 10 ಕೋಟಿಯೆಂದರೂ ಅದು 150 ಕೋಟಿಯ ಭರ್ಜರಿ ಆಸ್ತಿ. ಈ ಬಗ್ಗೆ ಪ್ರಾದೇಶಿಕ ಆಯುಕ್ತ ಶಂಭು ದಯಾಳ್ ಮೀನಾರೇ ತನಿಖೆಗೆ ಆದೇಶಿಸಿದ್ದಾರೆ.





ಕಾರಣ ಈ ಎಲ್ಲಾ ಹಗರಣಗಳ ಹಿಂದಿರುವ... ಕೆ.ಆರ್. ಪುರದ ನೆಲಗಳ್ಳ ಶಾಸಕ ನಂದೀಶ್ ರೆಡ್ಡಿ!

ಚೆನ್ನಿಗಾನಹಳ್ಳಿಯ ಸ.ನಂ. 115 ರಲ್ಲಿ... 16 ಎಕರೆಗೆ ಹೆಸರಿಗಷ್ಟೇ ಪ್ರಭಾವತಿ ಮ... ರಮೇಶ್ ರೆಡ್ಡಿ ಖಾತೆದಾರರಾದರೂ ಅ... ಅಸಲೀ ಸೂತ್ರಧಾರ ಶಾಸಕ ನಂದೀಶ್ ರೆಡ್ಡಿ... ಈ 16 ಎಕರೆ ಪೂರ್ತಿ ಸರ್ಕಾರಿ ಸೊತ್ತು... ರಾಜಸ್ಥಾನದ ಖದೀಮ ಮಾರ್ವಾಡಿಗಳಾ... ಶಾಂತಿಲಾಲ್ ಮತ್ತು ಕನ್ಯಾಲಾಲ್ ಜೋ... ನೂರುಕೋಟಿಗೆ ಮಾರುವುದು ನಂದೀ... ರೆಡ್ಡಿಯ ಹುನ್ನಾರ. ಅದಕ್ಕೆಂದು ಟೋ... ಅಡ್ವಾನ್ಸಾಗಿ ನಂದೀಶ್ ರೆಡ್ಡಿ ಶಾಂತಿಲಾ... ಮತ್ತು ಕನ್ಯಾಲಾಲ್‌ರಿಂದ ಈಗಾಗಲೇ ... ಕೋಟಿ ರೂಪಾಯಿಗಳನ್ನು ಜೇಬಿಗಿಳಿಸಿದ್ದಾ... ಈ ಪೈಕಿ 1 ಕೋಟಿ ತಹಶಿಲ್ದಾರ್ ... ಕುಮಾರ್ ಕೈಸೇರಿದೆ.

ಡೀಸಿ ಅಯ್ಯಪ್ಪನ ಆಟ

ಯಾವ ಬಂಡವಾಳವೂ ಇಲ್ಲದೆ 1... ಕೋಟಿ ಬೆಲೆಯ ಸರ್ಕಾರಿ ಭೂಮಿ ನು... ಅದನ್ನು 100ಕೋಟಿಗೆ ಖದೀ... ಮಾರ್ವಾಡಿಗಳಿಗೆ ಮಾರಲು ಶಾಸಕ ನಂದೀ... ರೆಡ್ಡಿಗೆ ಆಗುವ ನಷ್ಟವಾದರೂ ಏನು?


ಈ ಕಾರಣಕ್ಕೆ ಪ್ರಾದೇಶಿಕ ಆಯು... ಶಂಭುದಯಾಳ್ ಮೀನಾ ಆಗಲಿ, ಕಂದಾ... ಕಮೀಷನರ್ ಅಶೋಕ್ ಮನೋಳಿಯಾ... ಬೆಂಗಳೂರು ಪೂರ್ವ ತಹಶೀಲ್ದಾರ್ ಶಿವಕುಮಾ... ಕೂದಲನ್ನೂ ಕೊಂಕಲಾಗುತ್ತಿಲ್ಲ. ಇದು ಗೊತ್ತಿ... ಬೆಂಗಳೂರು ನಗರ ಜಿಲ್ಲಾಧಿಕಾರಿ ಅಯ್ಯಪ್ಪ ಬಂದ... ಗುಂಜಿಕೊಳ್ಳುವ ಪ್ಲಾನ್ ಮಾಡಿ ನಿಮ್ಮ ಮೇಲೆ ... ಕ್ರಿಮಿನಲ್ ಕೇಸು ದಾಖಲಿಸಬಾರದು ಎಂದು ನೋಟಿ... ಕೊಡುತ್ತಾರೆ. ಹಾಗೆ ನೋಟಸು ಕೊಡುವ ಮೂ... ಡೀಸಿ ಅಯ್ಯಪ್ಪ ಒಂದೇ ಕಲ್ಲಿಗೆ ಎರಡು ... ಹೊಡೆಯುತ್ತಾರೆ. ಮೇಲುನೋಟಕ್ಕೆ ಈ ಬಗ್ಗೆ ತನಿ... ನಡೆಸುತ್ತಿರುವ ಲೋಕಾಯುಕ್ತರಿಗೆ ತಾನು ... ಭೂಕಬಳಿಕೆಯಲ್ಲಿ ಪಾಲುದಾರನಲ್ಲ ಎಂ... ತೋರಿಸಿಕೊಡುವುದು ಮತ್ತು ಅದೇ ವೇಳೆಗೆ ತಹಶೀಲ... ಶಿವಕುಮಾರನನ್ನು ಬೆದರಿಸಿ ಲೂಟಿಯ ಪಾಲ... ದೋಚುವುದು.

ಇದಕ್ಕೆ ಡೀಸಿ ಅಯ್ಯಪ್ಪರ ಏಜೆಂಟಾಗಿ ಅವತರಿ... ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯ ಸಹಾ... ಗಂಗಾಧರಯ್ಯ ಎಂಬ ಹಳೇ ಕಳ್ಳ. ಎಲ್ಲೆಲ್ಲಿ ಸರ್ಕಾ... ಜಮೀನಿದೆಯೆಂದು ಪತ್ತೆಹಚ್ಚಿ ಅದರ ಮೂ... ದಾಖಲಾತಿಗಳನ್ನು ರೆಕಾರ್ಡ್ ರೂಮಿನಿಂದ ನಾಪತ್ತೆ ಮ... ನಕಲಿ ದಾಖಲೆ ಸೃಷ್ಟಿಸಿ ನೆಲಗಳ್ಳರಿಂದ ಗಂಟು ಹೊಡೆಯ... ಗಂಗಾಧರಯ್ಯನ ಜೊತೆಗೂಡಿದ ತಹಶೀಲ್ದಾರ್ ಶಿವಕುಮ... ಜುಲೈ 27 ರಂದು ರಿಚ್ಮಂಡ್ ರಸ್ತೆಯ ಕೀರ್ತಿಲಾ... ಜ್ಯುವೆಲ್ಸ್ ಮಳಿಗೆಗೆ ಬರುತ್ತಾರೆ. ಅಲ್ಲಿ ಡೀಸಿ ಅಯ್ಯಪ್ಪರಿಗೆ... 1 ಬೆಳ್ಳಿ ತಟ್ಟೆ, 1 ಗಣೇಶನ ಚಿನ್ನದ ವಿಗ್ರಹ, ಇನ್ನೊಂ... ಚಿನ್ನದ ಲಕ್ಷ್ಮಿ ವಿಗ್ರಹ, ಮತ್ತೊಂದು ಬೆಳ್ಳಿಯ ಚೊಂ... ಜೊತೆಗೊಂದು ಬೆಳ್ಳಿಯ ಚಮಚ; ಹೀಗೆ 50 ಲ... ಚಿನ್ನಾಭರಣಗಳನ್ನು ತಹಶೀಲ್ದಾರ್ ಶಿವಕುಮಾರ್ ಖರೀ... ಗಂಗಾಧರಯ್ಯನಿಗೆ ಒಪ್ಪಿಸುತ್ತಾರೆ.


ಅಲ್ಲಿಗೆ ದೊಡ್ಡಗುಬ್ಬಿಯ 1.19 ಎಕರೆ ಮತ್ತು ... ಗುಂಟೆಯ ಎರಡು ಸರ್ಕಾರಿ ಸೊತ್ತು ಮ... ಚೆನ್ನಿಗಾನಹಳ್ಳಿಯ 150 ಕೋಟಿಯ ಭರ್ಜರಿ ಆಸ್ತಿ... ಪೂರ್ತಿ ತನಿಖೆಯೇ ಹಳ್ಳ ಹಿಡಿಯುತ್ತದೆ. ... ಮಾರ್ವಾಡಿಗಳಾದ ಶಾಂತಿಲಾಲ್ ಮತ್ತು ಕನ್ಯಾಲಾ... ತಹಶೀಲ್ದಾರ್ ಶಿವಕುಮಾರ್‌ಗೆಂದು ಒಂದು ಕಾ... ಕೋಟಿಯ ಹೊಚ್ಚ ಹೊಸ ಆಡಿ ಕಾರೊಂದ... ಕಾಣಿಕೆಯಾಗಿ ಸಲ್ಲಿಸುತ್ತಾರೆ. ಜೊತೆಗೆ ಸ್ಪೆಷಲ್ ತಹಶೀಲ... ಜಾಲಪ್ಪನಿಗೂ ಇನೋವಾ ಗಾಡಿಯ ಕಾಣಿಕೆ ಅರ್ಪಿಸುತ್ತ...

ಜಯವಿಭವ ಸ್ವಾಮಿ


ಇಲ್ಲಿ ತಹಶೀಲ್ದಾರ್ ಶಿವಕುಮಾರ್ ಬೆನ್ನಿಗಿರುವ... ಬಿ.ಜೆ.ಪಿ ಸರ್ಕಾರದ ಅನಭಿಷಕ್ತ ದೊರೆ ಯಡಿಯೂರ... ವರಾದರೆ ಜಿಲ್ಲಾಧಿಕಾರಿ ಎಂ.ಕೆ ಅಯ್ಯಪ್ಪರಿಗೆ ಮಂತ್ರಿ ಅ... ರಂಜನ್ ಮತ್ತು ಶೋಭಾ ಕರಂದ್ಲಾಜೆಯೇ ತಂದೆತಾಯಿ...



ಪಿ.ಕೆ. ಸುಬ್ಬಯ್ಯ



ಜಯ ವೈಭವ ಸ್ವಾಮಿ



ತಹಶೀಲ್ದಾರ್ ಶಿವಕುಮಾರ್

ದೊಡ್ಡಗುಬ್ಬಿಯ ಸ.ನಂ. 14 ರ 23 ಗುಂಟೆ ಮತ್ತು 1.19 ಗುಂಟೆ ಸರ್ಕಾರಿ ಗೋಮಾಳದ ಭೂಮಿಯನ್ನು ಲೋಕಾಯುಕ್ತ ತನಿಖೆ ನಡೆಯುತ್ತಿದ್ದರೂ ಸುಳ್ಳು ವರದಿ ನೀಡುವ ಮೂಲಕ ಭೂಗಳ್ಳರಿಗೆ ನೆರವಾಗಿದ್ದರ ವಿರುದ್ಧ ಏಕೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಬಾರದೆಂದು ಜಿಲ್ಲಾಧಿಕಾರಿ ಅಯ್ಯಪ್ಪ 2012 ರ ಜುಲೈ 21 ರಂದು ತಹಶೀಲ್ದಾರ್ ಶಿವಕುಮಾರ್‌ಗೆ ನೋಟಿಸು ನೀಡಿದ್ದರೂ ಕಂದಾಯ ಸಚಿವಾಲಯ ಈತನಿಗೆ ಗ್ರೇಡ್ 1 ದರ್ಜೆಗೆ ಮುಂಬಡ್ತಿ ನೀಡುತ್ತದೆ!

ಅಯ್ಯಪ್ಪನ ಬಾರಾಖೂನ್ ಮಾಫಿಗೆ ಕ್ಲರ್ಕ್ ಜೈಲು ಸೇರಿದ

ಸರ್ಕಾರಿ ಭೂಮಿಯನ್ನು ಕರಂದ್ಲಾಜೆ, ಲಿಂಬಾವಳಿ, ನಂದೀಶ್ ರೆಡ್ಡಿ ಮುಂತಾದವರ ಬಾಯಿಗೆ ಹಾಕಿದ ಪಾಪದಿಂದ ಲೋಕಾಯುಕ್ತ ಜೈಲು ಶಿಕ್ಷೆಯಿಂದ ಬಚಾವಾಗಬೇಕಲ್ಲ; ಅದಕ್ಕೆ ಡೀಸಿ ಅಯ್ಯಪ್ಪ ತಲೆ ಓಡಿಸಿ ಮರಮ್ಮತ್ತೊಂದನ್ನು ಮಾಡಿದ್ದಾರೆ. ಅದು ತಮ್ಮದೇ ಕಚೇರಿಯ ಕ್ಲರ್ಕ್‌ನ ತಲೆಗೆ ತನ್ನೆಲ್ಲಾ ಪಾಪವನ್ನು ಕಟ್ಟಿ ತಾನು ಶಿಕ್ಷೆಯಿಂದ ನುಣುಚಿಕೊಳ್ಳುವುದು!


ಇದರ ಪರಿಣಾಮವೇ ಸದ್ಯ ಅಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಡೀಸಿ ಸಾಹೇಬರ ದೂರು. ಆಗಸ್ಟ್ 21 ರಂದು ಬೆಂಗಳೂರು ಅಪರ ಜಿಲ್ಲಾಧಿಕಾರಿ ಶ್ರೀನಿವಾಸ್ ಅಲಸೂರು ಗೇಟ್ ಪೊಲೀಸರಿಗೆ ತನ್ನದೇ ಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕನಾಗಿದ್ದ ಬಿ. ಪ್ರಕಾಶ್ ಎಂಬಾತನ ವಿರುದ್ಧ ದೂರೊಂದನ್ನು ದಾಖಲಿಸುತ್ತಾರೆ. ಈತ ಕಲ್ಕೆರೆ ಗ್ರಾಮದ 6 ಗುಂಟೆ, ದೇವಸಂದ್ರದ 2 ಎಕರೆ ಮತ್ತು ಮಾರಗೊಂಡನಹಳ್ಳಿಯ 2 ಎಕರೆಗೆ ಜಿಲ್ಲಾಧಿಕಾರಿಗಳೇ ಭೂಪರಿವರ್ತನೆಗೆ ಮಂಜೂರಾತಿ ಕೊಟ್ಟಂತೆ ದಾಖಲೆ ಸೃಷ್ಟಿಸಿದ್ದ. ಇದಕ್ಕೆ ಡೀಸಿ ಅಯ್ಯಪ್ಪರ ಸೀಲು ಮತ್ತು ಸಹಿಯನ್ನು ತಾನೇ ಹಾಕಿದ್ದ. ಕೋಟಿಗಟ್ಟಲೆ ಬೆಲೆಬಾಳುವ ಬೆಂಗಳೂರು ನಗರದ ವ್ಯಾಪ್ತಿಗೆ ಬರುವ ಈ ನಿವೇಶನಗಳನ್ನು ಕೃಷಿಯಿಂದ ವಸತಿ ಉದ್ದೇಶಕ್ಕೆ ಪರಿವರ್ತಿಸುವುದೇ ಲಕ್ಷಾಂತರ ರೂಪಾಯಿಗಳ ಲಂಚದ ವ್ಯವಹಾರ. ಇದಕ್ಕೆ ಅಯ್ಯಪ್ಪರ ಜಿಲ್ಲಾಧಿಕಾರಿ ಕಚೇರಿಯಲ್ಲೇ ಇದ್ದ ಮತ್ತೊಬ್ಬ ಕ್ಲರ್ಕ್ ರಮೇಶ ಮತ್ತು ಅಯ್ಯಪ್ಪರ ಆಪ್ತ ಸಹಾಯಕ ಬಸವರಾಜು ಕೂಡ ಕೈಜೋಡಿಸಿದ್ದರು.

ಯಾವತ್ತು ಬರಬೇಕಾದ ಲಂಚ ವಿಲೇವಾರಿಯಾದ ಒಟ್ಟು ಫೈಲುಗಳ ಸಂಖ್ಯೆಗೆ ಹೊಂದಾಣಿಕೆಯಾಗಲಿಲ್ಲವೋ, ತಲೆಕೆಡಿಸಿಕೊಂಡ ಅಯ್ಯಪ್ಪಗೆ ತನ್ನದೇ ಕ್ಲರ್ಕ್‌ನ ಕೈಚಳಕ ಗೊತ್ತಾಗಿದೆ. ಹೇಗೂ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾನೆ. ಇದೇ ನೆಪದಲ್ಲಿ ತಾನು ಮಾಡಿದ ಬಾರಾಖೂನ್ ಮುಚ್ಚಿಕೊಳ್ಳಬಹುದು. ಮುಂದೊಮ್ಮೆ ಲೋಕಾಯುಕ್ತ ತನಿಖೆಗಾಗಿ ಕರಂದ್ಲಾಜೆ, ಲಿಂಬಾವಳಿ, ನಂದೀಶ್ ರೆಡ್ಡಿ ಮತ್ತು ಮಾರ್ವಾಡಿ, ಮಲೆಯಾಳಿಗಳ ಜೊತೆ ತಾನೂ ಜೈಲು ಸೇರಬೇಕಾದ ಪರಿಸ್ಥಿತಿ ಬಂದರೆ, ಬಚಾವಾಗುವ ಮಾರ್ಗವಾಗಿ ಕ್ಲರ್ಕ್ ಪ್ರಕಾಶನ ವಿರುದ್ಧ ಕೊಟ್ಟಿದ್ದ ದೂರನ್ನೇ ಬಳಸಲು ತಲೆ ಓಡಿಸಿ, ಅವತ್ತೇ ದೂರು ಕೊಟ್ಟಿದ್ದೆ ಇದೆಲ್ಲಾ ಕ್ಲರ್ಕ್ ಪ್ರಕಾಶನೇ ಮಾಡಿದ ಫೋರ್ಜರಿಗಳು ಎಂದು ನುಣುಚಿಕೊಳ್ಳುವ ತಂತ್ರ ರೂಪಿಸಿಯೇ ಅಲಸೂರು ಗೇಟ್ ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದಾರೆ.

ಇದು ಒಂದೇ ಕಲ್ಲಿಗೆ ಹತ್ತಾರು ಕಾಯಿ ಉದುರಿಸುವ ತಂತ್ರ. ಬಿಜೆಪಿಯ ಪ್ರಭಾವಿಗಳ ಭೂಕಬಳಿಕೆಯನ್ನೂ ಕಾಯ್ದಂತಾಯ್ತು, ತಾನು ಜೈಲು ಪಾಲಾಗುವುದನ್ನು ತಪ್ಪಿಸಿಕೊಂಡಂತಾಯ್ತು. ಸದ್ಯ ಕ್ಲರ್ಕ್ ಪ್ರಕಾಶ್ ಜೈಲು ಪಾಲಾಗಿದ್ದಾನೆ. ತನ್ನ ಹೊರತಾಗಿ ಡೀಸಿ ಅಯ್ಯಪ್ಪ ಬಿಜೆಪಿಯ ಯಾವ್ಯಾವ ನಾಯಕರ ಬಾಯಿಗೆ ಸರ್ಕಾರಿ ಭೂಮಿ ಹಾಕಿದ್ದಾರೆಂಬುದನ್ನು ಬಾಯಿ ಬಿಟ್ಟಿದ್ದಾನೆ. ಆದರೆ ಅಲಸೂರು ಗೇಟ್ ಪೊಲೀಸರು ಮಾತ್ರ ಇದ್ಯಾವುದನ್ನು ಪತ್ರಿಕೆಗಳಿಗೆ ಬಹಿರಂಗಪಡಿಸಿಲ್ಲ. ಇಡೀ ಪ್ರಕರಣವನ್ನೇ ಮುಚ್ಚಿಹಾಕುವಂತೆ ಡಿಸಿಪಿ ರವಿಕಾಂತೇಗೌಡರ ಮೂಲಕ ಕರಂದ್ಲಾಜೆ ಕಾರ್ಯ ಸಾಧಿಸಿದ್ದಾರೆಂಬುದು ಸದ್ಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ಹೊಗೆಯಾಡುತ್ತಿರುವ ಪುಕಾರು.



ಜಿಲ್ಲಾಧಿಕಾರಿ, ತಹಶೀಲ್ದಾರ್, ಶಾಸಕರು, ಮಂತ್ರಿಗಳೆಲ್ಲ
ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರ
ಬಿದರಹಳ್ಳಿ ಹೋಬಳಿಗಳಲ್ಲಿ ನುಂಗಹೊರಟ
ಸರ್ಕಾರಿ ಭೂಮಿಯ ಮೊತ್ತವೇ 350 ಎಕರೆಗಳು.
ಪೈಕಿ ದೊಡ್ಡಗುಬ್ಬಿಯ ಸ.ನಂ 14, 49, 50
120 ರಲ್ಲಿರುವ 300 ಎಕರೆಯ ಕೆರೆಯಂಗಳದ್ದೇ
ಕತೆಯಾದರೆ ಕೆ.ಆರ್. ಪುರದ ಬೆನ್ನಿಗಾನಹಳ್ಳಿಯ
ಎಕರೆಯದ್ದೇ ಇನ್ನೊಂದು ವ್ಯಥೆ. ಇದನ್ನೆಲ್ಲ
ಳರಿಂದ ಮುಕ್ತಿಗೊಳಿಸಲೆಂದೇ ಸರ್ಕಾರಿ ಜಮೀನುಗಳ



ರಾಜಾ ಕಾಲುವೆ ಮೇಲೆ ರಾಜನ ಬಂಗಲೆ



ಕ್ಷಣಾ ನಿಗಮವಿದೆ. ಇದಕ್ಕೆ ಡೀಸಿ ಅಯ್ಯಪ್ಪ ಮತ್ತವರ
ಪಿ.ಕೆ ಸುಬ್ಬಯ್ಯರ (ಅಪ್ಪಚ್ಚು ರಂಜನ್ ಆಪ್ತ
ರ್ಶದರ್ಶಿ) ನೆಂಟ ಪೊನ್ನಪ್ಪನೇ ಮ್ಯಾನೇಜಿಂಗ್
ಕ್ಟರ್.

ಲೋಕಾಯುಕ್ತರೇ ಫೋನ್ ಮಾಡಿ ಮೇಲ್ಕಂಡ
ಸ್ವತ್ತನ್ನು ನೆಲಗಳ್ಳರಿಂದ ಮುಕ್ತಿಗೊಳಿಸುವಂತೆ
ಪದೇ ಒತ್ತಾಯಿಸಿದಾಗಲೂ ಸರ್ಕಾರಿ ಜಮೀನು
ಮದ ಅಧಿಕಾರಿಗಳಿಗೆ ನರವಿಲ್ಲ, ಏಕೆಂದರೆ ಸದರಿ
ಮದ ಜಾರಿದಳಕ್ಕೆ ವಿಶೇಷ ಜಿಲ್ಲಾಧಿಕಾರಿಯಾಗಿರುವ
ಯವಿಭವ ಸ್ವಾಮಿ ಎಂಬ ಖದೀಮ ಕೆ.ಎ.ಎಸ್ ಸಾಕ್ಷಾತ್
ಯ ಜಾತಿವಂತ ಮತ್ತು ಪರಮಾಪ್ತ.

ಹಿಂದೆ ಮಲೆ ಮಾದೇಶ್ವರ ದೇವಸ್ಥಾನದ
ಕಾರ್ಯಾಧಿಕಾರಿಯಾಗಿದ್ದು ದಾಸೋಹದ ಅಕ್ಕಿ, ಸಕ್ಕರೆ,
ಬೆಳ್ಳುಳ್ಳಿ ಮೂಟೆಗಳನ್ನು ತನ್ನ ಜೀಪ್ ಚಾಲಕನ
ಕೊಳ್ಳೇಗಾಲದ ಸಂತೆಯಲ್ಲಿ ಮಾರಲೆತ್ನಿಸಿ
ಯವಿಭವ ಸ್ವಾಮಿ ಲೋಕಾಯುಕ್ತರಿಗೆ ಸಿಕ್ಕಿಬಿದ್ದಿದ್ದ.
ಮುನ್ನ ತುಮಕೂರು ನಗರಪಾಲಿಕೆಗೆ ಕಮೀಷನರ್
ಕಾಮಗಾರಿಯನ್ನೇ ಮಾಡಿಸದೆ 15 ಕೋಟಿಯ
ಬಿಲ್ ದೋಚಿ ಸೊಗದು ಶಿವಣ್ಣನ ಕೈಲಿ
ದಿದ್ದ. ಇಂಥಾ ಬಕಾಸುರನನ್ನು ತಂದು ಸರ್ಕಾರಿ
ಸುಗಳ ನಿಗಮದ ಜಾರಿದಳದ ಸ್ಪೆಷಲ್ ಡೀಸಿ
ದಿದ್ದು ಕೂಡಾ ಗಾಡ್‌ಫಾದರ್ ಯಡ್ಡಿಯೆ.

ಕರಂದ್ಲಾಜೆಯ ಕೇರಳ ಏಜೆಂಟ್

ಕುರಿಕಾಯಲು ತೋಳ ಬಿಟ್ಟರೆ ಏನಾಗುತ್ತೋ? ಅದೀಗ ಜಾರಿದಳದ ವಿಶೇಷ ಜಿಲ್ಲಾಧಿಕಾರಿಯಲ್ಲಾಗುತ್ತಿದೆ. ದೊಡ್ಡಗುಬ್ಬಿ ಕೆರೆಯ 300 ಎಕರೆ ಕೆರೆಯಂಗಳಕ್ಕೆ ವಕ್ಕರಿಸಿದ ಅತ್ಯಂತ ಪ್ರಭಾವಿ ಭೂಕಂಟಕಿಯೇ ಶೋಭಾ ಕರಂದ್ಲಾಜೆ. ದೊಡ್ಡಗುಬ್ಬಿ ಕೆರೆ ಪಕ್ಕದ ಸ.ನಂ. 14 ರಲ್ಲಿ ತನ್ನ ಬೇನಾಮಿ ಪುತ್ತೂರಿನ ಕುಂಬಾಂಡಿ ಬಿನ್ ವರ್ಗೀಸ್ ಎಂಬಾತನ ಹೆಸರಿನಲ್ಲಿ ಕರಂದ್ಲಾಜೆ 34.11 ಎಕರೆಗೆ ಬೇಲಿ ಸುತ್ತಿದ್ದಾಳೆ. ಕೆರೆಯ ಸ.ನಂ 38ರ 6 ಎಕರೆಯನ್ನು ಶಾಸಕ ನಂದೀಶ್ ರೆಡ್ಡಿ ನೇರವಾಗಿ ತನ್ನ ಹೆಸರಿಗೇ ಮಾಡಿಕೊಂಡಿದ್ದಾನೆ. ಇದಲ್ಲದೆ ನಂದೀಶ್ ರೆಡ್ಡಿ ಸಂಬಂಧಿಕರು, ಬೆಂಬಲಿಗರು, ಬೇನಾಮಿಗಳೆಲ್ಲ ಸೇರಿ ಕಬಳಿಸಿದ ಕೆರೆಯ ಒಟ್ಟು ಭಾಗ 20 ಎಕರೆಗೂ ಅಧಿಕ. ದೊಡ್ಡಗುಬ್ಬಿ ಕೆರೆ ಬರುವುದು ಲಿಂಬಾವಳಿಯ ಮಹದೇವಪುರ ಕ್ಷೇತ್ರಕ್ಕೆ. ಕೇರಳ ಮೂಲದ ಥಾಮಸ್‌ನ ಮಗ ಚೆರಿಯನ್ ಹೆಸರಿಗಿರುವ ಸ.ನಂ.14ರ 5.5 ಎಕರೆ ಮತ್ತು ಕೆ.ಪಿ.ಮೂರ್ತಿ ಮುನಿನಾಗ ರೆಡ್ಡಿ, ಈರಪ್ಪ ರೆಡ್ಡಿ, ಭಾರ್ಗವೀದೇವಿ ಮುಂತಾದವರ ಹೆಸರಿಗೆ ಪೋಡಿಯಾಗಿರುವ ಸ.ನಂ. 14 ರ 20 ಎಕರೆ ಪೂರ್ತಿ ಬೇನಾಮಿಯಾಗಿ ಲಿಂಬಾವಳಿಯ ಪಾಲಾಗಿದೆ.

ಬಿಜೆಪಿ ಸರ್ಕಾರದ ಇಂಥಾ ಘಟಾನುಘಟಿಗಳೇ ನಿರ್ಲಜ್ಜವಾಗಿ ಕೆರೆ ಕಬಳಿಕೆಗಿಳಿದಿರುವಾಗ ಇನ್ನು ಈ ಭಾಗದ ರೌಡಿಗಳು, ನೆಲಕಂಟಕರು, ರಿಯಲ್ ಎಸ್ಟೇಟ್ ಕಿರಾತಕರು, ಸುಮ್ಮನಿರುತ್ತಾರಾ? ಈ ಪೈಕಿ ದೊಡ್ಡಗುಬ್ಬಿಕೆರೆಯ ರಾಜಾ ಕಾಲುವೆಯನ್ನು ಆಕ್ರಮಿಸಿರುವ ನೆಲ ಬಕಾಸುರರ ಪೈಕಿ ಅತ್ಯಂತ ಖತರ್‌ನಾಕ್ ಹಿನ್ನೆಲೆಯವರೇ ಡಿ.ಪಿ ರಾಜಶೇಖರ್ ಉರ್ಫ್ ಪೆಟ್ರೋಲ್ ರಾಜ ಮತ್ತು ಮುನಿಯಪ್ಪನ ಮಗ ಕುಳ್ಳಾ ರಮೇಶ್. ಇವರ ಜೊತೆ ಕರೀಮಂಜ, ಮಾರುತಿ, ಜೆ.ಎಂ ಕೃಷ್ಣಪ್ಪ, ಪುಟ್ಟರಾಜು, ಆನಪ್ಪನ ಮಗ ಮುತ್ತುರಾಜ, ಅವಲಪ್ಪನ ಮಗ ರಾಮಯ್ಯ ಇತ್ಯಾದಿಗಳೆಲ್ಲ ರಾಜಾಕಾಲುವೆ ಕಬಳಿಸಿ ಅದರಲ್ಲಿ ಕಾಂಪ್ಲೆಕ್ಸ್ ಕಟ್ಟಿಸಿ ತಿಂಗಳಾಂಪ್ರತಿ ಲಕ್ಷಗಟ್ಟಲೆ ಬಾಡಿಗೆ ಕಮಾಯಿಸುತ್ತಿದ್ದಾರೆ.

ನಿಷ್ಕ್ರಿಯ ಈಶ್ವರಪ್ಪ

ಲೋಕಾಯುಕ್ತರ ಕಣ್ಣೊರೆಸಲು ಡೀಸಿ ಅಯ್ಯಪ್ಪ ಜಾರಿದಳದ ಜಯವಿಭವ ಸ್ವಾಮಿಗೊಂದು, ತಹಶೀಲ್ದಾರ್ ಶಿವಕುಮಾರ್‌ಗೊಂದು ಕಾಟಾಚಾರದ ನೋಟಿಸು ಕೊಡುತ್ತಾರೆ. ಹಾಗೆ ನೋಟಿಸು ಬಂದಿದ್ದೇ ತಡ ತಹಶೀಲ್ದಾರ್ ಶಿವಕುಮಾರ್ ಡೀಸಿ ಸಾಹೇಬರಿಗೆ ಲಕ್ಷಗಟ್ಟಲೆ ಚಿನ್ನಾಭರಣದ ಗಿಫ್ಟು ಸಲ್ಲಿಸುತ್ತಾರೆ ಮತ್ತು ಪೆಟ್ರೋಲ್ ರಾಜ, ಕುಳ್ಳಾ ರಮೇಶರನ್ನು ಕರೆದು ಜಾರಿದಳದ ಜಯವಿಭವ ಸ್ವಾಮಿಯನ್ನು ವಿಚಾರಿಸಿಕೊಳ್ಳುವಂತೆ ಛೂ ಬಿಡುತ್ತಾನೆ. ಇತ್ತ ನೆಲಗಳ್ಳರ ಹಿಂದು ಬಂದು ಜಯವಿಭವ ಸ್ವಾಮಿಯ ಕೈ ಬೆಚ್ಚಗೆ ಮಾಡಿದ್ದೇ ತಡ ನೆಲಗಳ್ಳರನ್ನೆಲ್ಲಾ ಸೇರಿಸಿ ಜಯವಿಭವ ಸ್ವಾಮಿ ಬಿಟ್ಟಿ ಸಲಹೆಯೊಂದನ್ನು ಕೊಡುತ್ತಾನೆ.

ಅದು ನೀವೆಲ್ಲ ಕೋರ್ಟಿಗೆ ಹೋಗಿ ತಡೆಯಾಜ್ಞೆ ತನ್ನಿ, ನಾನು ನೆಲಸಮಗೊಳಿಸಲು ದಂಡುದಾಳಿ ನಡೆಸಿದ ನಾಟಕ ಆಡಿ ಪ್ರಕರಣ ಕೋರ್ಟ್‌ನಲ್ಲಿರುವುದರಿಂದ ಕ್ರಮಸಾಧ್ಯವಿಲ್ಲ ಎಂದು ಷರಾ ಬರೆದು ಒಗಾಯಿಸುತ್ತೇನೆ ಎಂದು ಡೀಲು ಕುದುರಿಸುತ್ತಾನೆ. ಡೀಸಿ ಅಯ್ಯಪ್ಪನೂ ಶೋಭಾ ಕರಂದ್ಲಾಜೆಯ ಮೂಲಕ ಯಡ್ಡಿಯ ಏಜೆಂಟಾದರೆ, ಜಯವಿಭವ ಸ್ವಾಮಿ ಮತ್ತು ತಹಶೀಲ್ದಾರ್ ಶಿವಕುಮಾರ್‌ಗೆ ನೇರವಾಗಿ ಯಡ್ಡಿಯದ್ದೇ ಶ್ರೀರಕ್ಷೆ. ಇಂಥಾ ಬಕಾಸುರರೆಲ್ಲ ಬೆಂಗಳೂರು ನಗರ ಜಿಲ್ಲೆಗೆ ವಕ್ಕರಿಸಿರುವಾಗ ಯಾವ ಸರ್ಕಾರಿ ಸೊತ್ತಿಗೆ ರಕ್ಷಣೆ ಸಾಧ್ಯ? ಲೋಕಾಯುಕ್ತರೇ ನಿಸ್ಸಹಾಯಕರಾಗಿ ಸಹಸ್ರಾರು ಕೋಟಿಯ ಭೂಕಬಳಿಕೆಯ ಮುಂದೆ ಮೂಕರಂತೆ ನಿಲ್ಲಬೇಕಾದ ದುರ್ಗತಿಗೆ ಕಂದಾಯ ಮಂತ್ರಿ ಈಶ್ವರಪ್ಪ ಏನೆನ್ನುತ್ತಾರೆ?

ಬಿಜೆಪಿಯ ಮಂತ್ರಿ, ಶಾಸಕ, ಪುಢಾರಿಗಳೆಲ್ಲರೂ ಸಾರಾಸಗಟು ಸರ್ಕಾರಿ ಭೂಮಿ ನುಂಗುತ್ತಿರುವಾಗ ಬಡ, ದಲಿತ, ಹಿಂದುಳಿದವರಿಗೆ ವಿತರಣೆಯಾಗಬೇಕಿದ್ದ ಸರ್ಕಾರಿ ಜಮೀನನ್ನು ಲೋಕಾಯುಕ್ತ, ಕೋರ್ಟು, ವಿರೋಧ ಪಕ್ಷಗಳಿಂದಲೂ ಕಾಪಾಡಲು ಸಾಧ್ಯವಿಲ್ಲವೇ?


• ರಾ. ಸೋಮನಾಥ್

→4

ಕೆ.ಎಂ.ಎಫ್ ಕರ್ಮಕಾಂಡ

ನಿಜ ಹೇಳಬೇಕೆಂದರೆ ಅದೊಂದು ಕಾರಣವೇ ಅಲ್ಲ, ಏಕೆಂದರೆ ಮೊದಲಿನಿಂದಲೂ ಕಡಿಮೆ ದರ ಇರುವಾಗ ಅಂದರೆ ಜನವರಿಯಿಂದ ಏಪ್ರಿಲ್‌ವರೆಗೆ ಸಾಕಷ್ಟು ಹತ್ತಿಬೀಜ ಖರೀದಿಸಿ ಶೇಖರಿಸಿಟ್ಟುಕೊಳ್ಳಲಾಗುತ್ತದೆ. ಇದಕ್ಕೆಂದು ಸರ್ಕಾರಿ ಉಗ್ರಾಣಗಳೂ ಸೇರಿದಂತೆ ಅನೇಕ ದಾಸ್ತಾನು ಮಳಿಗೆಗಳನ್ನು ಕೆ.ಎಂ.ಎಫ್ ಬಾಡಿಗೆ ಪಡೆಯುತ್ತಾ ಬಂದಿದೆ. ಆದರೆ ಹೀಗೆ ಟಾರ್ಚರ್ ನೀಡುವ ಮೂಲಕವಾದರೂ ಕಂಪನಿಗಳನ್ನು ಬೋಗಸ್ ವ್ಯವಹಾರಕ್ಕೆ ಒಪ್ಪಿಸುವ ಉದ್ದೇಶದಿಂದಲೇ ಸುಖಾಸುಮ್ಮನೆ ಸತಾಯಿಸುವ ಗೇಮ್ ಆರಂಭಿಸಿದ್ದರಷ್ಟೆ.

ಆ ಎಲ್ಲಾ ಕಂಪನಿಗಳ ಅತಿ ದೊಡ್ಡ ಗ್ರಾಹಕನಾಗಿದ್ದ



ಹಗರಣ ಬಯಲಿಗಿಟ್ಟ ಪಿ.ನಾಗರಾಜ್, ಎಸ್.ಸಿ.ಅಶೋಕ್ ಮತ್ತು ರೇವಣಸಿದ್ದಪ್ಪ

ಕೆ.ಎಂ.ಎಫ್ ಸಂಸ್ಥೆಯೇ ಖರೀದಿಯನ್ನು ನಿಲ್ಲಿಸಿತೆಂದರೆ ಅವರಾದರೂ ಬರ್ಬಾದ್ ಆಗುವುದೊಂದೇ ಬಾಕಿ. ಅದನ್ನು ತಪ್ಪಿಸಿಕೊಳ್ಳಬೇಕೆಂದರೆ ರೆಡ್ಡಿ ಟೀಮು ಎದುರಿಟ್ಟ ಮೋಸದ ಡೀಲಿಗೆ ಒಪ್ಪಿಕೊಳ್ಳದೆ ಬೇರೆ ವಿಧಿಯೇ ಇರಲಿಲ್ಲ. ಕಡೆಗೂ ಅವರು ಡೀಲ್‌ಗೆ ಒಪ್ಪಿಕೊಂಡಿದ್ದರು.

ರೆಡ್ಡಿ ಅಂಡ್ ರೆಡ್ಡಿ ಇನ್ ಗುಂಟೂರ್

ಇಷ್ಟೆಲ್ಲ ನಡೆಯುವ ವೇಳೆಗಾಗಲೆ ಬೋಗೇಶ್ವರ ರೆಡ್ಡಿ ಎನ್ನುವ ಮತ್ತೊಬ್ಬ ಆಗಂತುಕನ ಎಂಟ್ರಿಯಾಗಿತ್ತು, ಆತ ಖುದ್ದು ಸೋಮಶೇಖರ್ ರೆಡ್ಡಿಯ ಸೋದರ ನೆಂಟ. ಸೋಮಶೇಖರ್ ರೆಡ್ಡಿ ಇತ್ತ ಬೇಲ್ ಡೀಲ್ ಕುದುರಿಸುವಲ್ಲಿ ಬಿಜಿಯಾಗಿದ್ದ, ಆದ್ದರಿಂದ ತನ್ನ ಪರವಾಗಿ ಕೆ.ಎಂ.ಎಫ್ ಕರ್ಮಕಾಂಡ ನೋಡಿಕೊಳ್ಳಲು ಈತನನ್ನು ನಿಯೋಜಿಸಿದ್ದ. ಕಂಪನಿಗಳು ತಮ್ಮ ಬೇಡಿಕೆಗೆ ತಕ್ಕಂತೆ ವ್ಯವಹರಿಸಲು ಒಪ್ಪಿರುವುದು ತಿಳಿಯುತ್ತಿದ್ದಂತೆಯೆ ಬೋಗೇಶ್ವರ ರೆಡ್ಡಿ ಮತ್ತು ಹಣಕಾಸು ನಿರ್ದೇಶಕ ನರಸಿಂಹ ರೆಡ್ಡಿಯ ಜಂಟಿ ತಂಡ ಗುಂಟೂರಿನತ್ತ ಪ್ರಯಾಣ ಬೆಳೆಸಿತ್ತು. ಕಂಪನಿಗಳೊಂದಿಗೆ ಮಾತುಕತೆ ನಡೆಸಿದ ನಂತರ 'ಒಮ್ಮೆಲೆ ದರವನ್ನು ಹೆಚ್ಚಿಸಿದರೆ ಅನುಮಾನ ಬರುತ್ತದೆ, ಹಾಗಾಗಿ ಹಂತಹಂತವಾಗಿ ರೇಟನ್ನು ಏರಿಸಿಕೊಳ್ಳೋಣ ಮತ್ತು ಏರಿಕೆಯನ್ನು ನೋಡಿಕೊಂಡು ಪ್ರತಿ ಟನ್‌ಗೆ ಇಂತಿಷ್ಟು ಮಾಮೂಲಿ ನೀಡಬೇಕೆನ್ನುವ' ಡೀಲು ಕುದುರಿಸಿದ್ದರು.

ಡೀಲು ಪಕ್ಕಾ ಆದ ಮೇಲೆ ಮೊದಲನೇ ಬಾರಿಗೆ 17.05.2012 ರಲ್ಲಿ ಟೆಂಡರ್ ಕರೆಯುತ್ತಾರೆ. ಆಗ ಸುಮಾರು 12,000 ಟನ್ ಹತ್ತಿ ಬೀಜವನ್ನು 14,500 ರೂಪಾಯಿಯಂತೆ ಖರೀದಿ ಮಾಡಲಾಗುತ್ತೆ. ಜನವರಿ ದರಕ್ಕೆ (13,700) ಹೋಲಿಸಿದರೆ ಪ್ರತಿ ಟನ್‌ಗೆ 800 ರೂಪಾಯಿ ಮಾತ್ರ ಏರಿಸಲಾಗಿತ್ತು. ಎರಡನೇ ಬಾರಿಗೆ 12.07.2012 ರಂದು ಸುಮಾರು 14,100 ಟನ್ ಹತ್ತಿಬೀಜವನ್ನು ಖರೀದಿ ಮಾಡಿದಾಗ ಪ್ರತಿ ಟನ್ ಬೆಲೆ ಏಕಾಏಕಿ 20,650 ರೂ.ಗೆ ಏರಿಸಿದ್ದರು. ಅಂದರೆ ಜನವರಿ ದರಕ್ಕಿಂತ ಪ್ರತಿ ಟನ್‌ಗೆ 6,900 ಹೆಚ್ಚುವರಿ ಆದಂತಾಯಿತು. ಅಲ್ಲಿಗೆ 19 ಕೋಟಿ ನೀಡಬೇಕಿದ್ದ ಜಾಗದಲ್ಲಿ ಕೆ.ಎಂ.ಎಫ್ 29 ಕೋಟಿಯ ಬಿಲ್ ಭರಿಸಬೇಕಾಗಿತ್ತು, ಮಾರ್ಕೆಟ್‌ನ ದರಕ್ಕಿಂತ ನೂರು ಇಲ್ಲವೇ ಇನ್ನೂರರಷ್ಟು ಕಂಪನಿಗಳಿಗೆ ಹೆಚ್ಚಿಗೆ ನೀಡಿ ಉಳಿದದ್ದೆಲ್ಲ ತಾವು ಲಪಟಾಯಿಸಲು ರೆಡ್ಡಿ ಗ್ಯಾಂಗ್ ಈ ರೀತಿ ಬೇಕಂತಲೇ ದರ ಏರಿಸಿದ್ದರು.

ಇನ್ನೂ ವಿಚಿತ್ರವೆಂದರೆ ಈ ಖರೀದಿ ಮುಗಿದು ಹದಿನೈದೇ ದಿನದ ಅಂತರದಲ್ಲಿ, 25.07.2012ರಂದು ಮತ್ತೊಮ್ಮೆ 14,600 ಟನ್ ಖರೀದಿ ಮಾಡಿದ್ದರು. ಆಗ ಪ್ರತಿ ಟನ್‌ನ ಬೆಲೆಯನ್ನು ಏಕಾಏಕಿ 27,100 ಕ್ಕೆ ಹೆಚ್ಚಿಸಿದ್ದರು. ಜನವರಿ ದರದ ಮಾತಿರಲಿ ಹದಿನೈದು ದಿನದ ಕೆಳಗಿನ ದರಕ್ಕೆ ಹೋಲಿಸಿದರೆ 6,450 ರೂಪಾಯಿಗಳಷ್ಟು ಹೈಕ್ ಮಾಡಿದ್ದರು. ಅಲ್ಲಿಗೆ 20 ಕೋಟಿ ನೀಡಬೇಕಿದ್ದ ಜಾಗದಲ್ಲಿ 39.5 ಕೋಟಿ ನೀಡಿ ಖರೀದಿಸಿದ್ದರು. ಎಂತಹುದೇ ಏರುಪೇರೆಂದರೂ ಇಷ್ಟು ಕಡಿಮೆ ಅವಧಿಯಲ್ಲಿ ಸಾವಿರಾರು ರೂಪಾಯಿ ಜಂಪ್ ಆಗುವ ಸಂಭವವೇ ಇಲ್ಲ, ಇಲ್ಲಿಗೆ ಐದು ತಿಂಗಳ ಹಿಂದೆ ಅಂದರೆ ಫೆಬ್ರವರಿಯಲ್ಲಿ ಶೇಖರಿಸಿಡಲು ಜಾಗವೇ ಇಲ್ಲದಷ್ಟು ಹತ್ತಿಬೀಜದ ಸ್ಟಾಕ್ ಇದೆಯೆಂಬ ನೆಪ ಹೇಳಿದ್ದವರು ಈಗ ಹದಿನೈದು ದಿವಸದ ಅಂತರದಲ್ಲೆ ಎರಡೆರಡು ಬಾರಿ ದುಪ್ಪಟ್ಟು ದರದಲ್ಲಿ ಖರೀದಿಸುತ್ತಾರೆಂದರೆ ಇದು ಪಕ್ಕಾ ಬೋಗಸ್ ವ್ಯವಹಾರ ಅನ್ನುವುದು ಸಾಬೀತಾಗುತ್ತದೆ.

ಆ ಮೂಲಕ ಕೆ.ಎಂ.ಎಫ್.ಗೆ ಒಟ್ಟು 40 ಕೋಟಿ ಲಾಸ್ ಮಾಡಿದ್ದರು. ಇದರಿಂದ ಅವರಿಗೆ 9-10 ಕೋಟಿ ಕಿಕ್‌ಬ್ಯಾಕ್ ಖಂಡಿತ ಲಾಭವಾಗಿರುತ್ತೆ. ಇದು ಜುಲೈವರೆಗಿನ ಅಂಕಿಅಂಶವಷ್ಟೆ. ನಂತರದ ವಹಿವಾಟನ್ನೂ ಪರಿಗಣಿಸಿದರೆ ಲಾಸ್‌ನ ಪ್ರಮಾಣ ಇನ್ನೂ 20 ಕೋಟಿ ಹೆಚ್ಚಾಗುವ ಅಂದಾಜಿದೆ.

ಆರು ತಿಂಗಳ ಹಿಂದಷ್ಟೆ ಸುಸ್ಥಿತಿಯಲ್ಲಿದ್ದ ಸಂಸ್ಥೆ ಇದ್ದಕ್ಕಿದ್ದಂತೆ ಕೋಟ್ಯಂತರ ಲಾಸ್‌ಗೆ ಬಂದು ನಿಲ್ಲುತ್ತದೆಂದರೆ ಎಂತವರಿಗೂ ಅನುಮಾನ ಖಂಡಿತ ಮೂಡುತ್ತದೆ. ಇದು ವಂಚಕ ತ್ರಿಮೂರ್ತಿಗಳಿಗೂ ಚೆನ್ನಾಗಿ ಗೊತ್ತಿತ್ತು. ಹಾಗಾಗಿ ಲಾಸ್‌ನ ಪ್ರಮಾಣವನ್ನು ಕಡಿಮೆ ಮಾಡಬೇಕೆಂದರೆ ಅವರ ಮುಂದಿದ್ದದ್ದು ಸಬ್ಸಿಡಿ ದರದಲ್ಲಿ ರೈತರಿಗೆ ನೀಡುತ್ತಿದ್ದ ಪಶು ಆಹಾರದ ದರವನ್ನು ಏರಿಸುವ ಮಾರ್ಗ ಮಾತ್ರ. ಬರದ ನಾಡೆನ್ನುವ ಕನಿಷ್ಠ ಕಾಳಜಿಯನ್ನೂ ಮರೆತು ಅದಕ್ಕೂ ಮುಂದಾಗಿದ್ದರು. ಜೂನ್ 23ನೇ ತಾರೀಖು ಬೋರ್ಡ್ ನಿರ್ದೇಶಕರ ತುರ್ತು ಸಭೆ ಕರೆದ ಅಧ್ಯಕ್ಷ ಸೋಮಶೇಖರ್ ರೆಡ್ಡಿ ಪಶು ಆಹಾರದ ದರ ಏರಿಸುವ ಪ್ರಸ್ತಾವವನ್ನು ಮುಂದಿರಿಸಿದ್ದ. ಈಗಾಗಲೇ ಬರದಿಂದ ಸಂಕಷ್ಟದಲ್ಲಿರುವ ರೈತನಿಗೆ ಇದರಿಂದ ಮತ್ತಷ್ಟು ಹೊರೆ ಬಿದ್ದಂತಾಗುತ್ತದೆನ್ನುವ ಕಾರಣಕ್ಕೆ ಕೆಲವರು ವಿರೋಧಿಸಿದ್ದರಿಂದ ಅದು ಅಲ್ಲಿಗೇ ಮೊಟಕಾಗಿತ್ತು. ತಾವು ದುಪ್ಪಟ್ಟು ಹಣ ನೀಡಿ ಖರೀದಿಸುವ ಮುನ್ನವೇ ಬೆಲೆ ಏರಿಸಿ ಬ್ಯಾಲೆನ್ಸ್ ಮಾಡಲು ಮುಂದಾಗಿದ್ದರೆಂದರೆ ಅದೆಷ್ಟು ನೀಟಾಗಿ ಪ್ಲಾನ್ ಮಾಡಿರಲಿಕ್ಕಿಲ್ಲ.

ಒಟ್ಟಿನಲ್ಲಿ ನುಂಗಣ್ಣರೇ ತುಂಬಿಕೊಂಡಿರುವ ಕೆ.ಎಂ.ಎಫ್ ಮೇಲಕ್ಕೇಳದಷ್ಟು ಪ್ರಪಾತಕ್ಕೆ ಬೀಳುತ್ತಿದೆ. ಜೈಲು ಸೇರಿರುವ ಸೋಮಶೇಖರ್ ರೆಡ್ಡಿ ಮತ್ತು ಭ್ರಷ್ಟ ಎಂ.ಡಿ, ನಿರ್ದೇಶಕ(ವಿತ್ತ)ನನ್ನು ಬದಲಾಯಿಸುವ ಕೆಲಸಕ್ಕೆ ಸರ್ಕಾರ ಈಗಲಾದರೂ ಮುಂದಾಗದಿದ್ದರೆ ಕೆ.ಎಂ.ಎಫ್ ಬೀದಿಗೆ ಬೀಳುವುದಂತು ಸತ್ಯ.

• ಗಿರೀಶ್ ತಾಳಿಕಟ್ಟೆ

ಡೀಲರ್‌ಶಿಪ್‌ನಲ್ಲೂ ಡೀಲಿಂಗ್

ಸೋಮಶೇಖರ ರೆಡ್ಡಿ ಮತ್ತವನ ಭಂಟರ ನುಂಗು-ಪುರಾಣ ಇಷ್ಟಕ್ಕೇ ಮುಗಿಯುವುದಿಲ್ಲ. ತನ್ನ ಕುಟುಂಬದವರಿಗೆ ಲಾಭ ಮಾಡಿಕೊಡಬೇಕೆನ್ನುವ ಒಂದೇ ಒಂದು ಕಾರಣಕ್ಕೆ ನಂದಿನಿ ಗುಡ್‌ಲೈಫ್ ಹಾಲಿನ ಹಳೆಯ ಏಜೆನ್ಸಿಗಳನ್ನೆಲ್ಲ ಕ್ಯಾನ್ಸಲ್ ಮಾಡಿ ಮನಬಂದಂತೆ ಮಾರ್ಕೆಟಿಂಗ್ ಕ್ಷೇತ್ರದ ಮಿನಿಮಮ್ ಜ್ಞಾನವೂ ಇಲ್ಲದ ಸಂಬಂಧಿಕರಿಗೆ ಡೀಲರ್‌ಶಿಪ್ ನೀಡಿದ್ದ ಸೋಮಶೇಖರ್ ರೆಡ್ಡಿಯಿಂದಾಗಿ ಉತ್ಪನ್ನದ ಮಾರಾಟವೇ ಕುಸಿದಿದೆ. ನೆಂಟ ಹರೀಶ್, ಮಾವ ಸುಧಾಕರ್, ಸೋದರ ನೆಂಟ ಬೋಗೇಶ್ವರ್ ಅಲ್ಲದೆ ತನ್ನ ತಂಗಿಯರಿಗೂ ಏಜೆನ್ಸಿ ನೀಡಿದ್ದ. ರೆಡ್ಡಿಯ ಈ ಸ್ವಜನಪಕ್ಷಪಾತವನ್ನು ವಿರೋಧಿಸಿ ಕೋಲಾರ ಘಟಕ ತೀರಾ ಇತ್ತೀಚೆಗಷ್ಟೆ ಮುಷ್ಕರ ನಡೆಸಿತ್ತು.

ನಾಗಶೆಟ್ಟಿಹಳ್ಳಿಯಲ್ಲಿ ರೈತರ ಮಕ್ಕಳಿಗೆಂದು ಕೆ.ಎಂ.ಎಫ್ ನಿರ್ಮಿಸಿದ ಮಹಿಳಾ ಹಾಸ್ಟೆಲ್ ಇದೆ. ಇದರ ಉಸ್ತುವಾರಿಯನ್ನು ಈ ಮೊದಲು ಒಂದು ಎನ್.ಜಿ.ಒಗೆ ವಹಿಸಲಾಗಿತ್ತು, ಅದನ್ನೂ ರದ್ದು ಮಾಡಿದ ರೆಡ್ಡಿ ತನ್ನ ಖಾಸಾ ಬಳಗದವರಿಗೆ ಖಾಸಗಿಯಾಗಿ ನೀಡಿ ಕೃತಾರ್ಥನಾಗಿದ್ದ.

ಇವಿಷ್ಟೆ ಅಲ್ಲದೆ ಭ್ರಷ್ಟ ಜೋಡಿಗಳೊಂದಿಗೆ ಸೇರಿಕೊಂಡ ರೆಡ್ಡಿ ಕೆ.ಎಂ.ಎಫ್ ಹೋರ್ಡಿಂಗ್‌ನಲ್ಲಿ, ಜಾಹಿರಾತು ಹಗರಣದಲ್ಲಿ, ಕಂಪ್ಯೂಟರೀಕರಣ ಹಗರಣಗಳಲ್ಲಿ ತಲಾ ಐವತ್ತು ಲಕ್ಷಗಳಂತೆ ಒಂದೂವರೆ ಕೋಟಿ ಲೂಟಿ ಮಾಡಿರುವುದೂ ಬಯಲಾಗಿದೆ. ನೂತನ ಮುಖ್ಯಮಂತ್ರಿಗಳಿಗೆ ಶುಭಾಶಯ ಕೋರುವ ಯಕಶ್ಚಿತ್ ಉದ್ದೇಶಕ್ಕೆ ಕನ್ನಡ ಮಾತ್ರವಲ್ಲದೆ ಇಂಗ್ಲಿಷ್ ದಿನಪತ್ರಿಕೆಗಳಲ್ಲಿ ಅದರಲ್ಲೂ ಹೊರ ರಾಜ್ಯದ ಪ್ರಕಟಣೆಗಳಲ್ಲೂ ಅಚ್ಚಾಗುವಂತೆ ಬರೋಬ್ಬರಿ 54 ಲಕ್ಷದ ಜಾಹಿರಾತು ನೀಡಿ ಈ ಅಧಿಕಾರಿಗಳು ನುಂಗಿದ ಮೊತ್ತ ಸಣ್ಣದೇನಲ್ಲ. ರೈತರ ಸಹಕಾರ ಸಂಘದ ಅರ್ಧಕೋಟಿ ಜಾಹಿರಾತು ನೀಡಿ ಈ ಅಧಿಕಾರಿಗಳು ನುಂಗಿದ ಮೊತ್ತ ಸಣ್ಣದೇನಲ್ಲ? ಎನ್ನುವ ಪ್ರಶ್ನೆಗೆ ಜೈಲಲ್ಲಿರುವ ರೆಡ್ಡಿ ಅಥವಾ ಆತನ ಹಣದಲ್ಲಿ ಮುಖ್ಯಮಂತ್ರಿಗೆ ಶುಭಾಶಯ ಕೋರುವ ಅಗತ್ಯವಿತ್ತೆ? ಎನ್ನುವ ಪ್ರಶ್ನೆಗೆ ಜೈಲಲ್ಲಿರುವ ರೆಡ್ಡಿ ಅಥವಾ ಆತನ ಶಿಷ್ಯಮಣಿಯರಿಂದ ಸದ್ಯಕ್ಕಂತೂ ಉತ್ತರ ಸಿಗುತ್ತಿಲ್ಲ.

ಸದಾಶಿವ ಆಯೋಗದ ವರದಿ ಒಳಿತೋ? ಕೆಡುಕೋ

ನೀವೂ ಚರ್ಚೆಯಲ್ಲಿ ಪಾಲ್ಗೊಳ್ಳಿ

ನ್ಯಾ. ಸದಾಶಿವ ಆಯೋಗದ ಶಿಫಾರಸ್ಸುಗಳ ಸಾಧಕ ಬಾಧಕಗಳ ಕುರಿತ ಚರ್ಚೆಯನ್ನು 'ಲಂಕೇಶ್' ಮುಂದುವರೆಸಲಿದೆ. ನಿಮ್ಮ ಅನಿಸಿಕೆಗಳನ್ನು ಲಿಖಿತ ರೂಪದಲ್ಲಿದ್ದರೆ ಅಂಚೆ/ಕೊರಿಯರ್ ಮೂಲಕ ಅಥವಾ ಫ್ಯಾಕ್ಸ್ 26604536 ಅಥವಾ Email: glankesh@gmail.com ಕಳುಹಿಸಿ.

ಮೀಸಲಾತಿಯ ಗದ್ದಲ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ಈ ಬಾರಿಯ ಗದ್ದಲ ಎಂದಿನಂತೆ ಪಟ್ಟಭದ್ರ ಮೇಲುಜಾತಿಗಳಿಗೂ ದಲಿತರಿಗೂ ನಡುವಿನ ಸಂಘರ್ಷವಲ್ಲ, ದಲಿತರಲ್ಲಿ ಪರಿಶಿಷ್ಟ ಜಾತಿ(ಎಸ್.ಸಿ.) ವರ್ಗೀಕರಣದಡಿ ಬರುವ ಜಾತಿಗಳ ನಡುವೆಯೇ ಈ ತಿಕ್ಕಾಟ ನಡೆದಿದೆ. ಈ ಸಂದರ್ಭದಲ್ಲಿ ಈ ಅನಪೇಕ್ಷಿತ ಸಂಘರ್ಷದ ಹಿನ್ನೆಲೆಯನ್ನು ಕೂಲಂಕಶವಾಗಿ ಪರಿಶೀಲಿಸಿ ನೋಡೋಣ.

ಈ ಭರತ ಭೂಮಿಯನ್ನಾಳಿದ ಮಹಾನ್ ಸಾಮ್ರಾಟರ ಕಾಲದಿಂದ ಹಿಡಿದು ಇಂದಿನ ಆಧುನಿಕ ಪ್ರಜಾಪ್ರಭುತ್ವದವರೆಗೆ ಎಲ್ಲಾ ಆಳ್ವಿಕೆಗಳಲ್ಲೂ ದಲಿತ ಜಾತಿಗಳು ಅಸಮಾನತೆ, ಅಪಮಾನಗಳನ್ನು ಅನುಭವಿಸುತ್ತಾ ಬಂದಿವೆ. ಮನುವಾದಿಗಳು, ಪುರೋಹಿತಶಾಹಿಗಳ ಮಾರ್ಗದರ್ಶನದಲ್ಲಿ "ಪ್ರತ್ಯಕ್ಷ ದೇವತೆ"ಗಳೆನಿಸಿಕೊಂಡ ರಾಜರಾಗಲಿ, ಜಗತ್ತಿಗೆ 'ನಾಗರಿಕತೆಯನ್ನು ಕಲಿಸಲು' ಬಂದ ಬ್ರಿಟಿಷರಾಗಲಿ ಈ ಅಮಾನವೀಯ ಜಾತಿಪದ್ಧತಿಯನ್ನು ತೊಡೆದುಹಾಕುವ ಬದಲಿಗೆ ಅದನ್ನು ತಮ್ಮ ಆರ್ಥಿಕ, ರಾಜಕೀಯ ಲಾಭಕ್ಕಾಗಿ ಬಳಸಿಕೊಂಡ ಸತ್ಯ ಚರಿತ್ರೆಯ ಕರಾಳ ಪುಟಗಳಲ್ಲಿ ಸೇರಿಹೋಗಿದೆ. ಸಹಸ್ರಾರು ವರ್ಷಗಳ ಈ ಸಾಮಾಜಿಕ ವ್ಯಾಧಿಯನ್ನು ಮೂಲೋತ್ಪಾಟನೆ ಮಾಡಲಾಗದಿದ್ದರೂ ಅದಕ್ಕೆ ಮುಲಾಮು ಹಚ್ಚುವ ಕ್ರಮಗಳನ್ನಾದರೂ ನಮ್ಮ ಸಂವಿಧಾನ ಕೈಗೊಂಡಿರುವುದು ಸಮಾಧಾನದ ಸಂಗತಿ. ಇದು ಡಾ. ಅಂಬೇಡ್ಕರ್ ಅವರ ನಿರಂತರ ಹೋರಾಟದ ಪ್ರತಿಫಲ.

ಹೀಗೆ ನಮ್ಮ ಸಂವಿಧಾನ ರೂಪಿಸಿದ ಮೀಸಲಾತಿ ನೀತಿಯಡಿ ಪರಿಶಿಷ್ಟ ಜಾತಿ (ಎಸ್.ಸಿ)ಗೆ ಸರ್ಕಾರಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ಶೇಕಡ 15ರಷ್ಟು ಮೀಸಲಾತಿ ನಿಗದಿಯಾಗಿದೆ. ಕಳೆದ ಐದಾರು ದಶಕಗಳಲ್ಲಿ ಎಸ್.ಸಿ ಪಟ್ಟಿಗೆ ಹಲವಾರು ಜಾತಿಗಳು ಸೇರ್ಪಡೆಗೊಂಡು ಈಗ ಒಟ್ಟು 101 ಜಾತಿಗಳು ಎಸ್.ಸಿ. ಪಟ್ಟಿಯಲ್ಲಿವೆ.

ಹೀಗೆ ಸಂವಿಧಾನದತ್ತವಾಗಿ ಬಂದಿರುವ ಮೀಸಲಾತಿ ಮತ್ತಿತರ ಹಕ್ಕುಗಳನ್ನು ಪಡೆದುಕೊಳ್ಳಲಿಕ್ಕಾಗಿ ದಲಿತರು ಅಂದಿನಿಂದಲೂ ನಿರಂತರವಾಗಿ ಹೋರಾಟ ನಡೆಸಬೇಕಾಗಿರುವುದು ಒಂದು ದುರಂತ. ಪಾರ್ಲಿಮೆಂಟಿನಲ್ಲಿ, ಅಸೆಂಬ್ಲಿಗಳಲ್ಲಿ, ಅಧಿಕಾರದ ಮೊಗಸಾಲೆಗಳಲ್ಲಿ ಜಾತಿ ವ್ಯವಸ್ಥೆಯ ಬೇರುಗಳು ಬಹಳ ಆಳವಾಗಿ ಬೇರುಬಿಟ್ಟಿರುವುದೇ ಇದಕ್ಕೆ ಕಾರಣ. ಇಂದಿಗೂ ದೇಶದ ಯಾವ ಮೂಲೆಯಲ್ಲೂ ಮೀಸಲಾತಿ ನೀತಿ ಸಮರ್ಪಕವಾಗಿ ಜಾರಿಗೆ ಬಂದಿಲ್ಲ, ಬಹುತೇಕ ಎಲ್ಲಾ ಇಲಾಖೆಗಳಲ್ಲೂ ಬ್ಯಾಕ್‌ಲಾಗ್ ಹುದ್ದೆಗಳ ಉದ್ದನೆಯ ಪಟ್ಟಿಗಳು ಕಾದು ಕೂತಿವೆ.

ಇನ್ನು ಹಂಚಿಕೆಯಾದ ಮೀಸಲಾತಿ ಸೌಲಭ್ಯದಲ್ಲೂ ತಾರತಮ್ಯಗಳು ಉಂಟಾಗಿದ್ದು ದಲಿತರಲ್ಲೇ ಬಲಿಷ್ಠರಾಗಿರುವ ಕೆಲವು ಜಾತಿಗಳು ಮೀಸಲಾತಿಯಲ್ಲಿ ಹೆಚ್ಚಿನ ಪಾಲನ್ನು ಪಡೆದಿದ್ದು ದುರ್ಬಲರಿಗೆ ಇದರಿಂದ ಅನ್ಯಾಯವಾಗಿದೆ ಎಂಬ ಕೂಗು ಕಳೆದ ದಶಕದಿಂದಲೇ ಎಲ್ಲೆಡೆ ಕೇಳಿಬರುತ್ತಿದೆ. ಈ ಕೂಗು ಎಷ್ಟು ಪ್ರಬಲವಾಗಿದೆಯೆಂದರೆ ಹಲವು ದಶಕಗಳ ಕಾಲ ದಲಿತ ಚಳವಳಿಯಲ್ಲಿ ಒಟ್ಟಾಗಿ ದುಡಿದಿದ್ದ ಮಾದಿಗ (ಎಡಗೈ) ಮತ್ತು ಹೊಲೆಯ (ಬಲಗೈ) ಜನಾಂಗಗಳ ನಡುವೆ ಬಿರುಕಿಗೂ ಕಾರಣವಾಗಿತ್ತು.

ಈ ಹಿನ್ನೆಲೆಯಲ್ಲಿ ಆಂಧ್ರದ 'ಮಾದಿಗ ದಂಡೋರಾ' ಮಾದರಿಯಲ್ಲಿ 'ಮಾದಿಗ ರಿಜರ್ವೇಶನ್ ಹೋರಾಟ ಸಮಿತಿ' ಹುಟ್ಟಿಕೊಂಡಿತು. ರಾಜ್ಯಾದ್ಯಂತ ಹಲವು ಪ್ರತಿಭಟನೆಗಳನ್ನು ನಡೆಸಿದ ಈ ಸಂಘಟನೆಯ ಪ್ರಮುಖ ಬೇಡಿಕೆ ಪರಿಶಿಷ್ಟ ಜಾತಿಗೆ ನೀಡಲಾಗುತ್ತಿರುವ ಶೇಕಡ 15 ಮೀಸಲಾತಿಯಲ್ಲಿ ತಮ್ಮ ಜನಾಂಗಕ್ಕೆ ಜನಸಂಖ್ಯಾ ಪ್ರಮಾಣಕ್ಕನುಗುಣವಾಗಿ ಒಳಮೀಸಲಾತಿ ಕಲ್ಪಿಸಬೇಕು ಎಂಬುದಾಗಿತ್ತು. ಇದೇ ರೀತಿಯ ಬೇಡಿಕೆಯನ್ನು ಇನ್ನೂ ಕೆಲವು ನಿರ್ಲಕ್ಷಿತ ಸಮುದಾಯಗಳೂ ಮುಂದಿಟ್ಟಿದ್ದವು.

ಇಂಥಾ ಒತ್ತಡದ ಪರಿಣಾಮವಾಗಿ ಧರಂಸಿಂಗ್ ಸರ್ಕಾರ 2005ರ ಸೆಪ್ಟೆಂಬರ್‌ನಲ್ಲಿ ನಿವೃತ್ತ ನ್ಯಾಯಮೂರ್ತಿ ಜಸ್ಟೀಸ್ ಎ.ಜೆ.ಸದಾಶಿವ ಅವರ ನೇತೃತ್ವದಲ್ಲಿ ಒಂದು ಆಯೋಗವನ್ನು ರಚಿಸಿ, ಕರ್ನಾಟಕದಲ್ಲಿ ಎಸ್.ಸಿ. ಕೆಟಗರಿಯಡಿ ಬರುವ 101 ಜಾತಿಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ರಾಜಕೀಯ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಲು ಕೋರಲಾಗಿತ್ತು.

ಸರ್ಕಾರದ ಅಸಹಕಾರ

ಆಯೋಗ ರಚಿಸಿದ್ದೇನೋ ಆಯಿತು. ಆದರೆ ಅದಕ್ಕೆ ಬೇಕಾದ ಹಣಕಾಸು ನೆರವನ್ನು ಒದಗಿಸಲು ಯಾವ ಸರ್ಕಾರವೂ ಮುಂದಾಗಲಿಲ್ಲ, ಅಗತ್ಯ ಸಿಬ್ಬಂದಿ ಹಾಗೂ ಪರಿಕರಗಳನ್ನು ಕಾಲಮಿತಿಯಲ್ಲಿ ಒದಗಿಸಲಿಲ್ಲ. ದಲಿತೋದ್ಧಾರದ ಪೊಳ್ಳು ಘೋಷಣೆಗಳಿಗೆ ನಮ್ಮ ಸರ್ಕಾರಗಳು ಎಷ್ಟು ಬದ್ಧವಾಗಿವೆ ಎಂಬುದಕ್ಕೆ ಇದೇ ಸಾಕ್ಷಿ. ಆದರೆ ಇದೇ ಕಾಲಘಟ್ಟದಲ್ಲಿ ಜನಿವಾರಧಾರಿಗಳಿಗೆ, ಕಾವಿಧಾರಿಗಳಿಗೆ ನೂರಾರು ಕೋಟಿ ಹಣ ಹರಿಸುತ್ತಿರುವುದಕ್ಕೆ ಇಡೀ ರಾಜ್ಯದ ಜನತೆ ಮೂಕಸಾಕ್ಷಿಯಾಗಿದ್ದಾರೆ.

ಪದೇಪದೇ ಮಾಡಿಕೊಂಡ ಮನವಿಗಳಿಗೆ ಯಾವ ಬೆಲೆಯೂ ಇಲ್ಲದಾದಾಗ, ಸರ್ಕಾರದ ಇಂಥಾ ಅವಗಣನೆಯಿಂದ ಬೇಸತ್ತ ಜಸ್ಟೀಸ್ ಸದಾಶಿವ ಅವರು ನೇರವಾಗಿ ಒಂದು ಪತ್ರಿಕಾಗೋಷ್ಠಿ ಕರೆದು ಸರ್ಕಾರದ ಅಸಹಕಾರದಿಂದ ಸರ್ವೆ ಕಾರ್ಯದಲ್ಲಿ ಅನಗತ್ಯ ವಿಳಂಬವಾಗುತ್ತಿದೆಯೆಂದು ಟೀಕಿಸಿದರು. ಅದರ ಬೆನ್ನಲ್ಲೇ ದಲಿತ ಸಂಘಟನೆಗಳು ಆಯೋಗಕ್ಕೆ ಹಣ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಅಲ್ಲಲ್ಲಿ ಪ್ರತಿಭಟನೆ ನಡೆಸಿದವು. ಸರ್ಕಾರದ ಮರ್ಯಾದೆ ಬೀದಿಯಲ್ಲಿ ಹರಾಜಾದ ಮೇಲಷ್ಟೇ 2010ರಲ್ಲಿ ಯಡಿಯೂರಪ್ಪನವರು ಹಣಕಾಸು ಬಿಡುಗಡೆ ಮಾಡಿದ್ದು! ಸರ್ಕಾರಗಳ ಅಸಹಕಾರ ಹಾಗೂ ವಿಳಂಬ



ನೀತಿಗಳು ವರದಿ ತಯಾರಿಸುವಲ್ಲಿ ಹೇಗೆ ತೊಡಕುಂಟುಮಾಡಿದವು ಎಂಬ ಬಗ್ಗೆ ಸುಮಾರು 5 ಪುಟಗಳ ವಿವರಣೆಯನ್ನು ಜಸ್ಟೀಸ್ ಸದಾಶಿವ ಅವರು ಸೇರಿಸಿದ್ದಾರಂತೆ. ಆ ವಿಷಯ ಹಾಗಿರಲಿ.


ಈ ಆಯೋಗದ ನೇತೃತ್ವ ವಹಿಸಿದ ಜಸ್ಟೀಸ್ ಸದಾಶಿವ ಅವರ ಕಾಳಜಿ ಮತ್ತು ಪರಿಶ್ರಮ ಪ್ರಶ್ನಾತೀತವಾದುದು. ಸ್ವತಃ ಸದಾಶಿವ ಅವರು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಖುದ್ದಾಗಿ ಭೇಟಿ ನೀಡಿ ಅಧ್ಯಯನ ಕೈಗೊಂಡಿದ್ದಾರೆ. ಹಲವಾರು ಬಾರಿ ಅಧಿಕಾರಿಗಳ ಸಭೆ ನಡೆಸಿದ್ದಾರೆ. ನಾನಾ ಇಲಾಖೆಗಳಿಂದ ಮಾಹಿತಿಯನ್ನು ಪಡೆದುಕೊಂಡಿದ್ದಾರೆ. ಬೇರೆಬೇರೆ ಸಮುದಾಯಗಳ ಮುಖಂಡರು, ವಿಶ್ವವಿದ್ಯಾಲಯಗಳ ಪ್ರೊಫೆಸರ್‌ಗಳು, ಸಾಮಾಜಿಕ ಕಾರ್ಯಕರ್ತರು, ಆರ್ಥಿಕ ತಜ್ಞರು ಮುಂತಾದವರನ್ನು ಭೇಟಿಯಾಗಿ ಅಭಿಪ್ರಾಯ ಸಂಗ್ರಹಿಸಿದ್ದಾರೆ.

ಅಂದಹಾಗೆ ಈ ಆಯೋಗ ಕೈಗೊಂಡ ಕಾರ್ಯ ಅಗಾಧವಾದುದು. ರಾಜ್ಯಾದ್ಯಂತ ಹರಡಿರುವ ಪರಿಶಿಷ್ಟ ಜಾತಿಗಳಿಗೆ ಸೇರಿದ 20 ಲಕ್ಷದ 54 ಸಾವಿರ ಕುಟುಂಬಗಳು ಹಾಗೂ ಸುಮಾರು 96 ಲಕ್ಷದ 60 ಸಾವಿರ ಜನಸಂಖ್ಯೆಯ ಕುರಿತು ಸರ್ವೆ ನಡೆಸಿ ಜಾತಿವಾರು ಜನಸಂಖ್ಯೆಯನ್ನು ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಅಂದಾಜಿಸಿದೆ. ಅಲ್ಲದೆ ರಾಜ್ಯಾದ್ಯಂತ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಪರಿಶಿಷ್ಟ ಜಾತಿಗೆ ಸೇರಿದ ಒಂದು ಲಕ್ಷದ 58 ಸಾವಿರ ನೌಕರರ ಸರ್ವೇಕ್ಷಣೆ ನಡೆಸಿದ್ದಾರೆ. ಆಯಾ ಕುಟುಂಬಗಳ ಶೈಕ್ಷಣಿಕ, ಆರ್ಥಿಕ, ಸಾಂಸ್ಕೃತಿಕ ಅಂಶಗಳ ಸರ್ವೆಗಾಗಿ ರೂಪಿಸಲಾಗಿದ್ದ 141 ಪ್ರಶ್ನಾವಳಿಗಳನ್ನು ಒಳಗೊಂಡ ಫಾರಂನಲ್ಲಿ ಮಾಹಿತಿ ಸಂಗ್ರಹಿಸಿ, ಅವುಗಳನ್ನು ಕಂಪ್ಯೂಟರ್‌ಗಳಲ್ಲಿ ದಾಖಲಿಸಿ, ಅಂತಿಮ ವಿಶ್ಲೇಷಣೆಯ ನಂತರ ಫಲಿತಾಂಶವನ್ನು ಸಾರಾಂಶೀಕರಿಸಲಾಗಿದೆ. ಈ ಸರ್ವೆಯ ಸಂದರ್ಭದಲ್ಲಿ ಸುಮಾರು 6 ಲಕ್ಷ ಜನರು ತಮ್ಮ ಜಾತಿಯನ್ನು ಹೇಳಿಕೊಳ್ಳಲು ನಿರಾಕರಿಸಿರುವುದು ಆಯೋಗ ದಾಖಲಿಸಿರುವ ಮತ್ತೊಂದು ಪ್ರಮುಖ ವಿಶೇಷ ಅಂಶ.

ಹೀಗೆ ಅಸಹಕಾರ ತೋರಿದ್ದು ಕೇವಲ ಸರ್ಕಾರ ಮಾತ್ರವಲ್ಲ; ದಲಿತರ ಪ್ರತಿನಿಧಿಗಳೆನಿಸಿಕೊಂಡಿರುವವರೂ ಇಂಥದೇ ಘೋರ ನಿರ್ಲಕ್ಷ್ಯ ತೋರಿದ್ದಾರೆಂದರೆ ಅದಕ್ಕೆ ಏನು ಹೇಳಬೇಕು? ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಕನಿಷ್ಟ ಮೂರು ಡಜನ್ ದಲಿತ ಎಂಎಲ್‌ಎ, ಎಂಪಿ ಗಳ ಪೈಕಿ ಈ ಆಯೋಗದ ಸಭೆಗೆ ಹಾಜರಾದವರು ಕೇವಲ ಮೂರು ಮಂದಿ ಮಾತ್ರ! ಭಾಗವಹಿಸಿದವರೂ ಕೂಡ ಯಾವುದೇ ಚರ್ಚೆಯಲ್ಲಿ ಪಾಲ್ಗೊಳ್ಳದೇ ಅಥವಾ ಯಾವುದೇ ಸಲಹೆ ಸೂಚನೆಗಳನ್ನೂ ನೀಡದೆ ಜಾಗ ಖಾಲಿ ಮಾಡಿದರು. ಇಂಥಾ ನಾಲಾಯಕ್ ದಲಿತ ಪ್ರತಿನಿಧಿಗಳಿಂದ ದಲಿತರಿಗೆ ಏನಾದರೂ ನ್ಯಾಯ ದೊರೆಯಬಹುದು ಎಂದು ನಿರೀಕ್ಷಿಸಲು ಸಾಧ್ಯವೇ? ಇಂಥಾ ಶಾಸಕರ ಪಟ್ಟಿಗೆ ವಿಶ್ವವಿದ್ಯಾಲಯಗಳ ಪ್ರೊಫೆಸರ್‌ಗಳು, ಐಎಎಸ್, ಐಪಿಎಸ್ ಅಧಿಕಾರಿಗಳು ಮುಂತಾದ ಬಿಳಿಕಾಲರ್ ಮಂದಿಯೂ ಸೇರಿದ್ದಾರೆ ಎಂದರೆ ಆಶ್ಚರ್ಯವಾಗುತ್ತದೆಯಲ್ಲವೆ? ಆದರೆ ಇಂಥಾ ಮಂದಿ ತಮ್ಮ ಬೇಳೆಬೇಯಿಸಿಕೊಳ್ಳಲು ಮುಗ್ಧ ದಲಿತರನ್ನು ಉದ್ದಕ್ಕೂ ದಾರಿ ತಪ್ಪಿಸುತ್ತಾ ಬಂದಿರುವುದು ಅನೂಚಾನವಾಗಿ ನಡೆದುಬಂದಿದೆ. ಆ ಮಾತು ಹಾಗಿರಲಿ.

ಹೀಗೆ ಕಳೆದ 8 ವರ್ಷಗಳ ಸುದೀರ್ಘ ಅಧ್ಯಯನದ ನಂತರ ಇದೇ ಜೂನ್ 14 ರಂದು ಜಸ್ಟೀಸ್ ಸದಾಶಿವ ಅವರು 200 ಪುಟಗಳ ವರದಿಯನ್ನು ಅಂದಿನ ಮುಖ್ಯಮಂತ್ರಿ ಸದಾನಂದಗೌಡರಿಗೆ ಸಲ್ಲಿಸಿದ್ದಾರೆ. ಪರಿಶಿಷ್ಟ ಜಾತಿಗಳ ಒಳಗಡೆಯೇ ಕೆಲವು ಜಾತಿಗಳು ತಮ್ಮ ನ್ಯಾಯಯುತವಾದ ಪಾಲಿನಿಂದ ವಂಚಿತವಾಗಿರುವುದನ್ನು ದಾಖಲಾತಿ ಮತ್ತು ಅಂಕಿಸಂಖ್ಯೆಗಳ ಮೂಲಕ ಎತ್ತಿ ತೋರಿಸಿರುವ ಆಯೋಗವು ಅದಕ್ಕಾಗಿ ಕೆಲವು ಪರಿಹಾರೋಪಾಯಗಳನ್ನು ಸೂಚಿಸಿದೆ.

ಅದರ ಪ್ರಕಾರ ಪರಿಶಿಷ್ಟ ಜಾತಿಗಳನ್ನು 1) ಎಡಗೈ (ಮಾದಿಗ ಜನಾಂಗ) 2) ಬಲಗೈ (ಹೊಲೆಯ ಜನಾಂಗ) 3) ಇತರೆ ಪರಿಶಿಷ್ಟರು 4) ಸ್ಪೃಶ್ಯ ಜಾತಿಗಳು (ಲಂಬಾಣಿ, ಬೋವಿ ಇತ್ಯಾದಿ) ಎಂಬ ನಾಲ್ಕು ಉಪವಿಭಾಗವಾಗಿ ವಿಂಗಡಿಸಲಾಗಿದೆ. ಅವುಗಳ ಜನಸಂಖ್ಯೆಯ ಆಧಾರದಲ್ಲಿ ಒಳ ಮೀಸಲಾತಿಯ ಪ್ರಮಾಣವನ್ನು ನಿಗದಿಪಡಿಸಿ ಶೇಕಡ 15 ರ ಮೀಸಲಾತಿಯನ್ನು ಈ ವಿಭಾಗಗಳ ನಡುವೆ



ಹಂಚಿಕೆ ಮಾಡಲಾಗಿದೆ. ಅದರ ಪ್ರಕಾರ ಜನಸಂಖ್ಯೆಯ... ಶೇಕಡ 33.47 ರಷ್ಟಿರುವ ಎಡಗೈ ಜನಾಂಗಕ್ಕೆ ಶೇ... 6, ಜನಸಂಖ್ಯೆಯ ಶೇ. 32ರಷ್ಟಿರುವ ಬಲಗೈ ಜನಾಂ... ಶೇ.5 ಮತ್ತು ಇತರೆ ಜಾತಿಗಳಿಗೆ ಶೇ. 1 ಹಾಗೂ ... ಜಾತಿಗಳಿಗೆ ಶೇ. 3 ರಷ್ಟು ಮೀಸಲಾತಿಯನ್ನು ಮ... ಹಂಚಿಕೆ ಮಾಡಬೇಕೆಂದು ಶಿಫಾರಸ್ಸು ಮಾಡಲಾಗಿದೆ...

ಇಂಥಾ ಉಪ ವರ್ಗೀಕರಣ ಜಾರಿಗೆ ಬರಬೇಕಾ... ಸಂವಿಧಾನದ 341(2) ನೇ ಕಲಂ ಪ್ರಕಾರ ಸಂಸ... ಅನುಮೋದನೆ ಕಡ್ಡಾಯವಾಗಿರುವುದರಿಂದ ರಾ... ಸರ್ಕಾರಗಳು ಅದನ್ನು ನೇರವಾಗಿ ಜಾರಿಗೊಳಿಸುವಂತಿ... ಆದರೆ ಇತರೆ ಸಾಮಾಜಿಕ ಆರ್ಥಿಕ ಸವಲತ್ತುಗಳ... ಆದ್ಯತೆಯ ಮೇರೆಗೆ ಒದಗಿಸಲು ಯಾವ ಅಡ್ಡಿಯ... ಇಲ್ಲವೆಂಬುದು ಬೇರೆ ಮಾತು. ಈ ವರದಿಯನ್ನು ಕ್ಯಾಬಿನೆ... ಹಾಗೂ ವಿಧಾನಸಭೆಯಲ್ಲಿ ಚರ್ಚಿಸಿದ ನಂ... ಪಾರ್ಲಿಮೆಂಟ್ ಅನುಮೋದನೆಗಾಗಿ ಕಳಿಸಿಕೊಡ... ಜವಾಬ್ದಾರಿ ರಾಜ್ಯ ಸರ್ಕಾರದ್ದು.

ಆದರೆ ಇಷ್ಟೆಲ್ಲಾ ನಡೆಯುತ್ತಿದ್ದರೂ ಸರ್ಕಾರ ರಾಜಕೀ... ಲಾಭ-ನಷ್ಟಗಳ ಲೆಕ್ಕಾಚಾರದಲ್ಲಿ ಮುಳುಗಿ ಜಾಣಮ... ವಹಿಸಿದೆ. ಸದಾನಂದ ಬದಲಾಗಿ ಶೆಟ್ಟರ್ ಪಟ್ಟಕ್ಕೇರಿದ... ಆ ಆಯೋಗದ ವರದಿಯ ಬಗ್ಗೆ ಸೂಕ್ತ ಕ್ರಮಗಳ... ಕೈಗೊಳ್ಳುವುದಿರಲಿ, ಕನಿಷ್ಟ ಕ್ಯಾಬಿನೆಟ್‌ನಲ್ಲಾದ... ಮಂಡನೆಯಾಗಿಲ್ಲ. ಆಳುವವರಿಗೆ ತಲತಲಾಂತರಗಳಿಂದ... ದಲಿತರ ಸಮಸ್ಯೆ ಏನಿದ್ದರೂ ಓಟ್‌ಬ್ಯಾಂ... ಭದ್ರಗೊಳಿಸಿಕೊಳ್ಳುವ ವಿಷಯ ಮಾತ್ರವೇ ಆಗಿರುವುದರಿ... ಸಕಾರಾತ್ಮಕ ನಡವಳಿಕೆಯನ್ನು ನಿರೀಕ್ಷಿಸಲು ಸಾಧ್ಯ... ಅದರಲ್ಲೂ ಆಧುನಿಕ ಮನುಗಳ ಮಾರ್ಗದರ್ಶನ... ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರ ತಮ್ಮ ರಾಜಕೀ... ಲಾಭ-ನಷ್ಟಗಳನ್ನು ಅಳೆದು ಸುರಿಯುವುದ... ಮುಳುಗಿರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಹಾ... ಈ ಸರ್ಕಾರಕ್ಕೆ ಈ ವರದಿಯ ಶಿಫಾರಸ್ಸುಗಳ ಬಗ್ಗೆ ಒಂ... ನಿಲುವೇ ಇದ್ದಂತಿಲ್ಲ.

ಪರಿಶಿಷ್ಟರಲ್ಲಿ ಭಿನ್ನ ಸ್ವರಗಳು

ಸದಾಶಿವ ವರದಿ ಸಲ್ಲಿಕೆಯಾಗುತ್ತಿದ್ದಂತೆ ಪರಿ... ಜಾತಿಗಳ ಒಳಗೆ ಸಂಚಲನವನ್ನೇ ಮೂಡಿಸಿದೆ. ನಿರ್ದಿಷ್ಟ... ಮಾದಿಗ ಜನಾಂಗ ಹಾಗೂ ಸಂಬಂಧಿತ ಸಂಘಟನೆ... ಈ ಶಿಫಾರಸ್ಸುಗಳನ್ನು ಜಾರಿಗೆ ತರಬೇಕೆಂದು ಒತ್ತಾಯ... ರಾಜ್ಯಾದ್ಯಂತ ಪ್ರತಿಭಟನೆಗಿಳಿದಿದ್ದಾರೆ. ಕೆಲವೆಡೆ ದ... ಸಂಘರ್ಷ ಸಮಿತಿಯ ಕೆಲವು ಬಣಗಳೂ ಕ... ಆಯೋಗದ ಶಿಫಾರಸ್ಸಿನ ಪರ ನಿಂತಿದ್ದಾರೆ. ಉ... ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಎಡಗೈ, ವ... ಬಲಗೈ ಎರಡೂ ಬಣಗಳು ಒಟ್ಟಾಗಿ ಶಿಫಾರಸ್ಸಿನ ಜಾ... ಆಗ್ರಹಿಸಿವೆ. ಕೆಲವು ಜಿಲ್ಲೆಗಳಲ್ಲಿ ಬಂದ್ ಆಚರಿಸಲಾಗಿ... ನೂರಾರು ಕಡೆಗಳಲ್ಲಿ ರಸ್ತೆ ತಡೆ ನಡೆದಿದೆ.

ಆದರೆ ಏನು ಮಾಡುವುದು? ಮಾಮೂಲಿಯ... ಸರ್ಕಾರದ ಬಾಯಿ ಬಿದ್ದು ಹೋಗಿದೆ. ಸರ್ಕಾ... ಬಾಯಿಬಿಟ್ಟರೆ ಮುಂಬರಲಿರುವ ಎಲೆಕ್ಷನ್ ಮೇಲೆ ಯ...




ಪರಿಣಾಮ ಬೀರುತ್ತೋ ಎ... ಲೆಕ್ಕಾಚಾರದಲ್ಲಿ ದಿಕ್ಕೆಟ್ಟು ಕೂತಿದೆ. ಸರ್ಕಾ... ಇಂಥಾ ಮೌನದಿಂದ ಬೇಸತ್ತ ದ... ಸಂಘರ್ಷ ಸಮಿತಿಯ ಕಾರ್ಯಕರ್ತ... ಶೆಟ್ಟರನ್ನು ನಿದ್ದೆಯಿಂದ ಎಬ್ಬಿಸಲು ... ವಾರಗಳ ಹಿಂದೆ ಒಂದು ಗೆರಿ... ಕಾರ್ಯಾಚರಣೆ ನಡೆಸಿದರು. ಬೆಳಗಿನ ಜ... 4 ಗಂಟೆಯ ವೇಳೆಗೆ ಪಹರೆಗಾರರ ಕಣ್ಣು... ಮುಖ್ಯಮಂತ್ರಿಯ ಅಧಿಕೃತ ನಿವಾಸದೊ...

→

...ನಲ್ ಬ್ಯಾಟ್ಸ್‌ಮನ್ ಆದರೂ ಸಿಕ್ಸರ್ ಹೊಡೆಯದ ಶೆಟ್ಟರ್


...ಬ್ಬಳ್ಳಿಯ ಗಂಡು ಜಗದೀಶ್ ಶೆಟ್ಟರ್ ಕರ್ನಾಟಕದ ...ಮಂತ್ರಿಯಾಗಿ ಇನ್ನು ಕೆಲವೇ ದಿನಗಳಲ್ಲಿ 50 ...ದಾಟಲಿವೆ. ಕ್ರಿಕೆಟ್ ಭಾಷೆಯಲ್ಲಿ ಹೇಳುವುದಾದರೆ ...ಮ್ಮ 'ಫಿಫ್ಟಿ ನಾಟ್ ಔಟ್'. ಕ್ರಿಕೆಟ್‌ಗೂ, ಶೆಟ್ಟರ್‌ಗೂ ...ರೀತಿಯ ಹತ್ತಿರದ ನಂಟಿದೆ.




...ಮುಖ್ಯಮಂತ್ರಿಯಾದ ನಂತರ ...ರ ಜೊತೆ ಪ್ರೆಸ್‌ಕ್ಲಬ್‌ನಲ್ಲಿ ನಡೆದ ...ದ ಕಾರ್ಯಕ್ರಮದಲ್ಲಿ ಶೆಟ್ಟರ್ ಪ್ರಶ್ನೆ ...ದಕ್ಕೆ ಉತ್ತರಿಸಿದ್ದು ಕ್ರಿಕೆಟ್ ಭಾಷೆ ..."ನಮ್ಮ ಪಕ್ಷ ಇನ್ನು ಕೆಲವೇ ತಿಂಗಳು ...ಮಹಾ ಚುನಾವಣೆಯನ್ನು ...ಸಬೇಕಾಗಿದೆ. ಹೀಗಾಗಿ ಕ್ರಿಕೆಟ್‌ನಲ್ಲಿ ...ಕೊನೆಯ ಓವರ್‌ಗಳಲ್ಲಿ ...ಮನ್‌ಗಳು ಸಿಕ್ಸರ್ ಮೇಲೆ ಸಿಕ್ಸರ್ ...ಯುತ್ತ ಗುರಿಯನ್ನು ತಲುಪುತ್ತಾರೋ ...ರೀತಿ ನಾನೂ ಕೂಡ ಸಿಕ್ಸರ್ ಹೊಡೆದು ಪಕ್ಷವನ್ನು ...ಅಧಿಕಾರಕ್ಕೆ ತರುವತ್ತ ನೋಡಬೇಕಾಗಿದೆ" ಎಂದು ...ದ್ದರು. ಇದರರ್ಥ ಯಾವುದೇ ಹೊಸ ಯೋಜನೆಗಳನ್ನು ...ಲು ಸಮಯವಿಲ್ಲ, ಏನಿದ್ದರೂ ಹಳೆಯ ಯೋಜನೆ ...ಒಂದರ ಹಿಂದೆ ಒಂದರಂತೆ ಅನುಷ್ಠಾನಕ್ಕೆ ...ವುದಷ್ಟೇ ತಮ್ಮ ಉದ್ದೇಶ ಎಂಬುದು.

...50 ದಿನಗಳ ಅವರ ಕಾರ್ಯಶೈಲಿಯನ್ನು ...ಲೋಕಿಸಿದಾಗ ಶೆಟ್ಟರ್ ಇಲ್ಲಿಯತನಕ ಒಂದೇ ಒಂದು ...ಕೂಡ ಹೊಡೆದಿಲ್ಲ ಎಂದೇ ಹೇಳಬೇಕಾಗಿದೆ. ...ನಲ್ಲಿ ಕೊನೆಯ ವಿಕೆಟ್‌ಗೆ ಬರುವ ಬ್ಯಾಟ್ಸ್‌ಮನ್‌ಗಳು ...ತಿಣುಕಾಡುತ್ತ ಒಂದೊಂದೇ ರನ್‌ನ್ನು ತೆಗೆಯುತ್ತಾರೋ ...ಶೆಟ್ಟರ್ ಮುಖ್ಯಮಂತ್ರಿಯ ಗದ್ದುಗೆಯಲ್ಲಿ 50 ...ನ್ನು ಪೂರೈಸಿದ್ದಾರೆ. ಈ ಅವಧಿಯಲ್ಲಿ ಅವರು ...ಮಂತ್ರವನ್ನು ನಂಬಿರುವಂತೆ ಕಾಣಿಸುತ್ತದೆ. ...ನೆಂದರೆ, ಯಾರು ಏನೇ ಟೀಕೆ ಮಾಡಿದರೂ ಅದಕ್ಕೆ ...ತ್ತರ ನೀಡದೇ ಮೌನವಾಗಿರುವುದೇ ಲೇಸು ಎಂಬಂತಿದೆ ...ಕಾರ್ಯಶೈಲಿ. ಇದು ಈ ಹಿಂದೆ ಮುಖ್ಯಮಂತ್ರಿ ...ಸದಾನಂದ ಗೌಡರ ಕಾರ್ಯಶೈಲಿಗೆ ತದ್ವಿರುದ್ಧವಾ... ...ಸದಾನಂದ ಗೌಡರು ಮಾತಾಡಿ ಕೆಟ್ಟರು ಎಂಬುದು ...ೀಶ್ ಶೆಟ್ಟರಿಗೆ ಚೆನ್ನಾಗಿ ಗೊತ್ತು. ಅದಕ್ಕೆ ಶೆಟ್ಟರು ...ವುದೇ ಟೀಕೆ ಬಂದರೂ ತುಟಿಕ್‌ಪಿಟಿಕ್ ಎನ್ನುತ್ತಿಲ್ಲ. ...ಅದೇನೇ ಇದ್ದರೂ ಈಗ ಮೊದಲ ಬಾರಿಗೆ ಶೆಟ್ಟರ್ ...ಸಾಹಸಕ್ಕೆ ಕೈ ಹಾಕಲೇಬೇಕಾದ ಅನಿವಾರ್ಯ ...ತಿ ಸೃಷ್ಟಿಯಾಗಿದೆ. ಅದೇನೆಂದರೆ ಸಂಪುಟ ಪುನರ್ರಚನೆ. ...ವುದೇ ಕಾರಣಕ್ಕೂ ಈ ಪುನರ್ರಚನೆಯನ್ನು ಅವರು ...ಮುಂದೂಡುವ ಹಾಗೇ ಇಲ್ಲ. ಏಕೆಂದರೆ ಅವರು ...ಮುಖ್ಯಮಂತ್ರಿ ಕುರ್ಚಿಯನ್ನು ಅಲಂಕರಿಸಿದ ಸಂದರ್ಭದಲ್ಲಿ ...ಲ್ಲಿನ ಭಿನ್ನಮತೀಯ ನಾಯಕರಿಗೆ - ಅದರಲ್ಲೂ ...ವಾಗಿ ಸದಾನಂದ ಗೌಡರ ಬಣದವರಾದ ಗೋವಿಂದ ...ಜೋಳ ಮತ್ತು ಬಾಲಚಂದ್ರ ಜಾರಕೀಹೊಳಿಗೆ - ...ದ ಖಾತೆಯನ್ನು ನೀಡಲಾಗುತ್ತದೆ ಎಂದು ಶೆಟ್ಟರ್ ...ಸೆ ನೀಡಿದ್ದರು. ಅಷ್ಟೇ ಅಲ್ಲ, ಇವರಿಬ್ಬರಲ್ಲಿ ಗೋವಿಂದ ...ಜೋಳ ಅವರ ಹೆಸರು ಉಪಮುಖ್ಯಮಂತ್ರಿ ಸ್ಥಾನಕ್ಕೆ ...ಬಂದಿತ್ತು. ಕುರುಬರ ಸಮಾಜಕ್ಕೆ ಸೇರಿದ ಈಶ್ವರಪ್ಪ ...ತ್ತು ಒಕ್ಕಲಿಗ ಸಮಾಜದ ಆರ್.ಅಶೋಕ್ ಇವರಿಗೆ ...ಕಾಶ ಮಾಡಿಕೊಡುವ ಉದ್ದೇಶದಿಂದ ಹಿಂದುಳಿದ ...ದ ಗೋವಿಂದ ಕಾರಜೋಳ ಉಪಮುಖ್ಯಮಂತ್ರಿ ...ದ ಸ್ಪರ್ಧೆಯಿಂದ ಹಿಂದೆ ಸರಿದಿದ್ದರು. ಅಷ್ಟು ದೊಡ್ಡ ...ಮಾಡಿದ ಕಾರಜೋಳರವರಿಗೆ ಒಳ್ಳೆಯ - ಅರ್ಥಾತ್ ಫಲಪ್ರದವಾದ - ಖಾತೆಯನ್ನು ನೀಡುತ್ತೇನೆ ಎಂದು ಶೆಟ್ಟರ್ ಹೇಳಿದ್ದರು. ಇನ್ನೊಂದೆಡೆ, ಹಿಂದುಳಿದ ನಾಯಕರು ಹಾಗೂ ಪಕ್ಷೇತರ ಶಾಸಕರುಗಳ ಗುಂಪಿನ ನಾಯಕರಾದ ಬಾಲಚಂದ್ರ ಜಾರಕೀಹೊಳಿ ಬಿಜೆಪಿ ಹೈಕಮಾಂಡ್‌ಗೆ ಸೆಡ್ಡು ಹೊಡೆದಿದ್ದರು. ಯಾವುದೇ ಕಾರಣಕ್ಕೂ ಸದಾನಂದ ಗೌಡರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಬಾರದು, ಹಾಗೇನಾದರೂ ಮಾಡಿದಲ್ಲಿ ಪಕ್ಷೇತರರು ನೇರವಾಗಿ ಸ್ಪೀಕರ್‌ಗೆ ರಾಜೀನಾಮೆ ಕೊಟ್ಟು ಮಧ್ಯಂತರ ಚುನಾವಣೆಗೆ ಅನುವು ಮಾಡಿಕೊಡುತ್ತೇವೆ ಎಂದು ಜಾರಕೀಹೊಳಿ ಬೆದರಿಸಿದ್ದರು. ಜಾರಕೀಹೊಳಿ ತಂಡದ ಸದಸ್ಯರೆಲ್ಲರೂ ಕೊನೆಗೆ ತಮ್ಮ ಆಕ್ರೋಶವನ್ನು ಬದಿಗಿಟ್ಟು ಜಗದೀಶ್ ಶೆಟ್ಟರನ್ನು ಬೆಂಬಲಿಸಿದ್ದು ಈಗ ಜಗಜ್ಜಾಹೀರಾಗಿದೆ. ಅಂತಹ ಅಪೂರ್ವವಾದ ಬೆಂಬಲವನ್ನು ನೀಡಿದ ಜಾರಕೀಹೊಳಿಗೂ ಈಗ ಶೆಟ್ಟರ್ ಒಂದು ತೂಕದ ಖಾತೆಯನ್ನು ನೀಡಬೇಕಾಗಿದೆ.

'ಪ್ರತಿ ಬಾರಿ ಬಿಜೆಪಿ ಸರ್ಕಾರ ಅಪಾಯದಲ್ಲಿದ್ದಾಗ ನಾವು ಬೆಂಬಲಿಸಿದ್ದೇವೆ. ಆದರೆ ಅದಕ್ಕೆ ಪ್ರತಿಫಲವಾಗಿ ನಮಗೆ ಸರ್ಕಾರದಿಂದ ಏನೂ ಸಿಕ್ಕಿಲ್ಲ' ಎಂಬುದು ಜಾರಕೀಹೊಳಿ ತಂಡದವರ ಆರೋಪ.






ಅಂದರೆ ತಾವು ಸರ್ಕಾರಕ್ಕೆ ಬೆಂಬಲ ನೀಡಿದ್ದರಿಂದಲೇ ಇತರರು ಐಷಾರಾಮಿ ಜೀವನ ನಡೆಸುತ್ತಿದ್ದಾರೆ. ಅದರಲ್ಲೂ, ಪ್ರತಿ ಬಾರಿ ಸರ್ಕಾರವನ್ನು ಬ್ಲಾಕ್‌ಮೇಲ್ ಮಾಡುವ ಯಡಿಯೂರಪ್ಪ ಅವರ ಹಿಂಬಾಲಕರಿಗೆ ಒಳ್ಳೊಳ್ಳೆಯ ಫಲಪ್ರದವಾದ ಖಾತೆ ನೀಡಲಾಗಿದೆ. ಆ ಖಾತೆಗಳನ್ನು ಈ ಬಾರಿ ಯಾದರೂ ತಮಗೆ ನೀಡಲೇಬೇಕು ಎಂಬುದು ಪಕ್ಷೇತರ ಸದಸ್ಯರೆಲ್ಲರ ಒಕ್ಕೊರಲಿನ ಆಗ್ರಹ.

ಇತ್ತೀಚೆಗೆ ಬಾಲಚಂದ್ರ ಜಾರಕೀಹೊಳಿ ಸಂಪುಟದ ಪುನರ್ರಚನೆಗೆ ಶೆಟ್ಟರ್ ಅವರಿಗೆ ಒಂದು ವಾರದ ಗಡುವನ್ನು ನೀಡಿದ್ದಾರೆ. ಶನಿವಾರದೊಳಗಡೆ ಶೆಟ್ಟರ್ ಸಂಪುಟ ಪುನರ್ರಚನೆ ಮಾಡದಿದ್ದರೆ ತಾವು ಮತ್ತೆ ತಮ್ಮ ಹಾದಿಯನ್ನು ಹಿಡಿಯಬೇಕಾಗುತ್ತದೆ ಎಂದು ಜಾರಕೀಹೊಳಿ ಆರ್ಭಟಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಪುಟ ಪುನರ್ರಚನೆ ಬಹುತೇಕ ಖಚಿತವೆಂದು ಹೇಳಬಹುದು.

ಬಿಜೆಪಿ ಮೂಲಗಳ ಪ್ರಕಾರ ಈ ಬಾರಿಯ ಸಂಪುಟ ಪುನರ್ರಚನೆಯಲ್ಲಿ ಗೋವಿಂದ ಕಾರಜೋಳ ಮತ್ತು ಬಾಲಚಂದ್ರ ಜಾರಕೀಹೊಳಿ ಅವರಿಗೆ ಹೆಚ್ಚುವರಿ ಅಥವಾ ದೊಡ್ಡ ಖಾತೆಯನ್ನು ನೀಡುವ ಸಾಧ್ಯತೆಯಿದೆಯಂತೆ. ಇವರನ್ನು ಹೊರತುಪಡಿಸಿದರೆ ಬೇರೆ ಯಾವುದೇ ಮಂತ್ರಿಗಳಿಗೆ ಹೊಸ ಖಾತೆ ಸಿಗುವ ಸಾಧ್ಯತೆ ತೀರಾ ಕಡಿಮೆ. ಇವರಿಬ್ಬರೂ ಸದಾನಂದ ಗೌಡರ ಬಣದ ಶಾಸಕರಾಗಿರುವುದರಿಂದ ಇವರಿಬ್ಬರಿಗೆ ಮಾತ್ರ ಹೆಚ್ಚುವರಿ ಖಾತೆಯನ್ನು ನೀಡಿದರೆ ಸರಿಯಾಗುವುದಿಲ್ಲ ಎಂದು ಭಿನ್ನಮತೀಯ ನಾಯಕ ಯಡಿಯೂರಪ್ಪ ಏನಾದರೂ ರಾಜಕೀಯ ಮಾಡಿದರೆ ಅವರ ಗುಂಪಿನ ಯಾವುದಾದರೊಬ್ಬ ಶಾಸಕನಿಗೂ ಹೊಸ ಜವಾಬ್ದಾರಿ ಸಿಗಬಹುದು.

ಸದ್ಯ ಯಡ್ಡಿ ಬಣದ ಬಾಯಿಬಡುಕ ಅಬಕಾರಿ ಸಚಿವ ರೇಣುಕಾಚಾರ್ಯ ತನಗೆ ಸಾರಿಗೆ ಖಾತೆಯನ್ನು ನೀಡಬೇಕೆಂದು ಪಟ್ಟುಹಿಡಿದಿದ್ದಾರೆ. ಆದರೆ ಯಡ್ಡಿ ಜೊತೆ ಉತ್ತಮ ಬಾಂಧವ್ಯವನ್ನು ಹೊಂದಿರುವ ಆರ್.ಅಶೋಕ್ ಯಾವುದೇ ಕಾರಣಕ್ಕೂ ಸಾರಿಗೆ ಖಾತೆಯನ್ನು ಬಿಟ್ಟುಕೊಡುವ ಸಾಧ್ಯತೆಯಿಲ್ಲ. ಇನ್ನೊಂದು ಕಡೆ ಗೋವಿಂದ ಕಾರಜೋಳರಿಗೆ ದೊಡ್ಡ ಖಾತೆಯನ್ನು ನೀಡಿದರೆ ಅವರಲ್ಲಿರುವ ಸಣ್ಣ ನೀರಾವರಿ ಖಾತೆಯನ್ನು ರೇಣುಕಾಚಾರ್ಯ ಅಥವಾ ರಾಜುಗೌಡ ಅವರಿಗೆ ನೀಡ ಬೇಕೆಂದು ಯಡಿಯೂರಪ್ಪ ಕಟ್ಟಾಜ್ಞೆ ಮಾಡಿ ದ್ದಾರೆಂದು ಕೇಳಿಬರುತ್ತಿದೆ.



ಈ ಮಧ್ಯೆ ಈ ಹಂತದಲ್ಲಿ ಈ ಸಂಪುಟ ಪುನರ್ರಚನೆಯ ತಂಟೆಯೇ ಬೇಡ ಎಂದು ಜಾರಕೀಹೊಳಿ ಮತ್ತು ಕಾರಜೋಳ ಅಸಡ್ಡೆ ತೋರಿಸುತ್ತಿದ್ದಾರೆಂಬ ಮಾತು ಕೇಳಿಬರುತ್ತಿದೆ. ಇದಕ್ಕೆ ಮುಖ್ಯ ಕಾರಣ ಕೇವಲ ಮೂರ್‍ನಾಲ್ಕು ತಿಂಗಳಲ್ಲಿ ಚುನಾವಣೆಯನ್ನು ಎದುರಿಸುವಂತಹ ಪರಿಸ್ಥಿತಿ ಉದ್ಭವಿಸುತ್ತಿದೆ ಎಂಬುದು ಇವರಿಬ್ಬರಿಗೂ ಗೊತ್ತು. ಇಂತಹ ಸಂದರ್ಭದಲ್ಲಿ ಹೊಸ ಖಾತೆಯನ್ನು ಕೈಗೆತ್ತಿಕೊಂಡು ಅದನ್ನು ಅರ್ಥಮಾಡಿಕೊಳ್ಳಲು ಕನಿಷ್ಟ ಎರಡರಿಂದ ಮೂರು ತಿಂಗಳು ಬೇಕಾಗುತ್ತದೆ. ಈ ಖಾತೆಯನ್ನು ಅರ್ಥಮಾಡಿಕೊಳ್ಳುವ ಜೊತೆಜೊತೆಗೇ 'ಜನರ ಸೇವೆ ಮತ್ತು ವ್ಯಾಪಾರ' ಮಾಡುವಷ್ಟರಲ್ಲಿ ಚುನಾವಣೆ ಘೋಷಣೆಯಾದರೆ ಗತಿಯೇನು? ಎಂಬುದು ಅವರ ಚಿಂತನೆ.

ಗೋವಿಂದ ಕಾರಜೋಳ ಅವರಿಗೆ ಉಪಮುಖ್ಯಮಂತ್ರಿ ಈಶ್ವರಪ್ಪನವರ ಬಳಿಯಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆಯನ್ನು ನೀಡಲು ಶೆಟ್ಟರ್ ನಿರ್ಧರಿಸಿದ್ದಾರಂತೆ. ಇದಕ್ಕೆ ಈಶ್ವರಪ್ಪನವರೂ ಒಪ್ಪಿಗೆ ನೀಡಿದ್ದಾರೆ. ಆದರೆ ಈ ಖಾತೆಯ ರೋಜಗಾರ್ ಯೋಜನೆಯಲ್ಲಿ ನಡೆದ ಅವ್ಯವಹಾರವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂಬ ಕೂಗು ಕೇಳಿಬರುತ್ತಿರುವ ಈ ಸಂದರ್ಭದಲ್ಲಿ ಯಾವ ಮಂತ್ರಿ ತಾನೇ ಈ ಖಾತೆಯನ್ನು ವಹಿಸಿಕೊಳ್ಳಲು ತಯಾರಿದ್ದಾರೆ? ಅಷ್ಟೇ ಅಲ್ಲ, ಚುನಾವಣಾ ದಿನಾಂಕ ಸಮೀಪಿಸುತ್ತಿರುವ ಈ ಸಂದರ್ಭದಲ್ಲಿ ಈ ಗ್ರಾಮೀಣಾಭಿವೃದ್ಧಿ ಖಾತೆಯನ್ನು ನೋಡಿಕೊಂಡು ಇಡೀ ರಾಜ್ಯಾದ್ಯಂತ ಪ್ರವಾಸ ಮಾಡಿದರೆ ತನ್ನ ಕ್ಷೇತ್ರದ ಅಭಿವೃದ್ಧಿಯನ್ನು ನೋಡಿಕೊಳ್ಳಲು ಸಮಯ ಸಾಕಾಗುವುದಿಲ್ಲ ಎಂಬುದು ಕಾರಜೋಳರ ಅಭಿಮತವಂತೆ. ಒಂದುವೇಳೆ ಈ ಖಾತೆಯನ್ನು ವಹಿಸಿಕೊಳ್ಳಲೇಬೇಕಾದರೆ ನನ್ನ ಬಳಿಯಿರುವ ಸಣ್ಣ ನೀರಾವರಿ ಖಾತೆಯನ್ನು ಬೇರೆಯವರಿಗೆ ನೀಡಬಾರದು ಎಂದು ಕಾರಜೋಳ ಕಂಡೀಶನ್ ಹಾಕಿದ್ದಾರಂತೆ. ಹೀಗಾಗಿ ಕಾರಜೋಳರಿಗೆ ಹೆಚ್ಚಿನ ಖಾತೆ ನೀಡುವ ಕೆಲಸ ಇನ್ನಷ್ಟು ಕಗ್ಗಂಟಾಗಿದೆ.

ಇತ್ತ ಸುರೇಶ್ ಕುಮಾರ್ ಬಳಿಯಿರುವ ನಗರಾಭಿವೃದ್ಧಿ ನೀರು ಸರಬರಾಜು ಮತ್ತು ಒಳಚರಂಡಿ ಖಾತೆಯನ್ನು ಶೆಟ್ಟರ್‌ರವರು ಬಾಲಚಂದ್ರ ಜಾರಕೀಹೊಳಿಗೆ ನೀಡಲು ಮನಸ್ಸು ಮಾಡಿದ್ದಾರೆ. ಆದರೆ ಈಗಾಗಲೇ ಕಾವೇರಿ ನಾಲ್ಕನೇ ಹಂತದ 2ನೇ ಘಟ್ಟದ ಕೆಲಸ ಬಹುತೇಕ ಮುಕ್ತಾಯಗೊಂಡಿದೆ, ಇದರ ಉದ್ಘಾಟನೆಯಾದ ನಂತರ ನಾನು ಈ ಖಾತೆಯನ್ನು ಬಿಟ್ಟುಕೊಡುತ್ತೇನೆ ಎಂದು ಸುರೇಶ್ ಕುಮಾರ್ ಮುಖ್ಯಮಂತ್ರಿ ಬಳಿ ಹೇಳಿದ್ದಾರಂತೆ. ಅಂದರೆ, ಅವರು ಕೂಡ ಸಂಪುಟ ಪುನರ್ರಚನೆ ಕೂಡಲೇ ಮಾಡುವುದನ್ನು ಪರೋಕ್ಷವಾಗಿ ವಿರೋಧಿಸಿದಂತಾಗಿದೆ.

ಹೀಗೆ ಸಂಪುಟ ಪುನರ್ರಚನೆಯ ಬಗ್ಗೆ ಅಲ್ಲಲ್ಲಿ ಕೆಲವು ಮಾತುಗಳು, ಅಪಸ್ವರಗಳು ಕೇಳಿಬರುತ್ತಿವೆ. ಕೇವಲ ಎರಡು ಮೂರು ತಿಂಗಳ ಅವಧಿಗೋಸ್ಕರ ತಾವು ಹೊಸ ಖಾತೆಯನ್ನು ವಹಿಸಿಕೊಂಡು ಏನು ಘನಕಾರ್ಯ ತಾನೇ ಮಾಡಲು ಸಾಧ್ಯ? ಹಾಗೆಯೇ ಆ ಖಾತೆಯಲ್ಲಿ ಬಹುತೇಕ ಎಲ್ಲ ಯೋಜನೆಗಳನ್ನು, ಕಾಂಟ್ರಾಕ್ಟ್‌ಗಳನ್ನು ಈಗಿನ ಸಚಿವರು ಮಾಡಿ ಮುಗಿಸಿರುವುದರಿಂದ ತಮಗೆ ಏನಾದರೂ ಉಳಿದಿದೆ? ಎಂದು ಗೋವಿಂದ ಕಾರಜೋಳ ಮತ್ತು ಜಾರಕೀಹೊಳಿ ತಂಡದವರು ವೈರಾಗ್ಯದ ಮಾತುಗಳನ್ನು ಕೂಡ ಆಡುತ್ತಿದ್ದಾರಂತೆ.

ಈ ಎಲ್ಲ ಕಾರಣಗಳಿಂದ ಸಂಪುಟ ಪುನರ್ರಚನೆ ಬಗ್ಗೆ ಯಾರಿಗೂ ಆಸಕ್ತಿಯಿಲ್ಲ. ಒಂದು ವೇಳೆ ಸಂಪುಟ ಪುನರ್ರಚನೆ ಎಂಬ ಕಸರತ್ತು ನಡೆದದ್ದೇ ಆದಲ್ಲಿ ಕೇವಲ ಎರಡು-ಮೂರು ಮಂತ್ರಿಗಳಿಗಷ್ಟೇ ಹೆಚ್ಚುವರಿ ಹುದ್ದೆ ಅಥವಾ ಖಾತೆ ಸಿಗುತ್ತದೆ. ಉಳಿದವರ ಬಹುತೇಕ ಖಾತೆಗಳು ಹಾಗೆಯೇ ಮುಂದುವರಿಯುವ ಸಾಧ್ಯತೆ ಇರುವುದರಿಂದ ಈ ಪುನರ್ರಚನೆ ಬಗ್ಗೆ ಉಳಿದ ಮಂತ್ರಿಗಳಿಗೆ ಒಂದಿಷ್ಟೂ ಆಸಕ್ತಿಯೇ ಇಲ್ಲ.

ಆದರೆ ನಿಗಮಮಂಡಳಿಗಳಲ್ಲಿ ಕಳೆದ ನಾಲ್ಕು ವರ್ಷಗಳಿಂದ ಬೇರೂರಿರುವ ಅಧ್ಯಕ್ಷರನ್ನು ಬದಲಾಯಿಸಿ ಶಾಸಕರುಗಳಿಗೆ ಆ ಮಂಡಳಿಗಳ ಅಧ್ಯಕ್ಷ ಸ್ಥಾನವನ್ನು ನೀಡಬೇಕೆಂಬ ಕೂಗು ಕೂಡ ಎಲ್ಲೆಡೆ ಕೇಳಿಬರುತ್ತಿದೆ. ಕನಿಷ್ಟ ಈ ಚುನಾವಣಾ ವರ್ಷದಲ್ಲಿ ನಿಗಮ ಮಂಡಳಿಗಳ ಅಧ್ಯಕ್ಷ ಸ್ಥಾನ ದೊರಕಿದರೆ ತಮ್ಮ ತಮ್ಮ ಕ್ಷೇತ್ರಗಳಿಗೆ ಮತ್ತು ತಮ್ಮ ತಮ್ಮ ಹಿಂಬಾಲಕರಿಗೆ ಏನಾದರೂ ಸಹಾಯ ಮಾಡಬಹುದು ಎಂಬುದು ಈ ಶಾಸಕರ ಅಂಬೋಣ. ಆದರೆ ಈಗಾಗಲೇ ನಾಲ್ಕು ವರ್ಷಗಳಿಂದ ನಿಗಮ ಮಂಡಳಿಗಳ ಅಧ್ಯಕ್ಷ ಸ್ಥಾನವನ್ನು ವಹಿಸಿರುವ ಯಾವೊಬ್ಬ ಕಾರ್ಯಕರ್ತನೂ ಕೂಡ ತನ್ನ ಸ್ಥಾನವನ್ನು ಬಿಟ್ಟುಕೊಡಲು ತಯಾರಿಲ್ಲ. ಒಂದು ವೇಳೆ ಯಡಿಯೂರಪ್ಪ, ಈಶ್ವರಪ್ಪ ಜಗದೀಶ್ ಶೆಟ್ಟರ್, ಅನಂತ್‌ಕುಮಾರ್ ಮತ್ತು ಸದಾನಂದ ಗೌಡ ಇವರೆಲ್ಲರೂ ಗಟ್ಟಿ ಮನಸ್ಸು ಮಾಡಿ ನಿಗಮಮಂಡಳಿಗಳಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಲು ಹೊರಟರೆ ಆಗ ನಿಜಕ್ಕೂ ಬಿಜೆಪಿ ಪಕ್ಷದಲ್ಲಿ ಒಂದು ರೀತಿಯ ಹೊಸ ಸಂಚಲನ ಉಂಟಾಗುತ್ತದೆ. ಆದರೆ ಈ ನಾಯಕರುಗಳ ನಡುವೆ ಸಾಮರಸ್ಯದ ಕೊರತೆಯಿರುವುದರಿಂದ ಅಷ್ಟೊಂದು ದೊಡ್ಡ ರೀತಿಯಲ್ಲಿ ನಿಗಮಮಂಡಳಿಗಳನ್ನು ಆಪರೇಷನ್ ಮಾಡಲು ಶೆಟ್ಟರ್ ತಯಾರಿಲ್ಲವೆಂಬ ಮಾತಲ್ಲಿ ಕೂಡ ಸತ್ಯವಿದೆ. ಹೀಗಾಗಿ ಸಂಪುಟ ಪುನರ್ರಚನೆಯಾಗಲಿ, ಅಥವಾ ನಿಗಮ ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಿಸುವ ಕೆಲಸವಾಗಲೀ ನಡೆದದ್ದೇ ಆದಲ್ಲಿ ಅದು ನಾಮಕಾವಸ್ಥೆಯಾಗಿರುತ್ತದೆಯೇ ವಿನಃ ಅದರಿಂದ ಪಕ್ಷದ ಕಾರ್ಯಕರ್ತರಿಗಾಗಲಿ, ಪಕ್ಷಕ್ಕಾಗಲೀ ದೊಡ್ಡಮಟ್ಟದ ಲಾಭವಂತೂ ಆಗುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವಂತಹ ವಿಷಯ.


ಹೀಗಾಗಿ 50 ದಿನಗಳ 'ಯಶಸ್ವಿ' ರಾಜ್ಯಭಾರವನ್ನು ನಡೆಸಿರುವ ಮುಖ್ಯಮಂತ್ರಿ ಶೆಟ್ಟರ್ ಈ ಒಂದು ಸಂಪುಟ ಪುನರ್ರಚನೆ ಎಂಬ ಸಣ್ಣ ಅಡೆತಡೆಯನ್ನೂ ಕೂಡ ಸರಾಗವಾಗಿ ದಾಟಬಲ್ಲವರಾಗಿದ್ದಾರೆ.

● ಶೆಣೈ

...ಅಕ್ಕ'ನಿಗೂ ತಾಕಿದ ಚೆಡ್ಡಿ ರಾಜಕೀಯ


...ಪ್ರತಿವರ್ಷ ಅಮೆರಿಕದಲ್ಲಿ ನಡೆಯುವ 'ಅಕ್ಕ' ಸಮ್ಮೇಳನಕ್ಕೆ ಕರ್ನಾಟಕದಿಂದ ...ಹಿಂಡಾಗಿ ಅಧಿಕಾರಿಗಳು, ಪತ್ರಕರ್ತರು, ಸಾಹಿತಿಗಳು ಮತ್ತು ಕಲಾವಿದರು ...ಗುತ್ತಿರುವುದು ನಿಮಗೆಲ್ಲ ಗೊತ್ತಿರಬಹುದು. ಆದರೆ ಈ ಬಾರಿ ಅಮೆರಿಕದ ...ಟದಲ್ಲಿ ನಡೆಯಲಿರುವ ವಿಶ್ವ ಕನ್ನಡ ಸಮ್ಮೇಳನಕ್ಕೆ ಈ ಸರ್ಕಾರದಿಂದ ...ವುದೇ ಪ್ರೋತ್ಸಾಹ ಸಿಗುತ್ತಿಲ್ಲದ ಕಾರಣ ಅದು ಅತ್ಯಂತ ಸಪ್ಪೆ ಮತ್ತು ...ಸ ವಾತಾವರಣದಲ್ಲಿ ನಡೆಯುವಂತ ಪರಿಸ್ಥಿತಿಯಲ್ಲಿದೆ.

'ಅಕ್ಕ' ಸಮ್ಮೇಳನವನ್ನು ಅಮೆರಿಕದಲ್ಲಿರುವ ಅನಿವಾಸಿ ಕನ್ನಡಿಗರು ಆರಂಭಿಸಿದ ...ರ ಪ್ರತಿವರ್ಷ ಪ್ರತಿಯೊಂದು ಸರ್ಕಾರವೂ, ಪ್ರತಿ ಮುಖ್ಯಮಂತ್ರಿಯೂ ...ರಿಕದ ಕನ್ನಡಿಗರ ಕೋಟ್ಯಾಂತರ ರೂಪಾಯಿ ನೀಡಿ ತನ್ನ ಬೆಂಬಲವನ್ನು ...ದ್ದರು. ಆದರೆ ಜಗದೀಶ್ ಶೆಟ್ಟರ್ ನೇತೃತ್ವದ ಬಿಜೆಪಿ ಸರ್ಕಾರ ಈಗ ...ದ ನೆಪ ಮುಂದಿಟ್ಟು ಈ ಬಾರಿ ಅವರಿಗೆ ಯಾವುದೇ ...ದು ಧನಸಹಾಯವನ್ನು ಮಾಡಿಲ್ಲ. ಇದು ಮೇಲ್ನೋಟಕ್ಕೆ ...ಬರುವ ಕಾರಣವಾದರೂ ವಾಸ್ತವವಾಗಿ 'ಅಕ್ಕ' ಸಮ್ಮೇಳನದ ...ದಲ್ಲೂ ಬಿಜೆಪಿಯ ರಾಜಕೀಯ ಸಾಕಷ್ಟು ಕೆಲಸ ಮಾಡಿದೆ. ...ದಲ್ಲೂ ಮುಖ್ಯವಾಗಿ ಯಡಿಯೂರಪ್ಪನವರ ಪಾತ್ರ ಇಲ್ಲೂ ...ವಾಗಿದೆ ಎಂಬುದು ಈಗ ಸಾಬೀತಾಗಿದೆ.



'ಅಕ್ಕ' ಸಮ್ಮೇಳನದ ಮುಖ್ಯ ರೂವಾರಿ ಅಮರ್‌ನಾಥ್ ...ಕೆಲವು ತಿಂಗಳ ಹಿಂದೆ ಕರ್ನಾಟಕಕ್ಕೆ ಬಂದು ಆಗಿನ ...ಮುಖ್ಯಮಂತ್ರಿ, ಸದಾನಂದ ಗೌಡರನ್ನು ಭೇಟಿಯಾಗಿ 'ಅಕ್ಕ' ...ಳನಕ್ಕೆ ಆಹ್ವಾನಿಸಿದ್ದರು. ಅಷ್ಟೇ ಅಲ್ಲ, ಸದಾನಂದ ಗೌಡರೂ ...ಸಮ್ಮೇಳನ ಯಶಸ್ವಿಯಾಗಿ ನಡೆಯುವುದಕ್ಕೆ ತಾನು ಸಂಪೂರ್ಣ ಸಹಕರಿಸುತ್ತೇನೆ ಎಂಬ ಭರವಸೆಯನ್ನು ನೀಡಿದ್ದರು. ಅಮರ್‌ನಾಥ್ ಗೌಡ ಸದಾನಂದ ಗೌಡರನ್ನು ಭೇಟಿಯಾದ ನಂತರ ಬಿಜೆಪಿಯ ಅನಧಿಕೃತ 'ಹೈಕಮಾಂಡ್' ಆಗಿರುವ ಯಡಿಯೂರಪ್ಪನವರನ್ನು ಮಾತನಾಡಿಸುವ ಗೋಜಿಗೆ ಹೋಗಲಿಲ್ಲವಂತೆ.

ಈ ಹಿಂದೆ ಯಡಿಯೂರಪ್ಪ ಅಧಿಕಾರದಲ್ಲಿ ಇಲ್ಲದಿದ್ದಾಗಲೂ 'ಅಕ್ಕ' ಸಮ್ಮೇಳನ ಯಶಸ್ವಿಯಾಗಿ ನಡೆಯುವುದಕ್ಕೆ ಸಾಕಷ್ಟು ಹಣವನ್ನು ನೀಡಿದ್ದರಂತೆ. ಆ ಕಾರಣಕ್ಕಾಗಿಯಾದರೂ ಅಮರ್‌ನಾಥ್ ಗೌಡರು ಯಡಿಯೂರಪ್ಪನವರನ್ನು ಭೇಟಿಯಾಗಬೇಕಿತ್ತು ಎಂಬುದು 'ಅಕ್ಕ' ಸಂಘಟನೆಯ ಅನೇಕ ಸದಸ್ಯರ ಅಭಿಪ್ರಾಯವಾಗಿತ್ತು.



ಇನ್ನೊಂದು ವಿಷಯ ಏನೆಂದರೆ ಅಮರ್‌ನಾಥ್ ಗೌಡರು ಕುಮಾರಸ್ವಾಮಿಯವರ ಅತ್ಯಂತ ಆಪ್ತರು. ಕುಮಾರಸ್ವಾಮಿಯವರು ಹಾಕಿದಗೆರೆಯನ್ನು ದಾಟದ ಅಮರ್‌ನಾಥ್ ಗೌಡರು ಈ ಕಾರಣಕ್ಕಾಗಿಯೇ ಯಡಿಯೂರಪ್ಪನವರನ್ನು ಆಹ್ವಾನಿಸಲಿಲ್ಲ ಎಂಬ ಮಾತುಗಳು ಕೂಡ ಕೇಳಬರಲಾರಂಭಿಸಿತು.

ಯಾವಾಗ ಇಂತಹ ಮಾತು ಯಡ್ಡಿಯ ಕಿವಿಗೆ ಬಿತ್ತೋ ಆವಾಗ ಏನೇ ಆದರೂ ಈ 'ಅಕ್ಕ' ಸಮ್ಮೇಳನವನ್ನು ಮಟಾಶ್ ಮಾಡಲೇಬೇಕು ಎಂದು ಯಡ್ಡಿ ಸ್ಕೆಚ್ ಹಾಕಿದರಂತೆ. "ಗೌಡರೆಲ್ಲ ಸೇರಿ ಸರ್ಕಾರದ ಹಣವನ್ನು ಅಮೆರಿಕದಲ್ಲಿ ಅವರವರ ಬೇಳೆ ಬೇಯಿಸಿಕೊಳ್ಳಲು ಉಪಯೋಗಿಸಿಕೊಳ್ಳುತ್ತಿದ್ದಾರೆ. ಈ ಕಾರಣಕ್ಕೋಸ್ಕರ ಈ 'ಅಕ್ಕ' ಸಮ್ಮೇಳನಕ್ಕೆ ಸರ್ಕಾರದಿಂದ ಒಂದು ಪೈಸೆಯನ್ನೂ ಕೊಡಬಾರದು" ಎಂದು ಯಡ್ಡಿ ಹೊಸ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್‌ಗೆ ಸೂಚನೆ ನೀಡಿದರಂತೆ. ಯಡ್ಡಿ ಹಾಕಿದ ಗೆರೆಯನ್ನು ದಾಟದ ಶೆಟ್ಟರ್ ಬರದ ನೆಪವನ್ನು ಮುಂದಿಟ್ಟು 'ಅಕ್ಕ' ಸಮ್ಮೇಳನಕ್ಕೆ ಈ ಬಾರಿ ಸರ್ಕಾರದ ಖಜಾನೆಯಿಂದ ನಯಾಪೈಸೆ ಕೊಡಲು ಸಾಧ್ಯವಿಲ್ಲ ಎಂದು ಘೋಷಿಸಿಯೇಬಿಟ್ಟರು.

ಈ ಮಧ್ಯೆ ಅಮೆರಿಕದಲ್ಲೂ ಜಾತಿರಾಜಕೀಯ ಉಲ್ಬಣಗೊಂಡಿದೆ. ಎರಡು ವರ್ಷಗಳ ಹಿಂದೆ ಈ 'ಅಕ್ಕ' ಸಂಘಟನೆ ಎರಡು ಹೋಳಾಯಿತು. 'ಅಕ್ಕ'ದಿಂದ ಹೊರಬಂದ ಕೆಲವು ಅನಿವಾಸಿ ಕನ್ನಡಿಗರು 'ನಾವಿಕ' ಎಂಬ ಹೊಸ ಸಂಸ್ಥೆಯನ್ನು ಆರಂಭಿಸಿದ್ದಾರೆ. ಈ 'ನಾವಿಕ'ದವರೂ ಕೂಡ ಎರಡು ವರ್ಷಗಳಿಂದ ವಿಶ್ವಕನ್ನಡ ಸಮ್ಮೇಳನವನ್ನು ಅಮೆರಿಕದಲ್ಲಿ ನಡೆಸುತ್ತಿದ್ದಾರೆ. ತಮಾಷೆಯೆಂದರೆ 'ಅಕ್ಕ'ದಲ್ಲಿ ಗೌಡರುಗಳೇ ಪದಾಧಿಕಾರಿಗಳಾಗಿ ವಿಜೃಂಭಿಸುತ್ತಿದ್ದರೆ, ಇತ್ತ 'ನಾವಿಕ' ಸಂಘಟನೆಯಲ್ಲಿ ಲಿಂಗಾಯತರದ್ದೇ ಪ್ರಾಬಲ್ಯ. ಹೀಗಾಗಿ ಮುಂದಿನ ವರ್ಷದ 'ನಾವಿಕ'ದವರು ನಡೆಸಲಿರುವ ವಿಶ್ವಕನ್ನಡ ಸಮ್ಮೇಳನವನ್ನು ಯಡಿಯೂರಪ್ಪ ಮತ್ತು ಜಗದೀಶ್ ಶೆಟ್ಟರ್ ಸಂಪೂರ್ಣವಾಗಿ ಬೆಂಬಲಿಸುವ ಸಾಧ್ಯತೆಯೂ ಇದೆ ಎಂಬ ಮಾತು ಕೇಳಿಬರುತ್ತಿದೆ.

ಈ ಬಾರಿಯ 'ಅಕ್ಕ' ಸಮ್ಮೇಳನಕ್ಕೆ ಹೆಚ್ಚಿನ ಕಲಾವಿದರು, ಸಾಹಿತಿಗಳು ಹೋಗಿಲ್ಲ, ಶಾಸಕರಂತೂ ಸಂಪೂರ್ಣವಾಗಿ 'ಅಕ್ಕ'ನಿಗೆ ಬಹಿಷ್ಕಾರ ಹಾಕಿದ್ದಾರೆ. ಮಾಜಿ ಐಎಎಸ್ ಅಧಿಕಾರಿ ವಿಠ್ಠಲ್ ಮೂರ್ತಿ ಮತ್ತು ರಂಗಕರ್ಮಿ ಕಪ್ಪಣ್ಣರವರ ನೇತೃತ್ವದಲ್ಲಿ ಬೆರಳೆಣಿಕೆಯಷ್ಟು ಜನ 'ಅಕ್ಕ' ಸಮ್ಮೇಳನಕ್ಕೆ ಅಮೆರಿಕಕ್ಕೆ ಹಾರಿ ಹೋಗಿದ್ದಾರೆ. ಅಂತೂ-ಇಂತೂ ಕರ್ನಾಟಕದ ರಾಜಕಾರಣಿಗಳ ಒಳಜಗಳದಿಂದಾಗಿ ಅಮೆರಿಕದಲ್ಲಿರುವ 'ಅಕ್ಕ' ಕೂಡ ಸೊರಗಿಹೋಗಿದ್ದಾಳೆ.

● ವರದಿಗಾರ


ರವಿ ಪೂಜಾರಿಯ ಬಂಟ ಕಲಿ ಯೋಗೇಶ್ ಮೋಸ್ಟ್ ವಾಂಟೆಡ್ ಕ್ರಿಮಿನಲ್!



ದೇಶದ ಮೋಸ್ಟ್ ವಾಂಟೆಡ್ ಕ್ರಿಮಿನಲ್ ರವಿ ಪೂಜಾರಿಯನ್ನು ಹೇಗೆ ಮುಂಬಯಿ ಪೊಲೀಸರು ದೂರದ ದುಬೈ, ಆಸ್ಟ್ರೇಲಿಯಾ, ಮಾರಿಷಸ್‌ಗಳ ಮೇಲೆ ಕಣ್ಣಿಟ್ಟು ಬೇಟೆಗಿಳಿದಿದ್ದಾರೋ ಹಾಗೇ ಬೆಂಗಳೂರು ಪೊಲೀಸರಿಗೂ ಆತನ ಬಲಗೈ ಬಂಟನೊಬ್ಬನ ಮೇಲೆ ಕಣ್ಣಿದೆ.

ಆತನ ಹೆಸರು ಕಲಿ ಯೋಗೇಶ!

ವಯಸ್ಸು ಸರಿಸುಮಾರು 37 ಇರಬೇಕು. ಗೌರವರ್ಣದ ಸದೃಢ ಚೂಪು ಕಂಗಳ ಕರಾಳಮುಖ ಚರ್ಯೆಯ ಕಲಿ ಯೋಗೇಶನೇನಾದರೂ ಸಿಸಿಬಿಯ ಟಫ್ ಕಾಪ್ ಎಸಿಪಿ ಚಲಪತಿಯವರ ಕೈಗೆ ಸಿಕ್ಕನೆಂದರೆ ಒಂದು ಎನ್‌ಕೌಂಟರ್ ಅಂತೂ ಶತಸಿದ್ಧ.


ನೈಸ್ ಖೇಣಿ

ಆ ಮಟ್ಟಿಗೆ ಬೆಂಗಳೂರು ಪೊಲೀಸರನ್ನಷ್ಟೇ ಅಲ್ಲ; ಮಂಗಳೂರು, ಚೆನ್ನೈ ಮತ್ತು ಮುಂಬಯಿ ಪೊಲೀಸರನ್ನು ಬಿಡದೆ ಪ್ರತಿನಿತ್ಯ ಒಂದಲ್ಲ ಒಂದು ತಲೆನೋವು ತಂದಿಡುತ್ತಿರುವ ಕಲಿ ಯೋಗೇಶ ಅಲಿಯಾಸ್ ಕಳಿ ಯೋಗೇಶನೇ ಸದ್ಯ ಕರ್ನಾಟಕದ ಪೊಲೀಸರ ಮಟ್ಟಿಗೆ ಮೋಸ್ಟ್ ವಾಂಟೆಡ್ ಕ್ರಿಮಿನಲ್. ಎಲ್ಲೋ ದುಬೈನಲ್ಲಿ ಅವಿತು ಕೂತ ಹೆಬ್ಬೆಟ್ಟು ಮಂಜ ಪೊಲೀಸರ ಕಣ್ಣುತಪ್ಪಿಸಿ ಪರಾರಿಯಾಗಿದ್ದಾನೆ ಎಂಬುದನ್ನು ಬಿಟ್ಟರೆ ಬೆಂಗಳೂರಿನಲ್ಲಾಗಲೀ, ಶಿವಮೊಗ್ಗದಲ್ಲಾಗಲೀ, ಆತನ ಚಟುವಟಿಕೆ ಕಮ್ಮಿಯೆ. ಹಾಗೇ ನೆಲಮಂಗಲದ ಹಂತಕರಾದ ಬೆತ್ತನಗೆರೆ ಸೀನ, ಬಂಡೆ ಮಂಜ ಬೆಮೆಲ್ ಕೃಷ್ಣಪ್ಪರನ್ನು ಕೊಂದು ತಲೆಮರೆಸಿ ಕೊಂಡಿದ್ದಾರೆಂಬುದನ್ನು ಬಿಟ್ಟರೆ ಪ್ರತಿನಿತ್ಯ ಪೊಲೀಸರ ಪಾಲಿಗೆ ತಲೆಬೇನೆಯಿಲ್ಲ.

ಮಂತ್ರಿ ಮಾಲ್ ಶೂಟೌಟ್

ಆದರೆ ಕಲಿ ಯೋಗೇಶ ಹಾಗಲ್ಲ, ಆತ ಕರ್ನಾಟಕದ ಮಟ್ಟಿಗೆ ಅಂತಾರಾಷ್ಟ್ರೀಯ ಪಾತಕಿ ರವಿಪೂಜಾರಿಯ ಅಪರಾವತಾರ. ಒಂದೆಡೆ ಮಂಗಳೂರು ಪೊಲೀಸರು, ಮತ್ತೊಂದೆಡೆ ಬೆಂಗಳೂರಿನ ಸಿಸಿಬಿಯವರು, ಮಗದೊಂದೆಡೆ ಉಡುಪಿಯ ಕ್ರೈಮ್ ಬ್ರಾಂಚ್, ಇನ್ನೊಂದೆಡೆ ಶಿವಮೊಗ್ಗದ ವಿಶೇಷ ತಂಡ-ಹೀಗೆ ಏಕಕಾಲಕ್ಕೆ ಹತ್ತಾರು ಪೊಲೀಸ್ ತಂಡಗಳ ನಿದ್ದೆಗೆಡಿಸಿರುವ ಕಳಿ ಯೋಗೇಶ ಸದ್ಯ ಎಲ್ಲಿದ್ದಾನೆ. ಯಾವತ್ತು ಯಾವ ಶ್ರೀಮಂತ ಉದ್ಯಮಿಯ ರಾಶಿಗೆ ಕಾಲಿಡುತ್ತಾನೆ. ಅದಕ್ಕೆಂದು ಯಾವ ಸಂದಿಗೊಂದಿಯಲ್ಲಿ ಪುಡಿ ಕ್ರಿಮಿನಲ್‌ಗಳನ್ನು ರೆಡಿ ಮಾಡುತ್ತಾನೆ ಮತ್ತು ಯಾವ ಕ್ಷಣದಲ್ಲಿ ಯಾವ ರೊಕ್ಕಸ್ಥನ ತಲೆ ತೆಗೆಯಲಿದ್ದಾನೆ ಎಂಬುದೇ ಗೊತ್ತಾಗುವುದಿಲ್ಲ.

ಅದು ರವಿ ಪೂಜಾರಿಯದ್ದೇ ಸುಲಿಗೆಯ ಶೈಲಿ. ಮೊದಲು ಮಂತ್ರಿ ಬಿಲ್ಡರ್ಸ್ ಅಡ್ಡೆಯ ಮೇಲೆ ಅರಸಯ್ಯನ ಶಿಷ್ಯ ಗುಂಡ ಅಲಿಯಾಸ್ ಶಿವಕುಮಾರ್‌ನನ್ನು ಛೂಬಿಟ್ಟು ಫೈರ್ ಮಾಡಿಸಿದ. ಅದಕ್ಕೂ ಮುನ್ನ ಜಯನಗರದ ಶಬನಂ ಡೆವಲಪರ್ಸ್ ಅಡ್ಡೆಗೆ ಶೂಟರುಗಳನ್ನು ನುಗ್ಗಿಸಿ ಅಲ್ಲಿನ ಅಮಾಯಕ ಸಿಬ್ಬಂದಿಯ ಮೇಲೆ ಗುಂಡು ಹಾರಿಸಿ ಕೊಲ್ಲಿಸಿದ್ದ. ಅಲ್ಲಿಗೆ ಅರ್ಧ ಬೆಂಗಳೂರಿನ ಬಿಲ್ಡರುಗಳು, ರಿಯಲ್ ಎಸ್ಟೇಟ್ ರೊಕ್ಕಸ್ಥರು ಮತ್ತು ಚಿಕ್ಕಪೇಟೆಯ ಮಾರ್ವಾಡಿಗಳಿಗೆ ಮುಂಬಯಿ ಡಾನ್ ರವಿಪೂಜಾರಿಯ ಭೀತಿ ತಟ್ಟಿತ್ತು, ಆಗಿನ್ನೂ ಯೋಗೇಶನ ಹೆಸರಾಗಲಿ, ಆತನ ಪರಮಾಪ್ತ ನಿಖಿಲ್ ಶೆಟ್ಟಿ ಎಂಬ ಮತ್ತೊಬ್ಬ ರವಿ ಪೂಜಾರಿಯ ಬಂಟನ ಹೆಸರಾಗಲಿ ಹೊರಜಗತ್ತಿಗೆ ಗೊತ್ತೇ ಇರಲಿಲ್ಲ.

ಯಾವತ್ತು ಶಬನಮ್ ಡೆವಲಪರ್ಸ್ ಅಡ್ಡೆಯಲ್ಲಿ ರಕ್ತದೋಕುಳಿ ನಡೆಯಿತೋ ಅದರ ಮಾಲೀಕನಾಗಿದ್ದ ಗುರಪ್ಪನ ಪಾಳ್ಯದ ಕಾಂಗ್ರೆಸ್ ಕೌನ್ಸಿಲರ್ ಸಮಿವುಲ್ಲ ಥರಗುಟ್ಟಿ ಹೋದ. ಹಾಗಂತ ಆತ ರವಿಪೂಜಾರಿಗೆ ಮಣೆ ಹಾಕಲಿಲ್ಲ, ಅಷ್ಟಾಗ್ಯೂ ರವಿ ಪೂಜಾರಿ ಬಿಡಬೇಕಲ್ಲ, ಗುರಪ್ಪನ ಪಾಳ್ಯದ ನಡುರಸ್ತೆಯಲ್ಲೇ ಕೌನ್ಸಿಲರ್ ಸಮಿವುಲ್ಲಾನನ್ನು ಅಟ್ಟಾಡಿಸಿ ಫೈರ್ ಮಾಡಿಸಿಬಿಟ್ಟ. ಹೀಗೆ ಪೂಜಾರಿಯ ಆದೇಶದ ಮೇರೆಗೆ ನಡುರಸ್ತೆಯಲ್ಲೇ ಶಬನಮ್ ಬಿಲ್ಡರ್ಸ್ ಧಣಿ ಸಮೀವುಲ್ಲಾನ ಮೇಲೆ ಗುಂಡುಹಾರಿಸಿದ್ದು ರವಿ ಪೂಜಾರಿಯ ಮತ್ತೊಬ್ಬ ಏಜೆಂಟ್ ಕವಿರಾಜ್. ನೇಪಾಳಿ ಮೂಲದ ಕವಿರಾಜ್ ಜೊತೆಗೆ ಆವತ್ತು ಶೂಟೌಟ್‌ನಲ್ಲಿ ಕೈಜೋಡಿಸಿದ್ದ ಮತ್ತೊಬ್ಬ ಕ್ರಿಮಿನಲ್ ಸರಣಿ ಹಂತಕ ಶ್ಯಾಮ್!

ಡಬ್ಬಲ್ ಮರ್ಡರ್ ಗುಂಡ

ಕೋಲಾರ ಜೈಲಿಂದ ಎಸ್ಕೇಪಾಗಿ ರವಿಪೂಜಾರಿ ಪರ ರೊಕ್ಕಸ್ಥರ ಬೇಟೆಗೆ ನಿಂತಿದ್ದ ಕವಿರಾಜ್ ಮತ್ತು ಶ್ಯಾಮ್‌ರನ್ನು ಚಾಲಾಕಿ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್ ವಿರೋಚಿತವಾಗೇ ಹಿಡಿದು ತಂದರಾದರೂ ಇಂಥದೊಂದು ಕಾರ್ಯಾಚರಣೆಯ ಹಿಂದಿರುವುದು ರವಿ ಪೂಜಾರಿಯ ಲೋಕಲ್ ಏಜೆಂಟ್ ಕಳಿ ಯೋಗೇಶ ಎಂಬುದು ಮಾತ್ರ ಬೆಳಕಿಗೆ ಬರಲೇ ಇಲ್ಲ, ಬಹುಶಃ ಭೀತಿಗೆ ಬಿದ್ದೇ ಕೌನ್ಸಿಲರ್ ಸಮೀವುಲ್ಲಾ ರವಿ ಪೂಜಾರಿಗೆ ಕಪ್ಪ ಸಲ್ಲಿಸಿರಬೇಕು. ಹಾಗೆ ಸಮೀವುಲ್ಲನಿಂದ ಪ್ರೊಟೆಕ್ಷನ್ ಮನಿ ಕೊಂಡೊಯ್ದದ್ದು ಕೂಡ ಯೋಗೇಶನೇ ಎಂಬುದು ಪೊಲೀಸರ ಗುಮಾನಿ.

ಮೊದಲ ಬಾರಿಗೆ ಕಳಿ ಯೋಗೇಶ ನೆಂಬಾತ ರವಿಪೂಜಾರಿಯ ಕಿಂಕರನಾಗಿ ಬೆಂಗಳೂರು-ಮಂಗಳೂರುಗಳಲ್ಲಿ ಕಾರ್ಯಾಚರಣೆಗಿಳಿದಿದ್ದಾನೆಂದು ಪೊಲೀಸರಿಗೆ ಗೊತ್ತಾಗಿದ್ದೇ ಅರಸಯ್ಯನ ಶಿಷ್ಯ ಗುಂಡನ ಮೂಲಕ. ಸುಬ್ರಹ್ಮಣ್ಯಪುರ ವ್ಯಾಪ್ತಿಯಲ್ಲಿ ಡಬ್ಬಲ್ ಮರ್ಡರ್ ಮಾಡಿ ಜೈಲು ಪಾಲಾಗಿದ್ದ ಗುಂಡ ಅಲಿಯಾಸ್ ಶಿವ ಕುಮಾರ್ ಮೂಲತಃ ಚನ್ನಪಟ್ಟಣದವನು. ಗುಲ್ಬರ್ಗಾ ಜೈಲಲ್ಲಿದ್ದಾಗಲೇ ತನ್ನ ಮೊಬೈಲ್ ಮೂಲಕ ಕಳಿ ಯೋಗೇಶನ ಲಿಂಕಿಗೆ ಬಂದಿದ್ದ ಗುಂಡ ಅಲ್ಲಿಂದಲೇ ಆಸ್ಟ್ರೇಲಿಯಾದಲ್ಲಿದ್ದ ರವಿ ಪೂಜಾರಿಯ ಜೊತೆ ಸಂಪರ್ಕ ಸಾಧಿಸಿದ್ದ. ಮಂತ್ರಿ ಮಾಲ್ ಮೇಲೆ ನಡೆದ ಫೈರಿಂಗ್‌ನಲ್ಲಿ ಸಿಸಿಬಿ ಪೊಲೀಸರಿಗೆ ಸಿಕ್ಕಬಿದ್ದು ಇನ್ನೇನು ಎನ್‌ಕೌಂಟರ್ ನಡೆದೇ ಬಿಡುತ್ತದೆ ಎನ್ನುವಾಗಲೇ ಗುಂಡ ರವಿಪೂಜಾರಿಯ ಲೋಕಲ್ ಏಜೆಂಟ್ ಕಳಿ ಯೋಗೇಶನ ಬಗ್ಗೆ ಬಾಯಿಬಿಟ್ಟಿದ್ದ!

ಇಷ್ಟಾಗಿದ್ದೇ ಸಿಸಿಬಿಯ ಎಸಿಪಿ ಹಾದಿಮನಿ, ಇನ್ಸ್‌ಪೆಕ್ಟರ್‌ಗಳಾದ ಬಾಳೇಗೌಡ, ಅಶೋಕನ್ ತಂಡಗಳು ಕಳಿ ಯೋಗೇಶನ ಬೆನ್ನಿಗೆ ಬಿದ್ದವು. ಮೂಲತಃ ದಕ್ಷಿಣ ಕನ್ನಡದ ಬಂಟ್ವಾಳ ಮೂಲದ ಯೋಗೇಶ್ ಬಂಗೇರಾ ಅಲಿಯಾಸ್ ಕಳಿ ಯೋಗೇಶನಿಗೆ ರವಿ ಪೂಜಾರಿಯ ಸಂಪರ್ಕ ಸಿಕ್ಕಿದ್ದು ಯಡವಸಂತ ಮತ್ತು ನಿಖಿಲ್ ಶೆಟ್ಟಿಯ ಮೂಲಕ. ಕೆಲಕಾಲ ಮುಂಬಯಿಯಲ್ಲಿದ್ದ ಯೋಗೇಶನಿಗೆ ಅಲ್ಲೇ ಇದ್ದ ನಿಖಿಲ್‌ಶೆಟ್ಟಿಯ ಮೂಲಕ ಆಸ್ಟ್ರೇಲಿಯಾದಲ್ಲಿದ್ದ ರವಿಪೂಜಾರಿಯ ಪರಿಚಯವಾಗಿತ್ತು, ಮಹೇಶ್ ಭಟ್ ಕಚೇರಿಯ ಶೂಟೌಟ್‌ನಲ್ಲೂ ಯೋಗೇಶನ ಪಾತ್ರವಿತ್ತು.


ಎಸ್.ಕೆ.ಉಮೇಶ್

ಮುಂಬೈ ಪೊಲೀಸರು ಸಮಸ್ತ ರವಿಪೂಜಾರಿಯ ನೆಟ್‌ವರ್ಕಿನ ಮೇಲೆ ಯುದ್ಧ ಸಾರಿದ್ದೇ ತಡ, ಯೋಗೇಶ ಬೆಂಗಳೂರಿಗೆ ಬಂದವನು ಕೆಲಕಾಲ ಉಡುಪಿ, ಮಂಗಳೂರಿನಲ್ಲೂ ಇದ್ದ, ಅಲ್ಲಿ ಜೊತೆಯಾದವನು ಮುಂಬಯಿ ರಿಟರ್ನ್ಡ್ ಪಾತಕಿ ಮನೀಶ್ ಶೆಟ್ಟಿ. ಯೋಗೇಶನ ತಮ್ಮ ಗಣೇಶ್ ಬಂಗೇರಾ, ಮತ್ತೊಬ್ಬ ತಮ್ಮ ಸುನೀಲ್ ಬಂಗೇರಾ, ನಿಖಿಲ್ ಶೆಟ್ಟಿ, ಯಡವಸಂತ, ಹರೀಶ್ ತೋಳಾರ್, ಕೇಶವ್ ಭಟ್ಟ, ರಾಧಾಕೃಷ್ಣ ಶೆಟ್ಟಿ, ಹರೀಶ, ಲೋಕೇಶ್ ಕುಮಾರ ಇತ್ಯಾದಿ ಖತರ್‌ನಾಕ್ ಸುಲಿಗೆಕೋರರ ಹಿಂಡೇ ಸಜ್ಜಾಯಿತು.

ಉಡುಪಿಯ ಇಬ್ಬರು ಶ್ರೀಮಂತರು ಮತ್ತು ಮಂಗಳೂರಿನ ಮೂವರು ರಿಯಲ್ ಎಸ್ಟೇಟ್ ಧಣಿಗಳ ಮೊಬೈಲ್ ನಂಬರನ್ನು ಸಂಗ್ರಹಿಸಿ ರವಿ ಪೂಜಾರಿಗೆ ಕೊಟ್ಟರು. ಒಂದರ ಮೇಲೊಂದಾಗಿ ರವಿ ಪೂಜಾರಿಯ ಬೆದರಿಕೆ ಕರೆಗಳು ಶುರುವಾದವು. ಕೆಲವರು ಸದ್ದಿಲ್ಲದೆ ಅಷ್ಟಿಷ್ಟು ಲಕ್ಷ ಕೊಟ್ಟು ಸುಮ್ಮನಾದರೆ ಇಬ್ಬರು ಪ್ರಮುಖ ರಿಯಲ್ ಎಸ್ಟೇಟ್ ಧಣಿಗಳು ಪೊಲೀಸರ ಮೊರೆ ಹೊಕ್ಕರು.

ನೈಸ್ ಖೇಣಿಗೆ...!

ಅದೇ ಹೊತ್ತಿಗೆ ಕಳಿ ಯೋಗೇಶ, ಮನೀಶ್ ಶೆಟ್ಟಿ, ನಿಖಿಲ್ ಶೆಟ್ಟಿ, ತಮ್ಮ ಯೋಗೇಶ ಬಂಗೇರಾ ಸೇರಿಕೊಂಡು ಬೆಂಗಳೂರಿಗೆ ಲಗ್ಗೆಯಿಟ್ಟರು. ಹಿಂದೆ ಶಬನಮ್ ಬಿಲ್ಡರ್ಸ್ ಮತ್ತು ಮಂತ್ರಿ ಬಿಲ್ಡರ್‌ಗಳಿಗೆ ಹೇಗೆ ರವಿ ಪೂಜಾರಿ ಕಾಟ ಕೊಟ್ಟಿದ್ದನೋ ಅದೇರೀತಿ ಬ್ರಿಗೇಡ್ ದೊರೆ ಜೈಶಂಕರ್ ಮತ್ತು ನೈಸ್ ಖೇಣಿಗೂ ರವಿ ಪೂಜಾರಿಯ ಥ್ರೆಟ್ ಕರೆಗಳು ಶುರುವಾದವು. ಮೊದಲೇ ಬಿಜೆಪಿ ಸರ್ಕಾರ. ಬಿಲ್ಡರ್ ಜೈಶಂಕರ್ ನೇರವಾಗಿ ಮಾಜಿ ಮುಖ್ಯಮಂತ್ರಿ ಯಡ್ಡಿ ಮತ್ತು ಶೋಭಾ ಕರಂದ್ಲಾಜೆಗೆ ವ್ಯವಹಾರಿಕ ಪಾಲುದಾರನಾದರೆ ಖೇಣಿ ಬಿಜೆಪಿ ಸರ್ಕಾರದ ಆಧಾರಸ್ತಂಭಗಳ ಪೈಕಿ ಪ್ರಮುಖ.


ಶಬನಮ್ ಧಣಿ ಸಮೀವುಲ್ಲಾ

ನೈಸ್ ರಸ್ತೆಗೆ ಹೊಂದಿಕೊಂಡಂತೆ ಕದಿರೇನಹಳ್ಳಿ ಮತ್ತು ಕೊಮ್ಮಘಟ್ಟದಲ್ಲಿ ಖೇಣಿ ಶುರುಹಚ್ಚಿಕೊಂಡ ಟೌನ್‌ಷಿಪ್‌ಗಳ ಭೂಮಿಗೆ ಸಂಬಂಧಪಟ್ಟಂತೆ ರೈತರ ನಿಯೋಗದ ನೆಪದಲ್ಲಿ ಕಳಿ ಯೋಗೇಶನ ತಂಡ ಖೇಣಿಯ ಖಾಸಗಿ ಮೊಬೈಲ್ ನಂಬರನ್ನು ಸಂಗ್ರಹಿಸಿತ್ತು, ಇದಾಗಿ ವಾರಕ್ಕೇ ರವಿ ಪೂಜಾರಿಯ ಕರೆ ಬಂತು. ಮೊದಮೊದಲು ಆಸ್ಟ್ರೇಲಿಯದಿಂದ ಯಾರೋ ದೇವಸ್ಥಾನದ ಪೂಜಾರಿಯಿರಬೇಕು ಎಂದುಕೊಂಡ ಖೇಣಿಗೆ ಅತ್ತಲಿಂದ ಪೂಜಾರಿ ಸಾಲೇ ತೇರಾ ಭೇಜಾ ಉಡಾನೇಕಾ...? ಎಂದು ಗರ್ಜಿಸಿದ್ದೇ ಖೇಣಿ ಬಾಯಿ ಒಣಗಿ ಥರಗುಡತೊಡಗಿದ್ದ. ಆದರೂ ಸಾವರಿಸಿಕೊಂಡು 'ದುಡ್ಡು ಬೇಕಾ ಒಳ್ಳೇ ರೀತೀಲಿ ಕೇಳು ಆದರೆ ಧಮಕಿ ಗಿಮಕಿ ಹಾಕ್ದೆ ಅಂದ್ರೆ ನಯಾ ಪೈಸೆನೂ ಹುಟ್ಟಲ್ಲ..." ಎಂದು ಚೌಕಾಶಿಗಿಳಿದ. ಅಲ್ಲಿಗೆ ಖೇಣಿಯನ್ನು ಬಗ್ಗಿಸಬಹುದೆಂಬುದು ರವಿಪೂಜಾರಿಗೆ ಅರ್ಥವಾಗಿತ್ತು, ಬಹುಶಃ ಖೇಣಿಯಿಂದ ರವಿ ಪೂಜಾರಿ ದೊಡ್ಡ ಮೊತ್ತ ಕಿತ್ತಿರಲಿಕ್ಕೂ ಸಾಕು.


ಸೆರೆಸಿಕ್ಕ ಕಲಿ ಯೋಗೇಶನ ಬಂಟರು

ಯಾವತ್ತು ಬಿಜೆಪಿಯ ಆರ್ಥಿಕ ಶಕ್ತಿಮೂಲಗಳಾದ ಬ್ರಿಗೇಡ್ ಗ್ರೂಪ್ ಮತ್ತು ನೈಸ್ ಖೇಣಿಗೆ ರವಿ ಪೂಜಾರಿಯ ಬೆದರಿಕೆ ಕರೆ ಶುರುವಾಯಿತೋ, ಇದು ಸರ್ಕಾರಕ್ಕೆ ಸವಾಲಾಗಿ ಪರಿಣಮಿಸಿದೆ. ಬೆಂಗಳೂರಿನ ಘಟಾನುಘಟಿ ಬಿಲ್ಡರುಗಳ ಖಾಸಗಿ ಮೊಬೈಲು ನಂಬರನ್ನು ಪತ್ತೆಹಚ್ಚಿ ಅದನ್ನು ರವಿ ಪೂಜಾರಿಗೆ ಮುಟ್ಟಿಸುವುದು ಮತ್ತು ಕಾಸು ಬಿಚ್ಚದವರ ವಿರುದ್ಧ ದಾಳಿಗೆ ನಿಲ್ಲಬಲ್ಲ ಅಸಾಧ್ಯ ಗ್ಯಾಂಗೇ ಬೆಂಗಳೂರಿನಲ್ಲಿ ಸಜ್ಜಾಗಿದೆಯೆಂಬ ಮಾಹಿತಿ ಪೊಲೀಸರಿಗಿತ್ತು.

ಮನೀಶ್‌ಶೆಟ್ಟಿ ಸಿಕ್ಕಿಬಿದ್ದ

ಆಗ ಸಿಸಿಬಿಗೆ ಎಸಿಪಿಯಾಗಿದ್ದದ್ದು ನ್ಯಾಮಗೌಡ. 2011ರ ಮಾರ್ಚ್ 25ರಂದು ಏಕಾಏಕಿ ದಕ್ಷಿಣ ಕನ್ನಡದ ಬಂಟ್ವಾಳಕ್ಕೆ ನುಗ್ಗಿದ ಸಿಸಿಬಿ ತಂಡ ಕಳಿ ಯೋಗೇಶ ಮತ್ತು ನಿಖಿಲ್ ಶೆಟ್ಟಿಗೆ ಬಲೆ ಬೀಸಿತ್ತಾದರೂ ಸಿಕ್ಕಿಬಿದ್ದದ್ದು ಮನೀಶ್ ಶೆಟ್ಟಿ ಮತ್ತು ಲೋಕೇಶ್‌ಕುಮಾರ್. ರವಿಪೂಜಾರಿಯ ಮತ್ತೊಬ್ಬ ಬಂಟ ಯಡ ವಸಂತ, ಹರೀಶ ಮತ್ತು ವೇಣು ಎಸ್ಕೇಪಾಗಿದ್ದರು. ಇದಾಗಿ ಮೂರನೇ ದಿನಕ್ಕೆ ಪರಪ್ಪನ ಅಗ್ರಹಾರ ಜೈಲಿಗೆ ಬಂದಿದ್ದ ಮನೀಶ್‌ಶೆಟ್ಟಿಯನ್ನು ಕಾಣಲು ಬಂದಿದ್ದ ಕಳಿ ಯೋಗೇಶನ ತಮ್ಮ ಗಣೇಶ್ ಬಂಗೇರಾ ಕೂಡ ಸಿಸಿಬಿ ತಂಡಕ್ಕೆ ಸಿಕ್ಕಿಬಿದ್ದ. ಹಾಗಿದ್ದೂ ಕಳಿಯೋಗೆ... ಹಾವಳಿ ನಿಲ್ಲಲಿಲ್ಲ, ಈ ಬಾರಿ ಹೆಬ್ಬಾಳದಲ್ಲಿ ... ಮಾಡಿಕೊಂಡಿದ್ದ ಯೋಗೇಶನ ಶಿಷ್ಯರಾದ ಕೇಶವ ಭ... ರಾಘವೇಂದ್ರ ಮತ್ತು ನರಸಿಂಹಮೂರ್ತಿಯನ್ನು ಎ... ನ್ಯಾಮೇಗೌಡರ ತಂಡ ಹಿಡಿದುಹಾಕಿ...

ಮೊದಲು ಹಾದಿಮನಿ ಆನಂ... ನ್ಯಾಮೇಗೌಡ ಸಿಸಿಬಿಯಲ್ಲಿದ್ದು ಪೂಜಾ... ಯ ಹಂತಕ ಪಡೆಯ ಬೆನ್ನಿಗೆ ಬಿದ್ದಿದ್ದ... ಆ ಜಾಗಕ್ಕೆ ಬಂದ ಚಲಪತಿ ಮುಂದು... ಸಿದರು. ಬಂದ ಹೊಸದರಲ್ಲೇ ಅಂ... 2012ರ ಫೆಬ್ರವರಿ 4ರಂದು ... ಯೋಗೇಶನ ಸಹಚರರಾದ ಹರಿ... ರಾಧಾಕೃಷ್ಣ ಶೆಟ್ಟಿ ಮತ್ತು ಸುನೀ... ಬಂಗೇರನ ಜೊತೆ ರಮೇಶ್ ಮ... ಕೇಶವ್‌ಭಟ್ ಕೂಡ ಸಿಸಿಬಿ ಬಲೆ... ಬಿದ್ದರು. ಅವರು ಬಾಯಿಬಿಟ್ಟ ಮಾಹಿ... ಪ್ರಕಾರ ಜೈಲಲಿದ್ದ ಮನೀಶ್ ಶೆಟ್ಟಿಯ... ಕೆಲಬಾರಿ ತನ್ನ ಮೊಬೈಲಿನಿ... ಬಿಲ್ಡರ್‌ಗಳಿಗೆ ಧಮಕಿ ಹಾಕುತ್ತಿದ್ದ. ಮನೀಶ್‌ಶೆಟ್ಟಿಯ... ಮುಂದೆ ಬಿಟ್ಟು ಬೆಂಗಳೂರಿನ ಬಿಲ್ಡರುಗಳಿಂದ ಹ... ಕೀಳುತ್ತಿರುವುದೇ ಯೋಗೇಶ ಎಂಬುದರಲ್ಲಿ ಪೊಲೀಸ... ಯಾವುದೇ ಗೊಂದಲವಿರಲಿಲ್ಲ.


ಇನ್ನು ತಡ ಮಾಡಿದರೆ ರವಿ ಪೂಜಾರಿಗಿಂತಲ... ಆತನ ಬಂಟ ಲೋಕೇಶನೇ ಬೆಂಗಳೂರಿ... ಕಂಟಕನಾಗುತ್ತಾನೆಂಬುದು ಪೊಲೀಸರಿಗೆ ಅರ್ಥವಾಗಿರಬೇ... ಇದಕ್ಕೆ ಪುರಾವೆಯೆಂಬಂತೆ ಇದೇ ಹೊತ್ತಿಗೆ ಯೋಗೇ... ಮತ್ತು ನಿಖಿಲ್ ಶೆಟ್ಟಿ ಸೇರಿಕೊಂಡು ಹನುಮಂತನಗ... ಇಬ್ಬರು ಉದ್ಯಮಿಗಳಿಗೆ ಕಾಟ ಶುರುಹಚ್ಚಿಕೊಂಡ... ಹೆಸರಿಗಷ್ಟೇ ರವಿ ಪೂಜಾರಿಯಾದರೂ ಇದರ ಹಿಂದಿದ್ದ... ಯೋಗೇಶ ಮತ್ತು ನಿಖಿಲ್‌ಶೆಟ್ಟಿಯೆಂಬ ಬಗ್ಗೆ ಪೊಲೀಸ... ಯಾವುದೇ ಅನುಮಾನಗಳಿರಲಿಲ್ಲ. ಈ ಇಬ್ಬರು ಉದ್ಯ... ಗಳನ್ನು ಕವರ್ ಮಾಡಲೆಂದೇ ಯೋಗೇಶ ಶ್ರೀನಗ... ದೀಕ್ಷಿತ್‌ಶೆಟ್ಟಿಯ ತಂಡವನ್ನು ಅಣಿಗೊಳಿಸಿದ್ದ ಅಂತಿಮವ... ಸಿಸಿಬಿ ಪೊಲೀಸರು ದೀಕ್ಷಿತ್ ಶೆಟ್ಟಿಯ ಜೊತೆ ಸುನಿ... ಯೋಗೇಶ್ ಕುಮಾರ್ ಮತ್ತು ರಕ್ಷಿತ್ ಎಂಬ ಮೂವ... ಪೋಕರಿಗಳನ್ನು ಹಿಡಿದರಾದರೂ ಕಳಿ ಯೋಗೇಶ ಮ... ಸಿಗಲೇ ಇಲ್ಲ.

ಸಿಸಿಬಿ ಪೊಲೀಸರೇ ಹೇಳುವಂತೆ ಈಗಾಗಲೇ ಬೆ... ಳೂರು ಪೊಲೀಸರು ಒಟ್ಟು 17 ಮಂದಿ ರವಿ ಪೂಜಾರಿ... ಸಹಚರರನ್ನು ಹಿಡಿದು ಜೈಲಿಗೆ ಹಾಕಿದ್ದಾರೆ. ಪ್ರತಿ ಸಾರಿಯ... ಒಬ್ಬನಲ್ಲ ಒಬ್ಬ ಬಿಲ್ಡರ್‌ನ ತಲೆಗೋ, ಉದ್ಯಮಿ... ಬುಡಕ್ಕೋ ರಿವಾಲ್ವರ್ ಇಟ್ಟೇ ರವಿ ಪೂಜಾರಿ ಬೆದ... ಹಾಕುತ್ತಾನೆ. ಇಂಥ ಪ್ರತಿಯೊಂದು ಗ್ಯಾಂಗ್ ಸೆರೆಸಿಕ್ಕಾಗ... ಅದರ ಹಿಂದೆ ಕಳಿ ಯೋಗೇಶನ ಕೈಯಿರುವುದು ಸ್ಪಷ್ಟವ... ಗೋಚರಿಸುತ್ತದೆ. ಆದರೆ ಯೋಗೇಶ ಮಾತ್ರ ಸಿಗುತ್ತಿ...


ಆತ ಬೆಂಗಳೂರಿನಲ್ಲೇ ಇದ್ದಾನಾ? ಅಥವಾ ಮುಂಬ... ಯಿಂದ ಕಾರ್ಯನಿರ್ವಹಿಸುತ್ತಾನಾ? ಇತ್ತೀಚೆಗೆ ಚೆನ್ನೈ... ಕಾಲಿಟ್ಟಿರುವ ಆತನ ಮುಂದಿನ ಟಾರ್ಗೆಟ್ ಯಾರ... ಯಾವ ರೊಕ್ಕಸ್ಥನ ಬುಡಕ್ಕೆ ಯೋಗೇಶ ಕೈ ಹಾಕಿರಬಹುದ... ಅದಕ್ಕೂ ಮೊದಲೇ ಬೆಂಗಳೂರು ಪೊಲೀಸರು ಆತನ... ಮುಗಿಸುತ್ತಾರಾ?

ಸಿಸಿಬಿಯ ಎಸಿಪಿ ಚಲಪತಿ ಈ ಹಿಂದೆ ಖತರ್‌ನಾ... ದಂಡುಪಾಳ್ಯದ ಗ್ಯಾಂಗನ್ನೇ ಮಟ್ಟ ಹಾಕಿದವರು. ... ರವಿಪೂಜಾರಿಯ ಚೇಲಾಗಳು ಎಸೆದ ಸವಾಲನ್ನು ... ಎದುರಿಸುತ್ತಾರೆಂಬುದೇ ಅಸಲಿ ಪ್ರಶ್ನೆ.

● ರಾ.ಸೋಮನಾಥ



ಶಿಡ್ಲಘಟ್ಟ ಮೋಹನ್ ಸೇಡಿನ ಕೊಲೆ





ಘಟ್ಟದ ರೌಡಿ ಶೀಟರ್ ಬೋದಗೂರು ಕತೆ ಮುಗಿದಿದೆ.

25ರ ಶನಿವಾರ ಹೊಸಕೋಟೆಯ ಸಮೀಪದ ಹತ್ತಿರ ಭಯಾನಕ ರೀತಿಯಲ್ಲಿ ಹತ್ಯೆಯಾಗು ಸ್ತುತಃ ರೌಡಿ ಜಗತ್ತಿಗೂ ಈ ಮೋಹನನ ಬಗ್ಗೆ ಗೊತ್ತಿರಲಿಲ್ಲ.

ct ಮೋಹನನ ರೌಡಿಸಂ ಹಾಗೂ ಲ್ಯಾಂಡ್ ಬೆಂಗಳೂರು ಅಂಡರ್‌ವರ್ಲ್ಡ್ ಜೊತೆಗೆ ನೇರ ಹೊಂದಿರಲಿಲ್ಲ. ಅವನದೇನಿದ್ದರೂ ಹೊಸ ವನಹಳ್ಳಿಯ ಆಚೆಗೆ, ಬೆಂಗಳೂರಿನ ಇಂಟರ್ ಏರ್‌ಪೋರ್ಟಿನ ಉತ್ತರ ದಿಕ್ಕಿನ ಟೆರಿಟರಿ ಮೋಹನ ತನ್ನ ಸೆಕ್ಯೂರಿಟಿಗೆ ಇಬ್ಬರ್ ಗಳನ್ನು ತಂದಿಟ್ಟುಕೊಂಡಿದ್ದ ಎಂಬುದೇ ಅವನ ಲ್‌ಗಳ ಸ್ವರೂಪ, ರೌಡಿಸಂ ಚರಿತ್ರೆ ಹಾಗೂ ರಾಜಕೀಯ ಆಕಾಂಕ್ಷೆಗಳ ಕತೆ ಹೇಳಬಲ್ಲದಾಗಿವೆ.

ಕೊಲೆಗೆ ಇದೆಲ್ಲವೂ ಕಾರಣವಾಗಿರಲಿಕ್ಕೂ

ಕ್ಷಣಕ್ಕೆ ಹೇಳಬೇಕೆಂದರೆ ಮೋಹನ ಯಾಗಿ ಎರಡು ವರ್ಷಗಳ ಹಿಂದೆ ತಾನೇ ಇಬ್ಬರ ಕೊಲೆಗೆ ಪ್ರತೀಕಾರವೆಂಬಂತೆ ಈಗ ತ್ಯೆಗೀಡಾಗಿದ್ದಾನೆ.

ತ್ತು ಕೊಲೆಯಾಗಿದ್ದ ಮಂಜುನಾಥ ಹಾಗೂ ಎಂಬಿಬ್ಬರು ಒಂದು ಕಾಲದಲ್ಲಿ ಇದೇ ಮೋಹನನ ಬರ್‌ಗಳೇ ಆಗಿದ್ದರು. ಅವರ ಹತ್ತಿರದ ಜನರೇ ಮೋಹನನನ್ನು ಮುಗಿಸಿದ್ದಾರೆಂದು ಪೊಲೀಸರಿಗೂ ಮಾಗಿದೆ. ಮೋಹನ ಕೊಲೆಯಾದ ಎರಡೇ ಸೂಲಿಬೆಲೆ ಪೊಲೀಸ್ ಇನ್ಸ್‌ಪೆಕ್ಟರ್ ಸುಬ್ರಮಣ್ಯ ಅರೆಸ್ಟ್ ಮಾಡಿದ್ದಾರೆ.

ದಲ್ಲಿ ಆಶ್ಚರ್ಯದ ಸಂಗತಿ ಏನು ಗೊತ್ತಾ?

ರಿಣಿ ಮತ್ತು ಸುಗುಣ ಎಂಬ ಮುಹಿಳೆಯರ ಬಂಧನ!

ಮೋಹನನ ಕೊಲೆ ಪಿತೂರಿ ದದಲ್ಲಿ ಅರೆಸ್ಟಾಗಿರುವ ಹರಿಣಿ ಮಂಜುನಾಥನ ಪತ್ನಿಯಾದರೆ, ನರಸಿಂಹನ ಹೆಂಡತಿ!

ಹನನ ರೌಡಿಸಂ ಜೀವನದಲ್ಲಿ ದ ಮಿಲಿಟ್ರಿ ವೆಂಕಟರಮಣಪ್ಪ, ಶ್ವರ ಟಾಕೀಸ್‌ನ ಮಾಲೀಕ ರ, ಮೀಟರ್ ಬಡ್ಡಿ ದಂಧೆಯ ರಮಣ ಅಲಿಯಾಸ್ ಲಕ್ಷ್ಮಿ ಹಾಗೂ ಮಿನಿಸ್ಟರ್ ಬಚ್ಚೇಗೌಡನ ನೆಂಟ ಶೇಖರ್ ಗೌಡ ಮುಂತಾದವರ ಹೆಸರುಗಳು ಕಾಣಸಿಗುತ್ತವೆ.

ಜೊತೆಗೆ ಶಿಡ್ಲಘಟ್ಟದ ಲೋಕಲ್ ಗ್ಯಾಂಗ್ ವಾರ್‌ನಲ್ಲಿ ಪಕ್ಕದ ಆಂಧ್ರದ ರಾಯಲಸೀಮಾದ ಬಾಂಬ್‌ಗಳೂ ಇಲ್ಲಿತನಕ ತಲುಪಿ ಸ್ಫೋಟಿಸಿದ ಘಟನೆಗಳೂ ಆಗಿಹೋಗಿವೆ!

ಇಲ್ಲಿ ರೌಡಿಗಳಿರಲಿಲ್ಲ

ಡೆಡ್ಲಿ ಸೋಮನ ಎನ್‌ಕೌಂಟರ್ ಹತ್ಯೆಯ ನಂತರ ಕೋಲಾರ ಸೀಮೆಯಿಂದ ಕುಖ್ಯಾತಿ ಪಡೆದ ರೌಡಿಗಳ್ಯಾರೂ ತಲೆ ಎತ್ತಿರಲಿಲ್ಲ. ಅಲ್ಲಿಂದ ಕೊಂಚ ದೂರದಲ್ಲಿರುವ ಕೆಜಿಎಫ್ ರೌಡಿ ಚಟುವಟಿಕೆಗಳ ಫಲವತ್ತಾದ ಬ್ರೀಡಿಂಗ್ ಸೆಂಟರ್‌ನಂತಿತ್ತೆಂಬುದನ್ನು ಬಿಟ್ಟರೆ ಇಡೀ ಕೋಲಾರಸೀಮೆ ಅಂತಹ ಸಂಘಟಿತ, ದೊಡ್ಡ ಲೆವೆಲ್‌ನ ರೌಡಿ ಚಟುವಟಿಕೆಗಳನ್ನು ಇತ್ತೀಚಿನವರೆಗೂ ಕಂಡಿರಲಿಲ್ಲ.

ಹೀಗೆ ತಣ್ಣಗಿದ್ದ ಸೀಮೆಯ ನೆಮ್ಮದಿ ಕೆಡಿಸಲು ಮೋಹನ ಎದ್ದು ನಿಂತ.

ಶಿಡ್ಲಘಟ್ಟ ತಾಲೂಕಿನ ಬೋದಗೂರಿನವನಾದ ಮೋಹನ ಸ್ಥಿತಿವಂತ ರೈತ ಕುಟುಂಬದವನು. ಪ್ರಭಾಕರ ಎಂಬ ತಮ್ಮನೂ ಇದ್ದಾನೆ. ಕಳೆದ ದಶಕದಲ್ಲಿ ಬೆಂಗಳೂರಿಗೆ ಕಾನೂನು ಓದಲು ಬಂದ ಮೋಹನ ಕಾನೂನು ಬಾಹಿರ ಚಟುವಟಿಕೆಗಳಲ್ಲೇ ಆಸಕ್ತಿ ಬೆಳೆಸಿಕೊಂಡ. ಹೆಬ್ಬಾಳದ ಹತ್ತಿರ ಕೊಡಿಗೇಹಳ್ಳಿಯಲ್ಲಿ ಒಂದು ರೂಂ ಮಾಡಿಕೊಂಡಿದ್ದ. ಅನೇಕ ಸಾರಿ ಬೇರೆಯವರ ಪರವಾಗಿ ಎಕ್ಸಾಂ ಬರೆದು ಹಣ ಪಡೆದು ಮೋಜಾಗಿ ತಿರುಗಿದ್ದೂ ಉಂಟು. ಮೋಹನ ಬೆಂಗಳೂರಿನಲ್ಲಿದ್ದಾಗಲೇ ಇಲ್ಲಿನ ಕೆಲ ರೌಡಿಗಳ ಜೊತೆ ಬಿದ್ದಿದ್ದ. ಅವರೊಂದಿಗೆ ಓಡಾಡುತ್ತಲೇ ರೌಡಿಸಂ, ಸಣ್ಣಪುಟ್ಟ ಹಫ್ತಾ ವಸೂಲಿಗಳ ರುಚಿಯೂ ಹತ್ತಿತ್ತು.

ಈ ವಿದ್ಯೆ ಕಲಿತು ಶಿಡ್ಲಘಟ್ಟಕ್ಕೆ ಮೋಹನ ವಾಪಸ್ ಬಂದಾಗ ಅಲ್ಲಿ ಮುಂದೆ ನಿಂತು ಸ್ವಾಗತಿಸಿದವನು ಮಿಲಿಟ್ರಿ ವೆಂಕಟರಮಣಪ್ಪ!

ಶಿಡ್ಲಘಟ್ಟ ಟೌನಿನಲ್ಲಿ ಇವನಿಗೊಂದು ಹವಾ ಇತ್ತು. ಹಫ್ತಾ ವಸೂಲಿಯೂ ನಡೆಯುತ್ತಿತ್ತು.



ಮಂಜುನಾಥ

ಮಿಲಿಟ್ರಿ ಗ್ಯಾಂಗ್ ಸೇರಿದ ಮೋಹನ

ಸಣ್ಣದೊಂದು ಮಿಲಿಟ್ರಿ ಹೋಟೆಲ್ ನಡೆಸುತ್ತಿದ್ದ ಕಾರಣಕ್ಕೆ ಮಿಲಿಟ್ರಿ ವೆಂಕಟರಮಣ ಎಂಬ ಬಿರುದುಗಳಿಸಿದ್ದವನ ಜೊತೆ ಮೋಹನ ಸೇರಿಕೊಂಡಾಗ ಅಲ್ಲಾಗಲೇ ಒಂದು ಜಗಳ ಕಾದಿತ್ತು.



ಮಿಲಿಟ್ರೆ ವೆಂಕಟಿ

ಈ ಮಿಲಿಟ್ರಿ ವೆಂಕಟರಮಣಪ್ಪ ಮಟ್ಕಾ, ಜೂಜು, ಆಯಿಲ್, ಬಡ್ಡಿದಂಧೆ, ರೇಷ್ಮೆ ಗೂಡಿನ ಮಾರ್ಕೆಟ್ ಹಾಗೂ ಲೋಕಲ್ ಬಾರ್ ಅಂಡ್ ರೆಸ್ಟೋರೆಂಟ್‌ಗಳಿಂದ ಚೂರುಪಾರು ಹಫ್ತಾ ವಸೂಲಿ ಮಾಡಿಕೊಳ್ಳುತ್ತಿದ್ದ. ಅವನ ಗ್ಯಾಂಗ್‌ನಲ್ಲಿ ನರಸಿಂಹ, ಮಂಜುನಾಥನೂ ಇದ್ದರು. ಆದರೆ ಮಂಜುನಾಥ-ನರಸಿಂಹ ಜೋಡಿ ದುಡ್ಡು ಹಂಚಿಕೆ ವಿಚಾರದಲ್ಲಿ ಮಿಲಿಟ್ರಿ ವೆಂಕಟರಮಣಪ್ಪನ ಜೊತೆ ಜಗಳ ಶುರು ಮಾಡಿದಾಗ ಮೋಹನ ವೆಂಕಟರಮಣನ ಜೊತೆ ನಿಂತ. ಆವರಿಗೆ ಅಲ್ಲಿನ ವೆಂಕಟೇಶ್ವರ ಟಾಕೀಸಿನ ಓನರ್ ಶಿವಕುಮಾರನ ಸಪೋರ್ಟ್ ಇತ್ತು.

ಈ ಬೆಂಬಲ ಬಳಸಿಕೊಂಡೇ ಮಿಲಿಟ್ರಿ ವೆಂಕಟ ಕಾಂಗ್ರೆಸ್‌ನಿಂದ ಪುರಸಭೆಗೆ ಸ್ಪರ್ಧಿಸಿ ಗೆದ್ದು ಕೌನ್ಸಿಲರ್ ಆಗಿಬಿಟ್ಟ. ಸ್ಥಾಯಿ ಸಮಿತಿ ಅಧ್ಯಕ್ಷನೂ ಆದ. ಆಗಲೇ ಪುರಸಭೆ ವತಿಯಿಂದ ಕಟ್ಟಿಸಿದ್ದ ಅಂಗಡಿ ಮಳಿಗೆಗಳ ಹರಾಜು ನಡೆದಾಗ ಶಿವಕುಮಾರ್ ತನ್ನ ಹಿಂಬಾಲಕರಿಗೆ ಕೆಲವು ಅಂಗಡಿ ಕೊಡಿಸುವಂತೆ ಒತ್ತಡ ಹಾಕಿದ. ಆದರೆ ಮಿಲಿಟ್ರಿ ವೆಂಕಟ 'ನೋ' ಅಂದು ಬಿಟ್ಟ. ಅವತ್ತಿಗೆ ಶಿವಕುಮಾರನಿಗೂ ಮಿಲಿಟ್ರಿಗೂ ಇದ್ದ ಸ್ನೇಹ ಮುರಿದು ಬಿತ್ತು.

ಶಿವಕುಮಾರ್ ಮಿಲಿಟ್ರಿ ವೆಂಕಟನಿಗೆ ಎದುರಾಗಿ ಮೋಹನನನ್ನು ಬೆಳೆಸತೊಡಗಿದ. ಇದನ್ನು ಬಳಸಿಕೊಂಡ ಮೋಹನ ಆಯಿಲ್ ದಂಧೆ, ಮೀಟರ್ ಬಡ್ಡಿದಂಧೆಯಲ್ಲಿದ್ದ ಮಂಜುನಾಥ, ನರಸಿಂಹ ಹಾಗೂ ಲಕ್ಷ್ಮಿನಾರಾಯಣ ಅಲಿಯಾಸ್ ಲಕ್ಷ್ಮಿ ಎಂಬುವರನ್ನೆಲ್ಲಾ ಸೇರಿಸಿಕೊಂಡು ತನ್ನದೇ ಒಂದು ಗ್ಯಾಂಗ್ ಕಟ್ಟಿಕೊಂಡ.

ಅತ್ತ ಮಿಲಿಟ್ರಿ ವೆಂಕಟನೂ ಸುಮ್ಮನಿರದೆ ಸಚಿವ ಬಚ್ಚೇಗೌಡನ ನೆಂಟ ಶೇಖರ್‌ಗೌಡನ ಹತ್ತಿರ ಹೋದ. ಆದರೆ ಆ ನಂಟು ಜಾಸ್ತಿ ದಿನ ಉಳಿಯದೆ ವೆಂಕಟ ಏಕಾಂಗಿಯಾದ.

ಆಂಧ್ರದಿಂದ ಬಾಂಬ್ ಬಂದವು

ಈಗ್ಗೆ ಐದು ವರ್ಷಗಳ ಹಿಂದೆ ಮಿಲಿಟ್ರಿ ವೆಂಕಟನನ್ನು ಮುಗಿಸಲು ಮೋಹನ ಒಂದು ವ್ಯವಸ್ಥಿತ ಸಂಚು ನಡೆಸಿದ್ದ.

▶12



ಡಬಲ್ ಮರ್ಡರ್ ಕೇಸ್‌ನಲ್ಲಿ ಅರೆಸ್ಟಾಗಿದ್ದ ಮೋಹನನ ಗ್ಯಾಂಗ್

ಶೇಖರ್‌ಗೌಡ-ಮೋಹನನ ನಿಗೂಢ ದಂಧೆಗಳು

ಕೊಲೆಯಾದ ಮೋಹನನಿಗೆ ಬೆಂಗಳೂರಿನ ಪಾತಕ ಜಗತ್ತಿನಿಂದ ಹಿಡಿದು ಆಂಧ್ರ ಹಾಗೂ ರಾಜಸ್ತಾನದವರೆಗೂ ನಾನಾ ರೀತಿಯ ಲಿಂಕುಗಳಿದ್ದವು.

ಅವನು ಇತ್ತೀಚೆಗೆ ಹೊಸಕೋಟೆ ಹತ್ತಿರ ಯಾವುದೋ ಲ್ಯಾಂಡ್ ಡೀಲ್‌ಗೆ ಸಂಬಂಧಿಸಿದಂತೆ ಒಂದು ಕೋಟಿ ರೂಪಾಯಿ ಕೇಳಿ ಬೆದರಿಸಿ ಫೋನ್ ಮಾಡಿದ್ದನಂತೆ.

ಅವನ ಹತ್ಯೆಗೆ ಈ ತರದ ಕಿರುಕುಳ ಕೊಟ್ಟಿದ್ದೂ ಒಂದು ಕಾರಣವಿರಬಹುದು ಎಂತಲೂ ಕೇಳಿಬರುತ್ತಿದೆ. ಇದಲ್ಲದೆ ಮೋಹನನಿಗೆ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಶಿಡ್ಲಘಟ್ಟದಿಂದ ಸ್ಪರ್ಧಿಸುವ ಪ್ಲಾನ್ ಇತ್ತು. ಹಾಗಾಗಿ ತನ್ನ ಹಳೆಯ ದುಶ್ಮನ್‌ಗಳ ಜೊತೆ ರಾಜಿಯಾಗಲು ಯತ್ನಿಸುತ್ತಿದ್ದ. ಶೇಖರ್ ಗೌಡನ ಮಧ್ಯಸ್ಥಿಕೆಯಲ್ಲಿ ಮಿಲಿಟ್ರಿ ವೆಂಕಟನ ಜೊತೆಗೆ ಇತ್ತೀಚೆಗೆ ರಾಜಿ ಮಾಡಿಕೊಂಡಿದ್ದ. ಅದೇರೀತಿ ಇನ್ನೊಂದು ಗ್ಯಾಂಗ್‌ನ ಲಕ್ಷ್ಮಿ ಜೊತೆಗೂ ರಾಜಿಯಾಗಲು ಯತ್ನಿಸುತ್ತಿದ್ದ.

ಆದರೂ ಈ ರಾಜಿ ಕಬೂಲಿಗಳ್ಯಾವುದು ಮೋಹನನ ಜೀವ ಉಳಿಸಲಿಲ್ಲ.



ಮಂಜು-ನರಸಿಂಹನ ಹತ್ಯೆ ನಡೆದಾಗ....



ಹತ್ಯೆಯಾದ ನರಸಿಂಹ...



ಕುಟುಂಬದವರ ಆಕ್ರಂದನ

▸11 ಶಿಡ್ಲಘಟ್ಟದ ಮೋಹನನ ಕೊಲೆ


ಆಂಧ್ರಪ್ರದೇಶದ ಪಾತಕ ಜಗತ್ತಿನ ಲಿಂಕ್ ಪಡೆದು ಟಾಂಬ್‌ಗಳನ್ನು ತರಿಸಿ ದಾಳಿ ಮಾಡಿಸಿದ. ಆದರೆ ವೆಂಕಟ ಸಾಯದೆ ಬದುಕಿಕೊಂಡ. ಅವತ್ತೇ ಕೊನೆ ಮೋಹನನ ಗ್ಯಾಂಗ್ ವಿರುದ್ಧ ಮಿಲಿಟ್ರಿ ವೆಂಕಟ ಕದನ ವಿರಾಮ ಘೋಷಿಸಿ ತೆಪ್ಪಗಾಗಿಬಿಟ್ಟ.


ಮಂಜುನಾಥ

ಇದು ಮೋಹನನಿಗೆ ಎಲ್ಲಾ ದಂಧೆ ಕಂಟ್ರೋಲಿಗೆ ತೆಗೆದುಕೊಳ್ಳಲು ಅವಕಾಶ ನೀಡಿತು.

ಅವತ್ತಿಗೆ ಶಿಡ್ಲಘಟ್ಟದಲ್ಲಿ ಸಿವಿಲ್ ಬಸ್‌ಗಳ ಭರಾಟೆ ಜೋರಾಗಿತ್ತು. ಇವತ್ತಿಗೂ ಬೆಂಗಳೂರು-ಶಿಡ್ಲಘಟ್ಟ ನಡುವೆ ಪ್ರತಿದಿನ ಕನಿಷ್ಠ ಮೂವತ್ತೈದು ಖಾಸಗಿ ಬಸ್‌ಗಳು ಓಡಾಡುತ್ತಿರುತ್ತವೆ. ಇದು ಲಕ್ಷಾಂತರ ರೂಪಾಯಿ ಟರ್ನ್ ಓವರ್‌ನ ದಂಧೆ. ಮಿಲಿಟ್ರಿ ವೆಂಕಟ ತಣ್ಣಗಾದ ಕೂಡಲೇ ಮೋಹನನ ಗ್ಯಾಂಗ್ ಚುರುಕಾಯಿತು.

ಎಸ್‌ಎಲ್‌ಎನ್ ವೆಂಕಟೇಶ್ವರ, ಮಾರುತಿ, ವಿಜಯ, ಲಕ್ಷ್ಮಿನರಸಿಂಹ ಮುಂತಾದ ಹೆಸರಿನ ಬಸ್‌ಗಳನ್ನು ಹಫ್ತಾ ಹೆಸರಲ್ಲಿ ಹಿಂಡತೊಡಗಿದರು. ಸಾಕಷ್ಟು ಹಣವೂ ಕೈಸೇರತೊಡಗಿತು. ಆಗಲೇ ಮೋಹನ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಆಂಧ್ರ ರಾಜ್ಯದಿಂದ ಎರಡು ಖಾಸಗಿ ಬಸ್‌ಗಳನ್ನು ತಂದು ಓಡಲುಬಿಟ್ಟ. ಆದರೆ ಅಲ್ಲೊಂದು ವಂಚನೆಯಿತ್ತು. ಬಸ್ ಮಾರಿದವನಿಗೆ ಮೋಹನ ಕೊಟ್ಟಿದ್ದ ಚೆಕ್ ಬೌನ್ಸಾಗಿ ಅವರು ಕೇಸ್ ಹಾಕಿ ಮೋಹನನಿಗೆ 2



ಮೋಹನನ ಕಾರ್

ವರ್ಷ ಜೈಲು ಶಿಕ್ಷೆಯಾಯಿತು. ಇದಲ್ಲದೆ ಇನ್ನೊಂದು ಚೀಟಿಂಗ್ ಕೇಸಿನಲ್ಲಿ ಸಿಕ್ಕಿಬಿದ್ದು ರಾಜಸ್ತಾನದ ಪೊಲೀಸರು ಮೋಹನನನ್ನು ಒಮ್ಮೆ ಎತ್ತಾಕಿಕೊಂಡು ಹೋಗಿದ್ದರು.

ಚಿಗುರಿಕೊಂಡರು ಮಂಜ-ನರಸಿಂಹ

ಯಾವಾಗ ಮೋಹನ ಜೈಲು ಪಾಲಾದನೋ ಅವನ ಗ್ಯಾಂಗ್‌ನ ನರಸಿಂಹ-ಮಂಜುನಾಥ ಶಿಡ್ಲಘಟ್ಟದ ಸಮಸ್ತ ದೋ ನಂಬರ್ ದಂಧೆಗಳನ್ನು ನೇರ ತಮ್ಮ ಕೈಗೆ ತೆಗೆದುಕೊಂಡರು. ಸಿವಿಲ್ ಬಸ್ ಹಫ್ತಾ ರೇಷ್ಮೆ ಮಾರ್ಕೆಟ್, ಆಯಿಲ್ ದಂಧೆ, ಮಟ್ಕಾ, ಮೀಟರ್ ಬಡ್ಡಿಯವರಿಂದ ಹಫ್ತಾ ವಸೂಲಿಗೆ ನಿಂತರು. ಮೋಹನ ಜೈಲಿನಿಂದ ಆಚೆ ಬರುವ ಹೊತ್ತಿಗೆ ನರಸಿಂಹ-ಮಂಜ ಸಖತ್ ಹಣ ಮಾಡಿಕೊಂಡು ರಿಯಲ್ ಎಸ್ಟೇಟ್ ದಂಧೆಗೂ ಕೈಹಾಕಿದ್ದರು. ಮೋಹನ ಬಂದಾಗ ಇವರಿಬ್ಬರೂ ವಿರೋಧಿಸದಿದ್ದರೂ ಮೊದಲಿನಂತೆ ಮೋಹನನ ಕೈಕೆಳಗೆ ವ್ಯವಹಾರ ನಡೆಸಲು ಒಪ್ಪಲಿಲ್ಲ. ಇದು ಅವರ ಮಧ್ಯೆ ಮನಸ್ತಾಪಕ್ಕೆ ಕಾರಣವಾಯಿತು. ಶಿಡ್ಲಘಟ್ಟದ ದೇವಸ್ಥಾನ ಒಂದಕ್ಕೆ ಸೇರಿದ್ದ ಐದೆಕರೆ ಜಮೀನು ಕಬಳಿಸಲು ಇವರಿಬ್ಬರೂ ಒಟ್ಟಿಗೆ ಕೈ ಹಾಕಿದಾಗ ಜಗಳ ಇನ್ನೂ ಜೋರಾಯಿತು. ತಾನು ಈ ಡೀಲ್‌ನಿಂದ ಹಿಂದೆ ಸರಿಯಬೇಕೆಂದರೆ 35 ಲಕ್ಷ ರೂಪಾಯಿ ಕೊಡಬೇಕೆಂದು ಮೋಹನ ಕೇಳಿದ. ಆದರೆ ಮಂಜ-ನರಸಿಂಹ ಇದಕ್ಕೊಪ್ಪಿರಲಿಲ್ಲ.

ಇದಾದ ಮೇಲೆ ಬೂದಾಳು ಲ್ಯಾಂಡ್ ಡೀಲ್ ಗಲಾಟೆ ಆಯಿತು.

ಪ್ರಕಾಶ್ ಎಂಬುವವರಿಗೆ ಸೇರಿದ್ದ ಏರ್‌ಪೋರ್ಟ್ ಹತ್ತಿರವಿದ್ದ ಎರಡೆಕರೆ ಜಮೀನಿನ ಮೇಲೆ ಕಣ್ಣು ಹಾಕಿದ ಮಂಜುನಾಥ-ನರಸಿಂಹ ಬೂದಾಳಿನ ನಾಗರತ್ನಮ್ಮ ಎಂಬಾಕೆಯ ಹೆಸರಿನಲ್ಲಿ ಫೋರ್ಜರಿ ದಾಖಲೆ ಸೃಷ್ಟಿಸಿ ಮೂರನೇ ವ್ಯಕ್ತಿಗೆ ಮಾರಿ ಎರಡು ಕೋಟಿ ಜೇಬಿಗಿಳಿಸಿದ್ದರು. ಮೋಹನನೂ ಇದೇ ಲ್ಯಾಂಡ್‌ಗೆ ಕೈಹಾಕಲು ಬಂದಾಗ ವಿವಾದ ಬೆಳೆಯಿತು.

ಡಬಲ್ ಮರ್ಡರ್

ಮಂಜ-ನರಸಿಂಹರನ್ನು ತೆಗೆಯದೆ ಹೋದರೆ ಶಿಡ್ಲಘಟ್ಟದಲ್ಲಿ ತನ್ನ ದಂಧೆ ನಡೆಯದೆಂದು ತೀರ್ಮಾನಿಸಿಕೊಂಡ ಮೋಹನ. ಅವತ್ತು 2010ರ ಆಗಸ್ಟ್ 21 ರ ಬೆಳಗ್ಗೆ ಹತ್ತೂವರೆಗೆ ಕೋರ್ಟ್ ಕೇಸೊಂದಕ್ಕಾಗಿ ಮಾರುತಿ ವ್ಯಾನ್‌ನಲ್ಲಿ ಹೋಗುತ್ತಿದ್ದ ಮಂಜ-ನರಸಿಂಹರನ್ನು ಮೋಹನನ ಗ್ಯಾಂಗ್ ಚಿಕ್ಕಬಳ್ಳಾಪುರ-ಶಿಡ್ಲಘಟ್ಟ ರೋಡಿನಲ್ಲಿ ಜಾತಾವರ ಗೇಟ್ ಹತ್ತಿರ ಅಡ್ಡ ಹಾಕಿತು. ಸ್ಕಾರ್ಪಿಯೋದಿಂದಿಳಿದ ಅರ್ಧ ಡಜನ್ ಹಂತಕರು ಮಂಜ-ನರಸಿಂಹರನ್ನು ವ್ಯಾನ್‌ನೊಳಗಿದ್ದಂತೆಯೇ ಕೊಚ್ಚಿ ಕೊಲೆ ಮಾಡಿ ಪರಾರಿಯಾದರು. ಅವರ ಜೊತೆಯಲ್ಲಿದ್ದ ತಾಲ್ಲೂಕು ಜನತಾದಳದ ಅಧ್ಯಕ್ಷ ಧನಂಜಯ ರೆಡ್ಡಿ ಅವತ್ತು ಗೋಗರೆದು ತನ್ನ ಪ್ರಾಣ ಉಳಿಸಿಕೊಂಡಿದ್ದ.

ಇದಾದ ಎರಡೇ ದಿನದಲ್ಲಿ ಪೊಲೀಸರು ಮೋಹನ, ಲಕ್ಷ್ಮಣ, ಇಡ್ಲೋಡು, ನಾಗೇಶ, ಶಶಿಕುಮಾರ, ರಂಗನಾಥ ಮತ್ತು ಮಂಜುನಾಥ ಎಂಬುವವರನ್ನು ಅರೆಸ್ಟ್ ಮಾಡಿದರು.

ಈ ಹಂತಕರು ಯಲಹಂಕದಲ್ಲಿ ತಲೆಮರೆಸಿಕೊಂಡಿದ್ದರು.

ಇನ್ನೊಬ್ಬ ಪಾತಕಿ ಅನಂತಪುರದ ಗೋಪಾಲ ರೆಡ್ಡಿ ಪೊಲೀಸರ ಕೈಗೆ ಸಿಗಲಿಲ್ಲ. ಹೀಗೆ ಅರೆಸ್ಟಾದ ಮೋಹನ 2012ರ ಶುರುವಿನಲ್ಲಷ್ಟೆ ಜಾಮೀನು ಪಡೆದು ಜೈಲಿನಿಂದ ಹೊರಬಂದಿದ್ದ.

ಮಾಲೂರಿನಲ್ಲಿ ಮದುವೆ

ತನ್ನ ಕಾಲೇಜಿನ ಗೆಳತಿ ಹಾಗೂ ಆಪ್ತಗೆಳೆಯನ ತಂಗಿಯಾಗಿದ್ದ ಮಾಲೂರಿನ ಯಶವಂತಪುರದ ರಮ್ಯಾ ಎಂಬಾಕೆಯ ಜೊತೆ ಈಗ್ಗೆ ಕೇವಲ ಆರು ತಿಂಗಳ ಹಿಂದಷ್ಟೇ ಮೋಹನ ಮದುವೆಯಾಗಿದ್ದ. ಆಕೆ ಈಗ ಗರ್ಭಿಣಿ. ತವರುಮನೆಯಲ್ಲಿದ್ದಾಳೆ. ರಮ್ಯಾಳನ್ನ ನೋಡಲು ಪದೇ ಪದೇ ಮಾಲೂರಿಗೆ ಬರುತ್ತಿದ್ದ ಮೋಹನನಿಗೆ ಸಾವೂ ಕೂಡ ಅಲ್ಲೇ ಕಾದಿತ್ತು.

ಆಗಸ್ಟ್ 25ರಂದು ಪತ್ನಿಯನ್ನು ಮಾತನಾಡಿಸಿ ಮಾಲೂರಿನಿಂದ ಹೊರಟಾಗ ಮೋಹನನ ಜೊತೆ ಸೆಕ್ಯೂರಿಟಿಯವರ್‍ಯಾರೂ ಇರಲಿಲ್ಲ. ಹೊಸಕೋಟೆ ದಾಟಿ ತನಿಯೂರು ಹತ್ತಿರ ಬರುತ್ತಿದ್ದಂತೆ ಮಿನಿ ಲಾರಿಯೊಂದು ಹಿಂದಿನಿಂದ ಬಂದು ಮೋಹನನ ಕಾರಿಗೆ ಗುದ್ದಿ ಪಲ್ಟಿ ಹೊಡೆಸಿತು. ಕಾರಿನಲ್ಲೇ ಸಿಲುಕಿಕೊಂಡ ಮೋಹನನನ್ನು ಹಂತಕರ ತಂಡ ಇರಿದು ಮುಗಿಸಿತು.


ಊರಿನ ಜನ ಇದೇನೆಂದು ನೋಡಲು ಹತ್ತಿರ ಬಂದಾಗ ಹಂತಕರು ಲಾಂಗ್-ಕತ್ತಿ ತೋರಿಸಿ ಬೆದರಿಸಿ ತಂದಿದ್ದ ಲಾರಿಯೇರಿ ತಪ್ಪಿಸಿಕೊಂಡಿದ್ದಾರೆ. ದೇವನಹಳ್ಳಿಯ ಕೊಗಿಲು ಗ್ರಾಮದಲ್ಲಿ ಈ ಲಾರಿಯನ್ನು ಬಾಡಿಗೆಗೆಂದು ನಂಬಿಸಿ ತರಿಸಿ ಹತ್ಯೆಗೆ ಬಳಸಲಾಗಿದೆ.

ಸೇಡಿನ ಹತ್ಯೆ

ಎರಡು ವರ್ಷಗಳ ಹಿಂದೆ ಮಂಜ-ನರಸಿಂಹನನ್ನು ಕೊಂದ ಸೇಡಿಗೆ ಈಗ ಅವರ ಕಡೆಯವರೇ ಮೋಹನನನ್ನು ಕೊಂದಿರುವುದು ಖಚಿತ. ಸೂಲಿಬೆಲೆ ಪೊಲೀಸರು ಈಗಾಗಲೇ ಮಂಜನ ಪತ್ನಿ ಹರಿಣಿ, ನರಸಿಂಹನ ಪತ್ನಿ ಸುಗುಣ, ಮದನ್ ಕುಮಾರ್ ಹಾಗೂ ಮದನ್ ಎಂಬುವರನ್ನು ಅರೆಸ್ಟ್ ಮಾಡಿದ್ದಾರೆ. ನೆರೆಯ ಆಂಧ್ರದ ರಾಯಲಸೀಮಾದಲ್ಲಾದಂತೆ, ಇತ್ತ ನೆಲಮಂಗಲದಲ್ಲಿ ನಡೆಯುತ್ತಿರುವ ಬೆತ್ತನಗೆರೆ ಗ್ಯಾಂಗ್‌ಗಳ ಸರಣಿ ಕೊಲೆಗಳಂತೆಯೇ ಈಗ ಕೋಲಾರ ಸೀಮೆಯಲ್ಲಿ ಸರಣಿ ಹತ್ಯೆಗಳು ಶುರುವಾಗಿವೆ. ಶಿಡ್ಲಘಟ್ಟ ಪೊಲೀಸರು ಈ ತಕ್ಷಣ ಎಚ್ಚೆತ್ತುಕೊಂಡು ರೌಡಿ ಎಲಿಮೆಂಟುಗಳನ್ನು ಮಟ್ಟ ಹಾಕದಿದ್ದರೆ ಅಪಾಯ ಗ್ಯಾರಂಟಿ.

ಶಿವಮೊಗ್ಗ: ಯುದ್ಧ ನಡೆಯುವುದ ಯಡ್ಡಿ ಮತ್ತು ಈಶ್ವರಿ ನಡು

ಇನ್ನೇನು ಕೂಗಳತೆ ದೂರದಲ್ಲಿರುವ ವಿಧಾನ ಸಭಾ ಚುನಾವಣೆಯ ಬಿಸಿ ಶಿವಮೊಗ್ಗೆಯಲ್ಲಿ ಏರತೊಡಗಿದೆ. ವಿಚಿತ್ರವೆಂದರೆ ಈ ಜಿಲ್ಲೆಯಲ್ಲಿ ಮುಂದಿನ ಚುನಾವಣೆಯ ಸಾರಾಂಶ ಬೆಡ್ಡಿಗಳ ಹಿರಿಯ ನಾಯಕರಾದ ಯಡಿಯೂರಪ್ಪ ವರ್ಸಸ್ ಈಶ್ವರಪ್ಪನ ನಡುವೆ ಆಗಿರುತ್ತದೆ ಎಂಬ ಸೂಚನೆಗಳು ಈಗಾಗಲೇ ಸ್ಪಷ್ಟವಾಗಿವೆ. ಬಿಜೆಪಿ ಒಳಗೆ ಇವರಿಬ್ಬರ ನಡುವೆ ಅದೆಂತಹದ್ದೇ ಹೊಂದಾಣಿಕೆಯ ತೇಪೆ ಹಾಕಿದ್ದರೂ ಇವರಿಬ್ಬರೂ ಪರಸ್ಪರ ರಾಜಕೀಯ ಮತ್ಸರವನ್ನು ಹಲ್ಲುಕಚ್ಚಿ ಮಸೆಯುತ್ತಿದ್ದಾರೆ. ಮಾತ್ರವಲ್ಲ ಇವರಿಬ್ಬರ ಕಚ್ಚಾಟದಿಂದಾಗಿ ಈ ಜಿಲ್ಲೆಯಲ್ಲಾಗಿರುವ ರಾಜಕೀಯ ಹುಣ್ಣು ಈಗ ಗ್ಯಾಂಗ್ರಿನ್ ಆಗಿ ಪರಿವರ್ತನೆಗೊಂಡು ಶಿವಮೊಗ್ಗೆಯ ತುಂಬಾ ತನ್ನ ಗಬ್ಬುವಾಸನೆ ಹರಡಿದೆ.



ಈ ಹಿನ್ನೆಲೆಯಲ್ಲಿ ಹಾಲಿ ಉಪಮುಖ್ಯಮಂತ್ರಿ ಈಶ್ವರಪ್ಪ ಮುಂದಿನ ಚುನಾವಣೆಯಲ್ಲಿ ಏನೇ ಆದರೂ ಗೆಲ್ಲಬೇಕೆಂಬ ತವಕದಲ್ಲಿ ತಮ್ಮ ಚುನಾವಣಾ ಪ್ರಚಾರವನ್ನು ಪ್ರಾರಂಭಿಸಿದ್ದರೆ ಅದೇ ಹೊತ್ತಿಗೆ ಈಶ್ವರಿಯನ್ನು ಶತಾಯಗತಾಯ ಸೋಲಿಸಬೇಕೆಂದು ಪಣ ತೊಟ್ಟಿರುವ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಹಲವಾರು ತರ್ಕಗಳನ್ನು ಶುರುಹಚ್ಚಿಕೊಂಡಿದ್ದಾರೆ. ಆ ನಿಟ್ಟಿನಲ್ಲಿ ಯಡ್ಡಿ ತನ್ನ ಮಗ ಸಂಸದ ರಾಘವೇಂದ್ರನನ್ನು ಫೀಲ್ಡಿಗಿಳಿಸಿದ್ದಾರೆ. ರಾಘವೇಂದ್ರ ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ತುಂಬಾ ಹರಡಿರುವ ಸುಮಾರು 40 ಸಾವಿರ ಲಿಂಗಾಯತ ಮತಗಳನ್ನು ಗಮನದಲ್ಲಿಟ್ಟುಕೊಂಡು ಈಶ್ವರಪ್ಪನನ್ನು ಮಾಜಿ ಮಾಡುವ ರಾಜಕೀಯ ಹುನ್ನಾರ ಶುರುವಿಟ್ಟುಕೊಂಡಿದ್ದಾನೆ.

ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದಲ್ಲಿರುವ ಸುಮಾರು 30 ಸಾವಿರ ಚಿಲ್ಲರೆ ಬ್ರಾಹ್ಮಣರ ಮತಗಳು ಇಲ್ಲಿಯತನಕ ಬಿಜೆಪಿಯ ಓಟ್ ಬ್ಯಾಂಕ್ ಆಗಿದ್ದವು. ಅದರ ಜೊತೆಗೆ ಇತರೆ ಚಿಡ್ಡಿಗಳ ಮತಗಳು ಸೇರಿದರೆ ಇಲ್ಲಿ ಅಜಮಾಸು 35 ಸಾವಿರ ಚಿಲ್ಲರೆ ಬಿಜೆಪಿ ಮತಗಳು ಎಂದೇ ಅಂದಾಜಿಸಲಾಗಿತ್ತು. ವಿಪರ್ಯಾಸವೆಂದರೆ ಮುಂದಿನ ಚುನಾವಣೆನಲ್ಲಿ ಈ ಕಟ್ಟಾ ಮತಗಳೇ ಬಿಜೆಪಿಗೆ ಕೈಕೊಡಲಿವೆ.

ಕಳೆದ ಬಾರಿಯ 2008ರ ಚುನಾವಣೆಯಲ್ಲಿ ಕಾಂಗ್ರೆಸ್ ಇಸ್ಮಾಯಿಲ್ ಖಾನ್ ಎಂಬುವವರಿಗೆ ಟಿಕೆಟು ನೀಡಿತ್ತು. ಆದರೆ ಈಶ್ವರಪ್ಪನ ಎದುರು ಖಾನ್ 37,414 ಮತಗಳ ಅಂತರದಿಂದ ಸೋತಿದ್ದರು. ಖಾನ್ ವಿರುದ್ಧ ಗೆದ್ದ ನಂತರ ಕಳೆದ ನಾಲ್ಕೂವರೆ ವರ್ಷಗಳಲ್ಲಿ ಈಶ್ವರಪ್ಪ ಮಾಡಿದ ಭೂರಿಭೋಜನದ ಪರಿಯನ್ನು ಗಮನಿಸಿರುವ ಶಿವಮೊಗ್ಗೆಯ ಮತದಾರರು ಆತನ ಬಗ್ಗೆ ಬೇಸತ್ತುಹೋಗಿದ್ದಾರೆ. ಎಷ್ಟರಮಟ್ಟಿಗೆ ಎಂದರೆ ಕಟ್ಟರ್ ಬಿಜೆಪಿ ಮತದಾರರೇ ಈಶ್ವರಪ್ಪನನ್ನು ತೊಲಗಿಸುವ ಅವಕಾಶಕ್ಕಾಗಿ ಹಾತೊರೆಯುತ್ತಿದ್ದಾರೆ. ಇದಕ್ಕೆ ಒಂದು ಉದಾಹರಣೆ ಎಂದರೆ ಇತ್ತೀಚೆಗೆ ಶಿವಮೊಗ್ಗೆಯಲ್ಲಿ ನಡೆದ ಬ್ರಾಹ್ಮಣರ ರಾಜಕೀಯ ಜಾಗೃತಿ ಸಭೆಯಲ್ಲಿ ಈಶ್ವರಪ್ಪನ ಮಾರಿಗೆ ಅವಕಾಶವನ್ನೇ ನೀಡದಿದ್ದದ್ದು. ಮಾತ್ರವಲ್ಲ, ಬರಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಲಿಂಗಾಯತ ಅಥವಾ ಬ್ರಾಹ್ಮಣನಿಗೆ ಟಿಕೆಟು ಕೊಟ್ಟರೆ ಆತನನ್ನು ಬೆಂಬಲಿಸುವ ನಿರ್ಧಾರವನ್ನು ಸಭೆಯಲ್ಲಿ ತೆಗೆದುಕೊಳ್ಳಲಾಯಿತು ಎಂಬ ಮಾತು ಕೇಳಿಬರುತ್ತಿದೆ.

ತನ್ನ ವಿರುದ್ಧ ಯಡ್ಡಿಯಲ್ಲದೆ ಶಿವಮೊಗ್ಗೆಯ ಮತದಾರರೂ ಕೋಪಗೊಂಡಿರುವುದನ್ನು ಅರಿತಿರುವ ಈಶ್ವರಪ್ಪ ತನ್ನ ಚುನಾವಣಾ ರಾಜಕೀಯ ತಂತ್ರವನ್ನು ಬದಲಿಸಿದ್ದಾರೆ. ಲಿಂಗಾಯತರು, ಮುಸ್ಲಿಮರು, ಕುರುಬರು, ಒಕ್ಕಲಿಗರು, ತಮಿಳರು, ದಲಿತರು ಎಂದೆಲ್ಲಾ ಜಾತಿವಾರು ಮತಗಳನ್ನು ವಿಂಗಡಿಸಿ ಪ್ರತಿ ಜಾತಿಸಮುದಾಯದಲ್ಲಿ ಹೊಸ ನಾಯಕತ್ವವನ್ನು ಹುಟ್ಟು ಹಾಕುತ್ತಿರುವ ಈಶ್ವರಪ್ಪ ಅಂತಹವರಿಗೆ ಹಣದ ಹೊಳೆಯನ್ನೇ ಹರಿಸುತ್ತಿದ್ದಾರೆ.

ಭ್ರಷ್ಟಾಚಾರದ ಪರಮಾವಧಿ

ಶಿವಮೊಗ್ಗೆಯಲ್ಲಿ ಈಶ್ವರಪ್ಪನೂ, ಶಿಕಾರಿಪುರದಲ್ಲಿ ಯಡಿಯೂರಪ್ಪನೂ ಹುಟ್ಟು ಹಾಕಿರುವ ಕಡುಭ್ರಷ್ಟಾಚಾರವೇ ಮುಂದಿನ ಚುನಾವಣೆಯಲ್ಲಿ ಮತದಾರರ ಮುಖ್ಯ ಕಾಳಜಿ ಆಗಲಿದೆ. ಈ ಇಬ್ಬರು ಚಿಡ್ಡಿ ನಾಯಕರು ಜಿಲ್ಲೆಯ ಅಭಿವೃದ್ಧಿಯ ಹೆಸರಿನಲ್ಲಿ ತಾವೇ ಅಭಿವೃದ್ಧಿ ಆಗಿರುವುದು ಇಲ್ಲಿನ ಮತದಾರರಿಗೆ ಅರ್ಥವಾಗಿದೆ

ಹತ್ತು ವರ್ಷಗಳ ಹಿಂದೆ ಇದೇ ಯಡ್ಡಿ ಮತ್ತು ಈಶ್ವರಿಯ ಜೀವನ ಶೈಲಿ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಕಂಡಿದ್ದ ಇಲ್ಲಿನ ಮತದಾರರು ಈಗ ಇವರಿಬ್ಬರ ಶ್ರೀಮಂತಿಕೆ, ಸಂಪಾದಿಸಿರುವ ಆಸ್ತಿ, ಗಳಿಸಿರುವ ದುಡ್ಡು ಕಟ್ಟಿಸಿಕೊಂಡಿರುವ ಅರಮನೆಗಳು ಕಂಡು ಬೆರಗ ಮಾತ್ರವಲ್ಲ, ಇವರಿಬ್ಬರು ಹುಸಕರ ಜಿದ್ದಿಗೆ ಬಿದ್ದು ಶಿವ ಬಹಳಷ್ಟು ಭಾಗವನ್ನು ಕಬಳಿಸಿರುವುದು ಇಲ್ಲಿ ಕಣ್ಣುಕುಕ್ಕುತ್ತಿದೆ. ಇವರಿಬ್ಬರಿಗೂ ಇಲ್ಲಿನ ಮತದಾರ ಕಲಿಸಿದರೆ ಅಚ್ಚರಿ ಇಲ್ಲ.

ದಿಕ್ಕಿಲ್ಲದ ಕಾಂಗ್ರೆಸ್

ಬಿಜೆಪಿ ನಾಯಕರ ನೈತಿಕ ದಿವಾಳಿತನದ ಪ
ನವನ್ನು ಪಡೆಯುವಲ್ಲಿ ಕ
ನಾಯಕರು ಹಿಂದೆ ಬ
ಮಾತ್ರವಲ್ಲ, ಬರಲಿರುವ
ವಣೆಗಳಿಗೆ ಕಾಂಗ್ರೆಸ್
ಯಾವ ರೀತಿಯ ತ
ಕೂಡ ನಡೆದಿಲ್ಲ. ಆದಕ್ಕ
ಮುಖ್ಯವಾಗಿ ಮುಂದಿನ
ಈಶ್ವರಪ್ಪನೆದುರು ಯ
ಕಣಕ್ಕಿಳಿಸಬೇಕು ಎಂದು
ಕಾಂಗ್ರೆಸ್ ನಾಯಕರು
ಚಿಂತನೆ ಮಾಡುತ್ತಿದ್ದಾರೆ.
ವೇಳೆ ಕಾಂಗ್ರೆಸ್ ಪಕ್ಷವು ಶಿ
ಯಲ್ಲಿ ಈಶ್ವರಿಯ ವಿರುದ್ಧ
ಲಿಂಗಾಯತ ಅಥವಾ ಬ್ರಾಹ್ಮಣ
ಯನ್ನು ಕಣಕ್ಕಿಳಿಸಿದರೆ ಯಡ್ಡಿ-ಈಶ್ವರಪ್ಪ ಇ
ಮುಖಭಂಗ ಆಗುವುದು ಗ್ಯಾರಂಟಿ ಎಂಬ ವಾತ
ಇಲ್ಲಿ ನಿರ್ಮಾಣವಾಗಿದೆ. ಇದಕ್ಕೆ ಕಾರಣವೂ
ಶಿವಮೊಗ್ಗೆಯ ಸಾದು ಲಿಂಗಾಯತರು ಯಡ್ಡಿ
ನಂಬುವುದಿಲ್ಲ. ಯಡ್ಡಿ ಲಿಂಗಾಯತ ಸಮುದಾಯದ
ಎಂಬುದನ್ನೇ ಇಲ್ಲಿನ ಲಿಂಗಾಯತರು ಪ್ರಶ್ನಿಸುತ್ತಿದ್ದಾರೆ
ಚುನಾವಣೆಯಲ್ಲಿ ಕಾಂಗ್ರೆಸ್ಸಿಗರು ಲಿಂಗಾಯತ
ದಾಯವನ್ನು ನಿರ್ಲಕ್ಷಿಸಿ ದ್ದರಿಂದ ಅವರೆಲ್ಲರೂ
ವಾರ್ಯವಾಗಿ ಬಿಜೆಪಿಯನ್ನು ಬೆಂಬಲಿಸಿದ್ದು ನಿಜ.
ಬರಲಿರುವ ಚುನಾವಣೆಯಲ್ಲಾದರು ಕಾಂಗ್ರೆಸ್
ಗೊಂಡು ತನ್ನ ಅಭ್ಯರ್ಥಿಯ ಆಯ್ಕೆಯಲ್ಲಿ ಜಾಗ
ವಹಿಸಿದರೆ ಆ ಪಕ್ಷಕ್ಕೆ ಲಾಭವಾಗುವ ಸೂಚನೆಗ

ಶಿವಮೊಗ್ಗೆ ವಿಧಾನ ಸಭಾ ಕ್ಷೇತ್ರದಲ್ಲಿ 40
ಮುಸ್ಲಿಮರ ಮತಗಳಿವೆ. ಆದ್ದರಿಂದ ಕಾಂಗ್ರೆಸ್ ಪಕ್ಷ
ಅಲ್ಪಸಂಖ್ಯಾತರನ್ನು ಕಡೆಗಣಿಸುವಂತಿಲ್ಲ.
ಸಮುದಾಯಕ್ಕೆ ರಾಜಕೀಯವಾಗಿ ಮತ್ತು ಸಾಮಾ
ಪ್ರಾತಿನಿಧ್ಯ ಕೊಡುವುದು ಕಾಂಗ್ರೆಸ್ ಪಕ್ಷಕ್ಕೆ ಅತ್ಯಗತ್ಯವ
ಶಿವಮೊಗ್ಗೆ ಹೇಳಿಕೇಳಿ ಕಮ್ಯೂನಲಿ
ಕ್ಷೇತ್ರವಾಗಿರುವುದರಿಂದ ಕಾಂಗ್ರೆಸ್ ತನ್ನ ಚುನ
ತಂತ್ರವನ್ನು ಬದಲಿಸಿಕೊಳ್ಳಬೇಕಿದೆ.. ವಿಧಾನ
ಚುನಾವಣೆಯಲ್ಲಿ ಮುಸಲ್ಮಾನ ಅಭ್ಯರ್ಥಿಗೆ ಟಿಕೆಟ್
ಬದಲು ಆ ಸಮುದಾಯದ ಪ್ರಮುಖರನ್ನು ಎ
ಮಾಡುವ ಭರವಸೆ ನೀಡುವುದು ಜಾಣತನವಾಗ

ಈಶ್ವರಪ್ಪನನ್ನು ಸೋಲಿಸಲು ಕಾಂಗ್ರೆಸ್ ಲಿಂಗಾ
ಎಚ್.ಎಂ.ಚಂದ್ರಶೇಖರ್ ಅಥವಾ ಚನ್ನಗಿರಿಯ
ಶಾಸಕ ವಡ್ನಾಳು ರಾಜಣ್ಣನಿಗೆ ಟಿಕೆಟು ನೀಡಿದರೆ
ಕಷ್ಟ ಎದುರಾಗುವುದು ಗ್ಯಾರಂಟಿ. ಮೊದಲನೆ
ಯಡಿಯೂರಪ್ಪ ಮತ್ತು ಸದಾನಂದ ಗೌಡರ ನ
ರಾಜಕೀಯ ಮತ್ಸರದಿಂದಾಗಿ ಈ ಜಿಲ್ಲೆಯಲ್ಲಿರುವ
ಲಕ್ಷದ ನಲವತ್ತು ಸಾವಿರ ಒಕ್ಕಲಿಗರ ಮತಗಳು ಕ
ಪರವಾಗುವಂತೆ ಮಾಡುತ್ತದೆ. ಎರಡನೆಯದಾಗಿ
ಜೊತೆಗೆ ಬಿಜೆಪಿ ಬಗ್ಗೆ ನಿರಾಶೆ ಹೊಂದಿರುವ
ಅಲ್ಪಸಂಖ್ಯಾತರ ಮತ್ತು ಜಾತ್ಯತೀತ ಮತಗಳೂ ಕ
ಪಾಲಾಗುವುದು ಗ್ಯಾರಂಟಿ.

ಕುರುಬರ ನಡುವೆ ಗುದ್ದಾಟ

ಜಾತ್ಯತೀತ ಜನತಾ ದಳದಿಂದ ಶ್ರೀ
ಎಂಬುವವರು ಸ್ಪರ್ಧಿಸುವುದು ಖಚಿತವಾಗಿದೆ. ಈ
ಶ್ರೀಕಾಂತ್ ಈ ಮತಕ್ಷೇತ್ರದಲ್ಲಿ ಅಬ್ಬರದ
ಶುರುಮಾಡಿದ್ದಾರೆ. ಈ ಶ್ರೀಕಾಂತ್ ಕೂಡ ಈ
ಕುಲಸ್ಥ. ಆದ್ದರಿಂದ ಇಲ್ಲಿರುವ ಕುರುಬ ಸಮುದ
ಹದಿನೈದು ಸಾವಿರ ಮತಗಳು ಇವರಿಬ್ಬರ
ಹಂಚಿಹೋಗಲಿವೆ. ಈಶ್ವರಪ್ಪ ಜಾತಿ, ಧರ್ಮ
ಎಷ್ಟು ಹಣ ಸುರಿಯುತ್ತಿದ್ದರೂ ತನ್ನ ಕುಲಸ್ಥರ ವ
ಶ್ರೀಕಾಂತನ ಪಾಲಾಗುವುದು ಗ್ಯಾರಂಟಿ ಎ
ಮೇಲಂತೂ ಈಶ್ವರಿ ಆತಂಕದಲ್ಲಿದ್ದಾರೆ.

ಅದೇನೇ ಇರಲಿ, ಬರುವ ಚುನಾವಣೆ ಸಂದ
ಶಿವಮೊಗ್ಗೆಯಲ್ಲಿ ದುಡ್ಡು - ಹೆಂಡ- ಜಾತಿ ಈ ವ
ಅಂಶಗಳು ಎಗ್ಗಿಲ್ಲದೆ ಚಲಾವಣೆ ಪಡೆದುಕೊಳ
ಶತಸಿದ್ಧ.

● ಟಿ.ಎನ್.ಷಣ

...ಸದಾಶಿವ ಆಯೋಗ...

...ಮಾರು 20 ಮಂದಿ ಕಾರ್ಯಕರ್ತರು ಮನೆಯ ...ಟಿದು. ಸದಾಶಿವ ಶಿಫಾರಸ್ಸನ್ನು ಜಾರಿಗೆ ತರುವಂತೆ ...ಗಳನ್ನು ಕೂಗಿದರು. ಇದಕ್ಕೆ ಬೆಂಬಲವಾಗಿ ಗೇಟಿನ ...ಬಳಿ ಸಾವಿರಾರು ಸಂಖ್ಯೆಯಲ್ಲಿ ಜನರು ...ಸಿದ್ದರು. ಈ ಸಂದರ್ಭದಲ್ಲಿ ನಡೆದ ಪೊಲೀಸ್ ...ದಲ್ಲಿ ಹಲವರು ತೀವ್ರವಾಗಿ ಗಾಯಗೊಂಡಿದ್ದಾರೆ. ...ದಿನೇ ಪ್ರತಿಭಟನೆಯ ಕಾವು ಏರುತ್ತಿದೆ.

...ಒಂದು ಕಡೆಯಾದರೆ ಮತ್ತೊಂದು ಕಡೆ ಇದಕ್ಕೆ ...ಬೇಡಿಕೆಯೊಂದಿಗೆ ಹಲವೆಡೆ ಪ್ರತಿಭಟನೆಗಳು ...ತ್ತಿವೆ. ಸ್ಪೃಶ್ಯ ಜಾತಿಗಳೆನಿಸಿಕೊಂಡಿರುವ ...ಬಂಜಾರ) ಹಾಗೂ ಬೋವಿ(ವಡ್ಡರು) ಜಾತಿಗಳ ...ಗಳು ಈ ವ್ಯತಿರಿಕ್ತ ಪ್ರತಿಭಟನೆಯಲ್ಲಿರುವ ...ವಿರೋಧಿಗಳ ಪ್ರಕಾರ ಈ ವರದಿ ಅವೈಜ್ಞಾನಿಕ ...ಅತಾರ್ಕಿಕವಾದುದು. ಅಷ್ಟೇ ಅಲ್ಲ, ಅದು ... ವಿಭಜಿಸುವ ದುರುದ್ದೇಶದಿಂದ ಇಂಥಾ ...ಗಳನ್ನು ರೂಪಿಸಲಾಗಿದೆ, ಆದ್ದರಿಂದ ವರದಿಯನ್ನು ...ಬೇಕು ಎಂಬುದು ಅವರ ಬೇಡಿಕೆ.

...ದಲಿತ ಚಳವಳಿಯಲ್ಲಿ ಸಕ್ರಿಯವಾಗಿದ್ದ ಸಂವಿಧಾನ ...ಆಗಿರುವ ರವಿವರ್ಮಕುಮಾರ್ ವರದಿಯನ್ನು ...ದ್ದಾರೆ. "ಜಸ್ಟೀಸ್ ಸದಾಶಿವ ಆಯೋಗ ಒಂದು ...ಕಾರ್ಯವನ್ನು ಸಾಧಿಸಿದೆ. ಆಯೋಗ ನಡೆಸಿದ ...ರ್ವೆ ಕಾರ್ಯ ಮೆಚ್ಚುವಂಥದ್ದು, ಅಂತೆಯೇ ...ವರ್ಗೀಕರಣ ವೈಜ್ಞಾನಿಕವಾಗಿದೆ ಹಾಗೂ ಆಚರಣ ...ಆಗಿದೆ. ಲಭ್ಯವಿರುವ ಮೀಸಲಾತಿ ಸೌಲಭ್ಯವನ್ನು ...ವಾಗಿ ಹಂಚಿಕೆ ಮಾಡಲಿಕ್ಕೆ ಇದರಿಂದ ...ವಾಗುತ್ತೆ."

...ಎಲ್ಲಾ ಹಿನ್ನೆಲೆಯಲ್ಲಿ ಕೆಲವು ಪ್ರಮುಖ ...ಅಂಶಗಳನ್ನು ನಾವು ಪರಿಗಣನೆಗೆ ...ಳ್ಳಲೇಬೇಕಾಗಿದೆ. ಮೊದಲನೆಯದಾಗಿ ಪರಿಶಿಷ್ಟ ...ನಡುವೆ ಮೀಸಲಾತಿ ಸೌಲಭ್ಯ ಅಸಮಾನವಾಗಿ ...ವಾಗಿದೆಯೆಂಬುದು ಬಹುತೇಕ ಎಲ್ಲರೂ ...ಡಿರುವ ಸತ್ಯ. ಹೀಗಿರುವಾಗ ನಿರ್ಲಕ್ಷ್ಯಕ್ಕೊಳಗಾದ ... ಅವುಗಳ ಪಾಲನ್ನು ನೀಡಬೇಕಾದ್ದು ಅತ್ಯಂತ ...ಚಿತವಾದುದು. ಅವಕಾಶವಂಚಿತ ದುರ್ಬಲರಿಗೆ ...ಲು ದಕ್ಕುವಂತೆ ಮಾಡಲು ಪ್ರಯತ್ನಿಸಬೇಕಾದ್ದು ...ಕ ನ್ಯಾಯ ಬಯಸುವ ಎಲ್ಲರ ಆದ್ಯ ...ಗುತ್ತದೆ. ಇದರ ವ್ಯತಿರಿಕ್ತವಾಗಿ ವರ್ತಿಸುವುದಾದರೆ ... ನ್ಯಾಯದ ಪರಿಕಲ್ಪನೆಯನ್ನು ಪ್ರತಿಪಾದಿಸಿದ, ...ಗೆ ಮೀಸಲಾತಿಯನ್ನು ತಂದುಕೊಡಲು ...ಪಟ್ಟ ಅಂಬೇಡ್ಕರ್‌ರಂಥಾ ಮಹನೀಯರಿಗೆ ನಾವು ... ತೋರಿದಂತಾಗುತ್ತದೆ ಎಂಬುದನ್ನು ನಾವು ...ಬಾರದು.

...ದು ವೇಳೆ ಈ ವರದಿಯಲ್ಲಿ ಅವೈಜ್ಞಾನಿಕವಾದ, ...ಕವಾದ ಯಾವುದಾದರೂ ಅಂಶವಿದ್ದಲ್ಲಿ ಅದನ್ನು ... ಮಾಡಿಕೊಟ್ಟು ಸೂಕ್ತ ತಿದ್ದುಪಡಿಗಳಿಗೆ ಆಗ್ರಹಿಸುವ ...ಲ್ಲರಿಗೂ ಇದೆ.


...ನೆಯದಾಗಿ ಜಾಗತೀಕರಣದ ಈ ಕಾಲಘಟ್ಟದಲ್ಲಿ ... ಉದ್ಯೋಗಗಳು ಮಂಗಮಾಯವಾಗಿ ಎಲ್ಲೆಡೆ ...ಕಂಪನಿಗಳು ವಿಜೃಂಭಿಸುತ್ತಿರುವುದು ಇಂದಿನ ...ಹೀಗಿರುವಾಗ ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿಯ ... ಒತ್ತಾಯಿಸಬೇಕಿರುವುದು ಇಂದಿನ ತುರ್ತು ...ಗಿದೆ. ಹಾಗಾದಾಗ ಮಾತ್ರ ಇಂದಿನ ವಿಷಮ ...ದಲ್ಲಿ ದಲಿತರಿಗೆ ಒಂದಷ್ಟು ನ್ಯಾಯ ಸಿಗಬಹುದು. ...ನಲ್ಲಿ ಮೀಸಲಾತಿಗೆ ಅರ್ಹರಾಗಿರುವ ಎಲ್ಲ ...ಯಗಳೂ ಒಗ್ಗೂಡಿ ದನಿಯೆತ್ತಬೇಕಾದ ಅಗತ್ಯವಿದೆ.

...ಶಿವ ಆಯೋಗ ಗಮನಿಸಿದ ಮತ್ತೊಂದು ...ಸೆಂದರೆ ಎಡಗೈ ಬಲಗೈ ಎಂಬ ಬಿರುಕು ...ದಲ್ಲಿ ಆಳವಾಗಿ ಬೇರುಬಿಟ್ಟಿದೆ. ಆದರ ಪರಿಣಾಮ ...ಶ್ವತ ರೂಪ ಪಡೆದುಕೊಂಡಿದೆಯೆಂದರೆ ಎಡಗೈ ...ಯಗಳು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ... ಜಗಜೀವನರಾಂ ಅವರನ್ನು ಆರಾಧಿಸಲು ...ದ್ದಾರೆ. ಎಡಗೈ ಬಲಗೈ ಎಂಬ ಭೇದಭಾವವಿಲ್ಲದೆ ...ದಲಿತ ಸಮುದಾಯದ, ಅಷ್ಟೇ ಏಕೆ? ಇಡೀ ...ಪರವಾಗಿ ಹೋರಾಡಿದ ಅಂಬೇಡ್ಕರ್‌ರನ್ನು ... ಒಳಪಂಗಡಕ್ಕೆ ಸೀಮಿತಗೊಳಿಸಿ ನೋಡುವುದು ... ಅಂಬೇಡ್ಕರ್‌ರಿಗೆ ಮಾಡುವ ಅಪಚಾರವೇ ಸರಿ. ...ಸಾಮಾಜಿಕ ಪಾಸ್ತಗಳಿಗೆ ಅಥವಾ ಕೆಲವು ಸಂಕುಚಿತ ... ನಾಯಕರು ಮಾಡುವ ತಪ್ಪಿಗೆ ಅಂಬೇಡ್ಕರ್‌ರನ್ನು ...ಸುವಂಥ ಪ್ರಕ್ರಿಯೆ ಕೊನೆಯಾಗಬೇಕು. ಒಟ್ಟಾರೆ ... ಸದುವೆ ಆರೋಗ್ಯಕರ ವಿಚಾರಗಳು ಬೆಳೆದು, ...ಜಾತ ಸಂಬಂಧಗಳು ಬೆಳೆಯುವಂತಾಗಲಿ, ಎಲ್ಲರೂ ...ಧ್ವನಿಯಿಲ್ಲದ ಸಮುದಾಯಗಳನ್ನು ಎಚ್ಚರಿಸುವಂತಾಗಲಿ ... ನಾಡಿನ ಎಲ್ಲಾ ಪ್ರಗತಿಪರರ ಆಶೆಕ್ಷೆ.

...ದೊಡ್ಡಿಪಾಳ್ಯ ನರಸಿಂಹಮೂರ್ತಿ


ಮಂಡ್ಯ: ಉತ್ತರ ಭಾರತದ ಕೂಲಿ ಕಾರ್ಮಿಕರ ಮೇಲೆ ಆರೆಸ್ಸೆಸ್ ಹಲ್ಲೆ

ಚುನಾವಣೆಗಳು ಹತ್ತಿರಾದಂತೆ ಕರ್ನಾಟಕದ ಕೇಸರಿ ಭಯೋತ್ಪಾದಕರು ಕ್ರಿಯಾಶೀಲರಾಗಿ, ಬಡಪಾಯಿಗಳನ್ನು ಬಲಿಪಶುಗಳನ್ನಾಗಿಸಿ ಕೋಮುದ್ವೇಷ ಹರಡುವ ಕೆಲಸದಲ್ಲಿ ನಿರತರಾಗಿದ್ದಾರೆ. ಮಂಗಳೂರಿನ ಪಡೀಲು ಹೋಂ ಸ್ಟೇ ಮೇಲೆ ದಾಳಿ ಮಾಡಿ, ಹುಟ್ಟುಹಬ್ಬದ ಪಾರ್ಟಿಯಲ್ಲಿ ತೊಡಗಿದ್ದ ಯುವಕ-ಯುವತಿಯರ ಮೇಲೆ ಹಿಂದೂ ಜಾಗರಣ ವೇದಿಕೆಯ ಗೂಂಡಾಗಳು ಹಲ್ಲೆ ನಡೆಸಿ ಇನ್ನೂ ತಿಂಗಳು ಕಳೆದಿಲ್ಲ, ಆ ಸಂದರ್ಭದಲ್ಲಿ ಅಲ್ಲಿದ್ದ ಯುವತಿಯರ ಮೇಲೆ ಆಲ್‌ಮೋಸ್ಟ್ ಅತ್ಯಾಚಾರವೆಸಗಿದಂತೆ ನಡೆದುಕೊಂಡ ಆ ಪುಂಡರ ವಿರುದ್ಧ ಹಾಗೂ ಅವರ ಮುಖಂಡರನ್ನು ಬಂಧಿಸದೆ ಅಮಾಯಕ ಯುವಕರ ಮೇಲೆ ಹಾಗೂ ಪ್ರಗತಿಪರ ಪತ್ರಕರ್ತರ ಮೇಲೆ ಕ್ರಮ ಜರುಗಿಸಲು ಹೊರಟಿದ್ದ ಪೊಲೀಸ್ ಇಲಾಖೆಯ ವಿರುದ್ಧ ನಾಗರಿಕರಿಂದ ಬೃಹತ್ ಪ್ರಮಾಣದಲ್ಲಿ ಪ್ರತಿಭಟನೆ ವ್ಯಕ್ತವಾಗಿತ್ತು. ಆ ಶಾಕ್‌ನಿಂದ ಕರ್ನಾಟಕದ ಜನ ಇನ್ನೂ ಚೇತರಿಸಿಕೊಳ್ಳುವ ಮೊದಲೇ ಮಂಡ್ಯದ ಆರ್‌ಎಸ್‌ಎಸ್ ಉಗ್ರಗಾಮಿಗಳು ಹೊಟ್ಟೆಪಾಡಿಗಾಗಿ ವಲಸೆ ಬಂದಿದ್ದ ರಾಜಸ್ಥಾನ, ಉತ್ತರಪ್ರದೇಶ, ಬಿಹಾರ ಮತ್ತು ಪಶ್ಚಿಮ ಬಂಗಾಳದ ಕೂಲಿ ಕಾರ್ಮಿಕರನ್ನು, ಅವರು ಪ್ರಯಾಣಿಸುತ್ತಿದ್ದ ರೈಲಿನಿಂದ ಬಲವಂತವಾಗಿ ಕೆಳಗಿಳಿಸಿ ಯದ್ವಾಬಿದ್ವಿ ಹೊಡೆದು ಅವರನ್ನು ಬಂಧಿಸುವಂತೆ ಪೊಲೀಸರ ಮೇಲೆ ಒತ್ತಡ ಹೇರಿದ ಆಘಾತಕಾರಿ ಘಟನೆ ನಡೆದಿದೆ.



ಪೊಲೀಸರ ಎದುರಿಗೆ ವಿಚಾರಣೆ ನಡೆಸುತ್ತಿರುವ ಚೆಡ್ಡಿ ಪುಂಡರು...

ಮಂಡ್ಯ ರೈಲು ನಿಲ್ದಾಣದಲ್ಲಿ ಸುಮಾರು 150 ಜನ ಬಾಂಗ್ಲಾ ವಲಸಿಗರನ್ನು ಬಂಧಿಸಲಾಗಿದೆ ಎಂಬ ಸುದ್ದಿ ಈ ವರದಿಗಾರನ ಗಮನಕ್ಕೆ ಬಂದದ್ದು ಬುಧವಾರ ರಾತ್ರಿ 10.40ಕ್ಕೆ. ಆ ಹೊತ್ತಿಗಾಗಲೇ ಇತರ ದೈನಿಕ ಹಾಗೂ ಟಿವಿ ವರದಿಗಾರರು ಸ್ಥಳದಲ್ಲಿ ಹಾಜರಿದ್ದರು. ಸುಮಾರು 100 ಮಂದಿ ಅಮಾಯಕರಂತೆ ಕಾಣುತ್ತಿದ್ದ ಹಿಂದಿ ಮಾತನಾಡುತ್ತಿದ್ದ ಜನರನ್ನು, ಬೆಂಗಳೂರಿನಿಂದ ಮಂಗಳೂರಿಗೆ ಹೋಗುತ್ತಿದ್ದ ಕಣ್ಣೂರು ಎಕ್ಸ್‌ಪ್ರೆಸ್ ರೈಲಿನಿಂದ ಎಬಿವಿಪಿ ಹಾಗೂ ಆರ್‌ಎಸ್‌ಎಸ್ ಕಾರ್ಯಕರ್ತರೆಂದು ಗುರುತಿಸಿಕೊಂಡಿರುವ ಕೆಲವು ಮಂದಿ, ಒದ್ದು ಒದ್ದು ಎಳೆದು ಕೆಳಗೆ ತಳ್ಳಿದರೆಂದು ವರದಿಗಾರ ಮಿತ್ರರು ಹೇಳಿದರು. ಅವರಲ್ಲಿ ಆ ರೀತಿ ತಳ್ಳಿದ ವಿಡಿಯೋ ಸಹಾ ಇತ್ತು. ಅಷ್ಟುಹೊತ್ತಿಗೆ ಅಲ್ಲಿಗೆ ಸ್ಥಳೀಯ ಪೊಲೀಸರೂ ಬರತೊಡಗಿದ್ದರು. ಅಲ್ಲಿ ದಾಳಿಗೊಳಗಾಗಿ ಒಂದೆಡೆ ಕೂಡಿಹಾಕಲಾಗುತ್ತಿದ್ದವರ ಬಳಿ ಹೋಗಿ ಆ ಜನ ಯಾರೆಂದು ತನಿಖೆ ಮಾಡಿದಾಗ ತಿಳಿದುಬಂದದ್ದು ಇಷ್ಟು.



ಅಟ್ಟಹಾಸದಿಂದ ಮೆರೆಯುತ್ತಿರುವ ಚೆಡ್ಡಿ ಪಡೆಗೆ ನಾಯಕತ್ವ...

ಆ ಎಲ್ಲಾ ಜನರೂ ವಲಸಿಗರು ಎಂಬುದು ನಿಜ. ಆದರೆ ಬಾಂಗ್ಲಾ ದೇಶದಿಂದ ನುಸುಳಿ ಬಂದವರಲ್ಲ, ಬದಲಿಗೆ ನಮ್ಮದೇ ದೇಶದ ರಾಜಸ್ಥಾನ, ಉತ್ತರಪ್ರದೇಶ, ಬಿಹಾರ, ಒರಿಸ್ಸಾ ಹಾಗೂ ಪಶ್ಚಿಮ ಬಂಗಾಳ ಮೊದಲಾದ ರಾಜ್ಯಗಳಿಂದ ಹೊಟ್ಟೆಪಾಡಿಗೆ ಕೂಲಿ ಕೆಲಸ ಅರಸುತ್ತಾ ಬಂದ ಬಡ ಕಾರ್ಮಿಕರು! ಈಗಾಗಲೇ ಕೆಲವು ಸಮಯದಿಂದ ಬೆಂಗಳೂರಿನ ಶೋಭಾ ಡೆವಲಪರ್ಸ್‌ನಲ್ಲಿ ಕಟ್ಟಡ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದವರು. ಯಾರೋ ಮೇಸ್ತ್ರಿ ಮಂಗಳೂರಿಗೆ ಟೈಲ್ಸ್ ಹಾಕುವ ಮತ್ತು ಗಾರೆ ಕೆಲಸದ ಕಾರ್ಮಿಕರು ಬೇಕಾಗಿದ್ದಾರೆ ಎಂದು ಹೇಳಿದ್ದರಿಂದ ಮಂಗಳೂರಿಗೆ ಹೆಚ್ಚಿನ ಕೂಲಿಯ ಆಸೆಯಿಂದ ರೈಲ್ವೆ ಟಿಕೆಟಿನೊಂದಿಗೆ ಹೊರಟಿದ್ದವರು. ಹೆಚ್ಚಾಗಿ ಹಿಂದೂಗಳೇ ಇದ್ದ (ಎಲ್ಲಾ ಧರ್ಮದ ಜನರೂ ಇದ್ದ) ಗುಂಪು ಅದು. ಅವರಲ್ಲಿ ಕೆಲವರ ಬಳಿ ಶೋಭ ಡೆವಲಪರ್ಸ್ ನೀಡಿರುವ ಕೆಲಸಗಾರರ ಕಾರ್ಡ್ ಇದೆ. ಅಷ್ಟೇ ಏಕೆ ಬಹಳಷ್ಟು ಮಂದಿಯ ಬಳಿ ಭಾರತ ಸರ್ಕಾರವೇ ನೀಡಿರುವ ಮತದಾರರ ಗುರುತಿನ ಚೀಟಿಯೂ ಇದ್ದವು!



ರೈಲಿನಿಂದ ಕಾರ್ಮಿಕರನ್ನು ಎಳೆದೆಳೆದು ಹೊಡೆಯುತ್ತಿರುಬ ದೃಶ್ಯ
(ಒದೆಯುತ್ತಿರುವ ವ್ಯಕ್ತಿ ಬಿಜೆಪಿಯ ಮುಖಂಡ, ಸ್ಥಳೀಯ ನಗರಸಭಾ ಸದಸ್ಯ ಚಂದ್ರು)

ಅವರನ್ನು ಹೊಡೆದು ರೈಲಿನಿಂದ ಎಳೆದು ಹಾಕಿದ್ದು ಸಾಲದೆಂದು ಪೊಲೀಸರ ಮೇಲೆ ಒತ್ತಡ ಹೇರಿ ಪೊಲೀಸ್ ತನಿಖೆಗೂ ಆರ್‌ಎಸ್‌ಎಸ್‌ನವರು ಒಳಪಡಿಸಿದರು. ಸ್ಥಳಕ್ಕೆ ಬಂದಿದ್ದ ಮಾಧ್ಯಮದವರಿಗೆ 'ಬಾಂಗ್ಲಾ... ಮುಸ್ಲಿಮರು... ಮಾದಕ ವಸ್ತು...' ಎಂದು ಏನೇನೋ ಹೇಳಿ ತಪ್ಪು ಮಾಹಿತಿ ನೀಡಿ ಹಾದಿ ತಪ್ಪಿಸಿದರು. ಹಿಂದಿ ಬಾರದ, ಸಂಪೂರ್ಣ ವಿಚಾರಿಸದೇ ಸ್ಕ್ರೋಲ್ ನ್ಯೂಸ್ ನೀಡಿದ್ದ ಪತ್ರಕರ್ತರ ದೆಸೆಯಿಂದ ಅಷ್ಟರಲ್ಲಾಗಲೇ ಮಂಡ್ಯ ರೈಲ್ವೇ ನಿಲ್ದಾಣದಲ್ಲಿ ಬಾಂಗ್ಲಾ ವಲಸಿಗರ ಬಂಧನ ಎಂಬ ಸುದ್ದಿ ಹರಿದಾಡಿತ್ತು.


ಅವರ ಕಥೆ ಕೇಳಿದಾಗ ಅವರು ಹೇಳಿದ್ದಿಷ್ಟು: ಮಂಗಳೂರಿಗೆ ಹೊರಟಿದ್ದ ಅವರನ್ನು ಯಾವುದೋ ಸಮಾವೇಶ ಮುಗಿಸಿಕೊಂಡು ಹೊರಟಿದ್ದ ಎಬಿವಿಪಿಗಳ ಚೆಡ್ಡಿ ಪಟಾಲಂ ಗಮನಿಸಿದೆ. ಮಾಸಲು ಬಟ್ಟೆ ಹಾಕಿಕೊಂಡು ಹಿಂದಿ ಮಾತನಾಡುತ್ತಿದ್ದ ಅವರನ್ನು ನೋಡುತ್ತಿದ್ದಂತೆ, ಬಾಂಗ್ಲಾ ವಲಸೆ, ದೇಶಭಕ್ತಿ ಇತ್ಯಾದಿ ಎಲ್ಲವೂ ಒಮ್ಮೆಲೇ ನೆನಪಾಗಿರಬೇಕು ಅವರಿಗೆ. ಆರ್‌ಎಸ್‌ಎಸ್ ಎಬಿವಿಪಿಗಳನ್ನು ಮೂಸಿ ನೋಡುವವರಿಲ್ಲದ ಮಂಡ್ಯದಲ್ಲಿ ಈ ಜನರನ್ನು ಹಿಡಿದು ಸುದ್ದಿ ಮಾಡಿದರೆ ರಾತ್ರೋರಾತ್ರಿ ಹೀರೋಗಳಾಗಬಹುದೆಂಬ ದೂ(ದು)ರಾಲೋಚನೆ ಹೊಳೆದಿದ್ದೇ, ಪುಂಡರು ಕಾರ್ಯಪ್ರವೃತ್ತರಾಗಿ ಹಿಂದಿ ಕೂಲಿಗಳ ಮೇಲೆ ಏಕಾಏಕಿ ದಾಳಿ ನಡೆಸಿದ್ದಾರೆ. ಇದೇನೆಂದು ತಿಳಿದಿದ್ದರೆ ಈ ಪುಡಿ ಪುಕ್ಕಗಳನ್ನೆಲ್ಲಾ ಚಿಂದಿ ಮಾಡುವಷ್ಟು ಸಂಖ್ಯೆಯಲ್ಲಿದ್ದ ಹಾಗೂ ಬಲಿಷ್ಠರೂ ಆಗಿದ್ದ ಕೂಲಿಕಾರ್ಮಿಕರು, ಅಪರಿಚಿತ ನೆಲದಲ್ಲಿ ಇದ್ದಕ್ಕಿದ್ದಂತೆ ನಡೆದ ಈ ಹಲ್ಲೆಯಿಂದ ಗೊಂದಲಕ್ಕೊಳಗಾಗಿದ್ದರಿಂದ ಮಾತ್ರವೇ ಸುಮ್ಮನಿದ್ದಾರೆ. ಅದನ್ನೇ ಅವಕಾಶವಾಗಿ ಬಳಸಿಕೊಂಡ ಚೆಡ್ಡಿಗಳು ಪೊಲೀಸರನ್ನೂ, ಪತ್ರಕರ್ತರನ್ನೂ ಸ್ಥಳಕ್ಕೆ ಕರೆಸಿದ್ದಾರೆ. (ಕೆಲವು ಪತ್ರಕರ್ತರು ಇದನ್ನೇ ಸುದ್ದಿ ಮಾಡಿದ್ದಾರೆ).

ಪೊಲೀಸ್ ತನಿಖೆ ನಂತರ ಈ ಗಾಳಿಸುದ್ದಿಯಲ್ಲಿ ಹುರುಳಿಲ್ಲ ಎಂಬುದು ಪೊಲೀಸರಿಗೂ ಪತ್ರಕರ್ತರಿಗೂ ಸ್ಪಷ್ಟವಾಗಿದೆ. ಆದರೆ ಪೊಲೀಸ್ ಇಲಾಖೆ ಇಲ್ಲಿ ವರ್ತಿಸಿರುವುದು ವಿಚಿತ್ರವಾಗಿದೆ. ಅಲ್ಲಿ ಇದ್ದ ಎಲ್ಲರೂ ಸಹ ಈ ದೇಶದ ನಾಗರಿಕರು ಎನ್ನುವುದು ಹೆಚ್ಚು ಕಡಿಮೆ ಗೊತ್ತಾದ ಮೇಲೂ, ಅದನ್ನು ಮತ್ತಷ್ಟು ವಿವರವಾಗಿ ಪರಿಶೀಲಿಸಲು ಡಿಜಿಯವರು ಬೆಂಗಳೂರಿಗೆ ಕರೆಸಿಕೊಂಡಿದ್ದಾರೆ ಮತ್ತು ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಕಾರ್ಮಿಕರನ್ನು ಅಮಾನವೀಯವಾಗಿ ಬಡಿದ ಸಂಘಪರಿವಾರದ ಪುಂಡರ ಮೇಲೆ ಇದುವರೆಗೂ ಯಾವುದೇ ಕ್ರಮ ಕೈಗೊಂಡಿರಲಿಲ್ಲ: ಏಕೆಂದು ಕೇಳಿದರೆ ಯಥಾಪ್ರಕಾರ ಯಾರೂ ದೂರು ಕೊಟ್ಟಿಲ್ಲ ಎಂಬ ಉತ್ತರ ಬಂತು. ಕಾನೂನು ಸುವ್ಯವಸ್ಥೆಗೆ ಭಂಗ ತರುವವರ ಮೇಲೆ ತಾವೇ ಪ್ರಕರಣ ದಾಖಲಿಸುವ ಎಲ್ಲಾ ಅಧಿಕಾರವೂ ಪೊಲೀಸರಿಗಿದೆ. ಅದನ್ನು ಸಣ್ಣಪುಟ್ಟದ್ದಕ್ಕೆಲ್ಲ ನ್ಯಾಯ ಕೇಳಿ ಧರಣಿ ಪ್ರತಿಭಟನೆ ನಡೆಸುವವರ ಮೇಲೆಲ್ಲಾ ಪ್ರಯೋಗಿಸುವ ಪೊಲೀಸರು ಇಂತಹ ಗಂಭೀರ ಪ್ರಕರಣದಲ್ಲಿ ದೂರಿಗಾಗಿ ಕಾಯುತ್ತಿದ್ದಾರೆ. ಸಭ್ಯರೂ, ಜವಾಬ್ದಾರಿಯುತ ಅಧಿಕಾರಿಗಳೂ ಎಂದು ಎಲ್ಲರೂ ಭಾವಿಸುವ ಮಂಡ್ಯ ಪೊಲೀಸರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಪೊಲೀಸರಿಂದ ತರಬೇತಿ ಯಾವಾಗ ಸಿಕ್ಕಿತೋ ಗೊತ್ತಿಲ್ಲ?

ಕರ್ನಾಟಕದಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿದ್ದನ್ನೇ ಅರಗಿಸಿಕೊಳ್ಳಲಾರದೆ ಸಾವಿರಾರು ಹಗರಣಗಳ ಕೆಸರಿನಲ್ಲಿ ಮುಳುಗಿರುವ ಬಿಜೆಪಿ ಮತ್ತು ಸಂಘಪರಿವಾರ ಅದನ್ನು ಸರಿಪಡಿಸಿಕೊಳ್ಳಲಾಗದಿದ್ದರೂ ಗಲಭೆಗಳಿಗೆ ಮಾತ್ರ ಕೊರತೆಯಿಲ್ಲ, ಈಗಾಗಲೇ ಜನರು ರೋಸಿಹೋಗಿದ್ದಾರೆ. ಇಂತಹ ಪ್ರಕರಣಗಳು ಹೆಚ್ಚಿದಷ್ಟೂ ಅವರ ಪಾಪದ ಕೊಡ ತುಂಬುವುದಂತೂ ನಿಜ!

• ಲಕ್ಷ್ಮಣ್ ಚೀರನಹಳ್ಳಿ

ಕೋಮು ಬೆಂಕಿಗೆ ತುಪ್ಪ ಸುರಿದವರು



ಮಂಗಳೂರು ಹೋಂ ಸ್ಟೆ ದಾಳಿಯಂತಹ ಅವ್ಯಾಹತ ಘಟನೆಗಳಿಂದಾಗಿ ಬ್ರಾಂಡ್ ಮಂಗಳೂರು ಇಮೇಜಿಗೆ ತೀವ್ರ ಧಕ್ಕೆ ಉಂಟಾಗಿ ದಕ್ಷಿಣ ಕನ್ನಡ ಜಿಲ್ಲೆಯ ಬೃಹತ್ ಶಿಕ್ಷಣ ವ್ಯಾಪಾರಿಗಳು ಆತಂಕಗೊಂಡು 'ಅರೈಸ್' ಆಗಿ ಎದ್ದು ಕುಳಿತಿದ್ದಾರೆ. ಇದನ್ನು ಹೀಗೇ ಬಿಟ್ಟರೆ ತಮ್ಮ ಅಂಗಡಿಗಳನ್ನು ಬೇಗನೇ ಮುಚ್ಚಬೇಕಾಗುತ್ತದೆ ಎಂಬುದು ಅವರಿಗೆ ಸ್ಪಷ್ಟವಾಗಿಬಿಟ್ಟಿದೆ.

ಇದು ಒಂದು ರೀತಿಯಲ್ಲಿ ಪುರಾಣದ ಬಸ್ಮಾಸುರನ ಕತೆಯಂತೆಯೇ ಆಗಿದೆ. ದೂ(ದು)ರಾಲೋಚನೆ ಇರಿಸಿಕೊಂಡು ಬಸ್ಮಾಸುರನನ್ನು ಸೃಷ್ಟಿಸಿದ ಮಂದಿಗೆ ಈಗ ಆತನನ್ನು ನಿಯಂತ್ರಿಸಲು ಆಗದೆ ಸಮಸ್ಯೆ ಅವರ ಬುಡಕ್ಕೇ ಬಂದು ನಿಂತಿದೆ. ಹಿಂದೂ ಸಮಾಜೋತ್ಸವದ ಹೆಸರಿನಲ್ಲಿ ಈ ಬಸ್ಮಾಸುರನನ್ನು ಸೃಷ್ಟಿಸಿ ಈಗ ಬಾಯಿ ಬಡಿದುಕೊಳ್ಳುತ್ತಿರುವವರು ಯಾರು? 2003 ರ ಈ ಚಿತ್ರದಲ್ಲಿ ಹಿಂದೂ ಸಮಾಜೋತ್ಸವದ ಗೌರವ ಅಧ್ಯಕ್ಷರು, ಮಾರ್ಗದರ್ಶಕರು ಯಾರ್‍ಯಾರು ಇದ್ದರು ಎನ್ನುವುದನ್ನು ಗಮನಿಸಿದರೆ ನಿಮಗೇ ತಿಳಿಯುತ್ತದೆ.


ಅದೇ ಹೊತ್ತಿನಲ್ಲಿ ಸ್ವಾಮೀಜಿಗಳಾಗುವುದು ಈ ಭಾಗದಲ್ಲಿ ಅತ್ಯಂತ ಲಾಭದಾಯಕ, ಆಕರ್ಷಕ ಮತ್ತು ಏನೇನೂ ಪರಿಶ್ರಮವಿಲ್ಲದ ಉದ್ಯೋಗವಾಗಿದ್ದು ಗಲ್ಲಿಗಲ್ಲಿಗಳಲ್ಲಿ ದಿನವೂ ಹೊಸ ಸ್ವಾಮೀಜಿಗಳು ಉದಯಿಸುತ್ತಿದ್ದಾರೆ. ಮತೀಯ ಗೆರೆಗಳಲ್ಲಿ ಸಮಾಜವನ್ನು ವಿಭಜಿಸುವ ಕಾರ್ಯದಲ್ಲಿ ನಾಮುಂದು ತಾಮುಂದು ಎಂದು ಅವರೆಲ್ಲರೂ ಕೈಜೋಡಿಸಿ ಕೆಲಸ ಮಾಡುತ್ತಿದ್ದಾರೆ. ಕೋಮು ಬೆಂಕಿಗೆ ತುಪ್ಪ ಎರೆದು ಅದೇ ಬೆಂಕಿಯಲ್ಲಿ ಯಜ್ಞಯಾಗ ನಡೆಸುತ್ತಿರುವ ಆ ಮಹನೀಯರ ಹೆಸರುಗಳನ್ನೂ ಗಮನಿಸಿ.

ಭಾರತ್ ಮಾತಾಕೀ ಜೈ!!

- ಶ್ರೀನಿವಾಸ ಕಾರ್ಕಳ, ಮಂಗಳೂರು

ಕುರುಂಜಿ ವೆಂಕಟ್ರಮಣ ಗೌಡ, ಗೌರವ ಅಧ್ಯಕ್ಷರು
ಮಾರ್ಗದರ್ಶಕರು: ಪಿರ್ಜ ಲಕ್ಷ್ಮೀನಾರಾಯಣ ಆಳ್ವ, ಎನ್. ವಿನಯ ಹೆಗ್ಡೆ, ಡಾ. ಮಾಧವ ಭಂಡಾರಿ

ಕೃಷ್ಣದೇವರಾಯ ವಿ.ವಿ.
ಮಂಜಪ್ಪನೇ ಗುಂಜಪ್ಪ



ನೂತನವಾಗಿ ಉನ್ನತ ಶಿಕ್ಷಣ ಸಚಿವರಾಗಿ ಅಧಿಕಾರ ವಹಿಸಿಕೊಂಡಿರುವ ಸಿ.ಟಿ.ರವಿಯವರು ತಮ್ಮ ಇಲಾಖೆಯ ಕೊಳಕನ್ನು ತೊಳೆಯುವ ಕೆಲಸವನ್ನು ಶ್ರೀಕೃಷ್ಣದೇವರಾಯ ವಿವಿಯಿಂದಲೇ ಆರಂಭಿಸಬೇಕಿದೆ. ಹೈದರಾಬಾದ್ ಕರ್ನಾಟಕದ ಶೈಕ್ಷಣಿಕ ಬೆಳವಣಿಗೆ ಹಾಗೂ ಪ್ರಾದೇಶಿಕ ಅಸಮಾನತೆ ಹೋಗಲಾಡಿಸುವ ನಿಟ್ಟಿನಲ್ಲಿ ಆರಂಭವಾದ ಈ ವಿವಿ ಬಾಲಗ್ರಹ ಪೀಡಿತವಾಗಿದ್ದು ಉಪಕುಲಪತಿಯಾಗಿ ವಕ್ಕರಿಸಿರುವ ಡಾ.ಮಂಜಪ್ಪ ಎಂಬಾತನಿಂದ ಅಕ್ರಮಗಳ ಹುತ್ತವಾಗಿದೆ.

ಇಲ್ಲಿ ನೇಮಕಾತಿಯಲ್ಲಿ ನಡೆದಿರುವ ಅಕ್ರಮ ಹಾಗೂ ಸ್ಥಳೀಯರ ಕಡೆಗಣನೆ ಬಗ್ಗೆ ವಿವರ ನೀಡುವ ಮೊದಲು ಡಾ.ಮಂಜಪ್ಪನ ಶೈಕ್ಷಣಿಕ ಹಿನ್ನೆಲೆ ಕುರಿತು ಒಂದಿಷ್ಟು ಕಿರು ಮಾಹಿತಿ ಕೊಡಬೇಕಿದೆ. ಈತ ಮೈಸೂರು ವಿವಿಗೆ ಬ್ಯಾಂಕ್ ಎಂಪ್ಲಾಯ್ ಆಗಿ ವಕ್ಕರಿಸಿದ್ದಾತ. ರಾಘವೇಶ್ವರ ಸ್ವಾಮೀಜಿ, ಯಡಿಯೂರಪ್ಪ ಪುತ್ರ ಹಾಗೂ ಲಿಂಬಾವಳಿ ಕೃಪೆಯಿಂದ ಈತ ಉಪಕುಲಪತಿ ಹುದ್ದೆ ಗಿಟ್ಟಿಸಿಕೊಂಡ. ಆಗ ಬಳ್ಳಾರಿಯ ರೆಡ್ಡಿ ಗ್ಯಾಂಗಿನ ಅರ್ಭಟ ಹೆಚ್ಚಾಗಿದ್ದರಿಂದ ಎಲ್ಲಿ ವಿರೋಧ ಬರುತ್ತದೆಯೋ ಎಂದು ಹೆದರಿ ಸಾಕ್ಷಾತ್ ಲಿಂಬಾವಳಿಯೇ ಬಂದು ಈತನನ್ನು ಜಾಯಿನ್ ಮಾಡಿಸಿ ಹೋದರೆಂದರೆ ಈತನ ಅಸಲೀಯತ್ತು, ಲಾಬಿಯ ಹಿನ್ನೆಲೆ ವೇದ್ಯವಾಗುತ್ತದೆ.

ಡಾ.ಮಂಜಪ್ಪನಿಗಿಂತ ಮೊದಲು ಇಲ್ಲಿ ವಿಶೇಷಾಧಿಕಾರಿಯಾಗಿದ್ದ ಡಾ.ಎಸ್.ಎ.ಬಾರಿ ಆರು ತಿಂಗಳ ಕಾಲ ವಿವಿಯ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಹಾಕಿದ್ದರು. ಆದರೆ ಮಂಜಪ್ಪ ಇಲ್ಲಿಗೆ ಬಂದು ಎರಡು ವರ್ಷ ಕಳೆದರೂ ಇಡೀ ವಿವಿಯಲ್ಲಿ ಒಂದೇ ಒಂದು ಕಟ್ಟಡ ಮೇಲೆದ್ದಿಲ್ಲ, ಪೀಠೋಪಕರಣ ಇಲ್ಲ. ಯಾವುದೇ ಹೊಸ ವಿವಿ ಆರಂಭವಾದಾಗ ಅಲ್ಲಿ ಮೂಲಸೌಕರ್ಯ ನೆಲೆಗೊಳಿಸುವುದು ಮೊದಲ ಆದ್ಯತೆಯಾಗಬೇಕು. ಉದಾಹರಣೆಗೆ ದಾವಣಗೆರೆ ವಿವಿ ಆರಂಭವಾಗಿ ಎಂಟು ವರ್ಷ ಕಳೆದರೂ ಅಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚು ಶ್ರಮ ಹಾಕಲಾಗುತ್ತಿದೆ ಹೊರತು ಅಲ್ಲಿನ್ನೂ ಫ್ಯಾಕಲ್ಟಿಗಳನ್ನು ತುಂಬಿಲ್ಲ.

ಆದರೆ ಬಳ್ಳಾರಿಯಲ್ಲಿ ಡಾ.ಮಂಜಪ್ಪ ಬಂದನಂತರ ಮಾಡಿದ ಮೊದಲ ಕೆಲಸವೆಂದರೆ ಸುಮಾರು 104 ಅಧ್ಯಾಪಕರ ಹುದ್ದೆ ತುಂಬಲು ಬೆಂಗಳೂರಿನಲ್ಲಿ ಗೌರ್ನರ್ ಕಚೇರಿ ಹಾಗೂ ಉನ್ನತ ಶಿಕ್ಷಣ ಸಚಿವಾಲಯದಲ್ಲಿ ಠಿಕಾಣಿ ಹೂಡಿ ಅನುಮೋದನೆ ಪಡೆಯಲು ಸರ್ಕಸ್ ಮಾಡಿದ್ದು.

ಎಲ್ಲಾ ವಿವಿಗಳಲ್ಲಿ ಪ್ರಾಧ್ಯಾಪಕರನ್ನು ಸೇವಾ ಹಿರಿತನದ ಮೇಲೆ ನೇಮಕ ಮಾಡಲಾಗುತ್ತದೆ. ಆದರೆ ಮಂಜಪ್ಪ ವಿವಿಯ ಬೆಳವಣಿಗೆಗೆ ಶ್ರಮಿಸಿದವರನ್ನೆಲ್ಲಾ ಕಡೆಗಣಿಸಿ ತನಗೆ ಬೇಕಾದವರನ್ನು ತಂದು ಪ್ರತಿಷ್ಠಾಪಿಸುವ ಕೈಂಕರ್ಯದಲ್ಲಿ ತೊಡಗಿದ್ದಾನೆ. ಇಲ್ಲಿ ಮೊದಲಿನಿಂದ ಕಾರ್ಯನಿರ್ವಹಿಸುತ್ತಿದ್ದ ವಾಣಿಜ್ಯ ವಿಭಾಗದ ಮುಖ್ಯಸ್ಥ ಡಾ.ಜಯಣ್ಣ ಕುಲಪತಿಯಾಗುವ ಅರ್ಹತೆ ಹೊಂದಿದ್ದವರು. ಸ್ಥಳೀಯವಾಗಿ ಈ ಭಾಗದ ಮಕ್ಕಳಿಗೆ ಅನುಕೂಲವಾಗಬೇಕೆಂಬ ಉದ್ದೇಶದಿಂದ ವಿವಿ ಸ್ಥಾಪನೆಯಾಗಲಿಕ್ಕೆ ಶ್ರಮಿಸಿದಂತವರು. ಜೊತೆಗೆ ಸ್ನಾತಕೋತ್ತರ ಕೇಂದ್ರದಲ್ಲಿ ಬೇರೆ ಬೇರೆ ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದ ಬೆಂಗಳೂರು, ಮೈಸೂರು ಭಾಗಗಳ ಪ್ರಾಧ್ಯಾಪಕರು ತಾವು ಬೇರೆ ಕಡೆ ವರ್ಗಾವಣೆ ಮಾಡಿಸಿಕೊಳ್ಳುವ ಉದ್ದೇಶದಿಂದ ಎಲ್ಲ ವಿಭಾಗಗಳನ್ನು ಗುಲ್ಬರ್ಗಾ ವಿವಿಗೆ ಸ್ಥಳಾಂತರಿಸಿದ್ದರು. ವಿವಿಯ 280 ಎಕರೆ ಭೂಮಿಯನ್ನು ಜಿಂದಾಲ್‌ಗೆ ಮಾರುವ ಪ್ರಯತ್ನ ನಡೆದಿತ್ತು. ಆಗ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಡಾ. ಮಲ್ಲಿಕಾ ಘಂಟಿ, ಎಂ.ವೈ.ಘೋರ್ಪಡೆಯವರ ಗಮನಕ್ಕೆ ತಂದು ಕೇವಲ 8 ವಿದ್ಯಾರ್ಥಿಗಳನ್ನು ಕಟ್ಟಿಕೊಂಡು ಹೋರಾಟ ಮಾಡಿ ಮತ್ತೆ 10 ವಿಭಾಗಗಳನ್ನು ವಾಪಸ್ಸು ತಂದರು. ರಸಾಯನ ಶಾಸ್ತ್ರ ವಿಭಾಗದ ಡಾ.ಸುರೇಶ್ ಎಂಬುವರು ಈ ಪ್ರಯತ್ನಗಳಿಗೆ ಬೆಂಬಲವಾಗಿ ನಿಂತರು.

ಇವರನ್ನೆಲ್ಲಾ ಬದಿಗೆ ಸರಿಸಿದ ಡಾ.ಮಂಜಪ್ಪ ಹಾಸನ ಪಿ.ಜಿ.ಕೇಂದ್ರದಿಂದ ಡಾ. ಡೊಂಗ್ರೆ ಎಂಬಾತನನ್ನು ಕರೆತಂದು ಕುಲಸಚಿವರನ್ನಾಗಿ ನೇಮಿಸಿದರು. ಇಲ್ಲಿ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಗಣಿಧಣಿ ಶ್ರೀರಾಮುಲು ಅವರನ್ನು ಪೆರಿಯಾರ್, ನಾರಾಯಣ ಗುರುಗೆ ಹೋಲಿಸಿ ಕೃತಾರ್ಥರಾದದ್ದಕ್ಕೆ ಅವರಿಗೆ ಪರೀಕ್ಷಾಂಗ ನಿಯಂತ್ರಕರ ಹುದ್ದೆ ದಯಪಾಲಿಸಲಾಯಿತು.

ನಂತರ ಅನಿರೀಕ್ಷಿತ ರಾಜಕೀಯ ಬೆಳವಣಿಗೆಗಳನ್ನು ಬಳಸಿಕೊಂಡು ಡಾ.ಮಂಜಪ್ಪ ತಮ್ಮ ಆಟ ಚಾಲೂ ಮಾಡಿದರು. 104 ಹುದ್ದೆಗಳ ಭರ್ತಿಗೆ ಸರಕಾರದಿಂದ ಅನುಮೋದನೆ ಪಡೆದರು. ಸಿಂಡಿಕೇಟ್ ಸಭೆಯಲ್ಲಿ ಮರು ಹಂಚಿಕೆ ಮಾಡಿ ಅಲ್ಲೊಂದು ಸಂಖ್ಯೆ ತೋರಿಸಿದರು. ನೋಟಿಫಿಕೇಶನ್ ಮಾಡುವಾಗ ತಮಗೆ ಯಾವ ವಿಭಾಗ ಬೇಕೋ ಅಲ್ಲಿ ನೇಮಕ ಮಾಡಿದರು.

ಸರಕಾರಕ್ಕೆ ಇಂಗ್ಲಿಷ್ 14, ಕನ್ನಡ 7, ಎಕನಾಮಿಕ್ಸ್ 7 ನೇಮಕಕ್ಕೆ ಅನುಮೋದನೆಗೆ ಕಳುಹಿಸಿ ಅನುಮೋದನೆ ಪಡೆದರು. ಸಿಂಡಿಕೇಟ್ ಸಭೆಯಲ್ಲಿ ಇಂಗ್ಲಿಷ್‌ಗೆ 11, ಕನ್ನಡ 6, ಎಕನಾಮಿಕ್ಸ್ 11 ಹುದ್ದೆಗಳಿಗೆ ಒಪ್ಪಿಗೆ ಪಡೆದರು. ಇಷ್ಟೂ ಹುದ್ದೆಗಳಿಗೆ ಮೈಸೂರು, ಮಂಗಳೂರು, ಬೆಂಗಳೂರು ಭಾಗದವರನ್ನು ನೇಮಕ ಮಾಡಿಕೊಂಡರು.

ಯಾವುದೇ ವಿವಿಯಲ್ಲಿ ಸ್ಥಳೀಯ ಭಾಷಾ ವಿಭಾಗಕ್ಕೆ ಮೊದಲು ನೇಮಕ ಮಾಡಿಕೊಳ್ಳುತ್ತಾರೆ. ಇದು ಆಂಧ್ರಪ್ರದೇಶದ ಗಡಿ ಭಾಗವಾಗಿದ್ದರೂ ಕನ್ನಡ ವಿಭಾಗ ತೆರೆಯಲೇ ಇಲ್ಲ. ಆಗಿರುವ ನೇಮಕಾತಿಯಲ್ಲೂ ನೋಟಿಫಿಕೇಶನ್‌ನಲ್ಲಿ ಸರಕಾರ, ಸಿಂಡಿಕೇಟ್ ಎರಡನ್ನೂ ದಿಕ್ಕು ತಪ್ಪಿಸಿದರು. ಈತನಿಗೆ ಪ್ರಾದೇಶಿಕ ದುರಭಿಮಾನ ಎಷ್ಟಿದೆಯೆಂದರೆ ತಾನು ಬರುವಾಗಲೇ ರೇವಣ್ಣ ಎಂಬ ಚಾಲಕನನ್ನು ಕರೆತಂದರು. ಸರಕಾರದಿಂದ ವಿಶೇಷ ಅನುಮತಿ ಪಡೆದು 12 ಸಾವಿರ ವೇತನ ಕೂಡಾ ನಿಗದಿಪಡಿಸಿದರು. ವಿಪರ್ಯಾಸವೆಂದರೆ ಇದೇ ಭಾಗದವರಾಗಿದ್ದುಕೊಂಡು ಮೊದಲಿನಿಂದ ಕ್ಯಾಂಪಸ್‌ನಲ್ಲಿ ಕೆಲಸ ಮಾಡುವ ಚಾಲಕರನ್ನು ತೆಗೆದುಹಾಕಿ ಹೀಗೆ ಮೈಸೂರಿನವರನ್ನು ನೇಮಕ ಮಾಡಿಕೊಂಡರು.

ಆಫೀಸ್ ಸೂಪರಿಂಟೆಂಡೆಂಟ್ ಆಗಿ ಬಾಲಕೃಷ್ಣ ಎಂಬಾತನನ್ನು ನೇಮಿಸಿಕೊಂಡು ಪಿಎ ಆಗಿಟ್ಟುಕೊಂಡಿದ್ದಾರೆ. ಎಸ್‌ಎಸ್‌ಎಲ್‌ಸಿ ಪಾಸಾಗಿರುವ ಆಸಾಮಿಗೆ ಈ ಹುದ್ದೆ ದಯಪಾಲಿಸಿದ ಹೆಮ್ಮೆ ಡಾ.ಮಂಜಪ್ಪನವರದೇ. ಕಟ್ಟಡ ನಿರ್ಮಾಣದ ಮೇಲುಸ್ತುವಾರಿಗೆ ಮೈಸೂರು ಕಡೆಯವರೊಬ್ಬರನ್ನು ನಿಯೋಜನೆ ಮೇಲೆ ಕರೆತಂದಿದ್ದಾರೆ. ಈಗ ಡ್ರೈವರ್ ರೇವಣ್ಣ ಮತ್ತು ಬಾಲಕೃಷ್ಣ ಇಬ್ಬರೂ ಎಡಬಲಗಳಂತೆ ಸಕಲ ಕೆಲಸಗಳಿಗೂ ಡಾ.ಮಂಜಪ್ಪನವರ ಸಹಾಯಕ್ಕೆ ನಿಂತಿದ್ದಾರೆ. ಇಂಜಿನಿಯರ್ ಇದೇ ಸೆಟ್‌ನಲ್ಲಿ ಸೇರಿಕೊಂಡು ಒಳ್ಳೇ ಬಿಸಿನೆಸ್ ಸಿಂಡಿಕೇಟ್ ಮಾಡಿಕೊಂಡಿದ್ದಾರೆ.


ಉಪಕುಲಪತಿಗಳಾಗಿ ತಾವೇನೋ ಮಹಾನ್ ಸಾಧನೆಗೆ ಮೈಲಿಗಲ್ಲು ಹಾಕಿದವರಂತೆ ಮೈಸೂರಿನಲ್ಲಿ 85 ಸಾವಿರ ವೆಚ್ಚದಲ್ಲಿ ಪಾರ್ಟಿ ಮಾಡುತ್ತಾರೆ. ಇದರ ಬದಲು ಬೆಂಗಳೂರಿನಲ್ಲೇ ತಜ್ಞರನ್ನು ಆಹ್ವಾನಿಸಿ ಚರ್ಚೆ ಮಾಡಬಹುದಿತ್ತು.

ವಿವಿಯಲ್ಲಿ ಯಾವುದೇ ಖರೀದಿ ನಡೆದರೂ ದುಬಾರಿ ಕೊಟೇಶನ್ ಹಾಕುವ ಮೈಸೂರು ಭಾಗದ ಏಜೆನ್ಸಿಗಳೇ ಇವರಿಗೆ ಅಚ್ಚುಮೆಚ್ಚು. ಸ್ಥಳೀಯರು ಕಡಿಮೆ ಕೊಟೇಶನ್ ಹಾಕಿದರೂ ಅವರಿಂದ ಯಾವ ವ್ಯವಹಾರವನ್ನೂ ಮಾಡುವುದಿಲ್ಲ. 10 ವರ್ಷದಿಂದ ಕೆಳಗೆ ಸ್ಥಳೀಯರೇ ಆದ ಶಿವಕುಮಾರ್ ಇಲ್ಲಿ ಲೇಬರ್ ಕಾಂಟ್ರ್ಯಾಕ್ಟರ್ ಆಗಿದ್ದರು. ಎಕ್ಸ್‌ಸರ್ವಿಸ್‌ಮನ್ ಆಗಿದ್ದರಿಂದ ಒಳ್ಳೇ ಸರ್ವಿಸ್ ಕೂಡಾ ನೀಡುತ್ತಿದ್ದರು. ಪ್ರತಿ ಲೇಬರ್‌ಗೆ ಮೂರು ಸಾವಿರ ತೆಗೆದುಕೊಳ್ಳುತ್ತಿದ್ದರು. ಮುಂದೊಂದು ದಿನ ಈ ಕಾರ್ಮಿಕರಿಗೆ ಕಾಯಂ ಆಗಬಹುದೆಂಬ ನಿರೀಕ್ಷೆ ಇತ್ತು.

ಡಾ.ಮಂಜಪ್ಪ ಬಂದ ತಕ್ಷಣ ಇವರಿಗೆ ಕೊಕ್ ನೀಡಿ ಧಾರವಾಡದ ಏಜೆನ್ಸಿಯೊಂದಕ್ಕೆ ದುಬಾರಿ ಕೊಟೇಶನ್‌ಗೆ ಕಂಟ್ರಾಕ್ಟ್ ಕೊಟ್ಟರು. ಈ ಏಜೆನ್ಸಿ ಹಿಡಿದುಕೊಂಡು ಬಂದವನು ಸೂಪರಿಂಟೆಂಡೆಂಟ್ ಬಾಲಕೃಷ್ಣ

ಕ್ಯಾಂಪಸ್‌ನಲ್ಲಿನ ಅಧ್ಯಾಪಕರು ಮತ್ತು ಸಿಬ್ಬಂದಿಯೇ ಪರೀಕ್ಷಾ ಸಿದ್ಧತೆ ನಡೆಸಿದರೆ ಒಬ್ಬ ವಿದ್ಯಾರ್ಥಿಗೆ 90 ಪೈಸೆ ಖರ್ಚಾಗುತ್ತದೆ. ಆದರೆ ನೌಕರರಿಲ್ಲ ಎಂಬ ನೆಪದಲ್ಲಿ ಮೈಸೂರಿನ ಏಜೆನ್ಸಿಯೊಂದಕ್ಕೆ ಇದರ ಗುತ್ತಿಗೆ ನೀಡಿದರು. ಅವರು ಒಬ್ಬ ವಿದ್ಯಾರ್ಥಿಗೆ 97 ರೂ. ಚಾರ್ಜು ಮಾಡುತ್ತಿದ್ದಾರೆ. ಎಲ್ಲಿಯ 90 ಪೈಸೆ, ಎಲ್ಲಿಯ 97 ರೂಪಾಯಿ? ಈ ಹಕೀಕತ್ತುಗಳೆಲ್ಲಾ ಇಲ್ಲಿನ ವ್ಯವಹಾರಗಳು ನಡೆಯಬೇಕಾದ ಹಾದಿಯಲ್ಲಿ ನಡೆಯುತ್ತಿಲ್ಲ ಎಂಬುದಕ್ಕೆ ನಿದರ್ಶನಗಳು ಮಾತ್ರ.

ಈಗ ನೇಮಕಾತಿ ವಿಷಯಕ್ಕೆ ಬರೋಣ. ಡೀನ್‌ರ ಸಭೆಯಲ್ಲಿ ಉನ್ನತ ಶಿಕ್ಷಣ ಸಚಿವಾಲಯ ಮತ್ತು ರಾಜ್ಯಪಾಲರ ಕಚೇರಿಗೆ ಹುದ್ದೆಗಳ ಮಂಜೂರಾತಿಗೆ 25 ಲಕ್ಷ ನೀಡಿದ್ದೇನೆ ಎಂದು ಹೇಳಿದ್ದಾನೆ. ಈ ವಿಷಯ ಕೇಳಿ ಸಭೆಯಲ್ಲಿ ಕೆಲ ಡೀನ್‌ಗಳು ಹೌಹಾರಿ ಹೋಗಿದ್ದಾರೆ. ಮೊದಲು ಉನ್ನತ ಶಿಕ್ಷಣ ಸಚಿವಾಲಯ ಮತ್ತು ಗೌರ್ನರ್ ಕಚೇರಿ ಇದನ್ನು



ಸ್ಪಷ್ಟಪಡಿಸಬೇಕು. ಸದ್ಯಕ್ಕೆ ಇಷ್ಟೊಂದು ಹುದ್ದೆಗಳ ನೇಮಕಾತಿಯ ಅಗತ್ಯವೂ ಇರಲಿಲ್ಲ. ವಿವಿಯ ತರಗತಿಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ. ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲಿಕ್ಕೇ ಜಾಗವಿಲ್ಲ. ನೇಮಕವಾದ ಅಧ್ಯಾಪಕರು ಎಲ್ಲಿ ಕೂರುತ್ತಾರೆಂಬುದೇ ಗೊತ್ತಿಲ್ಲ. ಬೇಸಿಗೆ ರಜೆಯಲ್ಲಿ ಕುಡಿಯುವ ನೀರು ಸಿಗಲ್ಲವೆಂಬ ಕಾರಣಕ್ಕೆ ಬೇಗ ಪಾಠಪ್ರವಚನ ಮುಗಿಸಿ ತರಗತಿ ಬಂದ್ ಮಾಡಿದರು. ಇವತ್ತಿನ ತನಕ ಕುಡಿಯುವ ನೀರಿನ ವ್ಯವಸ್ಥೆಯೇ ಆಗಿಲ್ಲ ಎಂಬುದು ಅಲ್ಲಿನ ದಯನೀಯ ಸ್ಥಿತಿಗೆ ಕನ್ನಡಿಯಷ್ಟೇ.


ಪರೀಕ್ಷಾ ವಿಭಾಗದಲ್ಲಿ ಸ್ಥಳೀಯರು ಗೌಪ್ಯತೆ ಕಾಪಾಡಿಕೊಳ್ಳುವುದಿಲ್ಲ ಎಂಬ ಕಾರಣಕ್ಕೆ ಡಾ.ರಂಗರಾಜು ಶಿವಮೊಗ್ಗದಿಂದ ತಮಗೆ ಬೇಕಾದವರನ್ನು ಕರೆತಂದಿದ್ದಾರೆ. ಪ್ರತಿ ವಿಭಾಗದಲ್ಲೂ ಸ್ಥಳೀಯರನ್ನು ಕಡೆಗಣಿಸಲಾಗುತ್ತಿದೆ ಎಂದು ಡಾ.ಮಲ್ಲಿಕಾಘಂಟಿ ಆಕ್ಷೇಪವೆತ್ತಿದರೆ ವಿವಿ ಇರುವುದು ಉದ್ಯೋಗ ಕೊಡಲಿಕ್ಕಲ್ಲ ಎಂದು ಡಾ.ಮಂಜಪ್ಪ ಹೇಳಿದ್ದಾರೆ. ಇದಕ್ಕೆ ಮಲ್ಲಿಕಾಘಂಟಿ ವಿವಿ ಇರುವುದು ಸರ್ಟಿಫಿಕೇಟ್ ನೀಡುವುದಕ್ಕೂ ಅಲ್ಲ ಎಂದು ಹೇಳಿ, ನಮ್ಮ ಭಾಗದ ವಿದ್ಯಾರ್ಥಿಗಳು ಓದುವುದು ಜ್ಞಾನಕ್ಕಾಗಿ ಅಲ್ಲ, ಹೊಟ್ಟೆ ತುಂಬಿಸಿಕೊಳ್ಳಲಿಕ್ಕಾಗಿ ಎಂದಿದ್ದಾರೆ.

ಕಾಮರ್ಸ್, ಪೊಲಿಟಿಕಲ್ ಸೈನ್ಸ್, ಇಂಗ್ಲಿಷ್, ರಸಾಯನ ಶಾಸ್ತ್ರ ವಿಭಾಗ ಸೇರಿದಂತೆ ಹತ್ತಿರತ್ತಿರ 50ಕ್ಕೂ ಹೆಚ್ಚು ಅಧ್ಯಾಪಕರ ನೇಮಕವಾಗಿದೆ. ಇದರಲ್ಲಿ ಪ್ರೊಫೆಸರ್, ಅಸೋಸಿಯೇಟ್ ಪ್ರೊಫೆಸರ್, ಅಸಿಸ್ಟೆಂಟ್ ಪ್ರೊಫೆಸರ್ ಸೇರಿ ಬೆರಳೆಣಿಕೆ ಅಧ್ಯಾಪಕರನ್ನು ಹೊರತುಪಡಿಸಿ ಬಹುತೇಕ ಅನರ್ಹರನ್ನೇ ನೇಮಕ ಮಾಡಿಕೊಳ್ಳಲಾಗಿದೆ. ಯುಜಿಸಿ ನಿಯಮಾವಳಿಗಳು ಇಲ್ಲಿ ಕಾಲುಮುರಿದುಕೊಂಡು ಬಿದ್ದಿವೆ. ಈ ಭಾಗದ ಅನೇಕ ಪ್ರತಿಭಾವಂತರು, ಅರ್ಹರು, ಸೇವಾನುಭವ ಹೊಂದಿದ ಪ್ರಾಧ್ಯಾಪಕರು ಡಾ.ಮಂಜಪ್ಪನ ಸ್ವಾರ್ಥಕ್ಕೆ ಅವಕಾಶ ವಂಚಿತರಾಗಿದ್ದಾರೆ.

ವಿವಿಯ ನೇಮಕಾತಿ ಪ್ರಕ್ರಿಯೆಗಳಿಗೆ ಒಮ್ಮೆ ಕ್ಷಕಿರಣ ಹಿಡಿದರೇ ಸಾಕು. ಮಂಜಪ್ಪನ ಬಂಡವಾಳ ಬಯಲಾಗುತ್ತದೆ. ನೇಮಕಾತಿಯಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ ಹೇಳಿಕೆ ನೀಡಿದರೆಂಬ ಕಾರಣಕ್ಕೆ ಎಂ.ಪಿ. ಪ್ರಕಾಶ್‌ರ ಪುತ್ರ ರವೀಂದ್ರ ಹಾಗೂ ಹೋರಾಟಗಾರ ಪೊನ್ನರಾಜ್ ಮೇಲೆ ಕೇಸು ದಾಖಲಿಸಿದ್ದಾನೆ.

ನೇಮಕಾತಿ ನಡೆಯುವಾಗ ಮೊದಲ ದಿನದ ಸಂದರ್ಶನದಲ್ಲಿ ಪಾಲ್ಗೊಳ್ಳದ ಹೈದರಾಬಾದ್ ಮೂಲದ ಆಯ್ಕೆ ಸಮಿತಿ ಸದಸ್ಯರೊಬ್ಬರು ಮರುದಿನ ಹಾಜರಾಗಿ ಡಾ.ಮಂಜಪ್ಪ ಹೇಳಿದವರಿಗೆಲ್ಲಾ ಅಗತ್ಯವಿರುವಷ್ಟು ಅಂಕ ನೀಡಿದ್ದಾರೆ. ಅಭ್ಯರ್ಥಿಗಳ ಸಾಮರ್ಥ್ಯ ನೋಡದೇ ಇವರು ಅಂಕ ನೀಡಿದ್ದಾದರೂ ಹೇಗೆಂಬುದು ಯಕ್ಷಪ್ರಶ್ನೆಯಾಗಿದೆ. ಇದರ ಜೊತೆಗೆ ತಮಗೆ ಬೇಕಾದವರನ್ನು ನೇಮಕಾತಿ ಮಾಡಿಕೊಳ್ಳಲು ನೇಮಕಾತಿ ಸದಸ್ಯರಿಗೆ ಭರ್ಜರಿ ಅಂಕ ಕೊಡಿಸಿದ್ದಾರೆ. ಬೇಡದವರಿಗೆ 2,3,5 ಹೀಗೆ ಅಂಕ ದಯಪಾಲಿಸುವಂತೆ ನೋಡಿಕೊಂಡಿದ್ದಾರೆ. ಸ್ಕ್ರೂಟಿನಿ ಕಮಿಟಿ ನಿರಾಕರಿಸಿದವರನ್ನೂ ಕುಲಪತಿಗಳು ನೇಮಕ ಮಾಡಿಕೊಂಡಿದ್ದಾರೆ.

ಯಾವುದೇ ನೇಮಕಾತಿ ವಿಷಯದಲ್ಲಿ ಗೌಪ್ಯತೆ



ಕಾಪಾಡಿಕೊಳ್ಳಬೇಕೆಂಬುದು ನಿಯಮ. ಸಿ
ಸಭೆಯಲ್ಲೇ ಕವರ್ ತೆರೆದು ಪ್ರಕಟಿಸಬೇಕು. ನೇಮಕ
ಸಂದರ್ಶನ ದಿನದಂದೇ ವಿವಿಯಲ್ಲಿ ಪಾರ್ಟಿ
ಸಿಂಡಿಕೇಟ್ ಸಭೆಯ ದಿನ ಆರ್ಡರ್ ನಿರೀಕ್ಷೆಯ
ಹಾಜರಾಗಿದ್ದಾರೆ. ಇದೆಲ್ಲಾ ಅವರಿಗೆ ಹೇಗೆ ತಿ
ಇದಕ್ಕೆ ಉತ್ತರಿಸುವವರು ಯಾರು? ತಮ್ಮ ಇಷ್ಟ
ಸಹಕರಿಸುವುದಿಲ್ಲ ಎಂದು ಹೊರಗಿನಿಂದ ಎಲ್ಲರನ್ನ
ಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳುವ
ಮಾಡಿದ್ದಾರೆಂಬುದಕ್ಕೆ ಎಷ್ಟು ನಿದರ್ಶನ ಬೇಕು

ವಿವಿಯ ವಿದ್ಯಮಾನಗಳು ಎಷ್ಟರಮಟ್ಟಿಗೆ
ವಾದುವೆಂದರೆ ಪ್ರಾದೇಶಿಕ ಅಸಮತೋಲನದ ಸ್ಥ
ನಡೆದ ಸಂವಾದವೊಂದರಲ್ಲಿ ಡಾ.ಮಲ್ಲಿಕಾಘಂಟ
ಸಭಿಕರೊಬ್ಬರು ನಿಮ್ಮ ವಿವಿಯಲ್ಲೇ ಸ್ಥಳೀಯರನ್ನು
ಹೊರಗಿನ ಪ್ರದೇಶದವರಿಗೆ ಮಣೆ ಹಾಕಿದ್ದೀರಿ
ವಿವರಣೆ ನೀಡಿ ಎಂದು ಕೇಳಿದ್ದಾರೆ. ಮಲ್ಲಿ
ವಾಸ್ತವಾಂಶ ಒಪ್ಪಿಕೊಂಡಿದ್ದಾರೆ. ಇದೇ
ಡಾ.ಮಲ್ಲಿಕಾಘಂಟಿಯವರ ಮೇಲೆ ಘೋಷಿತ
ಹಾಕಲಾಗಿದೆ. ಅವರೊಂದಿಗೆ ಯಾವ ಅಧ್ಯ
ಸಿಬ್ಬಂದಿಯೂ ಮಾತನಾಡಬಾರದು ಎಂದು ಸೂಚ
ಇಡೀ ವಿಶ್ವವಿದ್ಯಾಲಯದಲ್ಲಿ ಇರುವ ಒಬ್ಬೇ ಒಬ್ಬ
ಉದ್ಯೋಗಿಯೊಬ್ಬರನ್ನು ನಡೆಸಿಕೊಳ್ಳುತ್ತಿರುವ ವಿಧಾ
ಈ ಕೇಂದ್ರವನ್ನು ಉಳಿಸಿಕೊಳ್ಳಲು ಏನೆಲ್ಲಾ ಹ
ಪಟ್ಟವರಿಗೆ ಸಿಕ್ಕ ಬಹುಮಾನ ಇದು.

ಇಲ್ಲಿದ್ದ ಹತ್ತು ವಿಭಾಗಗಳಲ್ಲಿ ಕೇವಲ 5
ರೂಗಳಿಗೆ ಕೆಲಸ ಮಾಡುತ್ತಿದ್ದ ಅತಿಥಿ ಉಪನ್ಯಾ
ತೆಗೆದು ಹಾಕಿ ಬೆಂಗಳೂರು, ಮೈಸೂರಿನಿಂದ 2
ವೇತನ ನೀಡಿ ಕರೆಸಿಕೊಂಡಿದ್ದಾರೆ. ಈ ನಿರ್ಧಾರ
ಈ ಭಾಗದ ಅದೆಷ್ಟೋ ಉಪನ್ಯಾಸಕರು
ವಂಚಿತರಾಗಿದ್ದಾರೆ. ವಿಪರ್ಯಾಸವೆಂದರೆ ವಿವಿಯ
ಆಡಳಿತಾತ್ಮಕ ನಿಯಮ ಅನುಮೋದನೆಯ
ತಿಂಗಳಾಗಿದ್ದರೂ ಅದನ್ನು ಮುಚ್ಚಿಟ್ಟು ಎಲ್ಲ ನೇ
ಮಾಡಲಾಗಿದೆ. ಡಾ.ಮಲ್ಲಿಕಾಘಂಟಿ, ಡಾ.ಸು
ಡಾ.ಜಯಣ್ಣ ಇವರಿಗೆ ಯಾವುದೇ ಹುದ್ದೆ
ವಂಚಿಸಲಾಗಿದೆ.

ಈಗ ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ
ನೀಡಲಾಗಿದೆ. ಈ ಸಂಸತ್ತಿನಲ್ಲೇ ವಿಶೇಷ
ಅನುಮೋದನೆಯಾಗಲಿದೆ. ಆಗ ಉದ್ಯೋಗಾವಕಾ
ಇಲ್ಲಿನವರಿಗೆ ಆದ್ಯತೆ ನೀಡಬೇಕಾಗುತ್ತದೆ ಎಂದು
ಆದಷ್ಟು ತರಾತುರಿಯಲ್ಲಿ ನೇಮಕಾತಿ ಮಾಡಿ ವ
ಸರ್ಕಸ್ ನಡೆಸುತ್ತಿದ್ದಾರೆ ಡಾ.ಮಂಜಪ್ಪ. ಇತ್ತೀಚೆಗೆ ಕೇ
ವಿದ್ಯಾಲಯಕ್ಕೆ ನೇಮಕವಾದ ಡಾ.ಯು.ಆರ್.ಅನಂತ
ಯವರು ಕೇಂದ್ರೀಯ ವಿವಿಯ ನೇಮಕಾತಿಯಲ್ಲಿ
ಸಿಬ್ಬಂದಿಯಲ್ಲಿ ಶೇ 40 ಹಾಗೂ ಬೋಧಕೇತರ
ಯಲ್ಲಿ ಶೇ 80ರಷ್ಟನ್ನು ಸ್ಥಳೀಯರಿಗೆ ಮೀಸಲಿಡ
ಹೇಳಿದ್ದಾರೆ. ಕೃಷ್ಣ ದೇವರಾಯ ವಿವಿಗೆ ವಕ್ಕ
ಡಾ.ಮಂಜಪ್ಪ ಮಾತ್ರ ಮೈಸೂರು, ಬೆಂಗ
ಮಂಗಳೂರಿನವರನ್ನು ಭರ್ತಿ ಮಾಡಿ ಕೃತಾರ್ಥ
ಹೊರಟಿದ್ದಾರೆ.

ವಿವಿಯಂತಹ ಅಕಾಡೆಮಿಕ್ ಸಂಸ್ಥೆಗಳಿಗೆ ಈ
ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅವಗಾಹನೆ ಇಲ್ಲ
ನೇಮಿಸಿದರೆ ಏನೆಲ್ಲಾ ಅನಾಹುತ ಮಾಡ
ಎಂಬದುಕ್ಕೆ ಡಾ.ಮಂಜಪ್ಪನೇ ಒಳ್ಳೆಯ ಉದಾ

ಇಡೀ ವಿವಿಯಲ್ಲಿ ನಡೆಯುತ್ತಿರುವ ವಿದ್ಯ
ಕೇವಲ ಯಾರಿಗೋ ಕೆಲಸ, ಹುದ್ದೆಗಳ ಸಿಗುವ ಪ್ರಶ್ನೆ
ನೋಡುವುದು ಹೈದರಾಬಾದ್ ಕರ್ನಾಟಕದ
ವಿಶೇಷವಾಗಿ ಉನ್ನತ ಶಿಕ್ಷಣ ವಲಯದಲ್ಲಿ ಕೆಲಸ
ಅರ್ಹತೆ ಇದ್ದೂ ಅದರಿಂದ ವಂಚಿತರಾಗುವ ಅ
ಯುವಜನತೆಗೆ ಮಾಡುವ ಮಹಾವಂಚನೆಯ
ಅಷ್ಟರಮಟ್ಟಿಗೆ ಈ ಸಮಸ್ಯೆ ಕುರಿತು ಈ
ಕಾಳಜಿಯುಳ್ಳ ಪ್ರಜ್ಞಾವಂತರೆಲ್ಲಾ ಇದರ ಬಗ್ಗೆ ದನಿಯ
ವಿಶೇಷವಾಗಿ ಹೈದರಾಬಾದ್ ಕರ್ನಾಟಕಕ್ಕೆ
ಕೊಡುಗೆ ನೀಡುವುದಾಗಿ ಕೊಚ್ಚಿಕೊಳ್ಳುತ್ತಿರುವ
ಸರಕಾರ ಇಲ್ಲಿನ ಆಗುಹೋಗುಗಳ ಪರಿಶೀಲನೆ
ಮಾಡಿ ಸ್ಥಳೀಯವಾಗಿ ಅರ್ಹರಿಗೆ ಸೂಕ್ತ ಪ್ರಾತಿನಿಧ್ಯ
ಮುಂದಾಗಬೇಕು. ಇಲ್ಲವಾದಲ್ಲಿ ಹೈದರಾಬಾದ್ ಕ
ಜನರಿಗೆ ಉದ್ಯೋಗ-ಶಿಕ್ಷಣಾವಕಾಶಗಳಲ್ಲಿ
ನೀಡಬೇಕೆಂಬುದು ಕೇವಲ ಪ್ರಚಾರದ, ಸಯುವ
ಘೋಷಣೆಯಾಗಿ ಉಳಿಯುತ್ತದೆ.

• ವರದ

ರ್ಣಚಂದ್ರ ತೇಜಸ್ವಿಯವರ ಬರಹಗಳನ್ನು ಓದಿರುವವರಿಗೆ ಕೆನೆತ್ ಆಂಡರ್ಸನ್ ಚಿರಪರಿಚಿತ. ನ ಪ್ರತಿ ಚಲನೆಯನ್ನು ನಿಖರವಾಗಿಯೂ, ಸರಳವಾಗಿಯೂ ಆಂಡರ್ಸನ್ ಲ್ಲವರಾಗಿದ್ದರು. ಜೊತೆಗೆ ಅವರು ನೀಡುವ ವ್ಯಕ್ತಿ ಹಾಗೂ ಜೀವನ ಚಿತ್ರಗಳು ಒಂದು ಕಾವ್ಯದಂತಿರುತ್ತವೆ. ಅಂತಹ ಒಂದು ಕೃತಿ 'A Night In The Spider Valley' ನ್ನು ನಡಹಳ್ಳಿ ವಸಂತ್ ಅವರು 'ಜೇಡರ ಕಣಿವೆಯಲ್ಲೊಂದು ರಾತ್ರಿ' ಎಂದು ಕನ್ನಡಕ್ಕೆ ಹವಾಗಿ ಅನುವಾದ ಮಾಡಿದ್ದಾರೆ. ಕಾಡಿನ ರಮ್ಯತೆ, ಕಾಡುಪ್ರಾಣಿಗಳಿಂದ ಆಗುವ ಮಗಳು, ಆಂಡರ್ಸನ್ ಅವರ ಮಿತ್ರ ಎರಿಕ್ ನ್ಯೂಕೂಂಬ್ ಮಾಡಿಕೊಳ್ಳುವ ಎಡವಟ್ಟುಗಳು ಲ್ಲವೂ ಇರುವ ಈ ಬರಹವನ್ನು ನಾಲ್ಕು ವಾರಗಳ ಕಾಲ ಪ್ರಕಟಿಸುತ್ತಿದ್ದೇವೆ.

1 'ಜೇಡರ ಕಣಿವೆಯಲ್ಲೊಂದು ರಾತ್ರಿ'


ಎರಿಕ್ ಎಂಬ ಎಡವಟ್ಟ

ಮೂಲ: ಕೆನೆತ್ ಆಂಡರ್ಸನ್
ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಥೆಯ ಪ್ರಮುಖ ಪಾತ್ರಧಾರಿ ಎರಿಕ್ ನ್ಯೂಕೂಂಬ್ ಮತ್ತು ನಾನು ಲಿಂದಲೂ ಸ್ನೇಹಿತರು. ನಮ್ಮ ಸ್ನೇಹಕ್ಕೆ ಮುಖ್ಯ ಕಾರಣ ಎರಿಕ್‌ನ ನ ತಂಗಿ! ಎರಿಕ್ ಮುಗ್ಧನಾದರೂ, ದುರದೃಷ್ಟವಶಾತ್ ತಾನು ಲ್ಲಿ ಕಷ್ಟಗಳನ್ನು ಆಹ್ವಾನಿಸುತ್ತಿದ್ದ. ಅವನಿದ್ದಲ್ಲಿ ಅಹಿತಕರ ಘಟನೆಗಳು ದು ಖಾತ್ರಿಯಾಗಿಬಿಟ್ಟಿತ್ತು.

ಶಾಲಾದಿನಗಳಲ್ಲಿ ನಾವು ಆಗಾಗ ತೋಟಗಳಿಗೆ ದಾಳಿಯಿಡುತ್ತಿದ್ದೆವು ತಗಳ ವೇಷದಲ್ಲಿ ಹುಡುಗಿಯರ ಹಾಸ್ಟೆಲ್‌ನ ಸುತ್ತಲೂ ತಿರುಗಿ ದರಿಸುತ್ತಿದ್ದೆವು. ಆ ಎಲ್ಲಾ ಸಂದರ್ಭಗಳಲ್ಲಿಯೂ ನಾವು ಸುಲಭವಾಗಿ ತ್ತಿದ್ದೆವು. ಆದರೆ ಎರಿಕ್ ಜೊತೆಗಿದ್ದಾಗ ಮಾತ್ರ ಹಾಗಾಗುತ್ತಿರಲಿಲ್ಲ! ಡುಗಿಯರನ್ನು ಹೆದರಿಸಿ, ಬೆನ್ನಟ್ಟಿ ಬರುತ್ತಿದ್ದ ನನ್‌ಗಳನ್ನು ತಪ್ಪಿಸಿಕೊಂಡು ಹಾರಿದಾಗ ನಾವು ಬಿದ್ದದ್ದು-ಅದಾವುದೋ ಹೇಳಬಾರದ ಕೆಲಸದಿಂದ ಲ್ಲಿ ಹಿಂತಿರುಗುತ್ತಿದ್ದ ನಮ್ಮ ಮುಖ್ಯೋಪಾಧ್ಯಾಯರ ಪದತಲದಲ್ಲಿ!

ಎರಿಕ್ ಒಬ್ಬ ಹುಡುಗಿಯನ್ನು ಪ್ರೀತಿಸುತ್ತಿದ್ದ, ಆದರೆ ಹುಡುಗಿಯ ಅದನ್ನು ಬಲವಾಗಿ ವಿರೋಧಿಸುತ್ತಿದ್ದರು. ಒಮ್ಮೆ ತನ್ನ ಪ್ರೇಯಸಿಯನ್ನು ಗೋಡೆ ಹಾರಿಹೋಗಲು ಯತ್ನಿಸಿ ಕೈಮುರಿದುಕೊಂಡಿದ್ದ. (ಅದೇ ನ್ನು ಮುಂದೆ ಮದುವೆಯೂ ಆದ ಎನ್ನಿ) ನನ್ನ ಜೊತೆ ಚಿರತೆಯ ದರಲ್ಲಿ ಅವನು ಚೆನ್ನಾಗಿ ಗಾಯಗೊಂಡಿದ್ದ. ಹುಂಬನಂತೆ ಸರ್ಕಸ್ ಒಂದನ್ನು ನೈದಡವಲು ಹೋಗಿ ಡಿದ್ದ ಮಳೆಸುರಿಯುತ್ತಿದ್ದ ರಾತ್ರಿಯೊಂದ ದಿ ಬೇಟೆಗೆ ಹೋದಾಗ, ನಾನು ಹಿಂದಿರುಗಿದರೂ, ಎರಿಕ್ ರಾತ್ರಿಯೆಲ್ಲಾ ತೊಯ್ದು ನ್ಯುಮೋನಿಯಾ ತಗುಲಿಸಿ ಹೀಗೆ ಅವನ ಹುಂಬ ಸಾಹಸ ಬೆಳೆಯುತ್ತದೆ. ವಿಪರ್ಯಾಸ ನ ಎಲ್ಲಾ ಅವಘಡಗಳಿಗೂ ಡತಿ ನನ್ನನ್ನೇ ದೂಷಿಸು



ಎರಿಕ್ ಒಂದು ದಿನ ಕಾಡಿನಲ್ಲಿ ರಾತ್ರಿ ಕೆಂದು ಹೇಳಿದಾಗ ಷ್ಟು ಆಸಕ್ತಿ ತೋರಿಸ ಸಾಹಸವನ್ನು ಹೆಚ್ಚು ಕರವಾಗಿಸಲು ನಾವು ಮತ್ತು ಟಾರ್ಚ್‌ನ್ನು ತೆಗೆದುಕೊಂಡು ಕೆಂದು, ಯಾವುದೇ ಆಯುಧಗಳನ್ನು ಜೊತೆಗಿಟ್ಟುಕೊಳ್ಳಬಾರದೆಂದು ಬಹೆ ಮಾಡಿದ. ಅವನ ಎಡವಟ್ಟುತನದ ಅರಿವಿದ್ದ ನನಗೆ ನಾವು ಮತ್ತು ಟಾರ್ಚ್‌ನ್ನೂ ಒಯ್ಯಬಾರದೆಂದು ಅವನು ಹೇಳದಿದ್ದುದೇ ನಿಸಿತು!

ಎಷ್ಟೇ ಬೇಜವಾಬ್ದಾರಿಯ ಮನುಷ್ಯನಾಗಿದ್ದರೂ ಅತ್ಯಂತ ನಿಗರ್ವಿ, ಗಳು ಮತ್ತು ಕಾಡಿನ ಬಗ್ಗೆ ಆಸಕ್ತಿ ಇದ್ದವ ಮತ್ತು ಇಷ್ಟವಾಗುವಂತಹ ಕೃತ್ಯಗಳು ತನಗೆ ಮತ್ತು ತನ್ನ ಸಂಗಾತಿಗಳಿಗೆ ತರಬಹುದಾದ ಅರಿವು ಅವನಿಗೆ ಆಗುತ್ತಲೇ ಇರಲಿಲ್ಲ. ಸಾಹಸಗಳಿಗೆ ನಾನು ದ್ದರೂ ನತದೃಷ್ಟನೆಂಬ ಪ್ರಖ್ಯಾತಿಯ ಈ ಎರಿಕ್‌ನೊಡನೆ ಕಾಡಿನ ಣಕ್ಕೆ ಹೋಗಲು ಅನುಮಾನಪಡುತ್ತಿದ್ದೆ.

ಹಳೆಯ ಬರಹಗಳನ್ನು ಓದಿದವರಿಗೆ ಸೇಲಮ್ ಜಿಲ್ಲೆಯಲ್ಲಿರುವ ರಿನ ಪರಿಚಯವಿರಬೇಕು. ಅಯ್ಯೂರು ಎಂಬ ಚಿಕ್ಕ ಹಳ್ಳಿಯಿಂದ ಮಾರು ಇಪ್ಪತ್ತು ಮೈಲಿ ಹಬ್ಬಿರುವ ಈ ದಟ್ಟ ಕಾಡು, ಎರಡು ಗಳ ಮಧ್ಯದ ಕಣಿವೆಯನ್ನು ಆವರಿಸಿಕೊಂಡಿದ್ದು, ಚಾರಣಿಗರಿಗೆ ಸಂಗದಲ್ಲಿ ಚಲಿಸುವ ಅನುಭವವನ್ನು ನೀಡುತ್ತದೆ.

ಡಿನ ಉದ್ದಕ್ಕೂ ನೀರಿನ ಝರಿಯೊಂದು ಹರಿಯುತ್ತದೆ ಮತ್ತು ಒಮ್ಮೊಮ್ಮೆ ಅದನ್ನು ಹಾದುಹೋಗುವ-ಕಾಲುದಾರಿಯೊಂದಿದೆ. ಸ ಅಡಿ ಎತ್ತರದ ಗುತೇರಾಯನಗುಡ್ಡದ ಇಳಿಜಾರಿನಲ್ಲಿರುವ ಪ್ರವಾಸಿಮಂದಿರದಿಂದ ಈ ಕಾಡಿನ ಅದ್ಭುತ ನೋಟವನ್ನು ದು.

ಈ ಕಾಡನ್ನು ನಮ್ಮ ರಾತ್ರಿ ಚಾರಣದ ಸಾಹಸಕ್ಕೆ ಆರಿಸಿಕೊಂಡಿದ್ದಕ್ಕೆ, ಕಾಡಿನ ಇಲ್ಲಿರುವ ಸಮೃದ್ಧ ಪಕ್ಷಿಜೀವಿಗಳು. ಆನೆ, ಕಾಡೆಮ್ಮೆ, ಕರಡಿ, ಚುಕ್ಕಿಜಿಂಕೆ, ಕಾಡುಕುರಿಗಳಲ್ಲದೆ, ವಿವಿಧ ರೀತಿಯ ಗಳು ಮತ್ತು ಹಾವುಗಳು, ಅದರಲ್ಲೂ ಹೆಬ್ಬಾವುಗಳನ್ನು ಇಲ್ಲಿ ನೋಡಬಹುದು,



ಸಡನ್ ಡೆತ್

ಆಗಿನ ದಿನಗಳಲ್ಲಿ ನನ್ನ ಹತ್ತಿರ ಮಿಲಿಟರಿಯಿಂದ ಇನ್ನೂರೈವತ್ತು ರೂಪಾಯಿಗಳಿಗಿಂತ ಕಡಿಮೆ ಹಣಕ್ಕೆ ಖರೀದಿಸಿದ ಹದಿಮೂರು ಮಾಡೆಲ್ ಟಿ ಫೋರ್ಡ್ ವಾಹನಗಳಿದ್ದವು! ಈ ವಾಹನಗಳನ್ನು ದುರಸ್ತಿ ಮಾಡಿ ನನ್ನ ಕಾಡಿನ ತಿರುಗಾಟದಲ್ಲಿ ಉಪಯೋಗಿಸುತ್ತಿದ್ದೆ. ಇವುಗಳಲ್ಲಿ ಅತ್ಯಂತ ಕಡಿಮೆ ಬೆಲೆಗೆ ಅಂದರೆ ಹನ್ನೆರಡು ರೂಪಾಯಿ(!)ಗೆ ಖರೀದಿಸಿದ್ದ ಒಂದು ವಾಹನವಿತ್ತು. ಅದನ್ನು ಮಿಲಿಟರಿ ಹರಾಜ್‌ನಲ್ಲಿ ಕೊಂಡಾಗ ಅದರಲ್ಲಿ ಬರೀ ಛಾಸಿ, ಇಂಜಿನ್ ಮತ್ತು ಚಕ್ರಗಳು ಮಾತ್ರ ಇದ್ದವು. ಇದರ ಛಾಸಿಯ ಮೇಲೆ ಬಹುಪಯೋಗಿಯಾಗಬಲ್ಲ ಒಂದು ಪೆಟ್ಟಿಗೆಯಂತಾದ್ದನ್ನು ನಾನೇ ಮಾಡಿಸಿ ಕೂರಿಸಿದ್ದೆನು. ಇದರಲ್ಲಿ ನನ್ನ ಬೇಟೆಯ ಉಪಕರಣಗಳನ್ನು ಇಡಬಹುದಾಗಿತ್ತಲ್ಲದೆ, ಪೆಟ್ಟಿಗೆಯನ್ನು ಮರದ ಮೇಲೆ ಕಟ್ಟಿದರೆ ಮಚಾನಿನಂತೆಯೂ, ನೆಲದಲ್ಲಿ ಗುಂಡಿಯ ಮೇಲೆ ಕೂರಿಸಿದರೆ ಹೊರ ಜಗತ್ತಿಗೆ ಮರೆಯ ರೂಪದಲ್ಲಿಯೂ ಉಪಯೋಗಿಸಬಹುದಿತ್ತು. ಪೆಟ್ರೋಲ್ ಟ್ಯಾಂಕಿನ ಮೇಲೆ ಕೂರಿಸಿದ ಒಂದು ಆರಾಮದಾಯಕ ಬೆತ್ತದ ಕುರ್ಚಿಯೇ ಚಾಲಕನ ಆಸನವಾಗಿತ್ತು. ಜೊತೆಗಾರರಿದ್ದಾಗ ಇಂತಹದೇ ಇನ್ನೊಂದು ಕುರ್ಚಿಯನ್ನು ಎಡಭಾಗದಲ್ಲಿ ಕಟ್ಟಿರುತ್ತಿದ್ದೆ. ವಾಹನಕ್ಕೆ ಮಡಗಾರ್ಡ್‌ಗಳೇನು ಇರಲಿಲ್ಲ; ನನ್ನ ಕಪ್ಪು ಕನ್ನಡಕಗಳೇ ವಾಹನದ ಎದುರಿನ ಗಾಜಿನಂತೆ ಕೆಲಸ ಮಾಡುತ್ತಿತ್ತು. ಇದು ಎರಿಕ್‌ನ ಪ್ರೀತಿಯ ವಾಹನವಾಗಿದ್ದು ಇದಕ್ಕೆ ಅವನು "ಸಡನ್ ಡೆತ್" ಎಂದು ಹೆಸರಿಟ್ಟಿದ್ದ.

ಈ ಸಡನ್ ಡೆತ್‌ನ ಇನ್ನೆರಡು ವಿಶೇಷಗಳಿದ್ದವು. ಆ ದಿನಗಳಲ್ಲಿ ಸೀಮೆಎಣ್ಣೆ ಪೆಟ್ರೋಲ್‌ನ ಅರ್ಧ ಬೆಲೆಗೆ ದೊರಕುತ್ತಿತ್ತು. ಹಾಗಾಗಿ ನಾನು ಗುಜರಿಯಿಂದ ಆರಿಸಿತಂದ ಒಂದು ವಿಶೇಷ ಕಾರ್ಬುರೇಟರ್‌ನ್ನು ಇದಕ್ಕೆ ಅಳವಡಿಸಿದ್ದೆ. ಇದರಿಂದಾಗಿ ವಾಹನವನ್ನು ಪೆಟ್ರೋಲ್‌ನಲ್ಲಿ ಚಾಲೂ ಮಾಡಿದ ನಂತರ ಸೀಮೆಎಣ್ಣೆಯಲ್ಲಿ ಓಡಿಸಬಹುದಾಗಿತ್ತು. ಅದೂಅಲ್ಲದೆ ಇದರ ಹಿಂದಿನ ಚಕ್ರಕ್ಕೆ ಅಳವಡಿಸಿದ ಒಂದು ಆಕ್ಸೆಲ್‌ನಿಂದಾಗಿ, ಅದಕ್ಕೆ ಮಾಮೂಲಾಗಿ ಇದ್ದ ಎರಡು ಗೇರ್‌ಗಳಲ್ಲದೆ ಅತಿ ನಿಧಾನವಾಗಿ ಮತ್ತು ಅತಿ ವೇಗವಾಗಿ ಓಡಲು ಸಹಾಯವಾಗಬಲ್ಲ ಇನ್ನೆರಡು ಗೇರ್‌ಗಳು ಕೆಲಸ ಮಾಡುತ್ತಿದ್ದವು. ಹಾಗಾಗಿ ಸಮತಟ್ಟಾದ ಜಾಗದಲ್ಲಿ ಇತರ ವಾಹನಗಳಿಗಿಂತ ವೇಗವಾಗಿ ಓಡುತ್ತಿದ್ದ ಇದು ಎತ್ತರವನ್ನು ಸುಲಭವಾಗಿ ಹತ್ತಿಬಿಡುತ್ತಿತ್ತು.

ಮಿಲಿಟರಿಯವರು ಈ ವಾಹನವನ್ನು ಗುಜರಿಯಾಗಿ ಮಾರಿದ್ದರಿಂದ ಇದಕ್ಕೆ ರಿಜಿಸ್ಟ್ರೇಷನ್ ಇರಲಿಲ್ಲ ಮತ್ತು ವಾಹನದ ಬಾಡಿಯೇ ಇಲ್ಲದೆ ಬರೀ ಛಾಸಿಯೊಂದೇ ಇದ್ದ ಇದನ್ನು ರಿಜಿಸ್ಟ್ರೇಷನ್ ಮಾಡಿಸುವುದೂ ಸಾಧ್ಯವಿರಲಿಲ್ಲ. ಹಾಗಾಗಿ ನಾನೊಂದು ಕಂತ್ರಿ ಕೆಲಸ ಮಾಡಬೇಕಾಯಿತು! ರಿಜಿಸ್ಟ್ರೇಷನ್ ಅರ್ಜಿಯಲ್ಲಿ ಸಡನ್ ಡೆತ್‌ನ ಛಾಸಿ ಮತ್ತು ಇಂಜಿನ್ ನಂಬರ್‌ಗಳನ್ನು ಬರೆದು ಅದರ ಮೇಲೆ ತೆಗೆದು ಹಾಕಬಲ್ಲಂತಹ ಚೀಟಿಯಲ್ಲಿ ಇನ್ನೊಂದು ವಾಹನದ ವಿವರಗಳನ್ನು ಬರೆದು ಅಂಟಿಸಿದೆ. ಅದೇ ವಾಹನವನ್ನು ಕಚೇರಿಗೆ ಕೊಂಡೊಯ್ದು ರಿಜಿಸ್ಟ್ರೇಷನ್ ಮಾಡಿಸಿ ನಂತರ ಅದರ ವಿವರಗಳನ್ನು ಅರ್ಜಿಯಿಂದ ಅಳಿಸಿ ಹಾಕಿದಾಗ ಸಡನ್ ಡೆತ್ ಕಾನೂನುಬದ್ಧ ವಾಹನವಾಯಿತು!

ಇದೇ ಸಡನ್ ಡೆತ್‌ನಲ್ಲಿ ನಾನು ಮತ್ತು ಎರಿಕ್ ಅಯ್ಯೂರಿನ ಪ್ರವಾಸಿಮಂದಿರವನ್ನು ಸೇರಿದೆವು. ಅಲ್ಲಿ ರಾತ್ರಿಯೂಟವನ್ನು ಮುಗಿಸಿ ನಮ್ಮ ಆಹಾರ, ಇತರ ಸಾಮಾನು ಸರಂಜಾಮುಗಳು ಮತ್ತು ಟಾರ್ಚ್‌ನೊಂದಿಗೆ ಕಾಡಿನತ್ತ ಹೆಜ್ಜೆ ಹಾಕತೊಡಗಿದೆವು.

ಮೊದಲ ಅನುಭವ


ಕಾಡಿನೊಳಗೆ ಒಂದು ಮೈಲಿನಷ್ಟು ನಡೆದು ನಾವು ಚಾರಣ ಮಾಡಬೇಕಾದ ಹಳ್ಳದ ಬಳಿ ತಲುಪಿದೆವು. ನೇರವಾಗಿ ಬೀಳುತ್ತಿದ್ದ ನನ್ನ ಟಾರ್ಚ್‌ನ ಬೆಳಕಿಗೆ ಹಸಿರಾದ ಬೀದಿ ದೀಪಗಳ ಸಾಲಿನಂತೆ ಹೊಳೆಯುತ್ತಿದ್ದ ಕಣ್ಣುಗಳು ಎದುರಾಯಿತು. ನನ್ನ ಟಾರ್ಚ್ ಬೆಳಕನ್ನು ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದ ಚುಕ್ಕಿ ಜಿಂಕೆಗಳ ಗುಂಪು ಅಲ್ಲಿ ನೀರು ಕುಡಿಯಲು ಬಂದಿದ್ದವು. ನಾನು ನಡುಬಗ್ಗಿಸಿ ಹಾಗೇ ನೋಡುತ್ತಾ ನಿಂತೆ. ಆದರೆ ಎರಿಕ್ ಮಾಮೂಲಿನಂತೆ ಎಡವಟ್ಟು ಕೆಲಸ ಮಾಡಿದ. ಕಾಲುದಾರಿಯನ್ನು ಬಿಟ್ಟು ಹಳ್ಳದ ಕಡೆ ನಡೆದು ಮುಳ್ಳುಗಳಲ್ಲಿ ಬಟ್ಟೆ ಸಿಕ್ಕಿಸಿಕೊಂಡು ಸಾಕಷ್ಟು ಶಬ್ದ ಮಾಡಿದ್ದಲ್ಲದೆ, ನನ್ನ ಟಾರ್ಚ್‌ನ ಬೆಳಕಿನ ಎದುರು ಬೆಳಕಿನಲ್ಲಿ ಬಂದು ನಿಂತ. ತಮ್ಮ ಕ್ರೂರ ಶತ್ರುವಾದ ಮನುಷ್ಯಾಕೃತಿಯನ್ನು ಗುರುತಿಸಿದ ಜಿಂಕೆಗಳು ಒಟ್ಟಾಗಿ ಕಾಲಿಗೆ ಬುದ್ಧಿ ಹೇಳಿದವು.

ಅಷ್ಟರಲ್ಲೇ ಮತ್ತೊಂದು ಶಬ್ದ ಕೇಳಿಸಿತು, "ವೂಫ್, ವೂಫ್, ವೂಫ್". ಯಾವುದೋ ಕರಡಿಯೊಂದು ನೀರು ಕುಡಿಯಲು ಬಂದಿದೆ. ಬಹುಷಃ ಅದು ನಮ್ಮ ದಾರಿಯಲ್ಲೇ ನಮಗಿಂತ ಸ್ವಲ್ಪ ಮುಂಚೆ ನಡೆದುಹೋಗಿದೆ. ಕಣ್ಣು ಕಿವಿಗಳಾವುದೂ ಸೂಕ್ಷ್ಮವಿಲ್ಲದ ಕರಡಿ, ಅಲ್ಲಿಯವರೆಗೂ ನಮ್ಮನ್ನು ಗಮನಿಸಿರದಿದ್ದರೂ ಎರಿಕ್‌ನ ಗಲಾಟೆಯಿಂದ ಎಚ್ಚೆತ್ತುಕೊಂಡು, ಗಡಿಬಿಡಿಯಲ್ಲಿ ನೇರವಾಗಿ ಎರಿಕ್‌ನ ಕಡೆ ನುಗ್ಗಿಯೇಬಿಟ್ಟಿತು. ಹುಂಬ ಎರಿಕ್ ಆಗೇನು ಮಾಡಿರಬಹುದು, ಹೇಳಿ-ತನ್ನಿಂದ ಕೆಲವೇ ಅಡಿ ದೂರದಲ್ಲಿದ್ದ ಕರಡಿಯ ಕಡೆಗೆ ತನ್ನ ಟಾರ್ಚ್‌ನ್ನೇ ಎಸೆದುಬಿಟ್ಟ! ತನ್ನೆದುರು ಬರುತ್ತಿದ್ದ ಬೆಳಕಿನ ಕಡೆಗೆ ನುಗ್ಗುತ್ತಿದ್ದ ಕರಡಿ, ಬೆಳಕೇ ತನ್ನ ಕಡೆ ನುಗ್ಗಿ ಮುಖಕ್ಕೆ ಬಡಿದಾಗ, ಕಂಗಾಲಾಗಿ ಪಕ್ಕಕ್ಕೆ ತಿರುಗಿ ಓಡಿಬಿಟ್ಟಿತು. ಮುಳ್ಳುಗಳಿಂದ ಬಟ್ಟೆ ಹರಿದುಕೊಳ್ಳುತ್ತಾ ಬಿಡಿಸಿಕೊಂಡು ಬಂದ ಎರಿಕ್, "ಕರಡಿ!" ಎಂದು ಉದ್ಗರಿಸಿದ!

ನಾನು ಮೌನವಾಗಿ ನಡೆಯತೊಡಗಿದೆ. ನಮ್ಮ ಮುಂದಿನ ಗುರಿ ಚಿನಾರ್ ನದಿಯಾಗಿದ್ದು ಅದು ಅಲ್ಲಿಂದ ಇಪ್ಪತ್ತು ಮೈಲಿ ದೂರವಿತ್ತು. ನಮ್ಮ ಚಿಕ್ಕ ಕಾಲುದಾರಿ ಕೆಳಗಿಳಿಯುತ್ತಾ ಜೇಡರ ಕಣಿವೆಯನ್ನು ಪ್ರವೇಶಿಸಿದಂತೆ ಕಾಡು ದಟ್ಟವಾಗುತ್ತಾ ಹೋಯಿತು. ನಮ್ಮ ಟಾರ್ಚ್‌ನ ಬೆಳಕಿನಲ್ಲಿ ಲಂಟಾನಾದ ಕೆಂಪು ಕೇಸರಿ, ಗುಲಾಬಿ ಹೂವುಗಳು ಹೊಳೆಯುತ್ತಿತ್ತು. ಅಲ್ಲಿಂದ ಮುಂದೆ ಬಿದಿರಿನ ಮೆಳೆಗಳಲ್ಲಿ ನಮ್ಮ ನಡಿಗೆ ಸಾಗಿತ್ತು. ಆಗಲೇ ಆನೆಯೊಂದು ಬಿದಿರಿನ ಮೆಳೆಯೊಂದನ್ನು ಬೀಳಿಸಿ, ಅವಕ್ಕೆ ಪ್ರಿಯವಾದ ತುದಿಯಲ್ಲಿರುವ ಎಳೆ ಎಲೆಗಳು ಮತ್ತು ಹೊರಕವಚವನ್ನು ಕೀಳುವ "ವ್ಹೀಕ್" ಎನ್ನುವ ಸದ್ದು ಕೇಳಿಸಿತು. ಛೇ, ಈ ಆನೆಗಳಾದರೂ ಎಂತಹ ದಂಡದ ಪ್ರಾಣಿಗಳು, ಕೆಲವೇ ಮುಷ್ಟಿಯಷ್ಟು ಸಿಗುವ ಆಹಾರಕ್ಕಾಗಿ ಇಡೀ ಮೆಳೆಗಳನ್ನೇ ಉರುಳಿಸುತ್ತವೆಯಲ್ಲ!

ಈ ಆನೆ ಏಕಾಕಿಯೋ ಅಥವಾ ಹಿಂಡಿನಲ್ಲಿದೆಯೋ ತಿಳಿಯದೆ ನಾವು ಅಲ್ಲೇ ಕುಳಿತು ಕಾಯತೊಡಗಿದೆವು. ಆನೆ ಎಲೆಗಳನ್ನೆಲ್ಲಾ ಸೊಂಡಿಲಲ್ಲಿ ಕಬಳಿಸಿ ಮುಕ್ಕುತ್ತಿರುವ ಸದ್ದು ಕೇಳಿತು. ಕೆಲವೇ ಕ್ಷಣಗಳ ನಂತರ "ಫುತ್, ಫುತ್" ಸದ್ದು ಆಮೇಲೆ ದೀರ್ಘವಾದ "ಊಶ್...." ಸದ್ದು. ಓಹೋ ಮನುಶ್ಯನ ಪ್ರಾತರ್ವಿಧಿಗಳನ್ನು ಆನೆ ಈಗಲೇ ಪೂರೈಸುತ್ತಿದೆ.

ಆನೆ ಬಹುಶಃ ಏಕಾಕಿಯಾಗಿತ್ತು ಮತ್ತು ನಾವಂದುಕೊಂಡದ್ದಕ್ಕಿಂತ ನಮ್ಮ ಹತ್ತಿರ ಇತ್ತು. ಅದಕ್ಕಿಂತ ಅಪಾಯದ ಸಂಗತಿಯೆಂದರೆ ಗಾಳಿ ನಮ್ಮ ಕಡೆಯಿಂದ ಆನೆಯ ಕಡೆಗೆ ಬೀಸುತ್ತಿದ್ದುದರಿಂದ ಕೆಲವೇ ಕ್ಷಣಗಳಲ್ಲಿ ಅದು ನಮ್ಮ ವಾಸನೆ ಹಿಡಿಯುತ್ತಿತ್ತು. ಇಂತಹ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಆನೆಗಳು ತಮ್ಮ ದಾರಿ ಹಿಡಿದುಹೋಗಿಬಿಡುತ್ತವೆ. ಕೆಲವೊಮ್ಮೆ ತಮ್ಮ ಇರವನ್ನು ಪ್ರಕಟಿಸದೆ



ಸದ್ದು ಮಾಡದೆ ನಿಂತು ಮನುಷ್ಯರು ಹೋಗುವುದನ್ನು ಕಾಯಬಹುದು ಅಥವಾ ಗೊತ್ತಿಲ್ಲದೆ ಹತ್ತಿರ ಬಂದವನ ಮೇಲೆ ಪ್ರಾಣಾಂತಿಕ ಹಲ್ಲೆ ಮಾಡಬಹುದು. ಬೆದೆಗೆ ಬಂದಾಗ ಕೂಡ ತಾವಾಗಿಯೇ ಮುನ್ನುಗ್ಗಿ ಮನುಷ್ಯನ ಮೇಲೆ ಆಕ್ರಮಣ ಮಾಡುವುದು ತೀರಾ ಅಪರೂಪ. ಹಾಗಾಗಿ ನಾನು ಎರಿಕ್‌ನನ್ನು ಎಳೆದುಕೊಂಡು ಎಡಕ್ಕೆ ನಡೆಯಬೇಕೆನ್ನುವಷ್ಟರಲ್ಲಿ "ಕ್ಲಿಂಕ್, ಕ್ಲಿಂಕ್" ಎನ್ನುವ ಮರಿಯಾನೆಯ ಸದ್ದು ಕೇಳಿಸಿದಾಗ ಧೈರ್ಯಗೊಂಡೆ. ಯಾಕೆಂದರೆ ಗುಂಪಿನಲ್ಲಿದ್ದಾಗ ಆನೆಗಳು ಮನುಷ್ಯನ ಮೇಲೆ ದಾಳಿ ಮಾಡುವುದಿಲ್ಲ. ಒಂಟಿ ಸಲಗವಾಗಿದ್ದರೆ ನಾವು ಎಚ್ಚರ ವಹಿಸಲೇಬೇಕಿತ್ತು.

ಸಾಮಾನ್ಯ ಸಂದರ್ಭಗಳಲ್ಲಿ ಘಟನೆಗಳು ಅದೇರೀತಿ ನಡೆಯಬೇಕಿತ್ತು. ಆದರೆ ವಾಸ್ತವದಲ್ಲಿ ಹಾಗಾಯಿತೇ?

(ಮುಂದುವರೆಯುತ್ತದೆ)

ಓದುಗರಿಗೆ ಇದು ಮಿಲೆನಿಯರ ಪ್ರಶ್ನೆಯಂತೆ ಕಾಣಿಸುತ್ತಿರಬಹುದು. ಆದರೆ ಇದು ಸತ್ಯ.

ಇಪ್ಪತ್ತೊಂದನೆಯ ಶತಮಾನ ಏನೆಲ್ಲ ಆವಿಷ್ಕಾರಕ್ಕೆ ಕಾರಣವಾಗಿದೆ. ಮಂಗಳ ಲೋಕಕ್ಕೆ ಹೋಗಿ ಮನೆ ಕಟ್ಟಿಕೊಂಡು ಬದುಕುವಷ್ಟು ಮನುಷ್ಯ ಭೌತಿಕವಾಗಿ ಬದಲಾಗಿರುವನು. ಆದರೆ ಆತನೊಳಗಿನ ಲೋಕವಿದೆಯಲ್ಲ ಅದು ಹೊಲಸು ನಾರುತ್ತಿದೆ. ನಮ್ಮಂತಹ ದೇಶಗಳಲ್ಲಿ ತುಕ್ಕು ಹಾಕಿಕೊಂಡಿರುವ ಸಾಮಾಜಿಕ ಸಮಸ್ಯೆಗಳನ್ನು ಬಿಡಿಸಲು ಒಂದಕ್ಕೆ ಹೊಡೆದರೆ ಇನ್ನೊಂದರ ಕಣ್ಣಲ್ಲಿ ರಕ್ತ ತುಂಬಿಕೊಂಡು ಸಾರ್ವಜನಿಕ ಬದುಕಿನಲ್ಲಿ ಟೀಕಿಸುತ್ತಿರುವುದನ್ನು ಯಾವ ಭಾಷಾ ಪಂಡಿತರು ಪ್ರಶ್ನಿಸಿಲ್ಲ. ಗಂಡಸರು ಹೆಣ್ಣಿನ ಮೇಲೆ ಅಂತಿಮ ಜಯಕ್ಕಾಗಿ ಬಳಸುವ ಬ್ರಹ್ಮಾಸ್ತ್ರವೆಂದರೆ 'ಸೀರೆ ಕಳೆದು ಚರ್ಮಸುಲಿಯುವಂಗ ಹೊಡೆಯುವುದು' ಎಂದು ಭಾವಿಸಿದೆ. ಈ ಗಂಡಸರಿಂದ ಸೀರೆ ಕಳೆಯಿಸಿಕೊಳ್ಳುವ ಹೆಂಗಸರು ಕೂಡಿ ಒಂದಾಗಿ ತಿರುಗಿ ಬೀಳಲು ಸಾಧ್ಯವಾಗದ ಹಾಗೇ ಅರಿಶಿನ ಕೆನ್ನೆಯ ಮುತ್ತೈದೆಯರು ಪತಿವ್ರತಾ ಧರ್ಮಪಾಲಿಸಲು ಸೀರೆಯೊಳಗಿನ ಶೀಲವನ್ನು ಸರಿಪಡಿಸಿಕೊಳ್ಳುವ ಸಂಭ್ರಮದಲ್ಲಿ ಕಳೆದು ಬನಾರಸ್ಸಿನವುಗಳು ಇರುತ್ತವೆ ಎಂಬುದು ನಮ್ಮ ದಲಿತ ಲೋಕದಿಂದ ಬಂದ ಮೋಟಮ್ಮನವರಿಗೆ ಈಗಲಾದರೂ ಅರ್ಥವಾಗಿರಬಹುದು. ಇನ್ನೊಬ್ಬ ಮಹಿಳಾ ರಾಜಕಾರಣಿ ದೇಶಭಕ್ತಿಯ ವಾರಸುದಾರಿಕೆಯನ್ನು ಹೊತ್ತವಳು ತಾವು ಮಹಿಳೆಯೆನ್ನುವ ಪ್ರಾಥಮಿಕ ಜ್ಞಾನವಿಲ್ಲದ ಹಾಗೆ ಮಾತನಾಡಿದ ಮಾತುಗಳು ಜನರ ನೆನಪಿನ ಕಡತದಿಂದ ತೆಗೆದುಹಾಕಲು ಸಾಧ್ಯವಾಗುತ್ತಿಲ್ಲ. ನಮ್ಮ ಮಹಿಳೆಯರು ಸೀರೆ ರಾಜಕಾರಣ ಮಾಡುತ್ತಿಲ್ಲ, ಪಕ್ಷ ರಾಜಕಾರಣ ಮಾಡುತ್ತಿರುವರು. ಯಾವುದೇ ಪಕ್ಷದಲ್ಲಿರಲಿ, ರಾಜ್ಯದ ಮಹಿಳಾ ಆಯೋಗಗಳಿಗೆ ಮಹಿಳೆ ಅಧ್ಯಕ್ಷರನ್ನಾಗಿ ನೇಮಿಸುವಾಗ ಪಕ್ಷರಾಜಕಾ ತೀರ್ಮಾನಗಳನ್ನು ತೆಗೆದುಕೊಳ್ಳುವುದರಿಂದ ಪಕ್ಷದಾ ನೀಡಿದ ಭಿಕ್ಷೆಯ ಫಲವಾದ ಅಧಿಕಾರವನ್ನು ವಿವೇ ಲಿಂಗಸೂಕ್ಷ್ಮತೆಯಿಂದ ನಡೆಸಲು ಸಾಧ್ಯವಾಗು ವೆಂಬುದಕ್ಕೆ ನಮ್ಮೆದುರಿಗೆ ಬೇಕಾದಷ್ಟು ಪುರ ಪುರಾವೆಗಳನ್ನು ಒದಗಿಸುತ್ತವೆ. ಲಿಂಗನೆಲೆಯ ದಬ್ಬಾ ದೌರ್ಜನ್ಯಗಳನ್ನು ತಡೆಯುವ ಸಲುವಾಗಿ ನೇಮ ಸಂಸ್ಥೆಗಳಲ್ಲಿ ಕುಳಿತವರು ಬರೀ ಸೀರೆಯುಟ್ಟವರೆ ಆಗ

ಸೀರೆ ಉಟ್ಟವರೆಲ್ಲ ಹೆಂಗಸರಲ್ಲ

ಜಿನುಗುತ್ತಿರುತ್ತದೆ. ಹೀಗಾಗಿ ಹೆಂಗಸರೆಂದು ಸ್ತ್ರೀವಾದಿ ಸೈದ್ಧಾಂತಿಕ ತಿಳಿವಳಿಕೆಯಿಂದ ಮಹಿಳೆಯರನ್ನು ಮೇಲು ಗಟ್ಟಿದರೆ ಅವರೊಳಗಿನ ಜಾತಿ, ವರ್ಗ ಗುರಾಯಿಸುತ್ತಿರುತ್ತದೆ. ಜಾತಿವರ್ಗದ ಗಂಟನ್ನು ಬಿಡಿಸಲು ಹೋದರೆ ಹೆಂಗಸರ ಜಡೆಗಳೆಲ್ಲ ಜೋತಾಡುತ್ತಿರುತ್ತವೆ. ಈ ಸಂಕೀರ್ಣತೆಯನ್ನು ಹುಟ್ಟು ಹಾಕಿದ ಮೂಲ ಮಾತ್ರ ಒಂದೆ ಎಂಬುದನ್ನು ಜಾತಿ, ಕುಲ, ಜಡೆ, ಹಸಿವು ಬಡತನಗಳೆಲ್ಲ ಅರಿಯದೆ ಹೋಗಿರುವುದರಿಂದ ತೋಂಡಿ, ಹಿಂದೂತ್ವದ ಸಂವಿಧಾನ ದೇವರಿಗೆ ಬಿಟ್ಟ ಗೂಳಿಯಂತೆ ಎಲ್ಲರ ತಲೆಮೇಯುತ್ತಿದೆ.



ಸೀತೆಯೂ ಸೀರೆಯುಟ್ಟಿದ್ದಳು, ದ್ರೌಪದಿಯು ಸೀರೆಯುಟ್ಟಿ ದ್ದಳು. ಪದೇ ಪದೇ ತನ್ನ ಶೀಲದ ಬಗ್ಗೆ ಅನುಮಾನಪಟ್ಟು, ತವರುಮನೆಗೆ ಅಟ್ಟಿದರು ಸೀತವ್ವ ರಾಘವನಲ್ಲಿ ತಪ್ಪಿಲ್ಲವೆಂದು ತಿಪ್ಪೆಸಾರಿಸುವ ಹೇಳಿಕೆ ನೀಡಿ ಪತಿಪರಮೇಶ್ವರನನ್ನು ಒಪ್ಪಿಕೊಳ್ಳುವ ಇರಾದೆ ಆಕೆಯದಾಗಿರಲು ಸಾಧ್ಯವಿಲ್ಲ, ಆಕೆಯ ಈ ಹೇಳಿಕೆಯ ಹಿಂದೆ ಬಹುದೊಡ್ಡ ಸಾಂಸ್ಕೃತಿಕ ಒತ್ತಡವಿದೆ. ಆ ಒತ್ತಡ ಇಂದಿನ ಬಾಬ್‌ಕಟ್ ತಲೆಯ ಮಹಿಳೆಯರ ಮೇಲೆಯೂ ಇದೆ. ಸೀತೆ ಹೇಳಿದ ಮಾತುಗಳೇ ಇವರ ಬಾಯಿಯಲ್ಲಿ ಕುಣಿಯುತ್ತಿವೆ. ಸಾಮಾಜಿಕ, ಕೌಟುಂಬಿಕ ಬದುಕಿನಲ್ಲಿ ಅಸಹಾಯಕಳಾದ ಸೀತೆಯಂತಹ ಮಹಿಳೆಯರು ಹೇಳುವ ಅಂತಿಮ ಮಾತುಗಳು ಇವು. ತನ್ನ ಹಣೆಬರಹವನ್ನು ಹಳಿದುಕೊಂಡು ಭೂಮಿ ತಾಯಿಗೆ ಬಾಯಿತೆರೆಯೆಂದು ಕೈಮುಗಿದು ಕೇಳಿಕೊಂಡು ಭೂಮಿಯಲ್ಲಿ ಸಜೀವವಾಗಿಯೇ ಅಡಗಿಕೊಂಡಿದ್ದನ್ನು ಆತ್ಮಹತ್ಯೆಯಂದು ಯಾರು ಕರೆದಿಲ್ಲ. ದ್ರೌಪದಿ ತುಂಬಿದ ಸಭೆಯಲ್ಲಿ ಹಿರಿಯರ ಎದುರಿಗೆ, ಗಂಡಂದಿರ ಎದುರಿಗೆ ದುಶ್ಯಾಸನ ಸೀರೆ ಸೆಳೆಯುವಾಗ ಆಕೆ ಸಾವಿರಾರು ಗೋಪಿಕೆಯರ ಸೀರೆ ಕದ್ದ ಕೃಷ್ಣನಿಗೆ ಮೊರೆಹೋದಳು. ಆದರೆ ನಮ್ಮ ನೆಲದ ಧ್ವನಿಯಾಗಿದ್ದ ಅಕ್ಕಮಹಾದೇವಿ ಉಟ್ಟ ಸೀರೆ ಬಿಚ್ಚಿ ಹೊಡೆದರೂ ಯಾರಿಗೂ ಬೆಚ್ಚದೆ ಹುಟ್ಟುಡುಗೆಯಲ್ಲಿ ನಡೆದು ಜಗತ್ತು ಬೆಚ್ಚಿಬೀಳುವಂತೆ ಮಾಡಿದಳಲ್ಲ ಅವಳು ನಮ್ಮ ಬೌದ್ಧಿಕ ಲೋಕವನ್ನು ತಿದ್ದುವವಳು.

ದೈಹಿಕವಾಗಿ ಹೆಣ್ಣಾದ ಮಾತ್ರಕ್ಕೆ ಆಕೆ ಮಹಿಳೆಯಾಗಿರುತ್ತಾಳೆ ಎಂಬುದು ಭ್ರಮಿತ ಸ್ಥಿತಿ. ಆಕೆಯನ್ನು ಹೆಣ್ಣಾಗಿಸುವ ಪ್ರಾಯೋಜಕತ್ವದ ಗುತ್ತಿಗೆಯನ್ನು ಸೀರೆ ಉಟ್ಟವರೆ ಪಡೆದುಕೊಂಡಿರುತ್ತಾರೆ. ಅತ್ತೆಯ ಮನೆಯಲ್ಲಿ ತೊತ್ತಾಗಿ ಇರಬೇಕು ಹೊತ್ತಾಗಿ ನೀಡಿದರು ಉಣಬೇಕು ಮಗಳೆ ತವರಿಗೆ ಹೆಸರು ತರಬೇಕು'ಎಂದು ಕಿವಿ ತುಂಬ ತೂತು ಜಡಿದು ಹೇಳಿಕಳಿಸುವರೆಲ್ಲ ಸೀರೆಯುಟ್ಟವರೆ ಆಗಿದ್ದರು, ಆಗಿರುವರು. ಅವರ ಮಾತುಗಳೆಲ್ಲ ಅವರದಾಗಿರುವುದಿಲ್ಲ, ಅವರ ಹಿಂದೆ ನಿಂತು ತಿದಿಯೂದುವ ಶಕ್ತಿಗಳು ಅವರಿಗೂ ಮತ್ತು ಅವರ ಮಾತು ಕೇಳುವವರಿಗೂ ಕಾಣಿಸುವುದೇ ಇಲ್ಲ, ಈ ಇಬ್ಬಂದಿ ನ್ಯಾಯದಲ್ಲಿ ಸಿಲುಕಿ ನರಳುವವಳು, ನರಳಿಸುವವಳು ಖುದ್ದು ಸೀರೆಯುಟ್ಟವಳೆ ಆಗಿರುತ್ತಾಳೆ. ನರಳಿಸಲು, ನರಳಲು ಆದೇಶ ನೀಡಿ ಬೆನ್ನಿಗೆ ಬಂದೂಕು ಹಿಡಿದು ನಿಂತವರೆಂದೂ ಜಗತ್ತಿಗೆ ಅಷ್ಟೇ ಅಲ್ಲ ಸ್ವತಃ ಹೆಂಗಸರಿಗೂ ಕಾಣಿಸುವುದಿಲ್ಲ, ಲಿಂಗರಾಜಕಾರಣದ ಸೂಕ್ಷ್ಮತೆಗಳು ತಡವಾಗಿ ನಮ್ಮ ಅರಿವಿಗೆ ದಕ್ಕುತ್ತಿರುವುದರಿಂದ ಇಂದು ಸಮಾಜದಲ್ಲಿ ಭಿನ್ನಧ್ವನಿಯಲ್ಲಿ ಮಾತನಾಡುತ್ತಿರುವ ವ್ಯಕ್ತಿಗಳನ್ನು ನೋಡಲು ಸಾಧ್ಯವಾಗಿದೆ. ಇವರ ಸಂಖ್ಯೆ ಕಡಿಮೆಯಿರಬಹುದು ಆದರೂ ಭಿನ್ನಧ್ವನಿಯಿದೆಯೆಂಬುದು ಸುಳ್ಳಲ್ಲ, ಆ ಧ್ವನಿ ಲಿಂಗದ ಮಲೀನತೆಯನ್ನು ಅಂಟಿಸಿಕೊಂಡಿರುವುದಿಲ್ಲ, ಅದು ಕೇವಲ ಮನುಷ್ಯ ಕುಲದ ಘನತೆಗಾಗಿ ಹಂಬಲಿಸುತ್ತಿರುತ್ತದೆ. ಈ ಸಾಂಸ್ಕೃತಿಕ ಲಿಂಗರಾಜಕಾರಣ, ಶಕ್ತಿರಾಜಕಾರಣ, ಅಧಿಕಾರ ಸ್ಥಾನದ ಬುಡದಲ್ಲಿ ಕಾಲು ಚಾಚಲು ಮುಂದಾಗುವಾಗಲೆಲ್ಲ ಸೀರೆಉಟ್ಟವರನ್ನು ಮುಂದೆ ಮಾಡುತ್ತಿರುತ್ತದೆ. ನಮ್ಮ ಭಾಷಿಕ ಕೋಶವೆ ಪುರುಷ ಪ್ರಧಾನ ಸಾಂಸ್ಕೃತಿಕ ಬಿಲ್ಲುಬಾಣಗಳನ್ನೆಲ್ಲ ಹೋಗಿರುತ್ತಾರೆ. ಹಸಿದ ಹೊಟ್ಟೆಯಲ್ಲಿ ಚಿಂದಿ ಸೀರೆಯುಟ್ಟ ನಾರಿಯರು ಇವರ ಕೈಯಲ್ಲಿ ನಲುಗುತ್ತಿರುತ್ತಾರೆ. ಗಂಡಸು ಗಂಡಸು ಬಲ ಪ್ರದರ್ಶನದಲ್ಲಿ ತೊಡಗಿದಾಗಲೂ ಸೀರೆ, ಬಳೆಗಳೆಲ್ಲ ಹಾರಾಡಿ ಬಿಡುತ್ತವೆ. ನೇರವಾಗಿಯೆ ಸೀರೆಯುಟ್ಟವರು ಅಸಕ್ತರು, ಅಬಲೆಯರು ಎಂದು ಹೀಗಳೆದರು ನಮ್ಮ ಸೀರೆ ಗರಿಗರಿಯಾಗಿ ಬೀರುವಿನಲ್ಲಿ ಹುಳಹಿಡಿಯದಂತೆ ಮಿರುಗುತ್ತಿರುತ್ತವೆ. ಜಗತ್ತಿನ ಯಾವುದೇ ಭಾಷೆಯಲ್ಲಿ ಉಡುಪನ್ನು, ಹೆಣ್ಣನ್ನು ಅನ್ವಯಿಸುವ ಬೈಗುಳಗಳು ಇರಲಿಕ್ಕಿಲ್ಲ, ಆದರೆ ನಮ್ಮ ದೇಶ ಕೋಶದ ತುಂಬ ಲಿಂಗನಿಂದಾಚಕಗಳೆ ತುಂಬಿಕೊಂಡಿವೆ. ಆದಾಗ್ಯೂ ಸೀರೆಯುಟ್ಟ ನಾರಿಯರಿಗೆ ಮುನಿಸು ಬರುವುದಿಲ್ಲ, ಅವರು ಅದೇ ಕೋಶವನ್ನು ಯಥೇಚ್ಛವಾಗಿಯೆ ಬಳಸುತ್ತಿರುತ್ತಾರೆ. ನಮ್ಮ ಭಾಷಾ ಕೋಶದಲ್ಲಿ ಒಂದೇಒಂದು ಪುರುಷವಾಚಕ ಬೈಗಳು ಇಲ್ಲವೆಂಬುದನ್ನು ಗಮನಿಸಲು ನಮಗೆ ಪುರುಸೊತ್ತೆಯಿಲ್ಲ, ನಮ್ಮೆಲ್ಲ ಹಬ್ಬಗಳು, ಆಚರಣೆಗಳು, ಧರ್ಮಗಳು ಸೀರೆ ಉಟ್ಟವರನ್ನೇ ಕೇಂದ್ರವಾಗಿಸಿಕೊಂಡಿವೆ. ಈ ಹಬ್ಬ ಆಚರಣೆ ಧರ್ಮಗಳೆಲ್ಲ ಸೀರೆಯುಟ್ಟವರನ್ನು ನಿರಂತರ ಸೀರೆಕಳೆಯದಂತೆ ಎಚ್ಚರವಾಗಿ ಹಿಡಿದುಕೊಳ್ಳಲು ಹೇಳುವ ಸೊಗಸಾದ ಮಾತುಗಳಿಂದ ಉಬ್ಬಿ ಹೋಗಿರುತ್ತಾರೆ. ಇಂತಹ ಮತ್ತಿನಲ್ಲಿ ನಮ್ಮ ವಿದ್ಯಾವಂತ ಮಹಿಳೆಯರಿಂದ ಉಟ್ಟಸೀರೆಯ ಸೆರಗುತಿದ್ದುವ ಅರುವುಗೇಡಿ ಕೆಲಸಗಳೆ ಆಗುತ್ತಿರುತ್ತವೆ. ವಿದ್ಯೆ, ಪದವಿ, ಸಂಬಳ, ಅಧಿಕಾರ ಎಲ್ಲವೂ ಸೀರೆಯುಟ್ಟವರಿಗೆ ನಿಲುಕಿದ್ದರು ಅವು ಯಾರ ಹಿತಕ್ಕಾಗಿ ಸಿಕ್ಕಿವೆ ಎಂಬ ವಾಸ್ತವ ಪ್ರಜ್ಞೆಯಿಲ್ಲದ ವಿದ್ಯಾವಂತ ಮಹಿಳೆಯರಿಂದಲೇ ಹೆಚ್ಚು ಹೆಚ್ಚು ಪಂಚೆಗಳಿಗೆ ಗಂಜಿಹಾಕಿ ಇಸ್ತ್ರಿ ಮಾಡುವ ಕೆಲಸ ಗೌರವ ಪಡೆದುಕೊಳ್ಳುತ್ತಿರುವ ದುರಂತಕ್ಕೆ ಕಾಲ ಉತ್ತರಿಸಲಾಗದೆ ಮೌನವಾಗಿದೆ.

ಫಾಯರ್ ಬ್ರಾಂಡಿನ ಮಹಿಳೆಯರು ನಮ್ಮ ಮಧ್ಯದಲ್ಲಿ ಹುಟ್ಟುಕೊಂಡಿರುವರು. ಇವರ ಬಾಯಿಂದ ಬರುವ ಜ್ವಾಲೆಗಳು ಪುರುಷ ಪ್ರಧಾನ ಸಂಸ್ಕೃತಿಯ ಮದ್ದಿನ ಮನೆಯಲ್ಲಿ ಹುಟ್ಟಿದವುಗಳು ಎಂಬುದು ಸ್ವತಃ ಅಗ್ನಿಕನ್ಯೆಯರಿಗೂ ತಿಳಿಯುತ್ತಿಲ್ಲ. ಭಾರತೀಯ ಸಂಸ್ಕೃತಿ, ಧರ್ಮವೆಂದು ಬಣ್ಣ ಆಕಾರವಿಲ್ಲದ ತಲೆತಿರುಕ ಮನು ಹೇಳಿದ ಮಾತುಗಳನ್ನು ನಮ್ಮ ಅಗ್ನಿಕನ್ಯೆಯರು, ಕುನ್ನಿಯರು ಹೇಳುವ ಮಾತುಗಳು ಸ್ತ್ರೀ ಧ್ವನಿಯ ಗಂಡಸರ ಮಾತುಗಳೆ ಆಗಿರುತ್ತವೆ. ಆಗೊಮ್ಮೆ ಈಗೊಮ್ಮೆ ದಲಿತ, ಬುಡಕಟ್ಟು ಮಹಿಳೆಯರು ತಿರುಗಿ ಬಿದ್ದು ಮಾತನಾಡಿದರೆ ಈ ತುಳಸಿ ಪ್ರಿಯ ಅರಿಶಿಣ ಕೆನ್ನೆಯ ಕನ್ಯೆಯರೆಲ್ಲ ಚಂಡಿಚಾಮುಂಡಿಗಳಂತೆ ಪೋಜುಕೊಡುತ್ತಾರೆ. ಸೀರೆ ಉಟ್ಟವರೆಲ್ಲ "ಬಳಸಿಕೊಳ್ಳುವ" ವಸ್ತುಗಳೆ ಹೊರತು ಘನತೆಯ ಬದುಕಿನ ಪಾಲುದಾರರಲ್ಲ, ಈ "ಬಳಸಿಕೊಳ್ಳುವ" ಪದ ಹಿಂದೊಮ್ಮೆ ಕರ್ನಾಟಕದ ಮಹಿಳಾ ರಾಜಕಾರಣಿಯರ ಮಧ್ಯ ಕೈಕೈ ಮಿಲಾಯಿಸುವ ಮಟ್ಟಕ್ಕೆ ಹೋಗಿತ್ತು, ನಮ್ಮ ದಲಿತ ಲೋಕದ ಹಿರಿಯ ಮಹಿಳಾ ರಾಜಕಾರಣಿಯಾದ ಮೋಟಮ್ಮನವರು ತಮ್ಮದೇ ಪಕ್ಷದ ಮಹಿಳಾ ಘಟಕದ ಸಭೆಯೊಂದರಲ್ಲಿ "ಈ ಪುರಷ ರಾಜಕಾರಣಿಗಳು ನಮ್ಮನ್ನು ಬಳಸಿಕೊಂಡು ಬಿಸಾಡುತ್ತಾರೆ; ನಮಗೆ ಸಿಗಬೇಕಾದ ಸ್ಥಾನಮಾನ ನೀಡುತ್ತಿಲ್ಲ" ಎಂದು ವಾಸ್ತವ ಸತ್ಯವನ್ನು ತಡವಾಗಿಯಾದರೂ ಹೇಳಿದ್ದರು. ಆದರೆ ಅಲ್ಲಿದ್ದ ಮಹಿಳಾಮಣಿಗಳಿಗೆ ಈ 'ಬಳಸಿಕೊಳ್ಳುವ' ಪದ ಅವರವರ ಕಿವಿಯ ತೂತು, ಮಾತು ಎಷ್ಟೆಷ್ಟು ಉದ್ದಗಲವಿದ್ದವೋ ಅಷ್ಟಷ್ಟು ಕೇಳಿ ರಂಪವೇ ನಡೆದು ಹೋಗಿತ್ತು, ಈ ರಂಪಕ್ಕೆ ಕಾರಣ ಸೀರೆಯುಟ್ಟವರಲ್ಲಿಯೂ ಮನೆ ಹಾಕಿಕೊಂಡು ಕುಳಿತಿರುವ ಜಾತಿಯ ಶ್ರೇಷ್ಠತೆ ಅವರನ್ನು ಸತ್ಯ ಒಪ್ಪಿಕೊಳ್ಳಲು ಬಿಡಲಿಲ್ಲ, ಹೀಗಾಗಿ ಸೀರೆ ನೋಡಲು ಒಂದೇ ಆದರೂ ಆರು ಗಜ, ಹನ್ನೆರಡು ಗಜ, ಕಂಚಿ, ಜಾತಿವರ್ಗದಲ್ಲಿರಲಿ ಸೀರೆಯುಟ್ಟವರೆಲ್ಲರೂ ಘನತೆಯ ಬದುಕಿಗಾಗಿ ಹಂಬಲಿಸುವುದಾಗಬೇಕು. ಆದರೆ ನಮ್ಮ ಮಹಿಳೆಯರೆಲ್ಲ ಸೀರೆ ವಿರೋಧಿ ಪಾಳಯದಲ್ಲಿರುವ ಪುರುಷರ ಕೈಯಲ್ಲಿಯ ಅಸ್ತ್ರಗಳಾಗಿ ಸ್ವತಃ ತಮ್ಮ ಮೇಲೆ ಮತ್ತು ತಮ್ಮಂತಿರುವವರ ಮೇಲೆ ಮಗುಚಿಕೊಂಡು ಬೀಳುತ್ತಿವೆ. ಒಬ್ಬ ಮಹಿಳೆ ರಾಜಕಾರಣಿಯಾದ ತಕ್ಷಣ ತನ್ನ ಸಮುದಾಯದ ಅಸಹಾಯಕರ, ಲಿಂಗಸಂವೇದನೆಯ ಸಾಂಸ್ಕೃತಿಕ ರಾಜಕಾರಣವನ್ನು ಅಧಿಕಾರ ರಾಜಕಾರಣಕ್ಕೆ ನೆಲಗಟ್ಟನ್ನಾಗಿಸಿಕೊಳ್ಳಬೇಕು. ಆದರೆ ನಮ್ಮ ಸೀರೆಯುಟ್ಟ ಮಹಿಳಾ ರಾಜಕಾರಣಿಗಳಿಂದ ಇದು ಆಗುತ್ತಿಲ್ಲ. ನಿರಂತರವಾಗಿ ಸಂಸ್ಕೃತಿ ರಕ್ಷಕರು, ನೈತಿಕ ಪೊಲೀಸರೆಂದು ಕರೆದುಕೊಳ್ಳುವ ಮನುವಿನ ಪಿಂಡಗಳು ಎದೆಯುದ್ದ ಬೆಳೆದು ಮನುಷ್ಯನ ರಕ್ತದ ರುಚಿಗೆ ನಾಲಿಗೆ ಚಾಚುತ್ತಿರುತ್ತವೆ. ನಮ್ಮ ಸೋಕಾಲ್ಡ್ ಬುದ್ಧಿಜೀವಿಗಳು ವ್ಯಂಗ್ಯದಿಂದ, ಹಂಗಿನಿಂದ, ಅಸಡ್ಡೆಯಿಂದ, ಅಹಮ್ಮಿಕೆಯಿಂದ ಒಂದು ಮಾತನ್ನು ಮಹಿಳೆಯರ ಸಂಖ್ಯೆ ಹೆಚ್ಚಿದ್ದ ಸಭೆ ಸಮಾರಂಭಗಳಲ್ಲಿ ಉದುರಿಸುತ್ತಿರುತ್ತಾರೆ.



ಸುಷ್ಮಾ ಸ್ವರಾಜ್

ಅದು ಏನೆಂದರೆ "ತೊಟ್ಟಿಲು ತೂಗುವ ಕೈ ಜಗತ್ತನ್ನೆ ತೂಗಬಲ್ಲದು" ಎಂದು ಹೇಳುತ್ತ ಇಂದಿರಾ ಗಾಂಧಿಯವರು ಈ ದೇಶವನ್ನು ಎಲ್ಲ ಗಂಡಸರಿಗಿಂತಲೂ ಹೆಚ್ಚು ವರ್ಷ ಆಳಿದರು. ಹೀಗಾಗಿ ನಮ್ಮ ಮಹಿಳೆಯರಿಗೆ ನಾವು ಸಮಾನತೆಯನ್ನು ನೀಡಿದ್ದೇವೆ ಎಂದು. ಇಂದಿರಾ ಗಾಂಧಿ ಪಕ್ಷ ರಾಜಕಾರಣ ಮಾಡಿದ ಶ್ರೇಷ್ಠ ಬುದ್ಧಿವಂತ ರಾಜಕಾರಣಿಯೇ ಹೊರತು ಮಹಿಳಾ ಮನೋಭಾವದ ತಾತ್ವಿಕ ನಿಲುವಿನಿಂದ ರಾಜಕಾರಣ ಮಾಡಿದ ರಾಜಕಾರಣಿಯಲ್ಲ, ಹೀಗಾಗಿಯೇ ನಮ್ಮ ಪುರುಷ ಪ್ರಧಾನ ಸಮಾಜ, ಗಂಡಸು, ಸಂಸ್ಕೃತಿ ಅವರನ್ನು ಸಹಿಸಿಕೊಂಡಿತ್ತು ಎಂಬುದು ಚಾರಿತ್ರಿಕ ಸತ್ಯ. ಇದೇ ಸತ್ಯಗಳೆ ಎಲ್ಲ ಪಕ್ಷಗಳಲ್ಲಿಯೂ, ದೇಶಗಳಲ್ಲಿಯೂ ಇರುವುದಕ್ಕಾಗಿಯೆ ಪಾಕಿಸ್ತಾನದಂತಹ ದೇಶಗಳಲ್ಲಿಯೂ ಮಹಿಳೆಯರು ಪ್ರಧಾನಮಂತ್ರಿ ಯಾಗಲು ಸಾಧ್ಯವಾಗಿದೆ. ನಮ್ಮ ವ್ಯವಸ್ಥೆ ಪಕ್ಷ ರಾಜಕಾರಣವನ್ನು ನಿಷ್ಠೆಯಿಂದ ಮಾಡುತ್ತಿರುವ ಮಹಿಳೆಯರನ್ನು ಮಾತ್ರ ಶಕ್ತಿ ರಾಜಕಾರಣದ ಆಸುಪಾಸಿನಲ್ಲಿ ಸೂತ್ರದ ಗೊಂಬೆಯ ಹಾಗೆ ಕುಣಿಯುವ ಅವಕಾಶವನ್ನು ಕಲ್ಪಿಸಿರುತ್ತದೆ. ಅದೇ ದೊಡ್ಡ ಪ್ರಸಾದವೆಂದು ಭಾವಿಸಿರುವ ನಮ್ಮ ಸೀರೆಯುಟ್ಟ ಪಕ್ಷರಾಜಕಾರಣಿಗಳು ಪುರುಷ ಪಕ್ಷಪಾತಿಯಾಗಿಯೆ ಮಾತನಾಡುವ, ನಡೆಯುವ, ವರ್ತಿಸುವುದನ್ನೆಲ್ಲ ಮಾಡುತ್ತಿರುತ್ತಾರೆ. ಇದು ಕೇವಲ ರಾಜಕೀಯ ಕ್ಷೇತ್ರಕ್ಕೆ ಮೀಸಲಾದ ನಡಿಗೆಯಲ್ಲ, ಅಡುಗೆ ಮನೆಯಿಂದ ಪ್ರಾರಂಭಿಸಿ ಎಲ್ಲ ರಂಗಗಳಲ್ಲಿ ಇರುವ ಮಹಿಳೆಯರು ನಡೆಯುತ್ತಿರುವ ಹಾದಿಯೆಂಬುದು ಇನ್ನಾದರೂ ವಿಚಾರವಂತರಿಗೆ ತಿಳಿಯಬೇಕು. ನಮ್ಮ ಭಾರತೀಯ ಸಂಸ್ಕೃತಿ ಭವ್ಯ ದಿವ್ಯ ಎಂದು ಹೇಳಿದ ಮಹಿಳಾ ರಾಜಕಾರಣಿಯ ಬಾಯಲ್ಲಿ ಇನ್ನೊಂದು ಪಕ್ಷದ ಮಹಿಳಾ ರಾಜಕಾರಣಿ ದೇಶಕ್ಕೆ ದೊರೆಯಾಗುತ್ತಾಳೆಂದರೆ ತಲೆಬೋಳಿಸಿಕೊಂಡು ಮಡಿಸೀರೆಯುಟ್ಟು ಚಾಪೆಯ ಮೇಲೆ ಮಲಗುತ್ತೇನೆ ಎಂದು ಪಣ ತೊಡುವಷ್ಟರಮಟ್ಟಿಗೆ ಅವರಲ್ಲಿ ಪುರುಷ ಪ್ರಧಾನ ಸಂಸ್ಕೃತಿ, ಲಿಂಗರಾಜಕಾರಣ ಕ್ರಿಯಾಶೀಲವಾಗಿರುತ್ತದೆ ಮತ್ತು ಲಿಂಗಸೂಕ್ಷ್ಮತೆಗಳನ್ನು ಕೊಂದು ಹಾಕಿರುತ್ತದೆ ಎಂದರೆ ಇದಕ್ಕೆ ಹೊಣೆ ಯಾರು? ಮಾತನಾಡಿದ ವ್ಯಕ್ತಿಯೆ ಅಥವಾ ಅವರನ್ನ ರೂಪಿಸಿದ ಸಮಾಜವೆ ಎಂಬುದರ ಕುರಿತು ಸ್ವತಃ ಅವರೆ ವಿಚಾರಿಸುವಂತಾದರೆ ಒಳ್ಳೆಯದಲ್ಲವೆ? ದೇಶದ ಯಾವುದೆ ಹುದ್ದೆ ಅಧಿಕಾರವನ್ನು ಅನುಭವಿಸುವ ವ್ಯಕ್ತಿ ಲಿಂಗ ಮತ್ತು ದಲಿತ ಹಿಂದುಳಿದ ರಾಜಕಾರಣದ ಸೂಕ್ಷ್ಮತೆಯನ್ನು ಹೊಂದಿರದೆ ಹೋದರೆ ಪಟ್ಟಭದ್ರಹಿತಾಸಕ್ತಿಯ ಪುನರುತ್ಥಾನಕ್ಕೆ ಬಡಿಗೆಗಳಾಗಬೇಕಾಗುತ್ತದೆ. ರಾಷ್ಟ್ರ ಮತ್ತು ಹೊರತು ಸೀರೆಯುಟ್ಟ ಲಿಂಗವಿ ಮಹಿಳೆಯಾಗಿರುವುದಿಲ್ಲ. ಆ ಕಾರಣಕ್ಕಾಗಿಯೇ ವಿಧಾನ ಸಭೆ, ವಿಧಾನಪರಿಷತ್ತುಗಳಲ್ಲಿ ಜನರು ಆರಿಸಿ ಕಳಿಸಿದ ಜನರ ಸಂಕಟಕ್ಕೆ ಸ್ಪಂದಿಸುವ, ಬೆವರಿನಿಂದ ನಡೆಯುವ ಅಧಿವೇಶನಗಳಲ್ಲಿ ಜನ ಕಾರ್ಯಗಳಿಗೆ ಮೈಯೆಲ್ಲಾ ಕಣ್ಣಾಗಿಸಿ, ಕಿವಿಯಾಗಿ ಕೆಲಸ ಮಾಡಬೇಕಾದ ಹೆಣ್ಣುಗಂಡುಗಳು ನೋಡುವ, ನಿದ್ದೆ ಮಾಡುವ, ರಾಖಿ ಕಟ್ಟುವ ಕೆಲಸಕ್ಕಾಗಿ ಬಳಸಿಕೊಳ್ಳುತ್ತಿರುವುದನ್ನು ಜನರು ಪಾಪಿಕ ನೋಡುತ್ತಿರುವರು. ಜವಾಬ್ದಾರಿಯನ್ನು ಹೆ ಹೆಗಲುಗಳು ಹೆಣ್ಣುಗಂ ವಿಂಗಡಿಸಿ ನೋಡುವುದು ಆದರೆ ಹೊತ್ತಿರುವ ಹೆಗಲುಗ ಅವಿವೇಕದ ಕೆಲಸವಾದ ವುದರಿಂದ ಸಂವೇದನಾಶಿ ಎಚ್ಚರಿಸುವುದರ ಮೂಲಕ ಘನತೆ ತಂದುಕೊಳ್ಳು ಅರಿವಿದ್ದವರ ಹೊಣೆಯಲ್ಲ

ಮೊನ್ನೆ ನಡೆದ ಮಂಗ ಹೋಮ್ ಸ್ಟೆ ಪ್ರಕರಣವನ ಮಹಿಳೆಯಾಗಿ ಸೂಕ್ಷ್ಮನೆಲೆಯಿಂದ ಸಮಸ ಪರಿಶೀಲಿಸಬೇಕಾದ ಮಹಿಳಾ ಆಯೋಗದ ರಾಜಕೀಯ ಪಕ್ಷವೊಂದರ ಮುಖವಾಣಿಯಂತೆ, ಪ್ರಧಾನ ಹಿಂದೂ ಸಿದ್ಧಾಂತ ಪ್ರೇರಿತ ಹಿನ್ನೆಲೆ ನೋಡಿದ ಪ್ರಯುಕ್ತ ಅವರಿಂದ ಪಾಲಕರು ಬುದ್ಧಿಮಾತನ್ನು ಹೇಳಿಸಿಕೊಳ್ಳುವಂತಾಗಿದೆ. ಸ ರುವುದು ವ್ಯಕ್ತಿಗಳಲ್ಲಿ ಅಲ್ಲ, ನಮ್ಮನ್ನು ರ ಸಮಾಜದಲ್ಲಿ. ಈ ಸಮಾಜವನ್ನು ಅರ್ಥೈಸಿ ಬುದ್ಧಿವಂತಿಕೆ ದಲಿತ, ಶೂದ್ರ, ಬುಡಕಟ್ಟು, ಹಿಂ ಅಲ್ಪಸಂಖ್ಯಾತ ವರ್ಗದ ಪುರುಷರಲ್ಲಿ ಬರಬೇಕು. ಕುರಿತು ಇರುವ ವರಸೆಗಳು ಬದಲಾಗಿ ಸ್ತ್ರೀ ಸೀರೆಯುಟ್ಟ, ಉಡಿಸಿದ ಹಿತಾಸಕ್ತಿಗಳನ್ನು ಅರಿತು ಬದುಕಿಗೆ ತೆರೆದುಕೊಂಡಾಗ ನೈತಿಕ ಪೊ ಕೆಲಸವಿರುವುದಿಲ್ಲ.

ಭಾರತೀಯ ಸಂಸ್ಕೃತಿ ಭವ್ಯದಿವ್ಯವೆಂದು ಹಾಡಿಹ ರುವವರು ಅದರ ಚೌಕಟ್ಟಿನಲ್ಲಿ ಇರುವುದೆ ಬೇರೆಯವರು ಅದರಲ್ಲಿ ಇರಬೇಕು ಎಂದು ಉಪದೇಶವನ್ನು ಸಂಕೋಚವಿಲ್ಲದೆ ನೀಡುತ್ತಿರುತ್ತಾರೆ ನಮ್ಮ ಸುಷ್ಮಾ ಸ್ವರಾಜ್ ಅವರು ಹಿಂದೂ ಮಹಿ ತದ್ರೂಪ. ಅವರ ಕುರಿತು ಈ ಆರೋಪವಲ್ಲ ರಾಜ್ಯದ ಮಹಿಳಾ ಆಯೋಗದ ಅಧ್ಯಕ್ಷೆಯಾದ ಮ ಅವರು ಉತ್ತರಿಸಬೇಕು. ಇದನ್ನು ಅವರು ವಾದವೆಂದು ಉತ್ತರಿಸುವುದಿಲ್ಲ ಅದು ಬೇರೆ ನಮ್ಮ ನೈತಿಕ ಪೊಲೀಸರು ತಮ್ಮ ಮನೆಯ ಹೆಣ್ಣು ತಮ್ಮ ಪೊಲೀಸುಗಿರಿಯಿಂದ ದಂಡಿಸಿನೋಡ ತಿಳಿಯುತ್ತದೆ. ದಂಡಿಸಿಕೊಂಡವರ ನೋವು, ಅ ಎಂತಹದ್ದು ಎಂಬುದು ಅಥವಾ ತಿರುಗಿಬಿದ್ದು ಒದ್ದರೆ ಅರ್ಥವಾದೀತು. ವೈಜ್ಞಾನಿಕ ಆವಿಷ್ಕಾ ತೆರೆದುಕೊಂಡಿರುವ ಸಮಾಜದಲ್ಲಿ ಸಂಸ್ಕೃತಿಯನ್ನು ಬ ಚಹರೆಗಳಲ್ಲಿಯೂ ಬದಲಾಗುವುದನ್ನು ಒ ಬೇಕಾಗುತ್ತದೆ. ಇಲ್ಲದಿದ್ದರೆ ಎಲ್ಲಾ ಪಾಲಕರು ತಮ ಮಕ್ಕಳ ಹುಟ್ಟುಹಬ್ಬವನ್ನು ಹೇಗೆ ಹೇಗೆ ಆಚರಿಸಿಕೊ ಎಂಬುದನ್ನು ದೇಶದ ಮೂರು ಪರ್ಸಂಟೇಜಿನ ಕೇಶವಕೃಪಾದಲ್ಲಿ ಕುಳಿತು ನೀಡುವ ಮನ ಪಡೆದುಕೊಳ್ಳಬೇಕಾಗುತ್ತದೆ. ಶೂದ್ರ ಗಂಡಸರು ಹೆಂಗಸರ ತಲೆಯಲ್ಲಿ ಎಲ್ಲಿಯವರೆಗೂ ನೆಲ ಸಂಸ್ಕೃತಿ ಎಚ್ಚರಗೊಳ್ಳುವುದಿಲ್ಲವೊ ಅಲ್ಲಿಯವರೆಗ ಪೊಲೀಸರ ಹಲ್ಲೆಗೆ ಒಳಗಾಗಬೇಕಾಗುತ್ತದೆ ಪ್ರಜ್ವಲಿಸುತ್ತಿರುವ, ಪ್ರಕಾಶಿಸುತ್ತಿರುವ ಪುಣ್ಯ ಭೂ "ಮೇರಾ ಭಾರತ್ ಮಹಾನ್" ಎಂದು ಬಲಿಷ್ಠರ ಬ ಹೆಗಲು ನೀಡಿ ನಮ್ಮವರನ್ನು ಕೊಲ್ಲಬೇಕಾಗುತ್ತ

● ಡಾ.ಮಲ್ಲಿಕಾ



ಮೋಟಮ್ಮ

...ಡೂರಪ್ಪನಿಗೆ ಯರಡ್ನೆ ಮದುವೆ ಮಾಡಿದರ್‍ಯಂಗೇ?

...ಣಮಾವ ಮತ್ತು ಜುಮ್ಮಿ ಇಬ್ಬರೇ ಒಂಥರಾ ...ಸೆಯಂತೆ ಆಪ್ತ ಮಾತುಕತೆಯಲ್ಲಿ ತೊಡಗಿದ್ದರು.

"...ವ್ಯಾವುದೊ ಹುಡುಗಿ ಮದುವೆ ಮಾಡುಸ್ಸಿನಿ ಅಂತ ...ದ್ವಲ್ಲ ಆಯ್ತೇನ್ಲೆ ಜುಮ್ಮೀ?" ಎಂದ ಕಾಳಮಾವ.

"...ಯ್ತು ಕಣಮಾವ. ಹುಡುಗಿಗೆ ಯರಡ್ನೆ ಮದುವೆ!"

"...ಡ ಸತ್ತೋಗಿದ್ನೆ?"

"...ಗುಂಡು ಕಲ್ಲಿದ್ದಂಗವುನೆ. ಹುಡುಗಿನೆ ಬ್ಯಾಡ ...ಬುಟ್ಟು ಅವುನತ್ರಕೋಗಲೇಯಿಲ್ಲಾ."

"...ತ್ತೆ ಮದಿವ್ಯಾಕಾದ್ಲು?"

"... ಹುಡುಗಿಗೆ ಇಷ್ಟಯಿರಲಿಲವಂತೆ ಕಣಮಾವ. ... ನನ್ನ ತವುರಮನೆ ತ್ವರಕಳಕ್ಕಾದತೆ ಅಂತ ಆ ... ಏಟತ್ತುರೂ ಬುಡದಂಗೆ ತಮ್ಮನಿಗೆ ಕೊಟ್ಟು ... ಮಾಡಿದ್ಲು. ಮದುವೆಲೂ ಆ ಹುಡುಗಿ ...ಗೆ ಅಳತಂತೆ. ಆದ್ರು ಇವುರ್‍ಯಾರು ಅದರ ಕಷ್ಟ ... ಹಿಡುದು ತಾಳಿ ಕಟ್ಟಿಸಿದ್ರು. ಆಮ್ಯಾಲೆ ಅದೇನು ...ರು ಸ್ವಾದರ ಮಾವನತ್ರಕ್ಕೆ ಹೋಗಲೇಯಿಲ್ಲ."

"... ಸುದ್ದಿಯ ಒಂದು ಸತಿ ನ್ಯಾಯಕ್ಕೆ ತಂದಿದ್ರು ...ಮ್ಮಿ. ನಾನು ಮಾತಿಗೋಗಿದ್ದೆ" ಎಂದ ಸೀರ.

"...ಹೊ ನ್ಯಾಯಬ್ಯಾರೆ ಆಗಿತ್ತೆ ಅಂಗರೆ?" ಎಂದ ...ವ.

"... ಕಣಮಾವ. ನ್ಯಾಯ ಪಂಚಾತಿಯಲ್ಲ ಆಗೀ ... ನಾನೇನು ಮಾಡಿದ್ರು ಹೋಗಕುಲ್ಕ, ಬೇಕಾದ್ರೆ ... ಬೀಳ್ತಿನಿ ಅಂದುಬುಡ್ತು. ಆಗ ಹುಡುಗನ ...ರು ಕೊಟ್ಟ ಒಡವೆ, ಸೀರೆ, ತಾಲಿನ್ಯಲ್ಲ ವಾಪಸು ... ಹುಡುಗನಿಗೆ ಬ್ಯಾರೆ ಹೆಣ್ಣು ನೋಡಿ ಮದುವೆ ... ಅಂತ ತೀರಮಾನಾಗಿತ್ತು."

"...ಗರಾವುಡಗ ಮದಿವಾದ್ನೆ?"

"... ಕಣಮಾವ. ಮದಿವಾಗಿ ಬೇಕಾದಷ್ಟು ಆಸ್ತಿಯಿದ್ರು ...ರಿಗೋಗಿ ತಳ್ಳೊಗಾಡಿಲಿ ತರಕಾರಿ ಮಾರಿಕಂಡು ... ಕಾಲ ಹಾಕ್ತ ಅವೆ. ಆಗಲೆ ಯರಡು ...ವಂತೆ. ಹಿರಿ ಮಗಿಗೆ ಯರಡೋರ್ಸ, ಕಿರಿ ಮಗಿಗೆ ...ಮ ತಿಂಗಳಂತೆ."

"...ೀಡವ್ನ, ಊರಲ್ಲಿ ಜಮೀನಿದ್ದು ಅದನ್ಯಲ್ಲ ಬುಟ್ಟು ...ರಲ್ಲಿ ತರಕಾರಿ ಮಾರಿಕಂಡು ಕಾಲ ಮಾಡ್ತನೆ ...ವ್ಯವಸಾಯದ ಕಸುಬು ಯಾರಿಗೂ ಬೇಕಿಲವಲ್ಲ ..."

"... ಹುಡುಗ ಯವಸಾಯ ಮಾಡೊ ಹುಡುಗ್ನೆ ...ವ. ಹುಡುಗಿ ನಡಿ ಬೆಂಗಳೂರಿಗೋಗನ, ನಡಿ ...ರಿಗೆ ಹೋಗನಾ ಅಂತ ಜೀವ ತಿಂದುಬುಟ್ಟಂತೆ. ...ವುನು ವಲನ್ಯಲ್ಲ ಹಾಳುಬುಟ್ಟು ಬೆಂಗಳೂರು ... ತರಕಾರಿ ಮಾರ್‍ಯನಂತೆ."



"ಅವುನೇನೊ ಗ್ಯಟನ್ನಾದ. ಈ ಹುಡುಗಿಹೇಳ್ಳಿ" ಎಂದ ಸೀರ.

"ಈ ಹುಡುಗಿ ವಳ್ಳಿ ಜಾಕ್ಕೆ ಸೇರಿಕಂಡ್ಲು ಕಣಮಾವ. ಗಂಡನ್ನ ಬುಟ್ಟಮ್ಯಾಲೆ ಬೆಂಗಳೂರಿಗೋಗಿ ಗಾರಮೆಂಟಿಗೆ ಸೇರಿಕಂಡ್ಲು. ಅಲ್ಲಿ ವಬ್ಬ ಟಂಪೊ ಡ್ರೈವರು ಪರಿಚಯಾಗಿ, ಇವುಳ ಕತೆನ್ಯಲ್ಲ ಕೇಳಿ, ಮದಿವಾಯ್ತಿಯಾ ಅಂದನಂತೆ. ಇವುಳು ಯಾವುದ್ಕು ನಮ್ಮ ಅಪ್ಪಅವ್ವ ಅಣ್ಣತಮ್ಮದೀರ ಕೇಳಬೇಕು ಅಂದಳಂತೆ. ಕೇಳಿಕಂಡು ಬಾ ಅಂತ ಕಳಿಸಿದ್ರೆ ಇವುರೇನನಬೇಕು."

"ಏನಾರ ಮಾಡಿಕೊ ಅಂದಿರಬೇಕು."

"ಅಂಗುಂದಿದ್ರೆ ಆ ಹುಡುಗಿ ಆಟೊಂತರ ಅಳತಿತ್ತೆ ಮಾವ. ನಮಗೆ ಇದ್ದೊಳೆ ವಬ್ಬ ಮಗಳು, ಯಾವತ್ತೊ ಸತ್ತೊದ್ಲು ಹೋಗು ಅನ್ನದೆ."

"ನಾನೇಳಿದಂಗೆ ಕೇಳದಿದ್ರೆ ನಿನ್ನ ಕಟಿಗಂಡೇನು ಅನ್ನೊ ಜನ ಕಂಡ್ರೆ ಇವುರು" ಎಂದ ಕಾಳಮಾವ.

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಅಲ್ಲಾ ಕಣಮಾವ, ಇಷ್ಟವಿಲ್ಲದ ಗಂಡನ ಜೊತೆ ಬಾಳಕ್ಕಾಗದೆ ಹೋದುಡುಗಿ ತಾನೇ ಒಂದು ದಾರಿ ನೋಡಿಕಂಡ್ರೆ ಜಲ್ಮ ಕೊಟ್ಟೋರು ಹೋಗವ್ನ ವಳ್ಳೆದಾಗ್ಲಿ ಅನ್ನಬೇಕೊ, ನಮ್ಮ ಮಗಳು ಸತ್ತಾಗ್ಲೆ ನಾಕೂರಸಾಯ್ತು ಅನ್ನಬೇಕೊ ಹೇಳು?"

"ಅದ್ಯಲ್ಲ ಅವುರವ್ವನಿಂದ್ಲೆ ಕಂಡ್ರೆ. ತವುರಮನೆ ಸಮಂದ ಹೋಯ್ತಲ್ಲ ಅಂತ ಅಂಗಂದಿರಬೇಕು."

"ಏ, ಚಿನ್ನದ ಕತ್ತಿ ಅಂತ ಕತ್ತು ಕುಯ್ಕಳಕ್ಕಾದತೆ ಮಾವ? ಆಗ ಸಮಾಚಾರ ನನ್ನತ್ರಕೆ ಬತ್ತು. ಉಪ್ಪು ಸಪ್ಪೆ ತಿಂದ ಜನ ನಾವಿದ್ದಿವಿ ಅಂತ ಅವುರಿಗೆ ಬುದ್ಧಿ ಹೇಳಿ, ನಾನೆ ಹುಡುಗಿ ಅವ್ವನ ಜಾಗದಲ್ಲಿ ನಿಂತು ಮದುವೆ ಮಾಡಿ ಕಳಿಸ್ದೆ."

"ಎಲ್ಲಿ ಮದುವೆ ಮಾಡಿದೆ?"

"ಚುಂಚನಗಿರಿಲಿ ಮಾಡಿದೆ ಕಣಮಾವ. ಸ್ವಾಮಿಗಳು ದೇವಸ್ಥಾನ ಕಟ್ಟವುರಲ್ಲಾ ಅಲ್ಲೆ ಮಗ್ಗಲ್ಲಿ ಬಂದು ಮದುವೆ ಮಂಟಪನೂ ಮಾಡ್ಯವುರೆ. ಅಲ್ಲೇ ವಬ್ಬ ಥೊಸುರುನೂ ಮಡಿಗ್ಯವುರೆ. ವಾಲುಗದೋರು ಅಲ್ಲೇ ಕುಂತಿರತರೆ. ಯಲ್ಲಾ ಸಾಸರ ಮುಂದಾಗೇ ಮದುವೆ ಮಾಡಿಕೊಡ್ತರೆ. ಯರಡು ಸವುರ್‍ರುಪಾಯಿ ಕಟ್ಟಿದ್ರಾಯ್ತು, ತಾಳಿ ಕಟ್ಟಿಸಿಗಂಡು ದೇವುರನೋಡಿ ಕಂಡು ಉಂಡು ಬರಬವುದು."

"ನೀನೇನೆ ಹೇಳು, ನಮ್ಮ ಸ್ವಾಮಿ ಬಡಬಗ್ಗರ ಕಷ್ಟ ಕುರುತು ಯೋಚನೆ ಮಾಡೊ ಅಂಥೋನು ಕಂಡ್ರೆ. ಇವತ್ತು ಯರಡು ಸಾವುರ್‍ರುಪಾಯಿಲಿ ಸಾಸ್ರು ಮುಂದಾಗಿ ಮದುವೆ ಮಾಡಿ, ಲಗ್ನಕ್ಕೆ ಬಂದೋರಿಗ್ಯಲ್ಲ ಊಟ ಹಾಕಕ್ಕಾದತೇ. ಅಂತ ವಳ್ಳೆ ಕ್ಯಲಸ ಮಾಡ್ಯವುರೆ ಅಂದ್ರೆ ಅವುನು ದೇವಮಾನ್ಯ" ಎಂದ ಕಾಳಮಾವ.

"ಅವತ್ತು ಬೇಕಾದೋಟು ಮದಿವಾದೊ ಕಣಮಾವ. ದುಡ್ಡು ಕಾಸು ಇರೋ ಅಂಥೋರೆ ಬಸ್ಸು ಲಾರಿಲಿ ಬಂದು ತಾಳಿ ಕಟಿಗಂಡೋಯ್ತಿದ್ರು. ಇನ್ನು ಮಾಲೆ ನಾನು ಮಾತ್ರ ನಮ್ಮ ಕಳ್ಳುಬಳ್ಳಿ ಮದುವೆನೆಲ್ಲಾ ಅಲ್ಲೇ ತಗಂಡೋಗಿ ಮಾಡ್ತಿನಿ."

"ಅಂಗರಾವುಡುಗಿ ಕಡಿಯೋರು ಯಾರು ಬರಲಿಲ್ಲವೇನೆ?"

"ಏ ಓಡಿಬಂದ್ರು ಕಣಮಾವ. ಮನೆ ಮಗಳು ಮದಿವಾಯ್ತಾಯಿದ್ರೆ ಸುಮ್ಮನಿರಕ್ಕಾದತೆ. ಜನೇನಂದರೂ ಅಂತ ಹೆದ್ರಿಕಂಡು ಓಡಿಬಂದ್ರು. ಮದುವೆ ಚನ್ನಾಗೆ ನ್ಯಡದೋಯ್ತು. ನಾನು ಫೋಟಾವಡಿಯೊರ್‍ನ್ನು ಕರಕಂಡೋಗಿದ್ದೆ."

"ಯಂಗೊ ಬದಿಕಳ್ಳಿ ಬುಡು."

"ಬದುಕ್ಲಿ ಬುಡ್ಲಿ. ನಾವು ಮಾಡೊ ಕ್ಯಲಸ ಮಾಡಿದವಷ್ಟ ಯಾರು ಮ್ಯಾಲಾರ ಬರವಸೆಯಿಟ್ಟು ಮಾತಾಡಕ್ಕಾದತೆ ಇವತ್ತು."

"ನಮ್ಮವೊಂದ್ಯರಡು ಮದುವೆ ಅಲೆ ಅಂಗೆ ಮಾಡುಸ್ಲೆ ಜುಮ್ಮಿ" ಎಂದ ಸೀರ.

"ನೀನೆ ಹೋಗಿ ಮಾಡುಸು. ನಾನೇನು ಮದುವೆ ಬ್ರೋಕರ್‍ರೆ."

"ಇವತ್ತು ಹೆಂಗುಸುರು ಮುಂದು ನಿಂತು ಮಾಡಿದ ಮದುವೆನೆ ಕಂಡ್ರೆ ಚನ್ನಾಗಿರವೂ. ಅದ್ಕೆ ಅಂಗಂದೆ."

"ಯಾರು ಮದುವೆ ಮಾಡುಸಬೇಕು ಹೇಳು ಚಿಗಪ್ಪ ಗ್ರಾಂಡಾಗೇ ಮಾಡಸನ" ಎಂದು ವಾಟಿಸ್ಸೆ ಎಂದ.

"ಎಡೂರಪ್ಪನಿಗೊಂದು ಮದುವೆ ಮಾಡಸಬೇಕು ಕಂಡ್ರ."


"ಒಳ್ಳೆ ಐಡಿಯಾ ಚಿಗಪ್ಪ, ನಾಯಿಗೆ ಕ್ಯಲಸಿಲ್ಲ ಕುಂದ್ರಕ್ಕೆ ಟೈಮಿಲ್ಲ ಅಂತ ಯಾರಿಗೆ ಬೇಕಿಲ್ಲದಿದ್ರು ಇಡೀ ಕರ್ನಾಟಕ ತಿರಗ್ತನೆ. ಅದ್ಕೆ ಮದುವೆ ಮಾಡಿ, ಒಳ್ಳೆ ಸಂಸಾರಸ್ತನ ಮಾಡಿ ಬಿಸಾಕಿದ್ರೆ ಕರ್ನಾಟಕದ ಒಂದು ಪ್ರಾಬ್ಲಂ ಸಾಲು ಆಗಬವುದು. ಅಂಗೆ ನೋಡಿದ್ರೆ ಆ ಬಿಜೆಪಿಲಿ ಯರಡ್ನೆ ಮದುವೆ ಮಾಡಿಸಿಗಳಕ್ಕೆ ಲಗತ್ತಾದೊರು ಸುಮಾರು ಜನವುರೆ. ಆ ಉಡುಪಿ ಬಟ್ಟನಿಗೆ ಮೊದ್ಲು ಮಾಡಬೇಕು."

...ಡುತ್ತಿರುವ ಟೀ ಅಂಗಡಿಯವನು

...ನ್ವರ್ ಇಬ್ರಾಹಿಂ ಮಲೇಶಿಯಾದ ಡೆಪ್ಯೂಟಿ ಪ್ರಧಾನಿ. ರಸ್ತೆಗಳಲ್ಲಿ ಪ್ರತಿಭಟಿಸಿ, ದೇಶದ ನೀಚ ...ಣಿಗಳ ವಿರುದ್ಧ ಹೋರಾಡಿ ಮುಂದೆ ಬಂದ ಈ ವ್ಯಕ್ತಿ ಮಹಾ ಆಧುನಿಕ ಮತ್ತು ಮುಸ್ಲಿಮ್ ...ಯಸ್ಥ. ಚೀನೀಯರು, ಭಾರತೀಯರು, ಮುಸ್ಲಿಮರು, ಕ್ರಿಶ್ಚಿಯನ್ನರು ಎಲ್ಲರೂ ಇರುವ ಈ ...ಯಾವನ್ನು ನಡೆಸಲು ಬೇಕಾದ ಸಹನೆ, ಪ್ರೀತಿ, ಪರಧರ್ಮ ಸಹಿಷ್ಣುತೆ ಎಲ್ಲ ಗುಣಗಳುಳ್ಳವನು ...ಆತ ಮುಂದಿನ ಪ್ರಧಾನಿಯೆಂದು ಹೆಸರಿಸಿದ ಒಂದು ಅಂತಾರಾಷ್ಟ್ರೀಯ ಪತ್ರಿಕೆಯ ವರದಿಗಾರ ...ಅನ್ವರ್‌ನನ್ನು ಸಂದರ್ಶಿಸಿದ. ನನಗೆ ತುಂಬ ಕುತೂಹಲಕರವಾಗಿ ಕಂಡ ಎರಡು ತುಣುಕುಗಳು ...

...: ನೀವು ಕುಡಿಯುವುದಿಲ್ಲ ಅಂತ ಹೇಳ್ತೀರಲ್ಲ, ಹಾಗಾದರೆ ನಿಮಗೆ ಯಾವ ದುರಭ್ಯಾಸವೂ ...?


...ರ್: ಇವೆ. ನನಗೆ ಕೆಟ್ಟ ಅಭ್ಯಾಸಗಳಿವೆ. ಆದರೆ ಅವನ್ನು ನಾನು ಸಾರ್ವಜನಿಕವಾಗಿ ಚರ್ಚಿಸುವುದಿಲ್ಲ.



ಪ್ರಶ್ನೆ: ನಿಮ್ಮ ಬದುಕಿನಲ್ಲಿ ನೀವು ತುಂಬ ವಿಷಾದಿಸುವ ಘಟನೆ ಯಾವುದು?

ಅನ್ವರ್: ನಿಮ್ಮಂಥ ಕೆಲವರು ನಾನು ಅಮೆರಿಕಾ ವಿಯೆಟ್ನಾಂ ಮೇಲೆ ಬಾಂಬ್ ದಾಳಿ ಮಾಡಿದ್ದರ ವಿರುದ್ಧ ನಮ್ಮ ದೇಶದ ರಾಜಕಾರಣಿಗಳ ಭ್ರಷ್ಟತೆಯ ವಿರುದ್ಧ ಬೀದಿಗಿಳಿದು ಪ್ರತಿಭಟಿಸಿದ್ದನ್ನು ಮತ್ತೆಮತ್ತೆ ಹೇಳುತ್ತೀರಿ. ನನಗಾಗ ಹದಿನೇಳು ವರ್ಷ. ಆ ವಯಸ್ಸಿನಲ್ಲಿ ನಾನು ವಿಯೆಟ್ನಾಂ ಮೇಲಿನ ಬಾಂಬ್ ದಾಳಿಯ ಪರವಾಗಿ, ನಮ್ಮ ದೇಶದ ಭ್ರಷ್ಟತೆಯ ಪರವಾಗಿ ಚಳವಳಿ ಮಾಡಿದ್ದರೆ ...ಸುತ್ತಿದ್ದೆ. ಆದರೆ ನಾನು ಆ ಚಿಕ್ಕವಯಸ್ಸಿನಲ್ಲಿ ಮಾಡಿದ್ದರ ಬಗ್ಗೆ ಹೆಮ್ಮೆಪಡುತ್ತೇನೆ. ಆಗಿನ ಸರ್ಕಾರ ನನ್ನನ್ನು ...ಟು ತಿಂಗಳು ಜೈಲಿಗೆ ಹಾಕಿತು... ಆದರೆ ಒಂದು ವಿಷಾದವಿದೆ. ಅದು ನಾವು ಬೀದಿಗಿಳಿದು ಭೀಕರವಾಗಿ ...ಸುವಾಗ ಆದದ್ದು. ಆಗ ನಾವೆಲ್ಲ ಒಂದು ಚೀನಿಯ ಟೀ ಅಂಗಡಿಗೆ ಹೋಗಿ ಟೀ ಕುಡಿದೆವು. ಟೀ ...ಯವನು ನಮ್ಮನ್ನು ಕಂಡು ಎಷ್ಟು ಹೆದರಿಕೊಂಡಿದ್ದ ಅಂದರೆ ಆತ ನಮ್ಮಿಂದ ಹಣವನ್ನೇ ತೆಗೆದುಕೊಳ್ಳಲಿಲ್ಲ. ...ಕೊಡದೇ ಬಂದೆವು. ಇದು ತಪ್ಪು. ಆ ಟೀ ಅಂಗಡಿಯವನ ಸಾಲ ತೀರಿಸಲೇಬೇಕು. ತೀರಿಸುವವರೆಗೆ ನನ್ನಲ್ಲಿ ...ನಾವ ಇರುತ್ತದೆ.

...ದಲನೇ ಉತ್ತರದ ಮುಕ್ತತೆ ಮತ್ತು ಎರಡನೇ ಉತ್ತರದ ಹೊಣೆಗಾರಿಕೆ ನಮ್ಮ ರಾಜಕಾರಣಿಗಳಲ್ಲಿ ಯಾಕಿಲ್ಲ?



ಸಿಸ್ಟರ್‍ಸ್



ನಾನು ಮೊನ್ನೆ ಆಸ್ಪತ್ರೆಯಲ್ಲಿದ್ದಾಗ ಅಲ್ಲಿದ್ದ ಹತ್ತಾರು ಜನ ನರ್ಸ್‌ಗಳನ್ನು ಗಮನಿಸಿದೆ. ಎಲ್ಲರೂ ಪೌಷ್ಟಿಕ ಆಹಾರವಿಲ್ಲದೆ ಪೂರ್ತಿ ಬೆಳೆಯದೇ ಇರುವ, ಪ್ರಾಯದಲ್ಲೂ ಸೊರಗಿದಂತೆ ಕಾಣುವ ಹುಡುಗಿಯರು. ಮತ್ತು ಎಲ್ಲರೂ ಮಲೆಯಾಳಿಗಳು. 'ಕರ್ನಾಟಕದ ಹುಡುಗಿಯರು ಯಾಕೆ ನರ್ಸ್‌ಗಳಾಗುವುದಿಲ್ಲ?' ಎಂದು ಡಾಕ್ಟರೊಬ್ಬರನ್ನು ಕೇಳಿದೆ. 'ಅವರು ನರ್ಸ್ ಕೆಲಸಕ್ಕಿಂತ ಒಳ್ಳೆಯ ಕೆಲಸಕ್ಕೆ ಪ್ರಯತ್ನಿಸಿ, ಸಿಗದೆ ನಿರುದ್ಯೋಗಿಗಳಾಗಿಯೇ ಇರುತ್ತಾರೆ. ನರ್ಸ್‌ಗಳೆಂದರೆ ಕರ್ನಾಟಕದಲ್ಲಿ ಕೆಟ್ಟ ಅಭಿಪ್ರಾಯವಿರುವಂತಿದೆ. ಆದರೆ ಈ ವೃತ್ತಿ ಕ್ರಿಶ್ಚಿಯನ್ ಕಾನ್ವೆಂಟ್‌ಗಳಿಂದ, ನಿಜಕ್ಕೂ ತ್ಯಾಗಿಗಳಾದ ಮಹಿಳೆಯರಿಂದ ಬಂದದ್ದು ಎನ್ನುವುದು ಇವರಿಗೆ ಗೊತ್ತಾಗಬೇಕಿದೆ' ಅಂದರು.

ಆ ಉತ್ತರದಿಂದ ನನಗೆ ತೃಪ್ತಿಯಾಗದೆ ನರ್ಸ್ ಒಬ್ಬಳನ್ನೇ ಕೇಳಿದೆ. ಆಕೆ ತನ್ನ ಅರೆಮಲೆಯಾಳಿ, ಅರೆ ಇಂಗ್ಲಿಷ್‌ನಲ್ಲಿ ಹೇಳಿದಳು: 'ನಾವೆಲ್ಲ ಡೊನೇಶನ್ ಕೊಟ್ಟು ಕಲಿತವರು. ನಾನು ಇಪ್ಪತ್ತೈದು ಸಾವಿರ ಕೊಟ್ಟು ನರ್ಸಿಂಗ್ ಕಾಲೇಜ್ ಸೇರಿದೆ. ನನ್ನ ಅನೇಕ ಗೆಳತಿಯರು ಐವತ್ತು ಸಾವಿರ, ಒಂದು ಲಕ್ಷ ಕೊಟ್ಟು ಕಲಿತವರು. ಅದು ಕರ್ನಾಟಕದ ಯುವತಿಯರಿಗೆ ಇಷ್ಟವಿಲ್ಲದೆ ಇರಬಹುದು.'

ಇಲ್ಲಿಯ ಹುಡುಗಿಯರು ನರ್ಸಿಂಗ್ ವೃತ್ತಿ ಇಷ್ಟಪಡದಿರಲು ಮೇಲಿನದೆಲ್ಲ ಕಾರಣವಿರಬಹುದು. ಆದರೆ ನರ್ಸಿಂಗ್ ವೃತ್ತಿ ಕೆಟ್ಟದು, ಅನೀತಿಯದು ಎನ್ನುವುದು ಮೂರ್ಖತನ ಮತ್ತು ಈಗಿರುವ ನರ್ಸ್‌ಗಳನ್ನು ನೋಡಿದರೆ ಬೇಸರವಾಗುತ್ತದೆ. ಅವರಿಗೆ ಕನಿಷ್ಠ ಶಿಸ್ತು, ತಮ್ಮ ದಿನನಿತ್ಯದ ಕೆಲಸಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಆದರೆ ಇಂಜಕ್ಷನ್ ಕೊಡುವುದರಿಂದ ಹಿಡಿದು, ಔಷಧಿ ಮಿಶ್ರಣ ಮಾಡುವವರು, ಹಾಸಿಗೆ ಸರಿ ಮಾಡುವವರು, ರಕ್ತದೊತ್ತಡ ನೋಡುವವರು ಅವರೇ. ಡಾಕ್ಟರುಗಳು ಅವರಿಗೆ ಆಜ್ಞೆ ಮಾಡಿ ಹರಟೆ ಕೊಚ್ಚುತ್ತಾ ಕೂತಿರುತ್ತಾರೆ.


ಕರ್ನಾಟಕದಲ್ಲಿ ನರ್ಸಿಂಗ್, ಹೋಟೆಲ್‌ಗಳ ಕೇಟರಿಂಗ್, ಕಾರ್ ಡ್ರೈವಿಂಗ್, ಸೇಲ್ಸ್, ಸಪ್ಲೈ, ಉತ್ಪಾದನೆ- ಎಲ್ಲದರ ತರಬೇತಿಯ ಶಾಲೆ, ಕಾಲೇಜುಗಳನ್ನು ತೆರೆಯಬೇಕಾಗಿದೆ; ಡೊನೇಶನ್ ಇಲ್ಲದೇ ಹೇಗೆ ಇವನ್ನು ನಡೆಸುವುದೆಂದು ಯೋಜನೆ ಹಾಕಿಕೊಳ್ಳಬೇಕಾಗಿದೆ.

ಅಕ್ಟೋಬರ್ 15, 1997

'ಸೊನ್ನೆ' ಆಟ

ದಿನದ ಕುತೂಹಲ ಕೆರಳಿಸಿ, ಆಸಕ್ತಿ ಉಳಿಸಿ ಕೊಳ್ಳುವುದು ಹೇಗೆ ಎಂಬುದು ಮಾಧ್ಯಮದವರ ತಲೆ ಕೆಡಿಸಿ ಕೆರ ಹಿಡಿಸಿದೆ. ಇತ್ತೀಚಿನ ದಿನಗಳವರೆವಿಗೂ ರೇಪು, ಮರ್ಡರು ಅಂದರೆ ಸಾಕು. ಕಣ್ಣುಬಾಯಿ ಬಿಟ್ಟುಕೊಂಡು ನೋಡುತ್ತಿದ್ದರು. ಜೊಲ್ಲು ಸುರಿಸುತ್ತಾ ಓದುತ್ತಿದ್ದರು. ಈಗ ಬಾಳೆಹಣ್ಣು ತಿಂದು ಸಿಪ್ಪೆ ಹೊಗೆದಷ್ಟು ರೇಪು ಮಾಡಿ ಬಿಸಾಕುವುದು ಸಸ್ತಾ ಆಗಿದೆ. ಸಂತ್ರಸ್ತೆ ಕುರಿತು ಅನುಕಂಪ ಇರಲಿ. ಕುತೂಹಲವೂ ಇರಲ್ಲ. ಟಿವಿಗಳಲ್ಲಿ ಲೈವ್ ತೋರಿಸಿ ಕೋಮದಲ್ಲಿರುವ ಆಸಕ್ತಿಗೆ ಒಂದು ಚೂರು ಜೀವ ತುಂಬಬಹುದು. ಆದರೆ ಅದೂ ಒಂದೆರಡು ಬ್ಲೂಫಿಲಂ ನೋಡಿದವರಿಗೆ, ಬ್ಲೂಫಿಲಂ ಅಂದರೆ ವಾಕರಿಕೆ ಬರುತ್ತಲ್ಲಾ ಹಾಗೆ ಬರಿಸುತ್ತೆ. ಇನ್ನು ಮರ್ಡರ್‌ಗಳು ಕುತೂಹಲ ಕೆರಳಿಸಬಹುದು ಅಂದರೆ, ಬರುತ್ತಾ ಬರುತ್ತಾ ಮರ್ಡರ್ ಮಾಡೋಕೆ ಕಾರಣವೇ ಬೇಕಿಲ್ಲ. ಮಚ್ಚು, ಲಾಂಗು ಬೀಸಿ, ತಲೆ ಉರುಳಿಸಿ ಮಜ ತೆಗೆದುಕೊಳ್ಳುವವರು ಕಾಸಿಗೊಂದು ಕೊಸರಿಗೊಂದು ಆಗಿದ್ದಾರೆ. ಅವರ ಕಡೆ ಗಮನವನ್ನೇ ಹರಿಸಲ್ಲ. ಈ ಹಿಂದೆ ಲೋಕಾಯುಕ್ತ ದಾಳಿ ಅಂದರೆ ಸಿಕ್ಕಿಬಿದ್ದವರು ಯಾರು? ಎಷ್ಟು ಆಸ್ತಿ ಮಾಡಿದಾನೆ? ಇಂತಹ ವಿಷಯಗಳನ್ನು ತಿಳಿಯುವ ಕುತೂಹಲವಾದರೂ ಇರುತ್ತಿತ್ತು. ಸ್ನೇಹಿತರ ಸಂಗಡ ಅದೇ ಸಂಗತಿಯನ್ನು ಮೆಲುಕು ಹಾಕುತ್ತಾ ಮುದ ತೆಗೆದುಕೊಳ್ಳುತ್ತಿದ್ದರು. ಲಂಚ ಪಡೀದಿರೋನೆ ಪಾಪಿಯಾಗಿರುವ ದಿನಗಳಲ್ಲಿ ಈ ಸುದ್ದಿ ಪ್ರಕಟಿಸಿದರೆ ಓದುಗ ಪುಟ ಮಗುಚ್ತಾನೆ; ನೋಡುಗ ಚಾನೆಲ್ ಬದಲಾಯಿಸುತ್ತಾನೆ! ಇದ್ದಿದ್ದರಲ್ಲಿ ರಾಜಕಾರಣಿಗಳ ವಿಷಯ ಪರವಾಗಿಲ್ಲ ಅಂದುಕೊಂಡಿದ್ದರು. ಅವರಲ್ಲಿ ಭ್ರಷ್ಟರು ಅಂತ ಹಿಂದೂ ಇದ್ದಾರು, ಈಗಲೂ ಇದ್ದಾರೆ. ಆದರೆ ಯಾರೂ ಹಗರಣ ಮಾಡಿ ಜೈಲು ಸೇರಿರಲಿಲ್ಲ. ಹಾಗಾದಾಗ ಕುತೂಹಲ ಕೆರಳೋದು, ಆಸಕ್ತಿ ಮೂಡಿಸೋದು ಸಹಜ ಎಂದು ಮಾಧ್ಯಮದವರು ಭಾವಿಸಿದ್ದರು. ಮಾಧ್ಯಮದವರ ಪುಣ್ಯ, ಅಂತಹ ಒಳ್ಳೆಯ ಕಾಲ ಬಂದಿತು! ಯಡ್ಯೂರಪ್ಪನವರು ಹಗರಣಗಳಲ್ಲಿ ಸಿಲುಕಿ ಜೈಲು ಪಾಲಾದರು. ಆಗ ಜನರ ಆಸಕ್ತಿ ಉತ್ತುಂಗಕ್ಕೇರಿತ್ತು. ಹಗಲೂರಾತ್ರಿ ಮುಂದಿನ ಬೆಳವಣಿಗೆ ತಿಳಿಯಲು ಹಾತೊರೆಯುತ್ತಿದ್ದರು. ಮಾಧ್ಯಮಗಳ ಸುವರ್ಣ ಕಾಲ ಅದಾಗಿತ್ತು! ಆದರೆ ಅದು ಬಹಳ ಕಾಲ ಹಾಗೇ ಉಳಿಯಲಿಲ್ಲ. ಯಡ್ಯೂರಪ್ಪನವರನ್ನು ಅನುಕರಿಸಿ ಜೈಲುಪಾಲಾಗುವ ರಾಜಕಾರಣಿಗಳ ಸಂಖ್ಯೆ ಏರುತ್ತಾ ಹೋದಂತೆ ಜನರ ಕುತೂಹಲ ಇಳಿಮುಖ ಆಯಿತು! ಇದು ಎಂತಹ ಅಧೋಗತಿಗೆ ಇಳಿಯಿತು ಎಂದರೆ ಶಾಸಕದ್ವಯರಾದ ಸೋಮಶೇಖರ ರೆಡ್ಡಿ, ಸುರೇಶ್ ಬಾಬು ಜೈಲು ಸೇರಿದ್ದು ಯಾರ ಗಮನವನ್ನೂ ಸೆಳೆಯಲಿಲ್ಲ! ಈಗ ಕುತೂಹಲ ಎಂಬುದು ಏನಾದರೂ ಇದ್ದರೆ 'ಜನಶ್ರೀ ಸ್ವಾಭಿಮಾನಿ' ಶ್ರೀರಾಮುಲು ಯಾವಾಗ ಜೈಲು ಸೇರುತ್ತಾರೆ ಎಂಬುದು ಮಾತ್ರ! ಅವರೂ ಒಳಕ್ಕೆ ಹೋದರೆ ಮಾಧ್ಯಮದವರಿಗೆ ಜನರ ಆಸಕ್ತಿ ಕೆರಳಿಸುವ ಸುದ್ದಿಯೇ ಇರುವುದಿಲ್ಲ!

ರಾಜಕಾರಣಿಗಳು ಜೈಲಿಗೆ ಹೋಗುವುದು ಹಾಳಾಗಲಿ. ಅವರು ನುಂಗಿದ ಹಣವಾದರೂ ಕುತೂಹಲ ಹುಟ್ಟಿಸುತ್ತಾ ಅಂದರೆ ಅದೂ ಇಲ್ಲ. 2G ಹಗರಣದಲ್ಲಿ 1.75 ಲಕ್ಷ ಕೋಟಿ ಹಣ ಲೂಟಿ ಆಗಿತ್ತು, ಒಂದು ಪತ್ರಿಕೆ ಒಂದು ಸಾಲು ಪೂರ್ತ, ಒಂದು ಕೊನೆಯಿಂದ ಮತ್ತೊಂದು ಕೊನೆಯವರೆವಿಗೆ ಸೊನ್ನೆಗಳನ್ನು ಮುದ್ರಿಸಿ, ಇಂತಿಷ್ಟು ಅಗಾಧ ಗಾತ್ರದ ಹಣ ಲೂಟಿ ಆಗಿದೆ ಎಂಬುದನ್ನು ಓದುಗರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿತ್ತು, ಜನರ ಕುತೂಹಲ ಕೆರಳಿಸಿತ್ತು, ಈಗ 'ಕೋಲ್‌ಗೇಟ್' ಹಗರಣ ಆಗಿದೆ. ಇದು 1.86 ಲಕ್ಷ ಕೋಟಿ ಹಗರಣ. ಜನರಿಗೆ ಇದರ ಬಗ್ಗೆ ಗಮನವೇ ಇಲ್ಲ, ಎಂತಹದ್ದೋ ಅನಾಸಕ್ತಿ. 2G ಹಗರಣದಲ್ಲಿ ಸೊನ್ನೆಗಳನ್ನು ಮುದ್ರಿಸಿದ್ದ ಪತ್ರಿಕೆ ಈಗ ಆ ತೊಂದರೆ ತೆಗೆದುಕೊಳ್ಳಲಿಲ್ಲ! ಅದಕ್ಕೆ ಅರಿವಾಗಿದೆ. ತಮ್ಮ ವರದಿಯ ಫಲಶೃತಿ 'ಸೊನ್ನೆ' ಎಂದು!




'ಸೊನ್ನೆ'ಯನ್ನು ಬಳಕೆಗೆ ತಂದವನು ಬ್ರಹ್ಮಗುಪ್ತ. ಅವನು ಯಾಕೆ ಹೀಗೆ ಮಾಡಿದನೋ ಎಂಬುದು ಭಾಜಪಗೆ ತಲೆನೋವಿನ ಸಂಗತಿ ಆದರೆ, ಕಾಂಗ್ರೆಸ್‌ಗೆ ಯಶಸ್ಸಿನ ಗುಟ್ಟಾಗಿದೆ. 2G ಹಗರಣದಲ್ಲಿ ಕಪಿಲ್ ಸಿಬಾಲ್ ಅವರು ಅಗಾಧಪ್ರಮಾಣದ ಸೊನ್ನೆಗಳನ್ನು ನೋಡಿ ಪ್ರಭಾವಿತರಾದರೇನೋ. ಸರ್ಕಾರದ ಬೊಕ್ಕಸಕ್ಕೆ 'ಸೊನ್ನೆ ನಷ್ಟ' ಆಗಿದೆ ಎಂದಿದ್ದರು! ಈಗ ಚಿದಂಬರಂ ಸರದಿ. 'ಕೋಲ್‌ಗೇಟ್' ಹಗರಣದಲ್ಲಿ ಸರ್ಕಾರಿ ಬೊಕ್ಕಸಕ್ಕೆ ಆಗಿರುವ 'ನಷ್ಟ ಸೊನ್ನೆ' ಎಂದಿದ್ದಾರೆ!

ಹೇಗೆ ನಷ್ಟ ಸೊನ್ನೆ ಆಯಿತು ಎಂಬುದಕ್ಕೆ ಚಿದಂಬರಂ ವ್ಯಾಖ್ಯಾನ ಹೀಗಿದೆ. 'ಕೋಲ್‌ಬ್ಲಾಕ್' ಹಂಚಿದ್ದೇವು ನಿಜ. ಆದರೆ ಅಲ್ಲಿ ಗಣಿಗಾರಿಕೆಯೇ ನಡೆದಿಲ್ಲ! ಅಂದರೆ ಭೂಮಿಯ ಗರ್ಭದಲ್ಲಿ ಕಲ್ಲಿದ್ದಲು ಹಾಗೇ ಇದೆ. ಅಂದಮೇಲೆ ನಷ್ಟ ಹೇಗಾಯಿತು? ಹೌದಲ್ಲಾ! ಆದರೆ ಪವಾಡ ನಡೆದುಹೋಗಿದೆ. ಕಂಪನಿಗಳ ಹೆಸರಿಗೆ ಕಲ್ಲಿದ್ದಲು ಗಣಿಗಳು ವರ್ಗ ಆಗುತ್ತಿದ್ದಂತೆಯೇ ಅವುಗಳ ಷೇರುಗಳ ಬೆಲೆ ಗಗನಕ್ಕೇರಿತು! ಆದರಿಂದ ಕಂಪನಿಗಳಿಗೆ ಲಾಭ ಆಗಿರಬಹುದು; ಸರ್ಕಾರಕ್ಕೆ ನಷ್ಟ ಆಗಿಲ್ಲ! ಯೋಗಿ ಪಡೆದದ್ದು ಯೋಗಿಗೆ, ಜೋಗಿ ಪಡೆದದ್ದು ಜೋಗಿಗೆ!

ಚಿದಂಬರಂ ಅವರ ಈ ನ್ಯಾಯ ಭಾಜಪಗೆ ಸರಿಕಾಣುತ್ತಿಲ್ಲ, ಸಾರ್ವಜನಿಕ ಆಸ್ತಿಯನ್ನು ಕದ್ದವನು ಇನ್ನೂ ಅದನ್ನು ಮಾರಾಟ ಮಾಡಿಲ್ಲವಾದುದರಿಂದ ಸರ್ಕಾರಕ್ಕೆ ಯಾವುದೇ ನಷ್ಟ ಸಂಭವಿಸಿಲ್ಲ ಎನ್ನುವಂತಿದೆ ಇದು ಎಂಬುದು ಅವರ ತಕರಾರು. ಸದನ ಕಲಾಪದಲ್ಲಿಯೇ ಇದನ್ನು ಪ್ರಶ್ನಿಸಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಬಹುದಾಗಿತ್ತು. ಆದರೆ ಈ ಪಾಪಕೃತ್ಯದಲ್ಲಿ ಅದರ ಪಾಲೂ ಇದೆ! ಅದಕ್ಕೇ ಕಲಾಪ ನಡೆಯದಂತೆ ತಡೆಯುವುದೇ ಅದು ಕಂಡುಕೊಂಡ ಸೂತ್ರ! ಒಂದು ದಿನದ ಕಲಾಪಕ್ಕೆ 1.7 ಕೋಟಿ ರೂಪಾಯಿ ವೆಚ್ಚ ತಗುಲುತ್ತಂತೆ. ಅದಕ್ಕೆ ಇದು ತಿಳಿದಿಲ್ಲ ಎಂದು ಅಲ್ಲ. 'ಸೊನ್ನೆ'ಯ ಮಾತನ್ನು ಆಡುತ್ತಾ ಆಡುತ್ತಾ ಅದೂ ಅದರ ಆರಾಧಕರೇ ಆಗಿದ್ದಾರೆ! ಸೊನ್ನೆಗೆ ಸೊನ್ನೆಯನ್ನು ಸೇರಿಸಿದರೆ ಬರುವುದೂ ಸೊನ್ನೆಯೇ ಎಂಬುದರ ಜ್ಞಾನ ಅದಕ್ಕಿದೆ. ಕಲಾಪಕ್ಕೆ ತಗಲುವ ಖರ್ಚಿನಲ್ಲಿ 1.7 ತೆಗೆದರೆ ಉಳಿಯುವುದು ಏನು? ಸೊನ್ನೆ!

ಕೆಲವು ಬುದ್ಧಿವಂತರು ಒಂದು ಸಲಹೆ ನೀಡಿದ್ದಾರೆ. ಗಣಿಗಾರಿಕೆ ಪ್ರಾರಂಭವೇ ಆಗಿಲ್ಲದಿರುವುದರಿಂದ ಬೊಕ್ಕಸಕ್ಕೆ 'ಸೊನ್ನೆ ನಷ್ಟ' ಆಗಿದೆ ಎಂದು ಹೇಳುತ್ತಿದ್ದಾರೆ. ಹಾಗಿದ್ದಲ್ಲಿ ವಿವಿಧ ಕಂಪನಿಗಳಿಗೆ ನೀಡಿರುವ ಪರವಾನಗಿಯನ್ನು ಸರ್ಕಾರ ಹಿಂಪಡೆದುಕೊಳ್ಳಲಿ. ಅವರು ಸಂದಾಯ ಮಾಡಿರುವ ಹಣವನ್ನು ಬಡ್ಡಿ ಸೇರಿಸಿ ಹಿಂತಿರುಗಿಸಲಿ. ಹರಾಜು ಪ್ರಕ್ರಿಯೆ ಮೂಲಕ ಗಣಿಗಳ ವಿಲೇವಾರಿ ಆಗಲಿ ಎಂಬುದೇ ಆ ಸಲಹೆ ಆಗಿದೆ. ಸರಿ ಸ್ವಾಮಿ, ತಾವು ಹೇಳಿದಂತೆಯೇ ಮಾಡಬಹುದಿತ್ತು, ಆದರೆ ಗಣಿಗಾರಿಕೆ ಪರವಾನಗಿ ಪಡೆಯಲು ಯಾವಯಾವ ಕಂಪನಿಗಳು ಯಾರ್‍ಯಾರ ಬಾಯಿಗೆ ಎಷ್ಟೆಷ್ಟು ಸುರಿದಿವಿಯೋ ಲೆಕ್ಕಕ್ಕೆ ಸಿಕ್ಕಲ್ಲವಲ್ಲಾ! ನಿಮ್ಮದೇನೋ ಉತ್ತಮ ಸಲಹೆಯೇ ನಿಜ. ಆದರೆ ಪ್ರಾಯೋಗಿಸಲಾರದ ಸಲಹೆ ಎಂಬುದನ್ನಾದರೂ ಒಪ್ಪಿಕೊಳ್ಳುತ್ತೀರಾ.....!



ಅಣಕ


ನಿಯತ್ತಿನ ಮಂಜುಳಾ!

ಸಿ. ಮಂಜುಳಾ ಇದ್ದಾರಲ್ಲ, ಅದೇ ರಾಜ್ಯ ... ಆಯೋಗದ ಅಧ್ಯಕ್ಷೆ. ಆಕೆಯನ್ನು ನೋಡಿ ನಾನ... ಹೆಂಗಸು ಅಂದುಕೊಂಡಿದ್ದೆ. ಮುಖ ನೋಡಿ... ಹಾಕಬಾರದು ಅನ್ನುವ ಸಂಗತಿ ಇತ್ತೀಚೆಗೆ ಅರಿವಾ... ಅವು ದಡ್ಡರಲ್ಲ, ಬಲೇ ಜಾಣೆ! ತನಗೆ ಒಪ್ಪಿಸಿದ ಕೆ... ನಿಯತ್ತಾಗಿ ಮಾಡುವ ನಿಷ್ಣಾತೆ! ಅಷ್ಟೇ ಯಾಕೆ. ... ಇನ್ನೊಂದು ಹೆಸರೇ ಇವರು ಎಂದರೂ ... ಮಂಜುಳಾ ಅಂದರೆ ಸಾಕು. ನಿಯತ್ತು ಎಂದೇ ... ಇದಕ್ಕೆ ಉತ್ತಮ ನಿದರ್ಶನ ಅಂದರೆ ಮಂಗಳೂರಿನ ... ಸ್ಟೇ' ವಿಷಯದಲ್ಲಿ ಅವರು ಹಾಕಿದ ಹೆಜ್ಜೆ. ಅಲ್ಲಿ ... ರಕ್ಷಕ'ರ ದಾಳಿ ನಡೆದಿತ್ತಲ್ಲಾ; ಅದನ್ನು ಪರಿಶೀಲಿಸಿ... ನೀಡಲು ಇವರು ಹೋಗಿದ್ದರಲ್ಲಾ, ಸರ್ಕಾರಕ್ಕೆ ವರ... ಸುಮ್ಮನೆ ಕೂರಲಿಲ್ಲ, ಹಿಂದೂ ಸಂಸ್ಕೃತಿ ರಕ್ಷಣೆ... ತೊಟ್ಟರು. ಯಾವುಯಾವುದೋ ಹೆಸರಿನಲ್ಲಿ ವಿಚಾರ... ಏರ್ಪಡಿಸಿದರು. ಅಲ್ಲಿ ಸಂಸ್ಕೃತಿ ರಕ್ಷಣೆಯ ... ಮುಖ್ಯವಾಹಿನಿಗೆ ಬರುವಂತೆ ನೋಡಿಕೊಂಡು ... ತೋರಿದರು. ತಮ್ಮ ಉದ್ದೇಶ ಸಾಧನೆಗಾಗಿ ಜ... ಸುತ್ತಿ ಪತ್ರಿಕಾಗೋಷ್ಠಿ ನಡೆಸಿದರು. ಇದರ ಅ... ಕಳೆದ ವಾರ ಮಂಡ್ಯ ನಗರಕ್ಕೂ ಬಂದಿದ್ದರು.

ಇಷ್ಟು ಕರಾರುವಾಕ್ಕಾಗಿ ಮಂಜುಳಾ ಮೇಡಂ ಬ... ಎಂದು ಹೇಗೆ ಹೇಳುತ್ತಿದ್ದೇನೆ ಎಂದರೆ ಅವತ್ತು ... ಟಿವಿ ಹಾಕಿದಾಗ ಅದು ನನಗೆ ತಿಳಿಯಿತು. ... ನೋಡುತ್ತಾ ಕುಳಿತಿದ್ದೆ. ಬ್ರೇಕಿಂಗ್ ನ್ಯೂಸ್ ಅಂತ ... ಇತ್ತು. ಅಲ್ಲಿ 'ಹೋಂ ಸ್ಟೇನಲ್ಲಿ ಇದ್ದವರು ವಿದ್ಯಾ... ಅಲ್ಲ' ಅನ್ನುವ ಸುದ್ದಿ ತೋರಿಸಲಾಗುತ್ತಿತ್ತು. ಅದನ್ನು ... ಇದೇನು ಹೀಗೇಳ್ತಿದಾರಲ್ಲ ಈ ಮೇಡಮ್ಮು. ಮಂಗ... ಕಾಲೇಜು ಮಕ್ಕಳು ತಮ್ಮ ಸಹಪಾಠಿಗಳಿಗ... ಅವಮಾನದಿಂದ ರೊಚ್ಚಿಗೆದ್ದು ಮುಷ್ಕರ ಹೂಡಿ... ನಿಯತ್ತಿನ ಮಂಜುಳಾ ಹೀಗೆಲ್ಲ ಸುಳ್ಳು ... ನೀಡಬಾರದಲ್ಲಾ, ಎಲ್ಲೋ ಅವರು ಕಾಲಜ್ಞಾನಿ ಇ... ಕಾಲೇಜಿನ ಓದು ಎಂದಾದರೂ ಮುಗಿಯಲೇಬೇಕು... ರಕ್ಷಕ ಹೊಡೆತ' ತಿಂದವರಿಗೂ ಇದು ಅನ್ವಯಿಸುತ್ತೆ... ನಡೆಯುವುದನ್ನು ಈಗಲೇ ಅನ್ವಯಿಸಿ ಹೇಳುತ್ತಿದ್ದಾ... ಅಂದುಕೊಂಡೆ!

ಬೆಳಗ್ಗೆ ಎದ್ದು ಪತ್ರಿಕೆಗಳನ್ನು ತಿರುವಿ ಹಾಕಿದಾ... ಸಂಬಂಧಿಸಿದಂತೆ, ಹಲವು ವಿಷಯಗಳ ಮೇಲೆ...


ಮಾಫಿಯಾಗಳು ಓಟುಗಳನ್ನು ಖರೀದಿಸುತ್ತಿರುವಾಗ...



ಸೆಪ್ಟೆಂಬರ್ 5, 2012ರ ಸಂಚಿಕೆಯಲ್ಲಿ ಶಿವಸುಂದರ್ ಅವರು 'ಚಾರ್ವಾಕ' ಅಂಕಣದಲ್ಲಿ ಬರೆದಿರುವ 'ಓಟು ಹಾಕುವುದು ಮತ್ತು ಹಾಕದಿರುವುದು - ಎರಡೂ ಅರ್ಥ ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ' ಕುರಿತು ನನ್ನ ಪ್ರತಿಕ್ರಿಯೆ.

ಇವತ್ತು ಮಾಫಿಯಾಗಳು ಓಟುಗಳನ್ನು ಸಲೀಸಾಗಿ ಕೊಂಡು ಸೌಧದ ಗದ್ದುಗೆ ಹಿಡಿಯುತ್ತಿರುವಾಗ ನಗೆಪಾಟಲಿಗೀಡಾದ ಪ್ರಜಾಪ್ರಭುತ್ವ ಇನ್ನೂ ಬದುಕಿದೆ ಎಂದು ಹೇಳುತ್ತಾರೆ. ಬಡ ಗುಡಿಸಲುಕಾರ, ಪಡಿತರ ಧಾನ್ಯಕ್ಕಾಗಿ ಚಪ್ಪಲಿ ಹರಿಯುವಂತೆ ಅಡ್ಡಾಡುವ ಹಳ್ಳಿಗರು ಅದನ್ನು ನಂಬುವುದಾದರೂ ಹೇಗೆ? ಓಟು ಹಾಕಿದ ಕ್ಷಣಾರ್ಧದಲ್ಲೇ ಮತದಾರ ಬಿಕನಾಸಿ ಆಗುವುದನ್ನು ನೋಡಲು ನಾವು ಭಾರತ ಬಿಟ್ಟು ಬೇರೆಲ್ಲೂ ಹೋಗಬೇಕಿಲ್ಲ. ಓಟನ್ನು ಚಲಾಯಿಸುವುದು ಇರುವ ಹಕ್ಕನ್ನು ಕಳೆದು ಕೊಳ್ಳುವುದಕ್ಕಾ? ಪಡೆದುಕೊಳ್ಳುವುದಕ್ಕಾ? ಅರ್ಥವಾಗದ ಪ್ರಶ್ನೆ.

ಜಾತಿ, ಧರ್ಮ, ಪಂಥಗಳ ವಿಂಗಡಣೆಯೊಂದಿಗೆ ಗೋಣಿಚೀಲದಲ್ಲಿ ಓಟುಗಳನ್ನು ಕಟ್ಟಿಕೊಂಡು ನಡೆಯುತ್ತಿರುವ ಪಕ್ಷಗಳು, ಅಳಿದುಳಿದ ಓಟುಗಳನ್ನು ಒಗ್ಗರಣೆ, ಮಿರ್ಚಿ, ನಕಲಿ ಮದ್ಯಕ್ಕೆ ಸಗಟಾಗಿ ಎತ್ತಿಕೊಂಡಿರುವ ರಾಜಕಾರಣಿಗಳು ಥಕಥೈ ಕುಣಿಯುತ್ತಿರುವಾಗ, ಮತ ದೇಶವನ್ನು ಪಾತಾಳದ ಯಾವ ದಿಕ್ಕಿಗೆ ದೂಕಬಹುದು? ಅವರಿವರ ಮಾತಿಗೆ ತಲೆಬಾಗಿ



ಇಸ್ಮತ್ತಣ್ಣ, ಈ ಕಾಂಗ್ರೆಸಿಗರು ಕೇವಲ 'ಫಲಾನುಭವಿ'ಗಳಷ್ಟೇ ಮಾರಾ...

ಬೆಂಗಳೂರಿನ ಅಂದ ಕಾಲತ್ತಿಲೆ ಡಾನ್ ಜಯರಾಜ್ ನಡೆಸುತ್ತಿದ್ದ 'ಗರೀಬಿ ಹಟಾವೋ' ಪತ್ರಿಕೆಯಲ್ಲಿ ಪೊಲೀಸರನ್ನು ಆತ ನಾಯಿಗಳು ಎಂಬ ಕೋಡ್ ವರ್ಡ್‌ನಿಂದ ಉಲ್ಲೇಖಿಸುತ್ತಿದ್ದನಂತೆ. ಪೊಲೀಸ್ ಇಲಾಖೆಗೆ ಸ್ವಯಂಅಧಿಕಾರವಿಲ್ಲ. ಎಲ್ಲವೂ ಆಡಳಿತಾರೂಢರ ಅಪೇಕ್ಷೆಗನುಗುಣವಾಗಿಯೇ ನಡೆಯುತ್ತದೆ. ಅದಕ್ಕಾಗೇ ಆತ ಹಾಗೆ ಕರೆದಿರಬೇಕು. ಇದು ಪೊಲೀಸ್ ಇಲಾಖೆಯ ಪಾಡೂ ಹೌದು. ಸ್ವಸ್ಥ ಸಮಾಜವೊಂದರ ದುರಂತವೂ ಹೌದು. ಅಲ್ಲದೇ ಇಲಾಖೆಯ ಆಯಕಟ್ಟಿನ ಜಾಗದಲ್ಲಿ ಕುಳಿತ ಭ್ರಷ್ಟ ಅಥವಾ ಸಮಯಸಾಧಕರುಗಳಿಗೆ ವರವೂ ಕೂಡ (ಒಡೆಯ ಹೇಳಿದಂತೆ ಕುಣಿದು ಆತನನ್ನು ಸಂಪ್ರೀತಿಗೊಳಿಸಿ ಭಡ್ತಿ, ಪದಕ ಇತ್ಯಾದಿ ಗಿಟ್ಟಿಸಿಕೊಳ್ಳಲು) ಹೌದು.

ಕಲ್ಲಡ್ಕ, ಪೀಪಿಹೆಗ್ಡೆಯಂತವರು ಪೊಲೀಸರ ಸಮ್ಮುಖದಲ್ಲೇ ಸಂವಿಧಾನ ವಿರೋಧಿ ಕೃತ್ಯ ನಡೆಸಿದರೂ ಜಾಣಕುರುಡರಾಗುವ ಹಾಗು ಕುಂಟುನೆಪ ನೀಡಿ ಅವರ ಪರವಹಿಸುವ ಪೊಲೀಸರು ಕೇವಲ ಸಂಶಯದ ಆಧಾರದಲ್ಲಿ ವಿದ್ಯಾರ್ಥಿ ವಿಠಲ ಮಲೆಕುಡಿಯನನ್ನು ಬಂಧಿಸಿದ್ದಲ್ಲದೇ ಪರೀಕ್ಷಾ ಕೋಣೆಯಲ್ಲೂ ಕಾನೂನುಬಾಹಿರವಾಗಿ ಆತನಿಗೆ ಕೈಕೋಳ ತೊಡಿಸಿ ಅವಮಾನಿಸುತ್ತಾರೆ. ಪೊಲೀಸ್ ಇಲಾಖೆಯ ನ್ಯಾಯ ಯಾವ ಮಟ್ಟದ್ದು ಎಂದರೆ ದುರದೃಷ್ಟವಶಾತ್ ಇದು ಪುನಃ ಆ ಡಾನ್ ಜಯರಾಜನನ್ನೇ ನೆನಪಿಸುವಂತಿದೆ.

ಬೆಟ್ಟಂಪಾಡಿ ಎಂಬಲ್ಲಿ ತನ್ನ ಪತ್ನಿ ಮಕ್ಕಳನ್ನು ಹತ್ಯೆಗೈಯ್ಯುವ ಮುನ್ನ ವೆಂಕಟರಮಣಭಟ್ಟ ಎಂಬ ಆಸಾಮಿ ಎಂತಹ ಪೆದ್ದನಿಗೂ ಅರ್ಥವಾಗುವ ದರೋಡೆ ನಾಟಕ (ಆತನ ಮನೆಯೇ ದರಿದ್ರಗೆಟ್ಟಿತ್ತು ಅದರಲ್ಲಿ ದರೋಡೆ ಬೇರೆ) ಆಡಿದ್ದ. ಆಗಲೇ ಆತನನ್ನು ಕರೆಸಿ ಸರಿಯಾಗಿ ತದಕಿದ್ದರೆ ಆತನ ಕುಕೃತ್ಯಗಳ ಬಗ್ಗೆ ಅವತ್ತೇ ಬಾಯಿಬಿಡುತ್ತಿದ್ದ. ಆದರೆ ಆತ ಬ್ರಾಹ್ಮಣ ಎಂಬ ಕಾರಣಕ್ಕೆ ಸುಮ್ಮನಾದ ಪೊಲೀಸರು ಈ ಸುದ್ದಿ 2-3 ದಿನ ಜನರ ಬಾಯಲ್ಲಿದ್ದು ನಂತರ ಮರೆಯಾಗುತ್ತದೆ ಎಂದು ನಂಬಿದ್ದರು. ಅವತ್ತು ಭಟ್ಟನ ಹೀನಕೃತ್ಯ ಬಯಲಾಗಿದ್ದರೆ ಆನಂತರ ಮೂರು ಅಮಾಯಕ ಜೀವಗಳು ಆತನಿಗೆ ಬಲಿಯಾಗುತ್ತಿರಲಿಲ್ಲ.

ನಂಬಿದ್ರೆ ನಂಬಿ ಬಿಟ್ಟರೆ ಬಿಡಿ, ಇದೇ ಪೊಲೀಸರು ಗಿಣಿ ಶಾಸ್ತ್ರ ಕವಡೆ ಶಾಸ್ತ್ರದಂತವರ ಮಾತನ್ನು ಕೇಳಿ ಭಟ್ಟನ ನೆಪದಲ್ಲಿ ದಕ್ಷಿಣ-ಉತ್ತರ ಭಾರತದಲ್ಲಿ ಪಿಕ್‌ನಿಕ್ ನಡೆಸಿದರೇ ವಿನಃ ತಿಂಗಳೆರಡಾದರೂ ಕೊಲೆಗಾರ ಭಟ್ಟನ ಪತ್ತೆಯೇ ಇಲ್ಲ. ಇದು ಇಲ್ಲಿ ನಮ್ಮನ್ನು ಕಾಯಬೇಕಾಗಿರುವ ಇಲಾಖೆಯ ಕಾರ್ಯವೈಖರಿಗೊಂದು ತಾಜಾ ಉದಾಹರಣೆಯಷ್ಟೆ. ಪೊಲೀಸರನ್ನು ಸಿನಿಮಾಗಳಲ್ಲಿ ಜೋಕರ್‌ಗಳಂತೆ ತೋರಿಸುವುದಕ್ಕೆ ನಮ್ಮಲ್ಲಿ ವಿರೋಧ ಬಾರದಿರಲು ಇವೆಲ್ಲವೂ ಕಾರಣ ಇದ್ದಿರಬಹುದೇನೊ. ಇಂತವರು ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಪ್ರಧಾನ ಕಾರ್ಯದರ್ಶಿ ಕೆ.ಎಲ್.ಅಶೋಕ್ ಹಾಗೂ ಗೌರಿ ಲಂಕೇಶರ ವಿರುದ್ಧ ಕಿಡಿಕಾರದೇ ಅಜ್ಞಾತ ಧಣಿಗಳಾದ ಕಲ್ಲಡ್ಕ, ಕಾರಂತನಂತಹವರ ವಿರುದ್ಧ ಮಾತಾಡುತ್ತಾ... ಛೀ!! ಛೀ!!!

ಈಗ ಕಾಂಗ್ರೆಸ್ ಅಧಿಕಾರದಲ್ಲಿದ್ದು ಅವರೇ ... ಹಗರಣಗಳನ್ನು ಮಾಡಿದ್ದರೆ ಚೆಡ್ಡಿಗಳು ಯಾ... ಕಿರುಚಾಡುತ್ತಿದ್ದರು ಎಂದು ಊಹಿಸಿಕೊಳ್ಳಿ. ಬಿಜೆಪಿ ... ಹಿಡಿದ ಆರಂಭದಿಂದಲೂ ವಾರಕ್ಕೊಂದರಂತೆ ... ಪ್ರಕರಣಗಳ ಸರಮಾಲೆಯೇ ಎದುರಾದರೂ ... ಕಾಂಗ್ರೆಸ್ ಎಲ್ಲದಕ್ಕೂ ಮೌನವಾಗಿದೆ. ತನ್ನ ಹಳೆಯ ... ಕೆರೆದುಕೊಳ್ಳುವ ಸುಖದಲ್ಲೇ ಅದು ಮುಳುಗಿ... ಸರಿಯಾದ ವಿರೋಧ ಪಕ್ಷವೊಂದು ರಾಜ್ಯದಲ್ಲಿ ... ಅಸ್ತಿತ್ವದಲ್ಲಿದ್ದಿದ್ದರೆ ಬಿಜೆಪಿ ಯಾವಾಗಲೋ ಗಂಟ... ಕಟ್ಟಿರುತಿತ್ತು. ಅದಕ್ಕಿಂತ ಮುಖ್ಯವಾಗಿ ರಾಜ್ಯದ ... ಕೋಟ್ಯಾಂತರ ತೆರಿಗೆ ಹಣ ಪೋಲಾಗುವುದು ... ಹಾಗಾಗಿ ಈ ಎಲ್ಲಾ ಅನಾಚಾರಗಳಿಗೆ ಕಾಂಗ್ರೆಸ್ ... ಅಷ್ಟೇ ಹೊಣೆಗಾರನಾಗಬೇಕಾಗುತ್ತದೆ.

ಕರಾವಳಿಯಲ್ಲಿನ ಅನಾಚಾರಗಳಿಗೆ ವಿರುದ್ಧ... ಸೋಲಿಗನಾಗಿ ಹಿಂದೆಸರಿದ ಪೂಜಾರಿಯೊಬ್ಬ... ಮಟ್ಟಿಗಿನ ವಿರೋಧ ತೋರುವುದನ್ನು ಬಿಟ್ಟರೆ ... ನಾಯಕರು ಕೇವಲ ತೊಗಲುಬೊಂಬೆಗಳಂತಿದ್ದಾರೆ... ಹಿರಿಯ ಬೊಂಬೆಗಂತೂ ಘನ ಗಂಭೀರ ಸಮಾರಂ... ತನ್ನ ಹೆಂಡತಿಯೊಂದಿಗೆ ಹನಿಮೂನ್ ದಂಪತಿಯಂತೆ... ಕೊಡುವ ಚಪಲ. ಇಂತಹ ನಾಯಕ ಶಿಖಾ...

...ದು ತಿಳಿದು ಬಂತು.

...ದು ಅವರು ಮಂಗಳೂರಿಗೆ ಹೋಗದೇ ಇದ್ದರೆ ...ತ್ತು ಎಂಬ ಪ್ರಶ್ನೆ ಕಾಡುವುದು ಸಹಜ. ಅವರೇ ...ಆಪಾದಿತರು ನಿರಾಳವಾಗಿರುತ್ತಿದ್ದರು! 'ಅಂದರೆ ...ರನ್ನು ಎಚ್ಚರಗೊಳಿಸಿದ್ವೇ ಈ ಮೇಡಮ್ಮು. ...ರ ನಿಷ್ಕ್ರಿಯತೆ ಕುರಿತು ವರದಿಯಲ್ಲಿ ...ದ್ದಾರಂತೆ. ಹೀಗಿದ್ದರೂ ನಿಯತ್ತಿನ ಮಂಜುಳಾ ...ನ್ನು ಮಂಗಳೂರಿನ ಸಬಿಹಾ, ಬೆಂಗಳೂರಿನ ಲಲಿತಾ ... ಹಾಗೂ ಹಲವು ಮಹಿಳಾ ಸಂಘಟನೆಗಳು ...ಸಲು ಕಾರಣ ಏನು ಅಂದರೆ ಅವರು (ಮಂಜುಳಾ ... ಹೇಳಿದಂತೆ 'ರಾಜಕೀಯ ಪ್ರೇರಿತ!'

...ಹುದೇನೋ. ಅವರ ಕೆಲವು ಆಕ್ಷೇಪಣೆಗಳನ್ನು ...ರಿ ಹಾಗೇ ಅನ್ನಿಸುತ್ತೆ. ನೊಂದವರ ಸಂಪರ್ಕಿಸಲಿಲ್ಲ ... ಇದು ಸುಳ್ಳಂತೆ. ನಿಯತ್ತಿನ ಮಂಜುಳಾ ಮೇಡಂ ... ಕಂಡು ಮಾತಾಡಿದ್ದಾರೆ. ಸಾಕಲ್ಲವಾ? ಅಗಳು ...ರ ಅನ್ನದ ಗುಣ ತಿಳಿಯುತ್ತೆ. ಎಲ್ಲವನ್ನೂ ಹಿಸುಕಿ ...ಕಿಲ್ಲ. ಅವರೂ ಹಾಗೆ ಮಾಡಿದ್ದಾರೆ. ಒಬ್ಬರನ್ನು ... ಮಾತನಾಡಿದ್ದಾರೆ. ವಿಷಯ ಮನದಟ್ಟಾಗಿದೆ. ...ವರನ್ನು ಸಂಪರ್ಕಿಸುವ ಪ್ರಮೇಯ ಕಂಡುಬಂದಿಲ್ಲ!

...ನ್ನೊಂದು ಆರೋಪ ಎಂದರೆ ನೊಂದವರ ...ವರ ಚಾರಿತ್ರ್ಯಕ್ಕೂ ಇದಕ್ಕೂ ಏನು ಸಂಬಂಧ? ...ಯಾಕೆ ಕೆದಕಬೇಕಿತ್ತು? ಎಂಬುದಾಗಿದೆ. ನಿಯತ್ತಿನ ... ಮೇಡಂ ಅನುಭವಸ್ಥರು. ಹಿರಿಯಕ್ಕನ ಚಾಳಿ ...ಕ್ಕಳಿಗೆಲ್ಲ ಎಂಬ ಮಾತಿನ ಅರ್ಥ ತಿಳಿದವರು. ...ತ ಸೀರೆ ತಾಯಿಯಂತೆ ಮಗಳು ಎಂಬುದನ್ನು ... ತಾಯಿ ನೋಡಿ ಮಗಳ ತನ್ನಿ ಎಂಬ ಮಾತಿನಲ್ಲಿ ...ಇಟ್ಟವರು. ಅಂದಮೇಲೆ ಮಗಳ ಚಾರಿತ್ರ್ಯ ...ವುದು ತಾಯಿಯ ಚಾರಿತ್ರ್ಯದ ಮೇಲೆ ಎಂದು ... ನಂಬಿದವರು. ಅಂತಹವರು ಅದನ್ನು ಕೆದಕದೆ ...ಕಾರಣ ಹುಡುಕಲು ಸಾಧ್ಯನಾ!

... ರೇವ್ ಪಾರ್ಟಿಯ ವಿಷಯ. ಪೊಲೀಸರೇ ...ರ್ತ್‌ಡೇ ಪಾರ್ಟಿ ಅಂದಿದಾರಲ್ಲ ಅಂದರೆ ಪೊಲೀಸ್ ... ಮಗಳು ಇದ್ದುದ್ದರಿಂದ ಹಾಗಾಯಿತು. ಆಕೆ ...ರೆ ಅದು ರೇವ್ ಪಾರ್ಟಿನೇ ಆಗಿರುತ್ತಿತ್ತು!

...ಎಲ್ಲ ಒಳನೋಟ ಇರುವ ನಿಯತ್ತಿನ ಮಂಜುಳಾ ... ನೀಡಿರುವ ವರದಿಯನ್ನು ಹಿಂಪಡೆಯಿರಿ ಎಂದು ...ಸುತ್ತಿದ್ದಾರೆ. ಇದು ದುರಂತ ನಿಜ. ಅದಕ್ಕೆ ಮೇಡಂ ...ದ್ದ 'ವರದಿಯ ಒಂದು ಅಕ್ಷರವನ್ನೂ ...ಯಿಸುವುದಿಲ್ಲ!'

...ಖಡಕ್ ಮಾತು ಅಂದರೆ ನಿಯತ್ತಿನ ಮಂಜುಳಾ ... ವರದಿ ಅಂದರೆ ಏನು ತಿಳಿದುಕೊಂಡಿದ್ದಾರೆ? ...ಶಾಸನ ಇದ್ದ ಹಾಗೆ! ಶಾಸನ ಬದಲಾಯಿಸಲಾಗುತ್ತಾ? ... ಇದೂನೂವೆ! ●

ಪ್ರೇಮ್ ಅಡ್ಡ ನಗ್ನತೆ



'ಪ್ರೇಮ್ ಅಡ್ಡ' ಚಿತ್ರ ಈತನಕ ಅದರ ಶೀರ್ಷಿಕೆಗಾಗಿ ಸುದ್ದಿಯಲ್ಲಿತ್ತು. ನಿಮಗೆ ಗೊತ್ತಿರುವಂತೆ ಪ್ರೇಮ್ ನಾಯಕನಾಗಿ ನಟಿಸುತ್ತಿರುವ ಮಹೇಶ್‌ಬಾಬು ನಿರ್ದೇಶನದ ಈ ಚಿತ್ರಕ್ಕೆ 'ಅಡ್ಡೆ' ಎಂದು ಮೊದಲಿಗೆ ಹೆಸರಿಟ್ಟಿದ್ದರು. ಅದರ ಬಗ್ಗೆ 'ಅಲೆಮಾರಿ' ಚಿತ್ರದ ನಿರ್ಮಾಪಕ ಶ್ರೀನಿವಾಸ್ ವಿರೋಧ ವ್ಯಕ್ತಪಡಿಸಿದರು. ಆಗ ಛೇಂಬರ್ ಶ್ರೀನಿವಾಸ್ ಬೆಂಗಾವಲಿಗೆ ನಿಂತಿತು. ಆ ಕಾರಣಕ್ಕೆ ಪ್ರೇಮ್ ತನ್ನ ಚಿತ್ರದ ಹೆಸರನ್ನು 'ಪ್ರೇಮ್ ಅಡ್ಡ' ಎಂದು ಬದಲಾಯಿಸಿದರು. ಛೇಂಬರ್ ಅದಕ್ಕೂ ವಿರೋಧ ವ್ಯಕ್ತಪಡಿಸಿತು. ಈ ವಿವಾದ ಬಗೆಹರಿಯುವತನಕ ಈ ಚಿತ್ರದ ಜಾಹೀರಾತು ಗಳನ್ನು ಪ್ರಕಟಿಸಬಾರದೆಂದು ಛೇಂಬರ್ ಪತ್ರಿಕೆಗಳಿಗೂ ಮನವಿ ಮಾಡಿತು. ಈಗ ಇದನ್ನು ಪ್ರಶ್ನಿಸಿ 'ಪ್ರೇಮ್ ಅಡ್ಡೆ' ಚಿತ್ರದ ನಿರ್ಮಾಪಕರು ಕೋರ್ಟಿನ ಮೆಟ್ಟಿಲೇರಿದ್ದಾರೆ. ಇದೆಲ್ಲದ ರಿಂದಾಗಿ ಈತನಕ 'ಪ್ರೇಮ್ ಅಡ್ಡ' ಚಿತ್ರ ಸುದ್ದಿಯಲ್ಲಿರುವಂತೆ ಮಾಡಿತ್ತು.

ಈ ಮಧ್ಯೆ ಬಾಲಿವುಡ್‌ನಲ್ಲಿ ನಗ್ನತೆಯನ್ನು ಪ್ರದರ್ಶಿಸಿದ ಸನ್ನಿ ಲಿಯೋನ್ ತನ್ನ ಚಿತ್ರದಲ್ಲಿ ಐಟಂ ಸಾಂಗ್‌ವೊಂದರಲ್ಲಿ ಕಾಣಿಸಿಕೊಳ್ಳುತ್ತಾಳೆ ಎಂದು 'ಪ್ರೇಮ್ ಅಡ್ಡ' ತಂಡ ಭಾರಿ ಪ್ರಚಾರ ಮಾಡಿತು. ವಾಸ್ತವವಾಗಿ ಈ ಚಿತ್ರದಲ್ಲಿ ಎರಡು ಐಟಂ ಸಾಂಗ್‌ಗಳಿದ್ದು ಒಂದು ಹಾಡಿನಲ್ಲಿ ಈಗಾಗಲೇ ಬ್ರಿಟನ್‌ನ ಬೆಡಗಿಯೊಬ್ಬಳು ತನ್ನ ಮೈಸಿರಿಯನ್ನು ಪ್ರದರ್ಶಿಸಿ ಕುಣಿದಿದ್ದಾಳೆ. ಆದರೂ ಸನ್ನಿ ಲಿಯೊನ್ 'ಪ್ರೇಮ್ ಅಡ್ಡ' ಚಿತ್ರದಲ್ಲಿ ಐಟಂ ಸಾಂಗ್‌ಗಳಲ್ಲಿ ಕಾಣಿಸಿಕೊಳ್ಳುವುದು ಪಡ್ಡೆ ಹುಡುಗರ ಪಾಲಿಗೆ ಸಿಹಿ ಸುದ್ದಿಯಾಗಿತ್ತು. ಆದರೆ ಇದೆಲ್ಲ ಎಂದಿನಂತೆ ಪುಕ್ಕಟೆಯಾಗಿ ಪ್ರಚಾರ ಗಿಟ್ಟಿಸುವ ಪ್ರೇಮ್ ಅವರ ಗಿಮ್ಮಿಕ್ ಎಂದು ಈಗ ಸ್ಪಷ್ಟವಾಗಿದೆ. ಸಾಧಾರಣವಾಗಿ ತನ್ನ ಚಿತ್ರದ ನಾಯಕಿಯಾಗಿ ಬಾಲಿವುಡ್‌ನ ಪ್ರಮುಖ ನಟಿಯನ್ನು ಕರೆದುಕೊಂಡುಬರುತ್ತೇನೆ ಎಂದು ಪ್ರೇಮ್ ಮೊದಲು ಸುದ್ದಿ ಮಾಡುತ್ತಾರೆ. ಆದರೆ ಚಿತ್ರ ಆರಂಭವಾಗುವ ಹೊತ್ತಿಗೆ ಮುಂಬೈಗೆ ಹೋಗಿ ಯಾವುದೋ ಒಬ್ಬ ಮಾಡೆಲ್ ಹುಡುಗಿ ಯನ್ನು ಕರೆದುಕೊಂಡು ಬರುತ್ತಾರೆ. ಈಗ ಈ ಐಟಂ ಸಾಂಗ್ ವಿಷಯದಲ್ಲೂ ಪ್ರೇಮ್ ಅದೇ ಗಿಮಿಕ್‌ನ್ನು ಪುನರಾವರ್ತಿಸಿದ್ದಾರೆ. ಏಕೆಂದರೆ ನಮಗೆ ಲಭಿಸಿರುವ ಮಾಹಿತಿ ಪ್ರಕಾರ ಸನ್ನಿ ಲಿಯೋನ್ ಬದಲಿಗೆ ಕನ್ನಡದ ಹುಡುಗಿ 'ತುಪ್ಪ ಬೇಕಾ ತುಪ್ಪ...' ಹಾಡಿನ ಖ್ಯಾತಿಯ ರಾಗಿಣಿ ಈ ಚಿತ್ರದಲ್ಲಿ ಐಟಂ ಸಾಂಗ್‌ನಲ್ಲಿ ಕಾಣಿಸಿಕೊಂಡಿದ್ದಾಳಂತೆ. ಅಷ್ಟೇ ಅಲ್ಲ, ಇನ್ನೊಂದು ಮೂಲದ ಪ್ರಕಾರ 'ಪ್ರೇಮ್ ಅಡ್ಡ'ದ ಚಿತ್ರತಂಡ ಮುಂಬೈ ಬೆಡಗಿ ಸನ್ನಿ ಲಿಯೊನ್‌ರವರನ್ನು ತಮ್ಮ ಚಿತ್ರದಲ್ಲಿ ನಟಿಸಲು ಸಂಪರ್ಕಿಸಲೇ ಇಲ್ಲವಂತೆ.

ಅಂದಹಾಗೆ, "ಚಿತ್ರದ ಟೈಟಲ್‌ಗೆ ಸಂಬಂಧಿಸಿದಂತೆ ಯಾವುದೇ ಕಾರಣಕ್ಕೂ ನಾನು ಛೇಂಬರ್ ಒತ್ತಡಕ್ಕೆ ಮಣಿಯುವುದಿಲ್ಲ" ಎಂದು ಪ್ರೇಮ್ ಘಂಟಾಘೋಷವಾಗಿ ಘೋಷಿಸಿದ್ದಾರೆ. ಇದೂ ಒಂದು ಗಿಮಿಕ್ಕಾ? ಅಥವಾ ನಿಜವಾದ ಆಕ್ರೋಶವಾ ಗೊತ್ತಿಲ್ಲ. ●

ಒಂದೇ ಮತ-ಫಲಿತಾಂಶದ ಮೇಲೆ ಪರಿಣಾಮ

ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ದಿಢೀರನೆ ಚಟುವಟಿಕೆಗಳು ಗರಿಗೆದರಿವೆ. ಅದಕ್ಕೆ ಮುಖ್ಯ ಕಾರಣ ಅಧ್ಯಕ್ಷ ಚಂದ್ರಶೇಖರ್ ಚುನಾವಣೆ ಘೋಷಿಸಿರುವುದು. ಇದೇ ಸೆಪ್ಟೆಂಬರ್ 29 ರಂದು ಚುನಾವಣೆ ನಡೆಯಲಿದ್ದು ಈಗಾಗಲೇ ಗಾಂಧಿನಗರದಲ್ಲಿ ಸಣ್ಣ ಸಣ್ಣ ಗುಂಪುಗಳು ಒಟ್ಟು ಸೇರಿ ಹೊಸ ಅಧ್ಯಕ್ಷರ ಆಯ್ಕೆಯ ಬಗ್ಗೆ ಮಾತನಾಡುತ್ತಿದ್ದಾರೆ.

ಅಂದಹಾಗೆ, ಈಗಾಗಲೇ ನಾಲ್ಕು ಜನ ಉಮೇದುವಾರರು ಅಧ್ಯಕ್ಷ ಪದವಿಗೆ ಸ್ಪರ್ಧಿಸುವ ಮಾತುಗಳು ಕೇಳಿಬರುತ್ತಿವೆ. ಅದರಲ್ಲಿ ಮುಖ್ಯವಾಗಿ ನಿರ್ದೇಶಕ ರಾಜೇಂದ್ರಸಿಂಗ್‌ಬಾಬು, ವಾಣಿಜ್ಯ ಮಂಡಳಿಯ ಉಪಾಧ್ಯಕ್ಷರಾಗಿ ಅನೇಕ ಬಾರಿ ಸೇವೆ ಸಲ್ಲಿಸಿರುವ ಗಂಗಾಧರ್, ಕಳೆದ ಬಾರಿ ಚುನಾವಣೆಗೆ ಸ್ಪರ್ಧಿಸಿ ಸೋತಿರುವ ನಿರ್ಮಾಪಕ ವಿಜಯ್‌ಕುಮಾರ್ ಮತ್ತು ಹಿಂದೊಮ್ಮೆ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದ ಎ.ಗಣೇಶ್ ಹೆಸರುಗಳು ಕೇಳಿಬರುತ್ತಿವೆ.

ಪ್ರತಿಯೊಬ್ಬ ಅಭ್ಯರ್ಥಿಯ ಪರ ಮತ್ತು ವಿರೋಧದ ಮಾತುಗಳೂ ಗಾಂಧಿನಗರದಲ್ಲಿ ಕೇಳಿಬರುತ್ತಿವೆ. ರಾಜೇಂದ್ರಸಿಂಗ್‌ಬಾಬು ಒಳ್ಳೆಯ ನಿರ್ದೇಶಕ ಆಗಿರಬಹುದು. ಆದರೆ ವ್ಯವಹಾರದ ವಿಷಯದಲ್ಲಿ ಅವರ ಬಗ್ಗೆ ಅದೇ ಮಾತುಗಳು ಕೇಳಿಬರುತ್ತಿಲ್ಲ. ಹೀಗಾಗಿ ಚೇಂಬರ್ ಅಧ್ಯಕ್ಷರಾಗಿ ಅನೇಕ ವ್ಯಾಜ್ಯಗಳನ್ನು ಅವರು ಹೇಗೆ ನಿಭಾಯಿಸುತ್ತಾರೆ ಎಂಬುದೇ ಬಾಬು ವಿರೋಧಿಗಳ ಪ್ರಶ್ನೆ. ಇನ್ನು ಗಂಗಾಧರ್ ವಿಷಯದಲ್ಲಿ ಹೇಳುವುದಾದರೆ ಅವರು ಛೇಂಬರ್ ಹೊರಗಡೆಯೇ ಅನೇಕ ವಿವಾದಗಳನ್ನು ಬಗೆಹರಿಸಿದ ವ್ಯಕ್ತಿ. ಆದರೆ ಆತ ಗಂಭೀರವಾಗಿರುವುದಿಲ್ಲ ಮತ್ತು ಸರಕಾರದ ಜೊತೆ ವ್ಯವಹರಿಸುವ ಸಂದರ್ಭದಲ್ಲಿ ಸ್ವಲ್ಪ ತೂಕದ ವ್ಯಕ್ತಿ ಅಧ್ಯಕ್ಷರಾದರೆ ಒಳ್ಳೆಯದು. ಅಂತಹ ಕೆಟಗರಿಗೆ ಗಂಗಾಧರ್ ಸೇರುವುದಿಲ್ಲ. ಅವರೇನಿದ್ದರೂ ಛೇಂಬರ್ ಹೊರಗಡೆ ಪಂಚಾಯತ್ ಕಟ್ಟೆಯಲ್ಲಿ ಕುಳಿತುಕೊಂಡು ವಿವಾದವನ್ನು ಬಗೆಹರಿಸುವುದಕ್ಕೆ ಲಾಯಕ್ ಎನ್ನುತ್ತಾರೆ ಗಂಗಾಧರ್ ವಿರೋಧಿಗಳು. ಇನ್ನು ಗಣೇಶ್ ವಿಷಯದಲ್ಲಿ ಹೇಳುವುದಾದರೆ, 'ದಂಡಂ ದಶಗುಣಂ' ಚಿತ್ರಕ್ಕೆ ಸಂಬಂಧಪಟ್ಟಂತೆ ನಾಯಕಿ ರಮ್ಯ ಇವರ ಶೇಪ್ ತೆಗೆದಿರುವುದನ್ನ ಉದ್ಯಮದವರು ಇನ್ನೂ ಮರೆತಿಲ್ಲ. ಹೀಗಾಗಿ ಈತ ಉದ್ಯಮದಲ್ಲಿರುವ ಹಲವಾರು ಗುಂಪುಗಳಲ್ಲಿ ಒಂದು ಗುಂಪಿಗೆ ಮಾತ್ರ ಸಮ್ಮತವಾಗುವ ವ್ಯಕ್ತಿಯಾಗಬಹುದು. ವಿಜಯ್‌ಕುಮಾರ್ ಎಂಬ ವ್ಯಕ್ತಿ ಈಗಾಗಲೇ ಬಿಜೆಪಿ ಪಕ್ಷದಲ್ಲಿ ತುಂಬಾ ಸಕ್ರಿಯವಾಗಿ ಓಡಾಡುತ್ತಿರುವವರು. ಅದರಲ್ಲೂ ಮುಖ್ಯವಾಗಿ ಯಡಿಯೂರಪ್ಪನವರ ಹಿಂದೆಯೇ ಸದಾ ನಿಲ್ಲುವ ಹವ್ಯಾಸವನ್ನು ಬೆಳೆಸಿಕೊಂಡಿರುವ ವಿಜಯ್‌ಕುಮಾರ್ ಪಾಪದ ವ್ಯಕ್ತಿ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಛೇಂಬರ್ ಅಧ್ಯಕ್ಷನಾಗಿ ಇಂತಹ ಪಾಪದ ವ್ಯಕ್ತಿಯನ್ನು ಕುಳ್ಳಿರಿಸಿದರೆ ಯಾವುದೇ ಕೆಲಸ ಸಾಧ್ಯವಾಗುವುದಿಲ್ಲ ಎಂಬುದು ಇವರ ಬಗ್ಗೆ ಕೇಳಿಬರುತ್ತಿರುವ ಅಪಸ್ವರ. ವಿಜಯ್‌ಕುಮಾರ್ ಅಧ್ಯಕ್ಷರಾದರೆ ಸರ್ಕಾರದ ಜೊತೆಗೆ ಕೆಲಸಕಾರ್ಯಗಳನ್ನು ಸುಲಭವಾಗಿ ಮಾಡಬಹುದು ಎಂಬುದು ಅವರ ಬಗ್ಗೆ ಇರುವ ಒಂದು ಪ್ಲಸ್ ಪಾಯಿಂಟ್.

ಹೀಗೆ ಸದ್ಯಕ್ಕೆ ನಾಲ್ಕು ಜನರ ಬಗ್ಗೆ ನಾಲ್ಕು ತರಹದ ಮಾತುಗಳು ಕೇಳಿಬರುತ್ತಿವೆ. ರಾಕ್‌ಲೈನ್ ವೆಂಕಟೇಶ್‌ಗೆ ಉದ್ಯಮದಲ್ಲಿ ಬಹಳ ದೊಡ್ಡ ಹೆಸರು ಇದೆ. ಇವರ ಬೆಂಬಲ ರಾಜೇಂದ್ರಸಿಂಗ್‌ಬಾಬು ಅವರಿಗೆ ಇದೆ ಎಂದು ಕೇಳಿಬರುತ್ತಿದೆ. ಇದೇ ಸಂದರ್ಭದಲ್ಲಿ ಕಳೆದ ಬಾರಿ ಚುನಾವಣೆಗೆ ನಿಂತು ಸೋತಿರುವ ವಿಜಯ್‌ಕುಮಾರ್ ಅವರನ್ನು ಉದ್ಯಮದಲ್ಲಿರುವ ಅನೇಕರು ಬೆಂಬಲಿಸುತ್ತಿದ್ದಾರೆ. ಅಷ್ಟೇ ಅಲ್ಲ, ಅವರ ಬಗ್ಗೆ ಒಂದಿಷ್ಟು ಸಿಂಪತಿ ಕೂಡ ಇದೆ. ಇವರಿಬ್ಬರ ನಡುವೆ ತೀರ ಪೈಪೋಟಿ ಕಂಡುಬಂದರೆ ಮೂರನೇ ವ್ಯಕ್ತಿ ಇದರ ಲಾಭ ಪಡೆದರೂ ಆಶ್ಚರ್ಯವಿಲ್ಲ. ಹೀಗೆ ಈ ಬಾರಿಯ ಛೇಂಬರ್ ಚುನಾವಣೆ ಈಗಾಗಲೇ ಕುತೂಹಲ ಮತ್ತು ಆಸಕ್ತಿಯನ್ನು ಕೆರಳಿಸಿದೆ. ಅಂತಿಮವಾಗಿ ರಾಜ್‌ಕುಮಾರ್ ಸಂಸ್ಥೆಯವರು ಯಾರನ್ನು ಬೆಂಬಲಿಸುತ್ತಾರೋ ಅವರು ಗೆದ್ದುಬರುವುದು ಇಲ್ಲಿಯ ಸಂಪ್ರದಾಯ. ಈ ನಾಲ್ವರಲ್ಲಿ ಹೆಡ್‌ಆಫೀಸ್‌ನವರು ಯಾರಿಗೆ ಬೆಂಬಲಿಸುತ್ತಾರೋ ನೋಡಬೇಕು.

ಈ ವರ್ಷ ಇದೇ ಮೊದಲ ಬಾರಿಗೆ ಒಬ್ಬ ವ್ಯಕ್ತಿಗೆ ಒಂದೇ ಮತ ಹಾಕುವ ಸಂಪ್ರದಾಯವನ್ನು ಛೇಂಬರ್ ಪ್ರಾರಂಭಿಸಿದೆ. ಈ ಹಿಂದೆ ಒಬ್ಬ ವ್ಯಕ್ತಿಯ ಹೆಸರಲ್ಲಿ ಅನೇಕ ಸಂಸ್ಥೆಗಳು ರಿಜಿಸ್ಟರ್ ಆಗಿದ್ದರೆ, ಆ ವ್ಯಕ್ತಿಗೆ ಅಷ್ಟು ಮತಗಳನ್ನು ಹಾಕುವ ಹಕ್ಕನ್ನು ನೀಡಲಾಗುತ್ತಿತ್ತು. ಹೀಗಾಗಿ ಕೆಲವರು 40-50 ಮತಗಳನ್ನು ಹಾಕುತ್ತಿದ್ದರು. ಈ ವರ್ಷದಿಂದ ಅಂತಹ ವ್ಯಕ್ತಿ ಒಂದೇ ಒಂದು ಮತ ಹಾಕಲು ಮಾತ್ರ ಸಾಧ್ಯ. ಇದು ಈ ಬಾರಿಯ ಚುನಾವಣೆಯ ಫಲಿತಾಂಶದ ಮೇಲೆ ಪರಿಣಾಮ ಬೀರಬಹುದು.

● ಶೆಣೈ

...ಗೂ ಓಟು ಹಾಕುತ್ತಾ ಬಂದಿರುವ ಬಡಪಾಯಿಗಳ ...ಚುನಾವಣೆಯ ಕೋಣೆಯಲ್ಲಿ ಬೆರಳಿಗೆ ಶಾಹಿಯ ... ಬಿದ್ದಿದೆಯೇ ಹೊರತು ಬದುಕಿನಲ್ಲಿ ಅದೆ ಉರಿವ ... ಹೊಟ್ಟೆಗೆ ಒಣ ಕಾರಪುಡಿ ರೊಟ್ಟಿ. ಓಟಿಗೆ ...ತಾಕತ್ತಿದೆಯೆಂದು ಬೊಗಳೆ ಬಿಡುವ ನಾಯಕರಿಗೆ ...ಹಾಕಿದ ಕೈಗಳು ಗಡಗಡ ನಡುಗುತ್ತಿರುವುದು ...ಣಿಸುತ್ತಿಲ್ಲ.

ಸಂವಿಧಾನದ ಮೂಲ ಆಶಯಗಳು ಬಕ್ಕಬಾರಲು ಬಿದ್ದಾಗ, ಹುಸಿ ಪ್ರಜಾಪ್ರಭುತ್ವ ನಗದೇ ಇನ್ನೇನು ಮಾಡೀತು. ಓಟುಗಳಿಗೆ ವೈರಸ್ ಹರಡಿ ನೆಮ್ಮದಿ ಆಪೋಶನ ತೆಗೆದುಕೊಳ್ಳುತ್ತಿರುವಾಗ ಬಹುಪಾಲು ದುಡಿಯುವ ವರ್ಗದ ಒಡಲುಗಳು ಉರಿಯುತ್ತಿವೆ. ಪುನುಷ್ಯತ್ವವೇ ಮಾನದಂಡವಾಗಿ ಅಂತಃಕರಣವೇ ಸಂವಿಧಾನವಾಗಿ ಸಿಡಿಲಗುಂಡಿಗೆಯ ನಾಯಕರು ಬರುವವರೆಗೂ ಹುಳುಕು ಪ್ರಜಾಪ್ರಭುತ್ವ ಹಾಳೂರಿಗೆ ಇರೋನೆ ಗೌಡ. ಶಿವಸುಂದರ್ ಸರ್ ಅವರ ಲೇಖನ ತುಂಬಾ ಚೆನ್ನಾಗಿತ್ತು.

- ಬಸವರಾಜ ಹಳ್ಳಿ ಹಸಮಕಲ್



...ಮ್ಮೆ ಚಳಿ ಬಿಡದಿದ್ದರೆ ಅದರ ...ಪಡಕೊಳ್ಳಲು ನರಿಗಳೆಲ್ಲ ... ಹಾಕಿ ಕುಳಿತಿರುವುದಂತೂ

...ಮಿಯರಾದ ಬಾಕ್ರಬೈಲು ... ಭಟ್, ಗೌರಿ ಲಂಕೇಶ್, ... ಮತ್ತು ಕೋಮು ಸೌಹಾರ್ದ ವೇದಿಕೆಯ ...ಮಿಗಳೇ ಇವತ್ತು ಆಡಳಿತಾರೂಢ ಬಲಾಢ್ಯರನ್ನು ...ಹಾಕಿಕೊಂಡು ಮೈಮೇಲೆ ಕೇಸನ್ನು ಎಳೆದುಕೊಂಡು ... ವಿರೋಧ ಪಕ್ಷದ ಸ್ಥಾನವನ್ನು ತುಂಬುತ್ತಿದ್ದಾರೆ. ...ಫಜೀರ್ ಅವರು ಕಾಂಗ್ರೆಸಿಗರ ನಿಷ್ಕ್ರಿಯತೆಯನ್ನು ...ದ್ದಾರೆ. ಕಾಂಗ್ರೆಸ್ ಯಾವ ಚಳವಳಿಯ ಪರವೂ ... ಬಹುಶಃ ನಾಳೆ ಅಧಿಕಾರ ದೊರೆತರೆ ನಮ್ಮನ್ನೂ ...ಲು ಬಿಜೆಪಿಗಳು ಹಿಂದೆ ನೋಡರು ಎಂಬ ...ರಬೇಕು.

...ಲಂಕೇಶರಿಂದ ಲೇವಡಿಗೊಳಗಾಗದ ರಾಜಕಾರಣಿ ...ಗಳುಂಟೆ? ... ವಾಟಾಳ್ ನಾಗರಾಜರನ್ನು ಉಟ್ಟುಬ... ರಾದರೆಂದು ಅವರು ಕರೆಯುತ್ತಿದ್ದರು. ಆದರೂ ...ಶ್ ಸಾಂದರ್ಭಿಕವಾಗಿ ಸದನದಲ್ಲಿ ಲಂಕೇಶ್ ... ಮಾತಾಡಿದ್ದರು. ಆದರೆ ಈ ಕಾಂಗ್ರೆಸಿಗರು ...ವನು ಮಾಡಿದ ಹೋರಾಟದ "ಫಲ"ವನ್ನಷ್ಟೇ ...ಹೊಂಚುತ್ತಿದ್ದಾರೆ.

...ಇತಿ ತಮ್ಮದ,

- ...ಪುತ್ತೂರು, ದಕ

ನೀರ್ಕುಡಿವುದೇ ಸರ್ವಜ್ಞ' ಎಂಬಂತೆ ಹಿಂದೂ ಧರ್ಮವನ್ನು ಗುತ್ತಿಗೆ ಹಿಡಿದವರಂತೆ ವರ್ತಿಸುವ ಚೆಡ್ಡಿಗಳಿಗೆ ಎಂದಾದರೂ ಬುದ್ಧಿ ಬಂದೀತೆ? ಬೇಗ ಬರಲೆಂದು ಹಾರೈಸಿ....

- ಪ್ರೊ. ಶಿವರಾಮಯ್ಯ, ಬೆಂಗಳೂರು

ಫ್ಯಾಸಿಸ್ಟ್ ಶಕ್ತಿಗಳ ತರ್ಕಗಳು

ಆಗಸ್ಟ್ 29, 2012ರ ಸಂಚಿಕೆಯ 'ಕಂಡಹಾಗೆ' ಅಂಕಣದಲ್ಲಿ ಗೌರಿ ಲಂಕೇಶರು 'ಗಾಳಿಸುದ್ದಿಯ ಹಿಂದಿರುವ ತರ್ಕಗಳು' ಬರೆದಿರುವಂತೆ ಸುಳ್ಳು ವದಂತಿಗಳನ್ನು ಹಬ್ಬಿಸುವುದು ಮತ್ತು ಅದರ ಲಾಭವನ್ನು ಪಡೆಯುವುದು ಫ್ಯಾಸಿಸ್ಟ್ ಶಕ್ತಿಗಳ ಬಹಳ ಹಳೆಯ ಅಭ್ಯಾಸವಾಗಿದೆ. ಸುಳ್ಳನ್ನು ಸತ್ಯವೆಂದು ಸಾಧಿಸಲು ಅವರು ಈ ತರ್ಕವನ್ನು ಬಳಸಿಕೊಳ್ಳುತ್ತಾರೆ. ಸುಳ್ಳನ್ನು ಮತ್ತೆ ಮತ್ತೆ ಹೇಳಿ ಹೇಳಿ ಅದನ್ನು ಸತ್ಯವೆಂದು ನಂಬಿಸುವುದು ಹಿಟ್ಲರ್ ಕಾಲ ದಿಂದಲೂ ನಡೆದುಬಂದಿದೆ. ಜನರ ಮುಗ್ಧತೆ ಯನ್ನು ಬಂಡವಾಳ ಮಾಡಿಕೊಂಡ ಇಂತಹ ಶಕ್ತಿಗಳೇ ತೊಂಭತ್ತರ ದಶಕದಲ್ಲಿ ಬಾಬರಿ ಮಸೀದಿಯನ್ನು ಕೆಡವಲು ಕಾರಣವಾದದ್ದು.

- ಕು.ಸ.ಮಧುಸೂದನ್, ರಂಗೇನಹಳ್ಳಿ (ತರೀಕೆರೆ)

ಇದೇನು ಸಭ್ಯತೆ? ಇದೇನು ಸಂಸ್ಕೃತಿ

ಪ್ರವೀಣ್ ಎಸ್. ಶೆಟ್ಟಿ ಅವರು ಬರೆದ 'ತಮ್ಮ ಬುಡಕ್ಕೆ ಬಂದಾಗ ಎಚ್ಚೆತ್ತ ದೊಡ್ಡವರು' (29.8.12) ಲೇಖನವು ಸಂಘ ಪರಿವಾರ, ಜಾಗರಣ ಮಂಚ, ಶ್ರೀರಾಮ ಸೇನೆ, ಬಿಜೆಪಿಯಂಥ ದುಷ್ಟ ಚೆಡ್ಡಿ ಕಿರಾತಕರ ಚೆಡ್ಡಿ ಬಿಚ್ಚಿ ಕಾದ ಕಬ್ಬಿಣದ ಗುಳದಿಂದ ಬರೆ ಎಳೆದಂತಿದೆ. ಅದರೇನು ಮಾಡುವುದು? 'ಮೂರ್ಖರಿಗೆ ಬುದ್ಧಿಯನ್ನು ನೂರ್ಕಾಲ ಹೇಳಿದರು ಗೋರ್ಕಲ್ಲ ಮೇಲೆ ಮಳೆಗರೆದರೆ ಆ ಕಲ್ಲು

ಬಿಜೆಪಿ ಸರ್ಕಾರದ 'ಪ್ರಥಮ ಸಾಧನೆಗಳು'!

ಬಿಜೆಪಿ ಪಕ್ಷ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದದ್ದು ಇಡೀ ದಕ್ಷಿಣ ಭಾರತದಲ್ಲೇ ಪ್ರಥಮ. ಆಡಳಿತ ಪಕ್ಷದ ಮುಖ್ಯಮಂತ್ರಿಗಳು ಬ್ರಹ್ಮಾಂಡ ಭ್ರಷ್ಟಾಚಾರದಿಂದಾಗಿ ತಮ್ಮ ಅವಧಿ ಮುಗಿಯುವ ಮುನ್ನವೇ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದು ಮತ್ತು ಆನಂತರ ಜೈಲು ಪಾಲಾಗಿದ್ದೂ ನಮ್ಮ ರಾಜ್ಯದ ಇತಿಹಾಸದಲ್ಲೇ ಪ್ರಥಮ.

ಆಡಳಿತಾರೂಢ ಪಕ್ಷವೊಂದರ ಶಾಸಕರೊಬ್ಬರು ವಿಧಾನಸೌಧದ ಹತ್ತಿರವಿರುವ ಶಾಸಕರ ಭವನದಲ್ಲಿ ಲಂಚ ತೆಗೆದುಕೊಳ್ಳುವಾಗ ಲೋಕಾಯುಕ್ತರ ಕೈಗೆ ಸಿಕ್ಕಿಬಿದ್ದು ಜೈಲು ಸೇರಿದ್ದು, ಜವಾಬ್ದಾರಿಯುತ ಸ್ಥಾನದಲ್ಲಿರುವ ಮಂತ್ರಿಗಳು ವಿಧಾನಸಭೆಯ ಕಲಾಪ ನಡೆಯುತ್ತಿದ್ದಾಗ ತಮ್ಮ ಮೊಬೈಲ್‌ನಲ್ಲಿ ಬ್ಲೂಫಿಲ್ಮ್ ನೋಡುವ ಮೂಲಕ ವಿಧಾನಸೌಧವನ್ನು ಅಪವಿತ್ರಗೊಳಿಸಿದ್ದೂ ಪ್ರಥಮ ಸಾಧನೆಗಳೇ.

ಭೂಗಳ್ಳತನ, ಅತ್ಯಾಚಾರ, ಅದಿರು ಕಳ್ಳತನ, ಲಂಚ ನೀಡುವಿಕೆ, ಭ್ರಷ್ಟಾಚಾರದ ಆರೋಪಗಳನ್ನು ಹೊತ್ತು ಬಿಜೆಪಿಯ ಹಲವಾರು ಮಂತ್ರಿಗಳು ಜೈಲು ಸೇರಿದ್ದರಿಂದ ಮುಖ್ಯಮಂತ್ರಿಯೊಬ್ಬರ ಬಳಿ 21 ಖಾತೆಗಳು ಜಮೆಯಾಗಿ ಅವರುಗಳನ್ನು ಅವರಿಂದ ನಿಭಾಯಿಸಲಾಗದಿದ್ದದ್ದೂ ರಾಜ್ಯದಲ್ಲಿಯೇ ಪ್ರಥಮ.

ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ್ದರೂ ಅದೇ ರೈತರು ಬೀಜ ಮತ್ತು ಗೊಬ್ಬರ ಕೇಳಿದ್ದರಿಂದ ಅವರ ಮೇಲೆ ಗುಂಡು ಹಾರಿಸಿ ರೈತನೊಬ್ಬನ ಸಾವಿಗೆ ಕಾರಣವಾಗಿದ್ದಲ್ಲದೆ ಆ ಪ್ರಕರಣದಲ್ಲಿ ಸತ್ತವರು ರೈತನೇ ಅಲ್ಲವೆಂದು ಹೇಳಿದ್ದು ಪ್ರಥಮ ಸಾಧನೆಯೇ.

ಬರಗಾಲ ಪರಿಸ್ಥಿತಿ ಅಧ್ಯಯನ ಮಾಡಲು ಆಡಳಿತ ಪಕ್ಷದ ಮೂರು ತಂಡಗಳು ರಾಜ್ಯ ಪ್ರವಾಸ ಮಾಡಲು ಹೊರಟಿರುವುದು, ವಿರೋಧ ಪಕ್ಷಗಳ ಪಾತ್ರವನ್ನು ತಾವೇ ನಿರ್ವಹಿಸುತ್ತಿರುವುದು ಸಹ ರಾಜ್ಯದಲ್ಲಿಯೇ ಪ್ರಥಮವಾಗಿದೆ.

ಭೀಕರ ಬರಗಾಲ ಬಂದು ರಾಜ್ಯದ ರೈತರು ದಿಕ್ಕುಗಾಣದೆ ಕಂಗೆಟ್ಟು ಆತಂಕದಲ್ಲಿದ್ದರೂ ಬಿಜೆಪಿ ನಾಯಕರಿಗೆ ಅದಕ್ಕಿಂತ ಮುಖ್ಯವಾಗಿದ್ದು ತಮ್ಮ ನಡುವಿನ ಭೀಕರ ಭಿನ್ನಮತ ಎಂಬುದೂ ಪ್ರಥಮ ಸಾಧನೆಯೇ ಹೌದು.

ರಾಜ್ಯದ ಪ್ರಥಮ ಬಿಜೆಪಿ ಮುಖ್ಯಮಂತ್ರಿ ಬೊಕ್ಕಸದಿಂದ ಮಠಗಳಿಗೆ ಕೋಟಿ, ಕೋಟಿ ರೂಪಾಯಿಗಳನ್ನು ಹಂಚಿದ್ದರ ಪರಿಣಾಮವೇ ಮಠಾಧೀಶರು ಇವತ್ತು ಮಠಗಳ ನಿಯಮಗಳನ್ನು ಗಾಳಿಗೆ ತೂರಿ ಬೀದಿಯಲ್ಲಿ ನಿಂತು ಚೀರಾಡುತ್ತಿರುವುದೂ ಪ್ರಥಮವಾಗಿದೆ.

ಇಂತಹ ಅತ್ಯಂತ ಅಶಿಸ್ತಿನ ಪಕ್ಷವೊಂದಕ್ಕೆ ಕರ್ನಾಟಕ ರಾಜ್ಯದ ಮಹಾನ್ ಮತದಾರರು ಶಿಸ್ತಿನಿಂದ ಮತ ನಿರಾಕರಿಸಿ ತೊಲಗಿಸಬೇಕಿದೆ.

- ಶಿವಾಜಿರಾವ್ ಇಂಗಳೆ, ಸಂಡೂರು

ಆಗಸ್ಟ್ 29ರ ಸಂಚಿಕೆ ಓದಿದೆ. ಅದರಲ್ಲಿ 16 ಪುಟಗಳಲ್ಲಿ ಬರೀ ರಾಜಕೀಯವನ್ನು ಕುರಿತ ವರದಿಗಳಿದ್ದವು. ಅವುಗಳನ್ನು ನೋಡಿ ಬೇಸರವಾಯಿತು. ಪತ್ರಿಕೆ ಬರೀ ಬುದ್ಧಿಜೀವಿಗಳಿಗೆ, ವಿಚಾರವಂತರಿಗೆ ಮಾತ್ರ ಅನ್ನೋ ತರಹ ಬರುತ್ತಿದೆ. ಮನಸ್ಸಿಗೆ ಖುಷಿ ಕೊಡುವಂತಹ ನಿಮ್ಮಿ ತರಹದ ಅಂಕಣಗಳನ್ನು ಮತ್ತೆ ಯಾಕೆ ಶುರು ಮಾಡಬಾರದು?

- ನಾಗರತ್ನ ನಿಲಸೋಗೆ, ಎಸ್‌ಎಂಎಸ್ ಮೂಲಕ

ದಕ್ಷಿಣ ಕನ್ನಡ ಈಗ ನಾಜಿಗಳ ಜರ್ಮನಿಯಂತಾಗಿದೆ. ಆರೆಸ್ಸೆಸ್ಸಿನ 'ಗೆಸ್ಟಾಪೋ'ಗಳು ಮಲಗುವ ಕೋಣೆಯಲ್ಲಿ ಮಲಗಿರುವವರು ಯಾರು ಎಂದು ಇಣುಕಿನೋಡುವ ದಿನಗಳು ದೂರವಿಲ್ಲ, ಕಾಂಗ್ರೆಸ್‌ನ ರಣಹೇಡಿಗಳು ಕನಿಷ್ಠ ತಮ್ಮ ಶಯನಗೃಹದ ಬಾಗಿಲುಗಳನ್ನು ಭದ್ರವಾಗಿ ಹಾಕಿಕೊಳ್ಳಲಿ.

- ರವಿಕುಮಾರ್, ಹಾಸನ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/-



ಶರಣ್‌ಗೆ 'ರ್‍ಯಾಂಬೊ' ಅಗ್ನಿ ಪರೀಕ್ಷೆ



ಹಾಸ್ಯನಟ ಶರಣ್ ನಾಯಕನಾಗಿ ನಟಿಸಿರುವ 'ರ್‍ಯಾಂಬೊ' ಚಿತ್ರ ಮುಂದಿನ ವಾರ ತೆರೆಕಾಣಲು ಸಿದ್ಧವಾಗಿದೆ. ಹಾಸ್ಯ ನಟನ ಪಾತ್ರದಿಂದ ಈ ಚಿತ್ರ ಶರಣ್‌ಗೆ ನಾಯಕನಟನಾಗಿ ಬಡ್ತಿ ನೀಡುತ್ತದೋ? ಇಲ್ಲವೋ? ಎಂಬ ಕುತೂಹಲ ಗಾಂಧಿನಗರದಲ್ಲಿ ಎಲ್ಲೆಡೆ ಕಾಣಿಸುತ್ತಿದೆ. ಹಾಗೆ ನೋಡಿದರೆ ನಾಯಕನಟನಾಗಲು ಶರಣ್ ಮಾಡುತ್ತಿರುವ ಎರಡನೇ ಪ್ರಯತ್ನವಿದು. ಈ ಹಿಂದೆ ಶರಣ್ ಒಂದು ಚಿತ್ರದಲ್ಲಿ ನಾಯಕನಟನಾಗಿ ಕಾಣಿಸಿಕೊಂಡು ಮುಗ್ಗರಿಸಿದ್ದರು.

ಆದರೆ ಈ ಬಾರಿಯ ವ್ಯತ್ಯಾಸವೆಂದರೆ ಈ ಚಿತ್ರಕ್ಕೆ ಸ್ವತಃ ಶರಣ್ ತಾನು ಸಂಪಾದಿಸಿದ ಹಣವನ್ನು ಹಾಕಿದ್ದಾರೆ. ಅಂದರೆ, ಈ 'ರ್‍ಯಾಂಬೊ' ಚಿತ್ರದಲ್ಲಿ ಅವರು ಬರೀ ನಾಯಕನಟ ಮಾತ್ರವಲ್ಲ, ಚಿತ್ರದ ನಿರ್ಮಾಣದಲ್ಲಿ ಪಾಲುದಾರರಾಗಿಯೂ ಜವಾಬ್ದಾರಿ ನಿರ್ವಹಿಸಿದ್ದಾರೆ. ಅಂದರೆ, ಚಿತ್ರ ಗೆದ್ದರೆ ಶರಣ್‌ಗೆ ತಾರಾಮೌಲ್ಯ ಬರುವುದು ಮಾತ್ರವಲ್ಲ, ಅದರ ಜೊತೆಗೆ ಭಾರೀ ಲಾಭವನ್ನು ತಂದುಕೊಡುತ್ತದೆ. ಹಾಗೆಯೇ ಚಿತ್ರ ಸೋತರೆ ಇನ್ನುಮುಂದೆ ಪರ್ಮನೆಂಟಾಗಿ ಶರಣ್‌ಗೆ ಹಾಸ್ಯಪಾತ್ರಗಳೇ ಗತಿ.

ಹೀಗಾಗಿ 'ರ್‍ಯಾಂಬೊ' ಚಿತ್ರ ಶರಣ್ ಪಾಲಿಗೆ ಒಂದು ಬಹಳ ದೊಡ್ಡ ಅಗ್ನಿಪರೀಕ್ಷೆಯಾಗಿದೆ. ಕಳೆದ ಒಂದು ವರ್ಷದಿಂದ ತನ್ನ ತನು-ಮನ-ಧನವನ್ನು ಈ ಚಿತ್ರಕ್ಕಾಗಿ ಧಾರೆ ಎರೆದಿರುವ ಶರಣ್ ತನ್ನ ಗೆಳೆಯ ತರುಣ್ ಸುಧೀರ್ ಜೊತೆ ಸೇರಿಕೊಂಡು ಅನೇಕ ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆದು ಈ ಚಿತ್ರವನ್ನು ನಿರ್ಮಿಸಿದ್ದಾರೆ.


ಮುಂದಿನ ವಾರ ಚಿತ್ರ ಬಿಡುಗಡೆಯಾದ ನಂತರ ನಮ್ಮ ಕನ್ನಡದ ಪ್ರೇಕ್ಷಕರು ಕಾಮಿಡಿ ಟೈಮ್ಸ್ ಗಣೇಶ್‌ಗೆ ಹೇಗೆ ನಾಯಕನಟನಾಗಿ ಒಮ್ಮೆಲೆ ಬಡ್ತಿ ನೀಡಿದರೋ ಅದೇ ರೀತಿ ಶರಣ್‌ಗೂ ಪ್ರಮೋಷನ್ ನೀಡುತ್ತಾರೋ ನೋಡಬೇಕು.

ಪ್ರಜಾಪ್ರಭುತ್ವ ಬೇಕೇ?ಬೇಡವೇ?





ಅಂಬರೀಷ್‌ಗೆ 'ರೆಬಲ್ ಸ್ಟಾರ್' ಎಂಬ ಬಿರುದು ಬರಲು ಮುಖ್ಯ ಕಾರಣ ರಾಜೇಂದ್ರಸಿಂಗ್ ಬಾಬು ನಿರ್ದೇಶನದ 'ಚಕ್ರವ್ಯೂಹ' ಚಿತ್ರ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಈ ಚಿತ್ರದಲ್ಲಿ ರಾಜಕಾರಣಿಗಳನ್ನೆಲ್ಲ ಬಂದೂಕಿನಿಂದ ಶೂಟ್ ಮಾಡುವ ಮುಖಾಂತರ ಅಂಬರೀಷ್ ಜನಸಾಮಾನ್ಯರ ಡಾರ್ಲಿಂಗ್ ಆಗಿ ಕಾಣಿಸಿಕೊಂಡಿದ್ದರು. ಹಾಗೆ ನೋಡಿದರೆ ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ ಈ ರೀತಿ ರಾಜಕಾರಣಿಗಳನ್ನು ವಿಲನ್ ತರಹ ತೋರಿಸಿದ ಮೊದಲ ನಿರ್ದೇಶಕ ಎಂಬ ಖ್ಯಾತಿ ಬಾಬುರವರಿಗೆ ಸಲ್ಲುತ್ತದೆ. 'ಚಕ್ರವ್ಯೂಹ' ಬಾಕ್ಸ್ ಆಫೀಸ್‌ನಲ್ಲಿ ಗೆದ್ದ ನಂತರವೇ ಅಂತಹ ನೂರಾರು ಚಿತ್ರಗಳು ಭಾರತೀಯ ಚಿತ್ರರಂಗದ ವಿವಿಧ ಭಾಷೆಗಳಲ್ಲಿ ನಿರ್ಮಾಣಗೊಂಡಿದ್ದು ಎಲ್ಲರಿಗೂ ಗೊತ್ತಿರುವ ವಿಚಾರ.



ಹೀಗೆ ಚಿತ್ರರಂಗಕ್ಕೆ ಒಂದು ಹೊಸ ಫಾರ್ಮುಲಾ ನೀಡಿದ್ದ ರಾಜೇಂದ್ರಸಿಂಗ್‌ಬಾಬು ಈಗ ಸಂಪೂರ್ಣವಾಗಿ ಬದಲಾಗಿದ್ದಾರೆ. ತಮ್ಮ ಮಗ ಆದಿತ್ಯನನ್ನು ನಾಯಕನನ್ನಾಗಿ ಹಾಕಿಕೊಂಡು ಅವರು ನಿರ್ದೇಶಿಸಿ, ನಿರ್ಮಿಸುತ್ತಿರುವ 'ರೆಬೆಲ್' ಎಂಬ ಚಿತ್ರ ಒಂದು ರೀತಿಯಲ್ಲಿ 'ಚಕ್ರವ್ಯೂಹ' ಮತ್ತು 'ಅಂತ' ಚಿತ್ರದ ಮಿಶ್ರಣ ಎಂದು ಹೇಳಬಹುದು. ಈ ಚಿತ್ರದ ಕೊನೆಯಲ್ಲಿ ಪ್ರಜಾಪ್ರಭುತ್ವ ಈ ದೇಶಕ್ಕೆ ಬೇಡವೇ ಬೇಡ ಎಂಬ ಸಂದೇಶವನ್ನು ನೀಡಲು ಬಾಬು ಹೊರಟಿದ್ದರು. ಆದರೆ ಬಾಬು ಕೊನೆಗಳಿಗೆಯಲ್ಲಿ ಅದನ್ನು ಬದಲಾಯಿಸಿರುವ ಸುದ್ದಿ ಕೇಳಿಬಂದಿದೆ.

ಚಿತ್ರದ ಕೊನೆಯಲ್ಲಿ ಪ್ರಜಾಪ್ರಭುತ್ವ ಬೇಕೇ? ಬೇಡವೇ? ಎಂದು ಪ್ರಶ್ನಿಸಿ ಅದನ್ನು ಪ್ರೇಕ್ಷಕರ ತೀರ್ಮಾನಕ್ಕೆ ಬಿಟ್ಟುಬಿಟ್ಟಿದ್ದಾರೆ.

ಯಾವಾಗಲೂ 'ನಿರ್ದೇಶಕನೇ ಕ್ಯಾಪ್ಟನ್ ಆಫ್ ದಿ ಶಿಪ್' ಎಂದು ಭಾಷಣ ಬಿಗಿಯುತ್ತಿದ್ದ ಬಾಬು ಈ ರೀತಿ ತನ್ನ ಚಿತ್ರದ ಕ್ಲೈಮ್ಯಾಕ್ಸ್‌ಅನ್ನು ಬದಲಾಯಿಸಲು ಕಾರಣ ಯಾರು ಗೊತ್ತೇ? ಸೆನ್ಸಾರ್ ಮಂಡಳಿ.

ಪ್ರಜಾಪ್ರಭುತ್ವ ಬೇಡ ಎಂದು ಸಂದೇಶ ನೀಡಿದರೆ ನಾಳೆ ಸೆನ್ಸಾರ್ ಮಂಡಳಿಯವರು ಸರ್ಟಿಫಿಕೇಟ್ ನೀಡಲಾರರು ಎಂದು ಹೆದರಿ ಅದರ ಬದಲಿಗೆ ಸೆನ್ಸಾರ್ ಆಫೀಸರ್ ನಾಗರಾಜ್‌ರವರ ಜೊತೆಗೆ ಚರ್ಚಿಸಿ ಬಾಬು ಚಿತ್ರದ ಕ್ಲೈಮ್ಯಾಕ್ಸ್‌ನ್ನು ಬದಲಾಯಿಸಿದ್ದಾರಂತೆ. ಕನ್ನಡ ಚಿತ್ರರಂಗದಲ್ಲಿ ಅನೇಕ ದೊಡ್ಡ ದೊಡ್ಡ ಚಿತ್ರಗಳನ್ನು ನೀಡಿದ ಖ್ಯಾತಿಯ ರಾಜೇಂದ್ರಸಿಂಗ್ ಬಾಬುರವರ ವ್ಯಕ್ತಿತ್ವಕ್ಕೆ ಈ ಘಟನೆ ಶೋಭೆ ತರುತ್ತದೋ? ಇಲ್ಲವೋ? ಎಂಬುದನ್ನು ಓದುಗರಿಗೆ ಬಿಡುತ್ತಿದ್ದೇವೆ.

'ಫುಲ್ ಮೀಲ್ಸ್' ಸೇಲ್ಸ್ ಡೌನ್

ಶಿವರಾಜ್‌ಕುಮಾರ್ ನಾಯಕನಾಗಿ ನಟಿಸಿರುವ 101ನೇ ಚಿತ್ರ 'ಶಿವ' ಚಿತ್ರದ ಬಗ್ಗೆ ಗಾ... ಮಿಶ್ರ ಪ್ರತಿಕ್ರಿಯೆ ಕೇಳಿಬರುತ್ತಿದೆ. 'ಶಿವ' ಚಿತ್ರ ತೆಲುಗು ಚಿತ್ರದ ಮಾದರಿಯಲ್ಲೇ ಅತ್ಯಂತ ಕ... ಆಗಿ ಮೂಡಿಬಂದಿದೆ. ನಿಜ ಹೇಳಬೇಕೆಂದರೆ ಶಿವರಾಜ್‌ಕುಮಾರ್ ಅಭಿಮಾನಿಗಳ ಪಾ... ಒಂದು ರೀತಿಯಲ್ಲಿ ಫುಲ್ ಮೀಲ್ಸ್ ಇದ್ದಂತೆ. ಚಿತ್ರದಲ್ಲಿ ಅಭಿಮಾನಿಗಳಿಗೆ ಮೆಚ್ಚು... ಹಾಡುಗಳಿವೆ, ಡ್ಯಾನ್ಸ್‌ಗಳಿವೆ, ಜೊತೆಗೆ ಮೈ ನವಿರೇಳಿಸುವ ಸಾಹಸ ದೃಶ್ಯಗಳೂ ... ನಿರ್ಮಾಪಕರಾದ ಶ್ರೀಕಾಂತ್ ಮತ್ತು ಕನಕಪುರ ಶ್ರೀನಿವಾಸ್ ಭಾರೀ ಹಣವನ್ನು ಸುರಿ... ಶ್ರೀಮಂತವಾಗಿ ಚಿತ್ರವನ್ನು ನಿರ್ಮಿಸಿದ್ದಾರೆ.



ಆದರೂ, ಈ ಚಿತ್ರ ಅಭಿಮಾನಿಗಳ ಹೊರತುಪಡಿಸಿ ಉಳಿದ ಪ್ರೇಕ್ಷಕರನ್ನು ಆ... ಸಫಲವಾಗಿಲ್ಲ, ಇದಕ್ಕೆ ಮುಖ್ಯ ಕಾರಣ ನಿರ್ದೇಶಕ ಓಂ ಪ್ರಕಾಶ್‌ರವರ ನಿರೂಪಣಾ ... ರಮೇಶ್‌ರವರ ಮಾಮೂಲಿ ಎನಿಸಿರುವ ಡೈಲಾಗ್‌ಗಳು. ಬಹುಶಃ ಈ ಕಾರಣಕ್ಕಾಗಿಯೇ ... ಈ ಚಿತ್ರ ಅದ್ಭುತವಾದ ಓಪನಿಂಗ್ ಪಡೆದರೂ ಆನಂತರ ಬಾಕ್ಸ್ ಆಫೀಸ್‌ನಲ್ಲಿ ಈಗ ಕುಂಟುತ್ತ ಸಾಗುತ್ತಿದೆ. ಆದರೂ ಸುಮಾರು ಒಂದೂವರೆ ವರ್ಷಗಳ ಗ್ಯಾಪ್ ನಂತರ ತೆರೆಕಂಡಿರುವ ಶಿವರಾಜ್‌ಕುಮಾರ್ ಅಭಿನಯದ 'ಶಿವ' ಚಿತ್ರವನ್ನು ದಾಖಲೆಯ 225 ಥಿಯೇಟರ್‌ಗಳಲ್ಲಿ ಬಿಡುಗಡೆ ಮಾಡಿರುವ ನಿರ್ಮಾಪಕ ಶ್ರೀಕಾಂತ್ ಅವರ ಸಾಹಸ ಮತ್ತು ಸಾಧನೆ ಇಲ್ಲಿ ನೆನಪಿಸಿಕೊಳ್ಳಲೇಬೇಕು. ಆದರೂ ಇಷ್ಟು ಭಾರೀ ಸಂಖ್ಯೆಯಲ್ಲಿ ಈ ಚಿತ್ರವನ್ನು ಬಿಡುಗಡೆ ಮಾಡಿರುವುದರಿಂದ 'ಶಿವ' ಚಿತ್ರ ಸುದೀರ್ಘ ಕಾಲ ಚಿತ್ರಮಂದಿರದಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆ ಕಡಿಮೆ.

ರಿಷಿಕ ರಗಳೆ

'ರಗಳೆ ವಿತ್ ರಿಷಿಕ' ಎಂಬ ಹೊಸ ಕಾರ್ಯಕ್ರಮ ಝೀ ಟಿ.ವಿ.ಯಲ್ಲಿ ಆರಂಭವಾಗುತ್ತಿದೆ. ಇದು ಹಿಂದಿಯಲ್ಲಿ ಜನಪ್ರಿಯವಾದ 'ಕಾಫಿ ವಿತ್ ಕರಣ್' ಎಂಬ ಕಾ... ಮಾದರಿಯಲ್ಲೇ ಇದೆ. ಆದರೆ 'ಕಾಫಿ ವಿತ್ ರಿಷಿಕ' ಎಂದರೆ ಹಿಂದಿಯವರನ್ನೇ ಕಾಪಿ ಮಾಡಿ... ಎಂದು ಕನ್ನಡದಲ್ಲಿ 'ರಗಳೆ ವಿತ್ ರಿಷಿಕ' ಎಂದು ಹೆಸರಿಟ್ಟಿದ್ದೇವೆ ಎಂದು ಹೇಳಿದ ರಿಷಿಕ... ಕನ್ನಡ ಪ್ರೇಮವನ್ನು ತೋರುತ್ತದೆ ಎಂದು ಸೇರಿಸಿದಳು. "ಇಡೀ ಕಾರ್ಯಕ್ರಮದ ಪರಿಕಲ್ಪನೆ... ಹೊಡೆದ ನಂತರ ಕಾರ್ಯಕ್ರಮದ ಟೈಟಲ್‌ಅನ್ನು ಕಾಪಿ ಹೊಡೆದರೆ ತಪ್ಪೇನು?" ಎಂದ... ಪತ್ರಕರ್ತರೊಬ್ಬರು ಪ್ರಶ್ನಿಸಿದ್ದು ಆಕೆಯ ಜಾಣ ಕಿವಿಗೆ ಬೀಳಲೇ ಇಲ್ಲ, ಇನ್ನು ರಗಳೆ... ಎಂದ... ಕನ್ನಡ ಪ್ರೀತಿಯನ್ನು ಪ್ರದರ್ಶಿಸಿದ ರಿಷಿಕ ಪತ್ರಕರ್ತರ ಜೊತೆ ಮಾಡಿದ ಮಾತುಕತೆಯುದ್ದಕ್ಕೂ ... ಇಂಗ್ಲಿಷ್ ಪದ ಮತ್ತು ವಾಕ್ಯಗಳನ್ನು ಬಳಸಿ ತನ್ನ ಇಂಗ್ಲಿಷ್ ಪ್ರೇಮವನ್ನಂತೂ ಸ್ಪಷ್ಟಪಡಿಸಿದಳು ... ವಿತ್ ರಿಷಿಕ' ಕಾರ್ಯಕ್ರಮ ಕನ್ನಡಕ್ಕೆ ಹೊಸದೇನೂ ಅಲ್ಲ. ಈಗಾಗಲೇ ಕಸ್ತೂರಿ ಚಾನಲ್‌ನ... ನಟ ರಮೇಶ್ 'ಪ್ರೀತಿಯಿಂದ ರಮೇಶ್' ಎಂಬ ಇಂತಹದ್ದೇ ಕಾರ್ಯಕ್ರಮದಲ್ಲಿ ಎಲ್ಲ ನಾಯಕ-ನಾ... ಸಂದರ್ಶಿಸಿ ಆಗಿದೆ. ಆದರೂ ರಿಷಿಕ ತನ್ನ ಕಾರ್ಯಕ್ರಮದ ಬಗ್ಗೆ ಹೇಳುವುದಿಷ್ಟೇ: "ನಾ... ಕುಟುಂಬದಿಂದ ಬಂದವಳು. ಅಷ್ಟೇ ಅಲ್ಲ, ನಾನು ಕೂಡ ನಾಯಕಿಯಾಗಿ ಚಿತ್ರರಂಗ... ಮಾಡಿದವಳು. ಹೀಗಾಗಿ ಅನೇಕ ನಾಯಕ-ನಾಯಕಿಯರು ತಮ್ಮ ಅಂತರಂಗದ ಭಾವನೆ... ಮುಂದೆ ಸುಲಭವಾಗಿ ತೆರೆದಿಡುತ್ತಾರೆ. ಹೀಗಾಗಿ ಅವರ ಪ್ರೀತಿ-ಪ್ರೇಮ-ಪ್ರಣಯ-ಗೆಳೆತನ-... ವಿವಾದಗಳು ಮೊದಲಾದ ಎಲ್ಲ ವಿಷಯಗಳ ಬಗ್ಗೆ ಅವರು ನನ್ನೊಂದಿಗೆ ಮಾತನ್ನು ಹಂಚಿಕೊ...

ತಮಾಷೆಯೆಂದರೆ ಈ ಹಿಂದೆ ಪತ್ರಕರ್ತ ಕಲಾವಿದರ ಖಾಸಗಿ ಜೀವನದ ಬಗ್ಗೆ ಬರೆದರೆ ಸಿ... ದೊಡ್ಡ ರಂಪ ಮಾಡುತ್ತಿದ್ದರು. ಆದರೆ ಈಗ ಸಿನಿಮಾದವರೇ ತಮ್ಮ ಸಹಪಾಠಿಗಳ ಖಾಸಗಿ ... ತೆರೆಯ ಮೇಲೆ ಬಿಚ್ಚಿಡಲು ಹೊರಟಿದ್ದಾರೆ. ಅಂದರೆ, ಅಂದು ರಂಪ ಮಾಡಿದವರೇ ... ಹೊಡೆಯುತ್ತಿದ್ದಾರೆ ಎಂದು ಹೇಳಬಹುದೋ ಏನೊ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676...
Fax : 26604536, E-mail :lankesh70@rediff...